ಶನಿವಾರ, ಮಾರ್ಚ್ 14, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರೊಬೊಟಿಕ್ ಶ್ವಾನ

ವಾರಾಣಸಿಯ ಐಐಟಿ ಬಿಎಚ್‌ಯುನಲ್ಲಿ ನಡೆದ ‘ಟೆಕ್‌ನೆಕ್ಸ್’ 87ನೇ ಆವೃತ್ತಿಯಲ್ಲಿ ಭಾಗಿಯಾಗಿದ್ದ ರೊಬೊಟಿಕ್ ಶ್ವಾನ ಎಲ್ಲರ ಗಮನ ಸೆಳೆಯಿತು



ಪಟೋಲೆ ಪ್ರತಿಭಟನೆ

ಮಹಾರಾಷ್ಟ್ರ ಕಾಂಗ್ರೆಸ್ ಶಾಸಕ ನಾನಾ ಪಟೋಲೆ ಅವರು ಎಲ್‌ಪಿಜಿ ಸಿಲಿಂಡರ್ ಆಕೃತಿಯ ಫಲಕವನ್ನು ಹಿಡಿದು ವಿಧಾನಸಭೆಯ ಬಜೆಟ್ ಅಧಿವೇಶನಕ್ಕೆ ಆಗಮಿಸಿದರು



ಆರ್ಥಿಕ ಶಿಸ್ತು: ರಾಜ್ಯ ಮೇಲೋ, ಕೇಂದ್ರವೋ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆರ್ಥಿಕ ಸ್ಥಿತಿ ಉತ್ತಮವಾಗಿದೆಯೋ ಅಥವಾ ಕೇಂದ್ರದ ಆರ್ಥಿಕ ಸ್ಥಿತಿ ಚೆನ್ನಾಗಿದೆಯೋ ಎಂಬ ವಿಚಾರವಾಗಿ ವಿಧಾನ ಪರಿಷತ್ತಿನಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ಜಟಾಪಟಿ ನಡೆಯಿತು.

‘ಸತತ ಸಾಲದ ಬಜೆಟ್’

17 ಬಜೆಟ್ ಮಂಡಿಸಿದ ಅನುಭವ ಇರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರಿಯ ಘೋಷಣೆ ತುಂಬಿದ ಮತ್ತು ಅನುದಾನ ಹಂಚಿಕೆ ಇಲ್ಲದ ಬಜೆಟ್ ಮಂಡಿಸಿದ್ದಾರೆ. ಸತತವಾಗಿ ವಿತ್ತೀಯ ಕೊರತೆ ಮತ್ತು ಸಾಲದ ಬಜೆಟ್ ಮಂಡಿಸಿದ್ದಾರೆ.

ಮನಮೋಹನ್ ಸಿಂಗ್ ಅವರು ₹55 ಲಕ್ಷ ಕೋಟಿಯವರೆಗೂ ಸಾಲ ಮಾಡಿದ್ದರು. ಅದರಲ್ಲಿ ₹49 ಲಕ್ಷಕೋಟಿಗೆ ಲೆಕ್ಕವಿದ್ದು, ₹6 ಲಕ್ಷ ಕೋಟಿ ಎಲ್ಲಿಗೆ ಹೋಯಿತು? ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರದ ಅವಧಿಯಲ್ಲಿ ₹197 ಲಕ್ಷ ಕೋಟಿಯವರೆಗೂ ಸಾಲ ಮಾಡಲಾಗಿದೆ. ಅದರಲ್ಲಿ ₹46 ಲಕ್ಷ ಕೋಟಿಯಷ್ಟು ಬಂಡವಾಳ ವೆಚ್ಚ ಮಾಡಲಾಗಿದೆ.

ಕೇಶವ ಪ್ರಸಾದ್, ಬಿಜೆಪಿ ಸದಸ್ಯ

‘ಅನ್ಯಾಯದ ಮಧ್ಯೆ ಆರ್ಥಿಕ ಶಿಸ್ತಿನ ಬಜೆಟ್’

ಕೇಂದ್ರವು ರಾಜ್ಯಕ್ಕೆ ನೀಡಬೇಕಿರುವ ತೆರಿಗೆ ಪಾಲು ಮತ್ತು ಅನುದಾನವು ಭಿಕ್ಷೆಯಲ್ಲ. ರಾಜ್ಯದಿಂದಲೇ ಸಂಗ್ರಹಿಸಿದ ಹಣದಲ್ಲಿ ನ್ಯಾಯಯುತವಾಗಿ ಬರಬೇಕಿರುವ ಪಾಲನ್ನು ಕೇಳುವುದು ರಾಜ್ಯದ ಹಕ್ಕು. ಅದನ್ನು ಸರಿಯಾಗಿ ನೀಡುತ್ತಿಲ್ಲ. 14ನೇ ಹಣಕಾಸು ಆಯೋಗವು ಕೇಂದ್ರದ ತೆರಿಗೆ ಆದಾಯದಲ್ಲಿ ರಾಜ್ಯಕ್ಕೆ ಶೇ 4.76ರಷ್ಟು ಪಾಲು ನೀಡಿತ್ತು. 15ನೇ ಹಣಕಾಸು ಆಯೋಗವು ಶೇ 3.76ಕ್ಕೆ ಇಳಿಸಿ, ಅನ್ಯಾಯ ಮಾಡಿತು. ಈಗ 16ನೇ ಹಣಕಾಸು ಆಯೋಗವು ರಾಜ್ಯದ ಪಾಲನ್ನು ತುಸು ಹೆಚ್ಚಿಸಿದೆ.

ಕೇಂದ್ರವು ತೆರಿಗೆ ಪಾಲು ಹಂಚಿಕೆಯಲ್ಲಿ ಅನ್ಯಾಯ ಮಾಡುತ್ತಿರುವುದಲ್ಲದೆ, ಹಂಚಿಕೆಯಾದ ಪಾಲನ್ನೂ ಸರಿಯಾಗಿ ನೀಡುತ್ತಿಲ್ಲ. 14ನೇ ಹಣಕಾಸು ಆಯೋಗವು ಶಿಫಾರಸು ಮಾಡಿದ್ದ ಅನುದಾನಗಳನ್ನು ನೀಡಿಲ್ಲ. ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಹಣ ಬಿಡುಗಡೆ ಮಾಡಿಲ್ಲ. ಬಜೆಟ್‌ನಲ್ಲಿ ಘೋಷಿಸಿದ ಹಣವನ್ನೂ ನೀಡುತ್ತಿಲ್ಲ. ಈ ಎಲ್ಲ ಅನ್ಯಾಯದ ಮಧ್ಯೆ ಸಿದ್ದರಾಮಯ್ಯ ಅವರು ಆರ್ಥಿಕ ಶಿಸ್ತಿನ ಬಜೆಟ್ ಮಂಡಿಸಿದ್ದಾರೆ.

ರಮೇಶ್ ಬಾಬು, ಕಾಂಗ್ರೆಸ್ ಸದಸ್ಯ

ಸಿದ್ದರಾಮಯ್ಯ ಅವರು ರಾಜ್ಯದಿಂದ ಕೇಂದ್ರಕ್ಕೆ ₹4 ಲಕ್ಷ ಕೋಟಿ ನೀಡಿದ್ದೇವೆ ಎನ್ನುತ್ತಾರೆ. ಅಷ್ಟು ಹಣ ಹೇಗೆ ನೀಡಿದರು, ಎಲ್ಲಿಂದ ನೀಡಿದರು?

ಎನ್.ರವಿಕುಮಾರ್, ವಿರೋಧ ಪಕ್ಷದ ಮುಖ್ಯ ಸಚೇತಕ, ವಿಧಾನ ಪರಿಷತ್

ಪ್ರಧಾನಿ ಮೋದಿ ಅವರ ಸರ್ಕಾರ ₹197 ಲಕ್ಷ ಕೋಟಿ ಸಾಲಮಾಡಿದ್ದರೂ, ಬಂಡವಾಳ ವೆಚ್ಚ ಮಾಡಿ ದೇಶಕ್ಕಾಗಿ ಆಸ್ತಿಗಳನ್ನು ಸೃಷ್ಟಿಸಿದೆ

ಭಾರತಿ ಶೆಟ್ಟಿ, ಬಿಜೆಪಿ ಸದಸ್ಯೆ

ಹೌದು, ಹೌದು. ಪ್ರಧಾನಿ ಮೋದಿ ಅವರು ನೂರಾರು ಲಕ್ಷ ಕೋಟಿ ಸಾಲ ಮಾಡಿ ಅಂಬಾನಿ ಮತ್ತು ಅದಾನಿ ಅವರ ಆಸ್ತಿಗಳನ್ನು ಸೃಷ್ಟಿಸಿದ್ದಾರೆ

ಎನ್.ಎಸ್.ಬೋಸರಾಜು, ಸಭಾನಾಯಕ, ವಿಧಾನ ಪರಿಷತ್

‘ಮೋದಿ ಸರ್ಕಾರದ ಸಾಲದ ಸುಳಿ’

ಸಿದ್ದರಾಮಯ್ಯ ಅವರು ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡೇ ಬಜೆಟ್ ಮಂಡಿಸಿದ್ದಾರೆ. ರಾಜ್ಯದ ಒಟ್ಟು ಉತ್ಪನ್ನದ (ಜಿಎಸ್‌ಡಿಪಿ) ಹೋಲಿಕೆಯಲ್ಲಿ ನಮ್ಮ ಬಜೆಟ್‌ನ ವಿತ್ತೀಯ ಕೊರತೆಯ ಪ್ರಮಾಣವು ಶೇ 2.93ರಷ್ಟಿದೆ. ದೇಶದ ಜಿಡಿಪಿ ಹೋಲಿಕೆಯಲ್ಲಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆ ಶೇ 4.4ರಷ್ಟಿದೆ. ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಆರ್ಥಿಕ ಶಿಸ್ತು ಇಲ್ಲವೇ ಇಲ್ಲ.

ಜಿಎಸ್‌ಡಿಪಿ ಹೋಲಿಕೆಯಲ್ಲಿ ರಾಜ್ಯದ ಒಟ್ಟು ಸಾಲದ ಪ್ರಮಾಣವನ್ನು ನಾವು ಶೇ 25ಕ್ಕಿಂತ ಕಡಿಮೆಗೆ (ಶೇ 24.94) ಮಿತಿಗೊಳಿಸಿದ್ದೇವೆ. ಆದರೆ ದೇಶದ ಜಿಡಿಪಿ ಹೋಲಿಕೆಯಲ್ಲಿ ಕೇಂದ್ರ ಸರ್ಕಾರದ ಒಟ್ಟು ಸಾಲದ ಪ್ರಮಾಣ ಶೇ 55ರ ಗಡಿ ದಾಟಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು ದೇಶದ ಜನರನ್ನು ಸಾಲದ ಸುಳಿಗೆ ಸಿಲುಕಿಸಿದೆ.

ಶರಣ ಪ್ರಕಾಶ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ

ಸುದ್ದಿ 2 ನಿಮಿಷ

‘ಮುಟ್ಟಿನ ನೆಪ: ಹಾಸ್ಟೆಲ್ ಬಂದ್’

ಬೆಂಗಳೂರು: ವಿದ್ಯಾರ್ಥಿ ನಿಲಯದಲ್ಲಿರುವ ವಿದ್ಯಾರ್ಥಿನಿಯರು ಮುಟ್ಟಾದರೆ, ಪಕ್ಕದಲ್ಲಿನ ದೇವಾಲಯಕ್ಕೆ ಮೈಲಿಗೆಯಾಗುತ್ತದೆ ಎಂದು ತುಮಕೂರಿನ ಗ್ರಾಮವೊಂದರಲ್ಲಿ ವಿದ್ಯಾರ್ಥಿ ನಿಲಯವನ್ನೇ ಬಳಸುತ್ತಿಲ್ಲ ಎಂದು ಬಿಜೆಪಿಯ ಭಾರತಿ ಶೆಟ್ಟಿ ಹೇಳಿದರು.

ಶುಕ್ರವಾರ ವಿಧಾನ ಪರಿಷತ್ತಿನ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ‘ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಹೊಳವನ ಹಳ್ಳಿಯಲ್ಲಿ ಎಂಟು ವರ್ಷಗಳ ಹಿಂದೆ ಕಸ್ತೂರಬಾ ಬಾಲಿಕಾ ನಿಲಯ ನಿರ್ಮಿಸಲಾಗಿದೆ. ಆದರೆ ಈವರೆಗೂ ಅದನ್ನು ಬಳಸಿಲ್ಲ’ ಎಂದರು.

‘ಹೊಳವನಹಳ್ಳಿಯ ಗ್ರಾಮದೇವತೆ ದೇವಾಲಯದ ಪಕ್ಕದಲ್ಲೇ ವಿದ್ಯಾರ್ಥಿ ನಿಲಯವಿದೆ. ದೇವಾಲಯದ ಮುಂಭಾಗದಿಂದಲೇ ನಿಲಯಕ್ಕೆ ಹೋಗಬೇಕು. ಆದರೆ ಮುಟ್ಟಾದವರು ದೇವಾಲಯದ ಮುಂದೆ ಹೋದರೆ, ದೇವರಿಗೆ ಮೈಲಿಗೆಯಾಗುತ್ತದೆ ಎಂಬ ಮೂಢನಂಬಿಕೆ ಆ ಗ್ರಾಮದ ಜನರಲ್ಲಿದೆ. ಹೀಗಾಗಿ ವಿದ್ಯಾರ್ಥಿ ನಿಲಯಕ್ಕೆ ವಿದ್ಯಾರ್ಥಿನಿಯರ ದಾಖಲಾತಿಗೆ ಅವಕಾಶ ನೀಡಿಲ್ಲ’ ಎಂದರು.



‘ದಾಖಲಾತಿ ಇಲ್ಲದೇ ಇರುವುದಕ್ಕೆ, ವಿದ್ಯಾರ್ಥಿ ನಿಲಯವು ಎಂಟು ವರ್ಷಗಳಿಂದ ಖಾಲಿ ಬಿದ್ದಿದೆ. ಮೂಢನಂಬಿಕೆಯ ಕಾರಣಕ್ಕೆ ಕೋಟ್ಯಂತರ ರೂಪಾಯಿ ವ್ಯರ್ಥವಾಗುತ್ತಿದೆ’ ಎಂದರು.

ಸಭಾನಾಯಕ ಎನ್.ಎಸ್.ಬೋಸರಾಜು ಅವರು, ‘ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇವೆ’ ಎಂದರು.

ಜಾಹೀರಾತಿನ ಶುಲ್ಕಕ್ಕೆ ತೆರಿಗೆ: ಮಸೂದೆ ಮಂಡನೆ

ಬೆಂಗಳೂರು: ಪುರಸಭೆ ಮತ್ತು ನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಜಾಹೀರಾತುಗಳ ಶುಲ್ಕದ ಮೇಲೆ ತೆರಿಗೆ ವಿಧಿಸುವ ಉದ್ದೇಶಕ್ಕಾಗಿ ಕರ್ನಾಟಕ ಮುನ್ಸಿಪಾಲಿಟಿ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ಮಸೂದೆಯನ್ನು ವಿಧಾನಸಭೆಯಲ್ಲಿ ಶುಕ್ರವಾರ ಮಂಡಿಸಲಾಯಿತು.

ಪುರಸಭೆ ಮತ್ತು ನಗರಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಭೂಮಿ, ಕಟ್ಟಡ, ಗೋಡೆಯ ಅಥವಾ ರಚನೆಯ ಮೇಲೆ ಅಳವಡಿಸುವ ಜಾಹೀರಾತುಗಳಿಗೆ ಶುಲ್ಕದ ಮೇಲೆ ತೆರಿಗೆ ವಿಧಿಸಲಾಗುವುದು. 1 ಚದರ ಮೀಟರ್‌ವರೆಗಿನ ಜಾಗಕ್ಕೆ ₹50, 1 ಚದರ ಮೀಟರ್‌ಗಿಂತ ಹೆಚ್ಚು ಮತ್ತು 2.5 ಚದರ ಮೀಟರ್‌ಗಿಂತ ಜಾಗಕ್ಕೆ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ ₹80, ಪ್ರತಿಯೊಂದು ಹೆಚ್ಚಿನ 2.5 ಚದರ ಮೀಟರ್ ಜಾಗಕ್ಕೆ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ ₹80. ವಾಹನಗಳ ಮೇಲೆ ಒಯ್ಯುವ ದೀಪಾಲಂಕೃತ ಜಾಹೀರಾತು ಫಲಕಗಳಿಗೆ 5 ಚದರ ಮೀಟರ್‌ವರೆಗಿನ ಜಾಗಕ್ಕೆ ₹375.

ಭೋಜೇಗೌಡ ಕನಸಿನ ಪ್ರಸಂಗ

ಮಾತು–ಗಮ್ಮತ್ತು

ಬೆಂಗಳೂರು: ವಿಧಾನ ಪರಿಷತ್ತಿನಲ್ಲಿ ಶುಕ್ರವಾರ ಕಲಾಪ ಆರಂಭವಾದಾಗ ಆಡಳಿತ ಮತ್ತು ವಿರೋಧ ಪಕ್ಷದ ಬಹುತೇಕ ಸದಸ್ಯರು ಗೈರಾಗಿದ್ದರು. ಆಗ ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ, ‘ವಿರೋಧ ಪಕ್ಷಗಳ ಸದಸ್ಯರಿಗಿಂತ ಸಚಿವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸದಸ್ಯರು ಕಲಾಪಕ್ಕೆ ಬರುವಂತೆ ಮಾಡಲು ಏನಾದರೂ ಆಕರ್ಷಣೆ ವ್ಯವಸ್ಥೆ ಮಾಡಬೇಕು’ ಎಂದರು.



ಭೋಜೇಗೌಡ

ಸಭಾಪತಿ ಬಸವರಾಜ ಹೊರಟ್ಟಿ, ‘ಭೋಜೇಗೌಡ ಅವರನ್ನು 20 ವರ್ಷಗಳಿಂದ ನೋಡುತ್ತಿದ್ದೇನೆ. ಆಕರ್ಷಿಸುವ ಹಲವು ಕಲೆಗಳು ಅವರಿಗೆ ಗೊತ್ತಿದೆ. ಇಲ್ಲಿ ಏನು ಆಕರ್ಷಣೆ ವ್ಯವಸ್ಥೆ ಮಾಡಬೇಕು ಎಂದು ಅವರು ಸಲಹೆ ನೀಡಿದರೆ ಜಾರಿಗೆ ತರುತ್ತೇನೆ’ ಎಂದು ಕಿಚಾಯಿಸಿದರು.

ಮಧ್ಯಾಹ್ನ 12ರ ಹೊತ್ತಿಗೆ ಸಭಾನಾಯಕ ಬೋಸರಾಜು ಮತ್ತು ಇಬ್ಬರು ಸಚಿವರಷ್ಟೇ ಸದನದಲ್ಲಿ ಇದ್ದರು. ಆಗ ಭೋಜೇಗೌಡ ಅವರು ಎದ್ದುನಿಂತು, ‘ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರು ಇಲ್ಲದಿದ್ದರೆ ಹೇಗೆ’ ಎಂದು ಆಕ್ಷೇಪ ಎತ್ತಿದರು. ವಿರೋಧ ಪಕ್ಷದ ಎನ್. ರವಿಕುಮಾರ್ ದನಿಗೂಡಿಸಿದರು.

ಮಧ್ಯಪ್ರವೇಶಿಸಿದ ಸಚಿವ ಕೃಷ್ಣ ಬೈರೇಗೌಡ ಅವರು ಭೋಜೇಗೌಡ ಅವರ ಬೆಳಿಗ್ಗೆಯ ಮಾತು ಮತ್ತು ಆಕರ್ಷಣೆಯ ಸಲಹೆಯನ್ನು ಸದನಕ್ಕೆ ವಿವರಿಸಿ, ರವಿಕುಮಾರ್ ಅವರ ಬಾಯಿಮುಚ್ಚಿಸಿದರು. ರವಿಕುಮಾರ್ ಅವರು, ‘ಭೋಜೇಗೌಡರದ್ದು ಬಹುರಂಗಿ ವ್ಯಕ್ತಿತ್ವ’ ಎಂದು ಕುಟುಕಿದರು.

ಇದರಿಂದ ಪುಳಕಿತರಾದ ಭೋಜೇಗೌಡ, ‘ನಾನು ಒಂದೆರಡು ದಿನ ಕಲಾಪಕ್ಕೆ ಬಂದಿರಲಿಲ್ಲ. ಆದರೆ ನಿನ್ನೆ ರಾತ್ರಿ ಒಂದು ಕನಸು ಬಿತ್ತು. ನಾವೆಲ್ಲಾ ಸದನಕ್ಕೆ ಬರುತ್ತಿಲ್ಲ ಮತ್ತು ಕಲಾಪ ನಡೆಯಲು ಬಿಡುತ್ತಿಲ್ಲ ಎಂದು ಬೇಸರ ಮಾಡಿಕೊಂಡು ಸಭಾಪತಿ ಬಸವರಾಜ ಹೊರಟ್ಟಿ ಅವರು ಕುರ್ಚಿಯಿಂದ ಎದ್ದು ಹೊರಟುಹೋದರು. ನಾವೆಲ್ಲಾ ಸಮಾಧಾನ ಮಾಡಿದರೂ, ರಾಜೀನಾಮೆ ನೀಡುತ್ತೇನೆ ಎನ್ನುತ್ತಿದ್ದರು. ಅಲ್ಲಿಗೆ ಕನಸಿನಿಂದ ಎಚ್ಚರವಾಯಿತು’ ಎಂದು ವಿವರಿಸಿದರು.

‘ಕನಸು ನಿಜವಾಗಿದೆಯೋ ಏನೋ ಇಂದು ಕಲಾಪಕ್ಕೆ ಓಡಿಬಂದೆ. ಸದನದೊಳಗೆ ಬಂದು ನೋಡಿದರೆ, ಸಭಾಪತಿ ಪೀಠದಲ್ಲಿ ಹೊರಟ್ಟಿ ಅವರು ಕುಳಿತಿದ್ದರು’ ಎಂದರು.

ಕನಸಿನ ನಗೆಲಹರಿ...

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.



ವಿಧಾನ ಪರಿಷತ್ ಕಲಾಪದಲ್ಲಿ ಸಚಿವರಾದ ಪ್ರಿಯಾಂಕ್ ಖರ್ಗೆ, ಶಿವರಾಜ ತಂಗಡಗಿ ಹಾಗೂ ಕೃಷ್ಣ ಬೈರೇಗೌಡ ಅವರು ಜೆಡಿಎಸ್ ಸದಸ್ಯ ಭೋಜೇಗೌಡರ ಮಾತಿಗೆ ನಗೆ ಬೀರಿದರು

ಎಲೆಚುಕ್ಕೆ ರೋಗ: ಉತ್ತರ ವಾಪಸ್

ಬೆಂಗಳೂರು: ಎಲೆ ಚುಕ್ಕೆ ರೋಗದ ಕುರಿತು ತಾವು ನೀಡಿದ ಉತ್ತರವನ್ನು ತೋಟಗಾರಿಕಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರು ವಾಪಸ್ ಪಡೆದರು.

ವಿಧಾನಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಭೀಮಣ್ಣ ನಾಯಕ್ ಅವರ ಪ್ರಶ್ನೆಗೆ ಸಚಿವರು ಉತ್ತರ ನೀಡಿದರು. ಅದರಲ್ಲಿನ ಮಾಹಿತಿಯ ಬಗ್ಗೆ ಬಿಜೆಪಿಯ ವಿ.ಸುನಿಲ್‌ಕುಮಾರ್ ಆಕ್ಷೇಪ ಎತ್ತಿದರು.

‘ರಾಜ್ಯದಲ್ಲಿ 16 ಸಾವಿರ ರೈತರು ಎಲೆ ಚುಕ್ಕೆ ರೋಗದಿಂದ ಬಾಧಿತರಾಗಿದ್ದಾರೆ ಎಂದು ಹೇಳುತ್ತೀರಿ, ಮತ್ತೊಂದು ಕಡೆ ಉತ್ತರಕನ್ನಡ ಜಿಲ್ಲೆಯೊಂದರಲ್ಲೇ 22,167 ಬಾಧಿತರಾಗಿದ್ದಾರೆ ಎನ್ನುತ್ತೀರಿ. ಇದರಲ್ಲಿ ಯಾವುದು ಸರಿ? ಎಲೆಚುಕ್ಕೆ ರೋಗಕ್ಕೆ ₹62 ಕೋಟಿಯನ್ನು ಒದಗಿಸಿರುವುದಾಗಿ ತಿಳಿಸಿದ್ದೀರಿ. 10,272 ರೈತರಿಗೆ ₹5.53 ಕೋಟಿ ಪರಿಹಾರ ಕೊಟ್ಟಿದ್ದಾಗಿಯೂ ಹೇಳಿದ್ದೀರಿ. ಇದರಲ್ಲಿ ಯಾವುದನ್ನು ನಂಬಬೇಕು. ನೀವು ಸುಳ್ಳು ಹೇಳುತ್ತಿದ್ದೀರಿ’ ಎಂದು ಸುನಿಲ್‌ಕುಮಾರ್ ದೂರಿದರು.

‘ಸುಳ್ಳು ಲೆಕ್ಕವನ್ನು ನೀಡುತ್ತಿಲ್ಲ. ₹8.61 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಈವರೆಗೆ 16,866 ರೈತರಿಗೆ ಸಹಾಯಧನ ನೀಡಲಾಗಿದೆ. ಈಗ ಜಿಲ್ಲಾವಾರು ನೀಡಿರುವ ಪ್ರಸ್ತಾವನೆಯನ್ನು ಕಳಿಸಿದ್ದೇವೆ ’ ಎಂದು ಮಲ್ಲಿಕಾರ್ಜುನ ಸಮಜಾಯಿಷಿ ನೀಡಿದರೂ ಸುನಿಲ್ ಒಪ್ಪಲಿಲ್ಲ.

ಆಗ ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ.ಖಾದರ್, ‘ಮಾಹಿತಿ ಪಡೆದು ಗೊಂದಲ ಬಗೆಹರಿಸಿ’ ಎಂದು ಸಚಿವರಿಗೆ ಸಲಹೆ ನೀಡಿದರು.

‘ಸರಿಯಾದ ಉತ್ತರ ನೀಡುವವರೆಗೆ ಪ್ರಶ್ನೆಯನ್ನು ತಡೆ ಹಿಡಿಯಬೇಕು’ ಎಂದು ಸುನಿಲ್ ಒತ್ತಾಯಿಸಿದರು. ತಡೆ ಹಿಡಿಯಲು ಮಲ್ಲಿಕಾರ್ಜುನ ಅವರು ಸಮ್ಮತಿಸಿದರು.

‘ಎಚ್‌ಡಿಕೆ ಪಟ್ಟಕ್ಕೆ ಮೋದಿ, ಶಾ ಸಿದ್ಧತೆ’

ಬಿಜೆಪಿ ಕೆಣಕಿದ ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಧಾನಮಂತ್ರಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ಎಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ಸಿದ್ಧತೆ ನಡೆಸಿದ್ದಾರೆ. ನೀವಿನ್ನೂ ಸಿದ್ದರಾಮಯ್ಯ–ಶಿವಕುಮಾರ್ ಸುತ್ತಲೇ ಗಿರಕಿ ಹೊಡೆಯುತ್ತಿದ್ದೀರಿ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಬಿಜೆಪಿ ನಾಯಕರನ್ನು ಕೆಣಕಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಬಿಜೆಪಿಯ ಸುರೇಶ್ ಗೌಡ, ‘ಸಿದ್ದರಾಮಯ್ಯ ಅವರು ದಾಖಲೆಯ ಬಜೆಟ್ ಮಂಡಿಸಿದ ಮರು ದಿನವೇ ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷ ಪೂರೈಸಿದ್ದ ಜಾಹೀರಾತು ನೋಡಿದೆ. ಕುರ್ಚಿ ಕದನ ಜೋರಾಗಿದೆ’ ಎಂದರು.

ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಪ್ರಿಯಾಂಕ್, ‘ಬಜೆಟ್ ಮೇಲೆ ಚರ್ಚೆ ಮಾಡದೆ, ರಾಜಕೀಯ ಚರ್ಚೆ ಮಾಡುತ್ತಿದ್ದಾರೆ. ಕೇಂದ್ರ ಬಿಜೆಪಿ ನಾಯಕರು ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ಮುಂದಾಗಿದ್ದರೂ ರಾಜ್ಯ ಬಿಜೆಪಿ ನಾಯಕರು ಮೌನವಾಗಿದ್ದಾರೆ. ನಿಮ್ಮ ನಾಯಕರು ಒಮ್ಮೆ ಸಿದ್ದರಾಮಯ್ಯ ಪರ ಮತ್ತೊಮ್ಮೆ ಶಿವಕುಮಾರ್ ಪರ ಹೇಳಿಕೆ ನೀಡುತ್ತಾ ದ್ವಂದ್ವ ನೀತಿ ಅನುಸರಿಸುತ್ತಿದ್ದಾರೆ ಎಂದು ಟೀಕಿಸಿದರು.

ಪ್ರಿಯಾಂಕ್ ಮಾತಿಗೆ ಧ್ವನಿಗೂಡಿಸಿದ ಶಿವಕುಮಾರ್, ‘ಬಿಜೆಪಿಯಲ್ಲಿ ಕೆಲ ಸ್ನೇಹಿತರು ಇದ್ದಾರೆ. ಅವರಿಗೆ ನನ್ನನ್ನು ಜ್ಞಾಪಿಸಿಕೊಳ್ಳದಿದ್ದರೆ ಅವರಿಗೆ ನಿದ್ದೆ ಬರುವುದಿಲ್ಲ. ಊಟ ಸೇರುವುದಿಲ್ಲ. ಸ್ಫೂರ್ತಿ ಸಿಗುವುದಿಲ್ಲ’ ಎಂದರು.

ಸಿಗದ ಉತ್ತರ: ಸಭಾಧ್ಯಕ್ಷ ಖಾದರ್ ಗರಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಸಚಿವರಿಂದ ಉತ್ತರಗಳು ಬರದೇ ಇರುವ ಬಗ್ಗೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಆಕ್ರೋಶ ವ್ಯಕ್ತಪಡಿಸಿದರು.



ಯು.ಟಿ. ಖಾದರ್

ಶುಕ್ರವಾರ ದಂದು ಲಿಖಿತವಾಗಿ ಉತ್ತರಿಸುವ 130 ಪ್ರಶ್ನೆಗಳಿಗೆ 50 ಕ್ಕೆ ಮಾತ್ರ ಉತ್ತರ ಬಂದಿದ್ದವು. ‘ಕಳೆದ ಕೆಲವು ದಿನಗಳಿಂದ ಇದೇ ರೀತಿ ಆಗುತ್ತಿದೆ. ಉತ್ತರ ಪಡೆಯುವುದಕ್ಕಾಗಿ 10 ದಿನಗಳನ್ನು ಕೊಡುತ್ತೇವೆ. ಆದರೆ, ಉತ್ತರವೂ ಸಿಗುವುದಿಲ್ಲ. ಯಾವ ಹಂತದಲ್ಲಿದೆ ಎಂಬ ಮಾಹಿತಿಯೂ ಕೊಡುತ್ತಿಲ್ಲ’ ಎಂದು ಖಾದರ್ ಆಕ್ಷೇಪ ವ್ಯಕ್ತಪಡಿಸಿದರು.

'ಈ ಪ್ರವೃತ್ತಿಗೆ ಅಂತ್ಯ ಹಾಡಬೇಕು. ಈ ಸಮಸ್ಯೆ ಬಗೆಹರಿಸಲೆಂದು ಸಮಿತಿ ಮಾಡಿದ್ದೆವು. ಅದರಿಂದ ಏನೂ ಪ್ರಯೋಜನ ಆಗಲಿಲ್ಲ. ನಾವು ಸುಮ್ಮನಿರುವುದನ್ನು ದೌರ್ಬಲ್ಯ ಎಂದು ಭಾವಿಸಬೇಡಿ’ ಎಂದು ಅವರು ಸರ್ಕಾರಕ್ಕೆ ಕುಟುಕಿದರು.

ವಿರೋಧಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ‘ನೀವು ನಾಲ್ಕನೇ ಬಾರಿ ಎಚ್ಚರಿಕೆ ನೀಡುತ್ತಿದ್ದೀರಿ. ಕಳೆದ ಮೂರು ವರ್ಷಗಳಲ್ಲಿ ವಿವಿಧ ಇಲಾಖೆಗಳಿಗೆ ಎಷ್ಟು ಪ್ರಶ್ನೆಗಳು ಹೋಗಿದ್ದವು. ಎಷ್ಟಕ್ಕೆ ಉತ್ತರ ಬಂದಿವೆ ಎಂಬ ಮಾಹಿತಿ ನೀಡಬೇಕು. ಅಧಿಕಾರಿಗಳು ಕೆಲಸ ಮಾಡುವುದನ್ನು ಬಿಟ್ಟು, ಗಾಲ್ಫ್ ಆಡಲು ಹೋಗುತ್ತಾರೆ. ಇದಕ್ಕೆ ಕಡಿವಾಣ ಹಾಕಿ’ ಎಂದು ಟೀಕಿಸಿದರು.

ಸರ್ಕಾರದ ಪರವಾಗಿ ಉತ್ತರಿಸಿದ ಗೃಹ ಸಚಿವ ಜಿ.ಪರಮೇಶ್ವರ ಅವರು, ‘ಸರ್ಕಾರಕ್ಕೆ ನಿಮ್ಮ ಕಳಕಳಿ ಅರ್ಥವಾಗುತ್ತದೆ. ನಿಮ್ಮ ಸ್ಟಾರ್ ಚೆನ್ನಾಗಿದ್ದರೆ, ಸ್ಟಾರ್ ಪ್ರಶ್ನೆಗಳು ಬರುತ್ತವೆ. ಈ ವಿಷಯವನ್ನು ಮುಖ್ಯಮಂತ್ರಿ ಅವರ ಗಮನಕ್ಕೆ ತರುತ್ತೇನೆ’ ಎಂದು ಹೇಳಿದರು.

‘ಪ್ರತಿಯೊಬ್ಬ ಸಚಿವರು ಪ್ರಶ್ನೆಗಳಿಗೆ ಎರಡು ದಿನ ಮೊದಲೇ ತಯಾರಿ ಮಾಡಿಕೊಂಡು ಬರಬೇಕು. ಆಗ ಮಾತ್ರ ಸಮರ್ಪಕವಾಗಿ ಉತ್ತರ ನೀಡಲು ಸಾಧ್ಯ’ ಎಂದು ಸಭಾಧ್ಯಕ್ಷ ಖಾದರ್ ಹೇಳಿದರು.

‘ಗ್ಯಾರಂಟಿ ವಿರುದ್ಧ ಬಿಜೆಪಿ ನಿರ್ಣಯ ಮಂಡಿಸಲಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಗ್ಯಾರಂಟಿ ಪರಿಷ್ಕರಿಸಿ–ಬಿಜೆಪಿ ಶಾಸಕರ ಆಗ್ರಹ
- ಡಿಕೆಶಿ ಸವಾಲು

ಬೆಂಗಳೂರು: ‘ಗ್ಯಾರಂಟಿ ಯೋಜನೆಗಳನ್ನು ಹಿಂಪಡೆಯಬೇಕು. ಮರುಪರಿಶೀಲನೆ ಮಾಡಬೇಕು ಎಂದು ಬಿಜೆಪಿ ನಿರ್ಧಾರ ಮಾಡಿಕೊಂಡು ಸದನದಲ್ಲಿ ನಿರ್ಣಯ ಮಂಡಿಸಲಿ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸವಾಲು ಹಾಕಿದರು.



ಶಿವಕುಮಾರ್

ವಿಧಾನಸಭೆಯಲ್ಲಿ ನಡೆದ ಬಜೆಟ್ ಮೇಲಿನ ಚರ್ಚೆಯಲ್ಲಿ ಬಿಜೆಪಿಯ ಸುರೇಶ್ ಗೌಡ ಅವರು ಉಳ್ಳವರ ಪಾಲಾಗುತ್ತಿರುವ ಗ್ಯಾರಂಟಿ ಯೋಜನೆಗಳನ್ನು ಮರುಪರಿಷ್ಕರಣೆ ಮಾಡಬೇಕು ಎಂಬ ಒತ್ತಾಯಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಈ ಅಭಿಪ್ರಾಯ ಕೇವಲ ನಿಮ್ಮದಲ್ಲ. ಅದು ಬಿಜೆಪಿ ಅಭಿಪ್ರಾಯ. ಅಕ್ಕಪಕ್ಕ ಕೂತು, ಯಾವುದೇ ಸ್ಥಳದಲ್ಲಿ ನಿಂತು ಟೀಕೆ ಮಾಡುವುದಕ್ಕಿಂತ, ಈ ಕುರಿತು ಒಮ್ಮತದ ತೀರ್ಮಾನ ತೆಗೆದುಕೊಂಡು ಸದನದಲ್ಲೇ ನಿರ್ಣಯ ಮಂಡಿಸಲಿ. ನಂತರ ಸಾರ್ವಜನಿಕ ಅಭಿಪ್ರಾಯ ಪಡೆದು ರದ್ದು ಮಾಡುವ ಕುರಿತು ನಿರ್ಧಾರ ಮಾಡೋಣ’ ಎಂದರು.

‘ಕೋಳಿ ಕೇಳಿ ಖಾರ ಅರೆದಂತಿದೆ, ಗ್ಯಾರಂಟಿ ಕೊಡುವಾಗ ನಮ್ಮನ್ನು ನೀವು ಕೇಳಿದ್ದೀರಾ’ ಎಂದು ಸುರೇಶ್ ಮರು ಪ್ರಶ್ನೆಗೆ ಹಾಕಿದರು. ‘ಬಿ.ಎಸ್. ಯಡಿಯೂರಪ್ಪ ಅವರು ಒಂದು ಕಾಳು ಕಡಿಮೆ ಆದರೂ ಬಿಡುವುದಿಲ್ಲ ಎಂದು ಹೇಳಿದ್ದರು. ಆನಂತರ ಅದು ಕಡಿಮೆ, ಇದು ಆಯಿತು ಎಂದರು. ಆರು ತಿಂಗಳಲ್ಲಿ ಎಲ್ಲಾ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದೆವು. ನಿಮ್ಮ ಮಾತನ್ನೂ ಕೇಳಿಯೇ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ನೀಡಿದ್ದೇವೆ’ ಎಂದು ಶಿವಕುಮಾರ್ ತಿರುಗೇಟು ಕೊಟ್ಟರು.

‘ಅಸ್ಸಾಂನಲ್ಲಿ ಸರ್ಕಾರದ ಉಚಿತ ಕೊಡುಗೆಗಳು ಬಿಜೆಪಿ ಕಾರ್ಯಕರ್ತರಿಗೆ ಮಾತ್ರ ಸಿಗುತ್ತಿವೆ. ಕಾಂಗ್ರೆಸ್ ಕಾರ್ಯಕರ್ತರಿಗೆ ಸಿಗುತ್ತಿಲ್ಲ. ಕರ್ನಾಟಕದಲ್ಲಿ ಎಲ್ಲ ಪಕ್ಷದವರಿಗೂ ಸೌಲಭ್ಯ ಸಿಗುತ್ತಿದೆ. ಉಳ್ಳವರಿಗೆ ಬೇಡ ಎನ್ನುವ ಕುರಿತು ಸರ್ಕಾರವೂ ಚಿಂತಿಸುತ್ತಿದೆ’ ಎಂದು ಹೇಳಿದರು.

‘ಧೈರ್ಯಸ್ಥಗೆ ಬಹುಮತ ಸಾಧ್ಯ’

ಬೆಂಗಳೂರು: ‘ಧೈರ್ಯ ಇರುವ ಒಬ್ಬ ವ್ಯಕ್ತಿ ಬಹುಮತ ತರಬಲ್ಲ ಎಂದು ನಾನು ನಂಬಿರುವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪುನರುಚ್ಚರಿಸಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಬಿಜೆಪಿಯ ಸುರೇಶ್ ಗೌಡ, ‘ಸಿದ್ದರಾಮಯ್ಯ– ಶಿವಕುಮಾರ್ ಮಾತಿನಲ್ಲಷ್ಟೇ ಹಾಲು–ಜೇನು. ಅಕ್ಕಪಕ್ಕ ಕುಳಿತರೂ 10 ನಿಮಿಷ ಮುಖ ಕೊಟ್ಟು ಮಾತನಾಡುವುದಿಲ್ಲ. ಶಿವಕುಮಾರ್ ಮಾತ್ರ ಕಾಂಗ್ರೆಸ್‌ನ ಎಲ್ಲ ಶಾಸಕರೂ ನಮ್ಮವರೇ ಎನ್ನುತ್ತಿದ್ದಾರೆ’ ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಬಜೆಟ್ ವಿರುದ್ಧ ಮಾತನಾಡಲು ಏನೂ ಸಿಗದ ಕಾರಣ ನನ್ನ ವಿಚಾರ ಎತ್ತುತ್ತಿದ್ದಾರೆ. ಸುರೇಶ್ ಗೌಡ ಹೇಳಿದಂತೆ ಕಾಂಗ್ರೆಸ್‌ನ ಎಲ್ಲರೂ ನಮ್ಮ ಶಾಸಕರೇ’ ಎಂದು ಪ್ರತಿಪಾದಿಸಿದರು.

ಚಿನ್ನ ಅಡಮಾನ ಸಾಲ ಪಡೆದ ಗ್ರಾಹಕರ ರಕ್ಷಣೆ: ಖಾಸಗಿ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನ ಅಡಮಾನ ಸಾಲ ಪಡೆದ ಗ್ರಾಹಕರ ಹಕ್ಕುಗಳ ರಕ್ಷಣೆಗೆ ಅವಕಾಶ ನೀಡುವ ಖಾಸಗಿ ಮಸೂದೆಯನ್ನು ಕಾಂಗ್ರೆಸ್‌ನ ರಮೇಶ್ ಬಾಬು ಮಂಡಿಸಿದರು.

ವಿಧಾನ ಪರಿಷತ್ತಿನ ಶುಕ್ರವಾರದ ಕಲಾಪದ ವೇಳೆ ರಮೇಶ್ ಬಾಬು ಅವರು, ‘ಕರ್ನಾಟಕ ಚಿನ್ನ ಅಡಮಾನವಿಟ್ಟ ಸಾಲಗಾರರ ರಕ್ಷಣಾ ಮಸೂದೆ’ ಮಂಡಿಸಿದರು.



ರಮೇಶ್ ಬಾಬು

‘ಚಿನ್ನ ಅಡಮಾನ ಇರಿಸಿಕೊಳ್ಳುವ ಕಂಪನಿಗಳು, ಚಿನ್ನದ ಮಾರುಕಟ್ಟೆ ಮೌಲ್ಯದ ಶೇ 50ರಷ್ಟು ಮೊತ್ತವನ್ನಷ್ಟೇ ಸಾಲವಾಗಿ ನೀಡುತ್ತವೆ. ವಿಪರೀತ ದರದ ಬಡ್ಡಿ ವಸೂಲಿ ಮಾಡುತ್ತವೆ. ಅಡಮಾನವಿಡುವ ಚಿನ್ನಕ್ಕೆ ನ್ಯಾಯಯುತವಾದ ಮೊತ್ತ ನೀಡದೆ ಗ್ರಾಹಕರನ್ನು ವಂಚಿಸುತ್ತವೆ. ಚಿನ್ನದ ಮಾರುಕಟ್ಟೆ ಮೌಲ್ಯದ ಕನಿಷ್ಠ ಇಂತಿಷ್ಟು ಪ್ರಮಾಣವನ್ನು ಸಾಲವಾಗಿ ನೀಡಬೇಕು ಎನ್ನುವುದನ್ನು ಕಡ್ಡಾಯ ಮಾಡಬೇಕು’ ಎಂದು ಮಸೂದೆಯ ವಿವರಗಳನ್ನು ಸದನದ ಮುಂದೆ ಇರಿಸಿದರು.

‘ಸಾಲ ನೀಡಿದ ಮೂರೇ ತಿಂಗಳೊಳಗೆ ಬಡ್ಡಿ ಪಾವತಿಸದಿದ್ದರೆ ಚಿನ್ನವನ್ನು ಹರಾಜು ಹಾಕುತ್ತವೆ. ಸಾಲ ಮತ್ತು ಅಸಲನ್ನು ಕಳೆದು ಉಳಿಕೆ ಮೊತ್ತವನ್ನು ಗ್ರಾಹಕರಿಗೆ ನೀಡುವುದಿಲ್ಲ. ಅಲ್ಲದೆ, ಚಿನ್ನ ಬಿಡಿಸಿಕೊಳ್ಳುವವರಿಗೆ ತೂಕದಲ್ಲಿ ಮೋಸ ಮಾಡಲಾಗುತ್ತಿದೆ. ಇದಕ್ಕೆಲ್ಲಾ ಕಡಿವಾಣ ಹಾಕುವ ಉದ್ದೇಶದಿಂದ ಹರಾಜಿಗೆ ಕಾಲಮಿತಿ, ತೂಕ ವಂಚನೆಗೆ ಕಠಿಣ ಶಿಕ್ಷೆ ವಿಧಿಸಬೇಕು’ ಎಂದು ವಿವರಿಸಿದರು.

ಈ ಮಸೂದೆಯ ಮೇಲೆ ಚರ್ಚೆ ನಡೆಸಲು ಮುಂದಿನ ವಾರ ಅವಕಾಶ ನೀಡುವುದಾಗಿ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಬೈರತಿ ಸುರೇಶ್ ಎರಡನೇ ಸಿಎಂ ಇದ್ದಂತೆ: ಜಿಟಿಡಿ

ಬೆಂಗಳೂರು: ‘ನೀವು ರಾಜ್ಯದ ಎರಡನೇ ಮುಖ್ಯಮಂತ್ರಿ ಇದ್ದ ಹಾಗೆ. ಹಾಗೆ ನೋಡಿದರೆ ಮುಖ್ಯಮಂತ್ರಿಗಿಂತ ನೀವೇ ಪವರ್‌ಫುಲ್’ ಎಂದು ಜೆಡಿಎಸ್‌ನ ಜಿ.ಟಿ.ದೇವೇಗೌಡ ಅವರು ಸಚಿವ ಬೈರತಿ ಸುರೇಶ್ ಅವರ ಕಾಲೆಳೆದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬೈರತಿ ಸುರೇಶ್ ಉತ್ತರ ನೀಡುವ ಸಂದರ್ಭದಲ್ಲಿ ದೇವೇಗೌಡ ಈ ಮಾತುಗಳನ್ನು ಹೇಳಿದರು.

‘ಮೈಸೂರಿನ ಕುಡಿಯುವ ನೀರು ಮತ್ತು ಒಳಚರಂಡಿ ಸಮಸ್ಯೆಯ ಅರಿವು ಮುಖ್ಯಮಂತ್ರಿ ಅವರಿಗಿದೆ. ನಗರಾಭಿವೃದ್ಧಿ ಸಚಿವರು ಹೇಳಿದರೆ ಮುಖ್ಯಮಂತ್ರಿ ಕೇಳಿಯೇ ಕೇಳುತ್ತಾರೆ’ ಎಂದು ಕಿಚಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸುರೇಶ್, ‘ಹೀಗೆ ಹೇಳಿ ಹೇಳಿ ಇರೋ ಮಂತ್ರಿ ಸ್ಥಾನವನ್ನು ಕಳೆದು ಬಿಡ್ತೀರಿ’ ಎಂದರು.

ವಿಧಾನಸಭೆ — ಪ್ರಶ್ನೋತ್ತರ

ಬಳ್ಳಾರಿ ವಿಮಾನ ನಿಲ್ದಾಣ: ಸದ್ಯವೇ ಸಿ.ಎಂ ಸಭೆ

ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ನಿರ್ಮಿಸುವ ಸಂಬಂಧ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಶೀಘ್ರವೇ ಸಭೆ ಕರೆಯಲಾಗುವುದು. ಬಳ್ಳಾರಿ, ಹೊಸಪೇಟೆ, ಹಂಪಿ, ಆನೆಗೊಂದಿ, ಸಂಡೂರು, ಕೊಪ್ಪಳ, ಕುರುಗೋಡು, ಸಿರಗುಪ್ಪ ಮುಂತಾದ ಭಾಗಗಳಿಗೆ ಅನುಕೂಲವಾಗುವಂತೆ ವಿಮಾನ ನಿಲ್ದಾಣ ಇರಬೇಕೆಂಬುದು ಸರ್ಕಾರದ ಉದ್ದೇಶ. ಹೀಗಾಗಿ ಬಳ್ಳಾರಿಯಿಂದ 19 ಕಿ.ಮೀ. ದೂರದಲ್ಲಿ ಜಾಗವನ್ನು ಗುರುತಿಸಲಾಗಿದೆ. ಇದು ಕಾರ್ಯಸಾಧು ಎನಿಸಿದರೆ ಎಲ್ಲ ಜನಪ್ರತಿನಿಧಿಗಳ ಜತೆ ಚರ್ಚಿಸಿ ಮುಂದಿನ ಹೆಜ್ಜೆ ಇಡಲಾಗುವುದು. ಮುಖ್ಯಮಂತ್ರಿ ನೇತೃತ್ವದಲ್ಲಿ ಸದ್ಯವೇ ಸಭೆ ನಡೆಸಲಾಗುವುದು. ಅಲ್ಲದೇ, ಉಡಾನ್ ಯೋಜನೆಯ ರಿಯಾಯ್ತಿಗಳನ್ನು ಮೂರು ವರ್ಷಗಳ ಬದಲಿಗೆ ಐದು ವರ್ಷಗಳಿಗೆ ಮುಂದುವರಿಸಲು ಕೇಂದ್ರಕ್ಕೆ ಮನವಿ ಮಾಡುತ್ತೇವೆ.

ಎಂ.ಬಿ.ಪಾಟೀಲ, ಕೈಗಾರಿಕಾ ಸಚಿವರ **ಪ್ರಶ್ನೆ: ಜಿ.ಜನಾರ್ದನ ರೆಡ್ಡಿ,** ಬಿಜೆಪಿ

ಇ–ತಂತ್ರಾಂಶದಲ್ಲಿ ದೋಷವಿಲ್ಲ

ಸದ್ಯದಲ್ಲೇ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಏಕೀಕೃತ ಭೂನಿರ್ವಹಣೆ ವ್ಯವಸ್ಥೆ (ಯೂನಿಫೈಡ್ ಲ್ಯಾಂಡ್ ಮ್ಯಾನೇಜ್‌ಮೆಂಟ್ ಸಿಸ್ಟಂ) ಜಾರಿ ಬರಲಿದೆ. ಭೂದಾಖಲೆಗಳು, ಸಮೀಕ್ಷೆ, ಭೂಪರಿವರ್ತನೆ, ಆಸ್ತಿ ತೆರಿಗೆ, ಇ–ಖಾತಾ ಸೇವೆಗಳನ್ನು ಒಂದೇ ಕಡೆ ಲಭ್ಯವಾಗುವಂತೆ ಮಾಡುವ ಫ್ಲಾಟ್ ಫಾರ್ಮ್ ಇದಾಗಿದೆ. ಪೈಲಟ್ ಯೋಜನೆಯಡಿ ಸದ್ಯದಲ್ಲಿಯೇ ಎಲ್ಲಾ ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ಜಾರಿ ತರಲಾಗುವುದು. ಇ-ತಂತ್ರಾಂಶದಲ್ಲಿ ಯಾವುದೇ ದೋಷಗಳು ಕಂಡು ಬಂದಿಲ್ಲ. ಒಂದು ವೇಳೆ ಸಮಸ್ಯೆ ಎದುರಾದರೆ ಕೂಡಲೇ ಸರಿಪಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ

ಬೈರತಿ ಸುರೇಶ, ನಗರಾಭಿವೃದ್ಧಿ, ನಗರ ಯೋಜನೆ ಸಚಿವ **ಪ್ರಶ್ನೆ: ಜ್ಯೋತಿ ಗಣೇಶ್,** ಬಿಜೆಪಿ

ಹೊಸಕೋಟೆಗೆ ಹೂವಿನ ಮಾರುಕಟ್ಟೆ

ಹೊಸಕೋಟೆಯಲ್ಲಿ ಪುಷ್ಪೋದ್ಯಮಕ್ಕೆ ಅನುಕೂಲವಾಗುವಂತೆ ಶೀತಲಗೃಹ ಮತ್ತು ಹೂವಿನ ಮಾರುಕಟ್ಟೆಯೊಂದನ್ನು ಆರಂಭಿಸುತ್ತೇವೆ. ಅಲ್ಲದೆ, ಚಿಕ್ಕಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯಲ್ಲಿ 20 ಎಕರೆಯಲ್ಲಿ ₹20 ಕೋಟಿ ವೆಚ್ಚದಲ್ಲಿ ಆಧುನಿಕ ಸುಸಜ್ಜಿತ ಹೂವಿನ ಮಾರುಕಟ್ಟೆ ಸ್ಥಾಪಿಸಲು ಅನುದಾನ ಮಂಜೂರಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

ಶಿವಾನಂದ ಪಾಟೀಲ, ಕೃಷಿ ಮಾರುಕಟ್ಟೆ ಸಚಿವ **ಪ್ರಶ್ನೆ: ಶರತ್ ಬಚ್ಚೇಗೌಡ,** ಕಾಂಗ್ರೆಸ್

ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆಗೆ ₹800 ಕೋಟಿ

ಮೈಸೂರು ನಗರಕ್ಕೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಗಾಗಿ ₹1,500 ಕೋಟಿ ಅನುದಾನಕ್ಕೆ ಮುಖ್ಯಮಂತ್ರಿಯವರನ್ನು ಕೋರಲಾಗಿತ್ತು. ಈಗ ₹750 ರಿಂದ ₹800 ಕೋಟಿ ಮೀಸಲಿಡಲಾಗುತ್ತಿದೆ. ಮೈಸೂರು ನಗರದ ವಿವಿಧ ಬಡಾವಣೆಗಳಲ್ಲಿ ಮಳೆ ನೀರು ಚರಂಡಿ ನಿರ್ಮಾಣ ಮಾಡಲಾಗಿದೆ. ಆದರೆ, ಕೆಲವು ಕಡೆ ಸಂಪರ್ಕ ಕಲ್ಪಿಸಲು ಸಾಧ್ಯವಾಗದ ಕಾರಣ ಈ ಕಾಮಗಾರಿಗೆ ₹27 ಕೋಟಿಗೆ ಮಹಾನಗರ ಪಾಲಿಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆ ಪ್ರಸ್ತಾವನೆ ತಿರಸ್ಕರಿಸಿತ್ತು. ಆ ಮೊತ್ತವನ್ನು ಹೊಂದಿಸಿ ಕೊಡುವ ಮೂಲಕ ಸಮಸ್ಯೆ ಬಗೆಹರಿಸುತ್ತೇವೆ. ನಗರದ ರಸ್ತೆಗಳಿಗೆ ವೈಟ್ ಟಾಪಿಂಗ್ ಯೋಜನೆಗಳಿಗಾಗಿ ₹300 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

ಬೈರತಿ ಸುರೇಶ, ನಗರಾಭಿವೃದ್ಧಿ ಸಚಿವ **ಪ್ರಶ್ನೆ: ಜಿ.ಟಿ.ದೇವೇಗೌಡ,** ಜೆಡಿಎಸ್

ಪ್ರಶ್ನೋತ್ತರ

‘ಬಡಾವಣೆ ಅನುಮೋದನೆಗೆ ಅರ್ಜಿ ಸಲ್ಲಿಸಲಿ’

ಕಂದಾಯ ಜಮೀನುಗಳಲ್ಲಿ ನಿರ್ಮಿಸಲಾಗಿರುವ ಬಡಾವಣೆಗಳಲ್ಲಿ ಮಾರಾಟವಾಗದೆ ಉಳಿದಿರುವ ನಿವೇಶನಗಳಿಗೆ ‘ಬಿ’ ಖಾತೆ ಮಾಡಿಕೊಡಲು ಸಾಧ್ಯವಿಲ್ಲ. ಅಂತಹ ನಿವೇಶನಗಳಿಗೆ ‘ಬಿ’ ಖಾತೆ ಮಾಡಿಕೊಡಲು ಗಡುವು ನೀಡಲಾಗಿತ್ತು. ಗಡುವಿನೊಳಗೆ ಅರ್ಜಿ ಸಲ್ಲಿಸಿದವರಿಗೆ ಖಾತೆ ನೀಡಲಾಗಿದೆ. ಮಾರಾಟವಾಗದೆ ಇರುವ ನಿವೇಶನಗಳನ್ನು ಒಳಗೊಂಡು, ನಾಗರಿಕ ಬಳಕೆ ನಿವೇಶನ ಮತ್ತು ಉದ್ಯಾನಕ್ಕೆ ಜಾಗ ಬಿಟ್ಟು ಬಡಾವಣೆ ಅನುಮೋದನೆಗೆ ಅರ್ಜಿ ಸಲ್ಲಿಸಿದರೆ, ಖಾತೆ ಮಾಡಿಕೊಡಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬಹುದು. ಆದರೆ ಅದು ಸಂಪೂರ್ಣವಾಗಿ ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ಕೃಷ್ಣ ಬೈರೇಗೌಡ, ಕಂದಾಯ ಸಚಿವ. **ಪ್ರಶ್ನೆ: ಎಚ್.ಎಸ್.ಗೋಪಿನಾಥ್,** ಬಿಜೆಪಿ

‘ವಿದ್ಯಾರ್ಥಿಗಳಿಗೆ ಆಪ್ತ ಸಮಾಲೋಚನೆಗೆ ಚಿಂತನೆ’

ಒಂದು ವರ್ಷದ ಅವಧಿಯಲ್ಲಿ ರಾಜ್ಯದ ವಿವಿಧ ಶಾಲೆ, ವಿದ್ಯಾರ್ಥಿ ನಿಲಯ ಮತ್ತು ವಸತಿ ಶಾಲೆಗಳಲ್ಲಿ ಒಟ್ಟು 27 ವಿದ್ಯಾರ್ಥಿಗಳು ವಿವಿಧ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶಾಲೆಗಳಲ್ಲಿ ತಜ್ಞರ ಮೂಲಕ ಆಪ್ತ ಸಮಾಲೋಚನೆ ನಡೆಸಲಾಗುತ್ತಿದೆ. ಕಾಯಂ ಆಗಿ ಆಪ್ತ ಸಮಾಲೋಚಕರನ್ನು ನಿಯೋಜನೆ ಮಾಡಬೇಕು ಎಂಬ ಬೇಡಿಕೆಯನ್ನು ಪರಿಶೀಲಿಸುತ್ತೇವೆ.

ಎಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ. **ಪ್ರಶ್ನೆ: ತಿಪ್ಪಣ್ಣಪ್ಪ ಕಮಕನೂರ,** ಕಾಂಗ್ರೆಸ್

‘ನಿಧಿ ವಾಪಸಾಗಿದ್ದರೆ ಪತ್ರ ಬರೆಯಿರಿ’

ವಿಧಾನ ಪರಿಷತ್ ಸದಸ್ಯರ ನಿಧಿಯನ್ನು ಎರಡು ವರ್ಷಗಳ ಒಳಗೇ ಬಳಸಬೇಕು. ಇಲ್ಲದಿದ್ದಲ್ಲಿ ಆ ನಿಧಿ, ಸರ್ಕಾರಕ್ಕೆ ವಾಪಸ್ಸಾಗುತ್ತದೆ. ಎಲ್ಲ ದಾಖಲೆಗಳ ನಿರ್ವಹಣೆ ಮತ್ತು ಷರತ್ತುಗಳನ್ನು ಪಾಲಿಸಿಯೂ ಹಣ ವಾಪಸಾಗಿದ್ದರೆ, ಆ ಸಂಬಂಧ ಪತ್ರ ಬರೆಯಿರಿ. ಅದನ್ನು ಪರಿಶೀಲಿಸಿ, ಸದಸ್ಯರ ನಿಧಿಯ ಹಣವನ್ನು ಮತ್ತೆ ಬಿಡುಗಡೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಡಿ.ಸುಧಾಕರ್, ಯೋಜನೆ ಮತ್ತು ಸಾಂಖ್ಯಿಕ ಸಚಿವ. **ಪ್ರಶ್ನೆ: ಕೇಶವ ಪ್ರಸಾದ್, ಬಿಜೆಪಿ**

ವಿಧಾನ ಪರಿಷತ್

‘ಭಿಕ್ಷಾಟನೆ ಮಾಫಿಯಾ ವಿರುದ್ಧ ಕ್ರಮ’

ಭಿಕ್ಷುಕರಿಗೆ ಪುನರ್ವಸತಿ ಕಲ್ಪಿಸಲು 2025–26ರ ಫೆಬ್ರುವರಿ ಅಂತ್ಯಕ್ಕೆ ₹69.07 ಕೋಟಿ ವೆಚ್ಚ ಮಾಡಲಾಗಿದೆ. ರಾಜ್ಯದ 15 ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ 796 ಪುರುಷ ಮತ್ತು 230 ಮಹಿಳೆಯರಿಗೆ ವಸತಿ ಕಲ್ಪಿಸಲಾಗಿದೆ. ಅವರ ಕುಟುಂಬಗಳನ್ನು ಪತ್ತೆ ಮಾಡಿ, ಮನೆಗೆ ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಭಿಕ್ಷುಕರನ್ನು ಬಳಸಿಕೊಂಡು ಹಣ ಸಂಗ್ರಹಿಸುವ ಮಾಫಿಯಾದ ಬಗ್ಗೆ ಪರಿಶೀಲನೆ ನಡೆಸಿ, ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ.

ಎಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ. **ಪ್ರಶ್ನೆ: ಕೆ.ಗೋವಿಂದರಾಜ್,** ಕಾಂಗ್ರೆಸ್

‘823 ಹುದ್ದೆ ಭರ್ತಿಗೆ ಪ್ರಸ್ತಾವನೆ’

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ, ವಿದ್ಯಾರ್ಥಿ ನಿಲಯಗಳ 106 ನಿಲಯ ಮೇಲ್ವಿಚಾರಕರ ಹುದ್ದೆ ಭರ್ತಿಗಾಗಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇಲಾಖೆಯಲ್ಲಿನ 823 ಹುದ್ದೆಗಳ ಭರ್ತಿಗಾಗಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು, ಪರಿಶೀಲನೆಯಲ್ಲಿದೆ. ನೇಮಕಾತಿ ನಡೆದರೆ ವಿದ್ಯಾರ್ಥಿ ನಿಲಯಗಳ ನಿರ್ವಹಣೆ ಸುಲಭವಾಗಲಿದೆ.

ಶಿವರಾಜ.ಎಸ್. ತಂಗಡಗಿ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ **ಪ್ರಶ್ನೆ: ಎಂ.ಜಿ.ಮುಳೆ,** ಬಿಜೆಪಿ

‘ಕೆನೆಪದರ ನೀತಿ ಪರಿಶೀಲನೆ’

ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಕೆನೆಪದರ ಅನ್ವಯ ಮಾಡುವಾಗ ಅವರ ಪೋಷಕರ ಆದಾಯವನ್ನು ಮಾತ್ರ ಪರಿಗಣಿಸದೆ, ಅವರು ಇರುವ ಹುದ್ದೆಯನ್ನೂ ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಮೀಸಲಾತಿ ಜಾರಿಗೆ ತನ್ನದೇ ನಿಯಮಗಳನ್ನು ರೂಪಿಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ. ಆದರೂ, ಕೆನೆಪದರ ನೀತಿಯನ್ನು ಬದಲಿಸಬೇಕೆ ಎಂಬುದರ ಬಗ್ಗೆ ಪರಿಶೀಲನೆ ನಡೆಸುತ್ತೇವೆ.

ಶಿವರಾಜ.ಎಸ್. ತಂಗಡಗಿ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ. **ಪ್ರಶ್ನೆ: ಶಶೀಲ್ ಜಿ. ನಮೋಶಿ,** ಬಿಜೆಪಿ

ಶನಿವಾರ, ಮಾರ್ಚ್ 14, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 73 | ಪುಟ 24
prajavani.net prajavani www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 74,563 | ನಿಫ್ಟಿ 23,151 | $/₹ 92.30



ಅಲ್ಕರಾಜ್ ಓಟ
ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲೋಸ್ ಅಲ್ಕರಾಜ್ (ಸ್ಪೇನ್) ಅವರು ಇಂಡಿಯನ್ ವೆಲ್ಸ್ ಟೆನಿಸ್ ಟೂರ್ನಿಯಲ್ಲಿ ಬ್ರಿಟನ್‌ನ ಕ್ಯಾಮೆರಾನ್ ನಾರ್ರಿ ಅವರನ್ನು ಮಣಿಸಿ ಸೆಮಿಫೈನಲ್ ತಲುಪಿದರು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಇಂದಿನ ಸಂಚಿಕೆಯೊಂದಿಗೆ ಪ್ರಜಾವಾಣಿ **ಕ್ಲಾಸಿಫೈಡ್ಸ್** ಪುರವಣಿ ಇದೆ

ಭಾರತದ ಹಡಗುಗಳಿಗೆ ಅನುಮತಿ

ದೇಶಕ್ಕೆ ಎಲ್‌ಪಿಜಿ ತರುತ್ತಿರುವ ನೌಕೆ ಹೊರ್ಮುಜ್ ಜಲಸಂಧಿ ದಾಟಲು ಒಪ್ಪಿಗೆ

ಪ್ರಜಾವಾಣಿ ವಾರ್ತೆ/ ರಾಯಿಟರ್ಸ್

ನವದೆಹಲಿ: ಅಡುಗೆ ಅನಿಲ (ಎಲ್‌ಪಿಜಿ) ಸಾಗಿಸುವ, ಭಾರತದ ಧ್ವಜ ಹೊಂದಿರುವ ಎರಡು ಹಡಗುಗಳಿಗೆ ಹೊರ್ಮುಜ್ ಜಲಸಂಧಿ ದಾಟಲು ಇರಾನ್ ಶುಕ್ರವಾರ ಅನುಮತಿ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಇರಾನ್‌ನ ನಿರ್ಧಾರವು ಭಾರತದಲ್ಲಿ ತಲೆದೋರಿರುವ ಅಡುಗೆ ಅನಿಲ ಬಿಕ್ಕಟ್ಟನ್ನು ಸ್ವಲ್ಪ ಮಟ್ಟಿಗೆ ತಗ್ಗಿಸಲು ನೆರವಾಗಲಿದೆ. ಸೌದಿ ಅರೇಬಿಯಾದ ತೈಲ ಹೊತ್ತು ತರುತ್ತಿರುವ ಇನ್ನೊಂದು ಹಡಗು ಮಾರ್ಚ್ 1ರಂದು ಹೊರ್ಮುಜ್ ಜಲಸಂಧಿ ದಾಟಿದ್ದು, ಶನಿವಾರ ಭಾರತ ತಲುಪುವ ನಿರೀಕ್ಷೆಯಿದೆ ಎಂದು ಮೂಲಗಳು ಹೇಳಿವೆ. ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿಕೊಂಡಿರುವ ಭಾರತದ ಧ್ವಜ ಹೊಂದಿರುವ 28 ಹಡಗುಗಳಲ್ಲಿ ಒಂದು ಹಡಗು ಸುರಕ್ಷಿತವಾಗಿ ಜಲಸಂಧಿಯನ್ನು ದಾಟಿದೆ.

ಒಮಾನ್‌ನಿಂದ ಆಫ್ರಿಕಾಕ್ಕೆ ತೈಲ ಸಾಗಿಸುತ್ತಿರುವ 'ಜಗ್ ಪ್ರಕಾಶ್' ಹೆಸರಿನ ಹಡಗು ಹೊರ್ಮುಜ್ ಜಲಸಂಧಿಯ ಪೂರ್ವದಿಂದ ಪ್ರಯಾಣ ಬೆಳೆಸಿದೆ ಎಂದು ಬಂದರು ಮತ್ತು ಜಲಸಾರಿಗೆ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹೊರ್ಮುಜ್ ಜಲಸಂಧಿಯ ಪಶ್ಚಿಮದಲ್ಲಿ 24 ಮತ್ತು ಪೂರ್ವದಲ್ಲಿ ನಾಲ್ಕು ಸೇರಿದಂತೆ ಭಾರತದ ಧ್ವಜ ಹೊಂದಿರುವ ಒಟ್ಟು 28 ಹಡಗುಗಳು ಸಿಲುಕಿಕೊಂಡಿವೆ ಎಂದು ಅವರು ಹೇಳಿದರು. ಪೂರ್ವ ಭಾಗದಲ್ಲಿದ್ದ ನಾಲ್ಕು ಹಡಗುಗಳಲ್ಲಿ 'ಜಗ್ ಪ್ರಕಾಶ್' ಇದೀಗ ತಾಂಜಾನಿಯಾಕ್ಕೆ ಪ್ರಯಾಣ ಆರಂಭಿಸಿದೆ.

ಅನುಮತಿ ಶೀಘ್ರ: ಹೊರ್ಮುಜ್ ಜಲಸಂಧಿ ಮೂಲಕ ಭಾರತಕ್ಕೆ ಸಾಗುವ ಎಲ್ಲ ಹಡಗುಗಳ ಸುಗಮ ಸಂಚಾರಕ್ಕೆ ಇರಾನ್ ಅನುಮತಿ ನೀಡಲಿದೆ ಎಂದು ಭಾರತದಲ್ಲಿರುವ ಇರಾನ್ ರಾಯಭಾರಿ ಮೊಹಮ್ಮದ್ ಫತಾಲಿ ಶುಕ್ರವಾರ ದೃಢಪಡಿಸಿದ್ದಾರೆ. 'ಭಾರತ ಮತ್ತು ಇರಾನ್ ನಡುವೆ ಗೆಳೆತನ ಇದ್ದು, ಸಮಾನ ಹಿತಾಸಕ್ತಿಗಳನ್ನು ಹೊಂದಿವೆ. ಭಾರತದ ಹಡಗುಗಳ ಸುಗಮ ಸಂಚಾರಕ್ಕೆ ಅನುಮತಿ ನೀಡುವ ನಿರ್ಧಾರವನ್ನು ಇರಾನ್ ಆಡಳಿತ ಶೀಘ್ರದಲ್ಲೇ ತೆಗೆದುಕೊಳ್ಳಲಿದೆ' ಎಂದಿದ್ದಾರೆ.

▶12

₹1 ಲಕ್ಷ ಕೋಟಿ ಮೊತ್ತದ 'ಆರ್ಥಿಕ ಸ್ಥಿರೀಕರಣ ನಿಧಿ'

ನವದೆಹಲಿ: ಪಶ್ಚಿಮ ಏಷ್ಯಾ ಸಂಘರ್ಷವೂ ಸೇರಿದಂತೆ ಜಾಗತಿಕವಾಗಿ ಎದುರಾಗುವ ಆರ್ಥಿಕ ಅಡೆತಡೆಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ₹1 ಲಕ್ಷ ಕೋಟಿ ಮೊತ್ತದ 'ಆರ್ಥಿಕ ಸ್ಥಿರೀಕರಣ ನಿಧಿ' ಸ್ಥಾಪಿಸುವ ಯೋಜನೆಯನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಸ್ತಾಪಿಸಿದರು. 'ಪ್ರಸ್ತಾವಿತ ನಿಧಿಯು ಇತ್ತೀಚಿನ ಬಿಕ್ಕಟ್ಟು ಮತ್ತು ಅನಿರೀಕ್ಷಿತವಾಗಿ ಬರಬಹುದಾದ ಜಾಗತಿಕ ಅಡೆತಡೆಗಳನ್ನು ಸಮರ್ಥವಾಗಿ ಎದುರಿಸಲು ಭಾರತಕ್ಕೆ ನೆರವಾಗುತ್ತದೆ' ಎಂದು ಅವರು ಲೋಕಸಭೆಯಲ್ಲಿ ತಿಳಿಸಿದರು. ಅನುದಾನಕ್ಕಾಗಿ ಎರಡನೇ ಹಂತದ ಪೂರಕ ಬೇಡಿಕೆಗಳ ಕುರಿತು ಚರ್ಚಿಸುವಾಗ ಅವರು ಈ ಕುರಿತು ಮಾಹಿತಿ ನೀಡಿದರು.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದ ಎದುರಾಗಿರುವ ಇಂಧನ ಪೂರೈಕೆ ಸಮಸ್ಯೆ ಮತ್ತು ಅಡುಗೆ ಅನಿಲ ಕೊರತೆ ಕುರಿತು ಚರ್ಚೆಗೆ ಒತ್ತಾಯಿಸಿ ವಿರೋಧ ಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದ ವೇಳೆಯೇ ನಿರ್ಮಲಾ ಅವರು ಇದನ್ನು ಪ್ರಸ್ತಾಪಿಸಿದರು. ಪೂರಕ ಬೇಡಿಕೆಗಳ ಭಾಗವಾಗಿ ಈ ನಿಧಿಗೆ ಬಳಸಲು ₹57,381.84 ಕೋಟಿ ಅನುದಾನಕ್ಕೆ ಸಂಸತ್ತಿನ ಅನುಮೋದನೆಯನ್ನು ಸರ್ಕಾರ ಕೋರಿತು. ಉಳಿದ ಮೊತ್ತವನ್ನು ಇತರ ಸಚಿವಾಲಯಗಳು ಮತ್ತು ಇಲಾಖೆಗಳ ಉಳಿತಾಯದ ಮೂಲಕ ಪಡೆಯಲಾಗುವುದು ಎಂದು ಹೇಳಿತು.

₹2.81 ಲಕ್ಷ ಕೋಟಿಗೆ ಪೂರಕ ಬೇಡಿಕೆ: ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಪೂರಕ ಬೇಡಿಕೆಗಳ ಮೂಲಕ ಸರ್ಕಾರ ಒಟ್ಟು ₹2.81 ಲಕ್ಷ ಕೋಟಿ ಖರ್ಚು ಮಾಡಲು ಲೋಕಸಭೆಯ ಅನುಮೋದನೆ ಕೋರಿತು.

▶12



ಗಲ್ಫ್ ಮೇಲೆ ಇರಾನ್ ದಾಳಿ

ದುಬೈ (ಎಪಿ/ ಎಎಫ್‌ಪಿ): ಗಲ್ಫ್ ರಾಷ್ಟ್ರಗಳಲ್ಲಿನ ತೈಲ ಮತ್ತು ಇತರ ಮೂಲಸೌಕರ್ಯಗಳನ್ನು ಗುರಿಯಾಗಿಸಿ ಇರಾನ್ ಸೇನೆ ಶುಕ್ರವಾರ ತೀವ್ರ ದಾಳಿ ನಡೆಸಿದೆ.

ಅಮೆರಿಕದ ಸೇನಾ ನೆಲೆಗಳು ಇರುವ ದೇಶಗಳ ಮೇಲೆ ದಾಳಿ ಮುಂದುವರಿಸುವಂತೆ ಇರಾನ್‌ನ ನೂತನ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ ಅವರು ಗುರುವಾರ ಹೇಳಿದ್ದರು. ಅದರ ಬೆನ್ನಲ್ಲೇ ಈ ದಾಳಿ ನಡೆದಿದೆ. ಮತ್ತೊಂದೆಡೆ, ಇರಾನ್‌ಗೆ ಭಾರಿ ಪ್ರಹಾರ ನೀಡಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ.

▶12

ಸದ್ಯ ಇಂಡಕ್ಷನ್ ಒಲೆ ಬಳಸಿ: ಮುನಿಯಪ್ಪ

ಬೆಂಗಳೂರು: 'ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯ ಮುಂದಿನ ಹತ್ತು ದಿನಗಳಲ್ಲಿ ಬಗೆಹರಿಯುವ ನಿರೀಕ್ಷೆ ಇದೆ. ಹೋಟೆಲ್‌ನವರು ಅಲ್ಲಿಯವರೆಗೆ ವಿದ್ಯುತ್ ಮತ್ತು ಇಂಡಕ್ಷನ್ ಒಲೆ ಬಳಸಲಿ' ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಸಲಹೆ ನೀಡಿದರು. ವಿಧಾನ ಪರಿಷತ್ತಿನ ಕಲಾಪದ ಶೂನ್ಯ ವೇಳೆಯಲ್ಲಿ ಕಾಂಗ್ರೆಸ್‌ನ ಐವನ್ ಡಿಸೋಜ ಮತ್ತು ಎಂ.ನಾಗರಾಜ ಯಾದವ್ ಅವರು ಎಲ್‌ಪಿಜಿ ಸಿಲಿಂಡರ್ ಕೊರತೆ ಬಗ್ಗೆ ವಿಷಯ ಪ್ರಸ್ತಾಪಿಸಿದರು.

ಅದಕ್ಕೆ ಉತ್ತರಿಸಿದ ಮುನಿಯಪ್ಪ, 'ತೈಲ ಸಂಸ್ಕರಣ ಕಂಪನಿಗಳ ಜತೆಗೆ ಸಭೆ ನಡೆಸಿದ್ದೇವೆ. ಎಲ್‌ಪಿಜಿ ತುಂಬಿದ ಒಂದು ಟ್ಯಾಂಕರ್ ಗುರುವಾರ ಭಾರತ ತಲುಪಿದೆ. ಇನ್ನೂ ಹತ್ತು ಟ್ಯಾಂಕರ್‌ಗಳು ಕೊಲ್ಲಿ ದೇಶಗಳಿಂದ ಹೊರಡಬೇಕಿದೆ. ಅವು ಬಂದ ನಂತರ ಪರಿಸ್ಥಿತಿ ಸ್ವಲ್ಪ ಸುಧಾರಿಸಲಿದೆ' ಎಂದರು.

▶3



ರಾಜ್ಯದಲ್ಲಿ ಬೀಡು ಬಿಟ್ಟಿರುವ ಒಡಿಶಾದ ಶಾಸಕರೊಂದಿಗೆ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ ಕೆ ಶಿವಕುಮಾರ್ ಚರ್ಚೆ ನಡೆಸಿದರು

ರಾಜ್ಯ ರೆಸಾರ್ಟ್‌ನಲ್ಲಿ ಒಡಿಶಾ 'ಕೈ' ಶಾಸಕರು

ಪ್ರಜಾವಾಣಿ ವಾರ್ತೆ

ರಾಮನಗರ: ರಾಜ್ಯಸಭೆ ಚುನಾವಣೆಯಲ್ಲಿ ಒಡಿಶಾದ ಕಾಂಗ್ರೆಸ್ ಘಟಕಕ್ಕೆ ಅಡ್ಡ ಮತದಾನ ಹಾಗೂ 'ಆಪರೇಷನ್ ಕಮಲ' ಭೀತಿ ಎದುರಾಗಿದೆ. ಹೀಗಾಗಿ, ಮೊದಲ ಸಲ ಗೆದ್ದಿರುವ 8 ಶಾಸಕರನ್ನು ಗುರುವಾರ ರಾತ್ರಿ ಕರ್ನಾಟಕಕ್ಕೆ ಕಳಿಸಲಾಗಿದ್ದು, ಅವರ ಹೊಣೆಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ವಹಿಸಲಾಗಿದೆ.

ಒಡಿಶಾದ ಭುವನೇಶ್ವರದಿಂದ ಹೊರಟು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಗುರುವಾರ ರಾತ್ರಿ 11ಕ್ಕೆ ಬಂದಿಳಿದ ಶಾಸಕರನ್ನು, ಶಿವಕುಮಾರ್ ಆಪ್ತರು ಬರಮಾಡಿಕೊಂಡರು. ಪೊಲೀಸ್ ಭದ್ರತೆಯಲ್ಲಿ ಬಿಡದಿ ಬಳಿಯ ವಂಡರ್ ಲಾ ರೆಸಾರ್ಟ್‌ಗೆ ಕರೆತರಲಾಯಿತು.

ಒಡಿಶಾ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಭಕ್ತ ಚರಣ್ ದಾಸ್ ಅವರೊಂದಿಗೆ ಶಾಸಕರಾದ ರಾಜನ್ ಎಕ್ಕ, ಅಶೋಕ್ ದಾಸ್, ಸತ್ಯಜಿತ್ ಗೊಮಂಗೊ, ಅಪ್ಪಲ ಕುಮಾರಸ್ವಾಮಿ, ಮಂಗು ಕಿಲ್ಲೋ, ಪವಿತ್ರ ಸೌಂತಾ, ನೀಲಮಾಧವ್ ಹಿಕ್ಕ ಹಾಗೂ ಪ್ರಫುಲ್ಲ ಪ್ರಧಾನ್ ರೆಸಾರ್ಟ್‌ಗೆ ಬಂದು ತಂಗಿದ್ದಾರೆ. ಡಿ.ಕೆ.ಶಿವಕುಮಾರ್ ಅವರು ಶುಕ್ರವಾರ ಸಂಜೆ ರೆಸಾರ್ಟ್‌ನಲ್ಲಿ ಶಾಸಕರನ್ನು ಭೇಟಿ ಮಾಡಿದರು. ಕೆಲ ನಿಮಿಷ ಸಭೆ ನಡೆಸಿದರು.

▶11

ಚಿನಕುರುಳಿ ಪ್ರಕಾಶ್ ಶೆಟ್ಟಿ



ಮುಟ್ಟಿನ ರಜೆ ನೀತಿ: 'ಸುಪ್ರೀಂ' ಕಳವಳ

ನವದೆಹಲಿ (ಪಿಟಿಐ): 'ವೇತನ ಸಹಿತ ಮುಟ್ಟಿನ ರಜೆ' ನೀತಿಯನ್ನು ಕಾನೂನುಬದ್ಧಗೊಳಿಸುವುದರಿಂದ ಅದು ಮಹಿಳೆಯರ ವೃತ್ತಿಜೀವನದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ' ಎಂದು ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಮಹಿಳಾ ಉದ್ಯೋಗಿಗಳು ಮತ್ತು ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ನೀಡುವುದಕ್ಕೆ ಸಂಬಂಧಿಸಿದಂತೆ ರಾಷ್ಟ್ರವ್ಯಾಪಿ ನೀತಿಯೊಂದನ್ನು ರೂಪಿಸಲು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ ಅವರಿದ್ದ ನ್ಯಾಯಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.



ರಾಷ್ಟ್ರವ್ಯಾಪಿ 'ಮುಟ್ಟಿನ ರಜೆ ನೀತಿ' ಜಾರಿಗೊಳಿಸಲು ಸಕ್ಷಮ ಪ್ರಾಧಿಕಾರವು ಅಹವಾಲುಗಳನ್ನು ಸ್ವೀಕರಿಸಿ ಅದರ ಸಾಧ್ಯತೆಗಳನ್ನು ಪರಿಶೀಲಿಸಬಹುದು ಎಂದು ಪುನರುಚ್ಚರಿಸಿದ ನ್ಯಾಯಪೀಠವು, ಈ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿ, ಶೈಲೇಂದ್ರ ಮಣಿ ತ್ರಿಪಾಠಿ ಎಂಬುವರು ಸಲ್ಲಿಸಿದ್ದ ಪಿಐಎಲ್ ವಜಾಗೊಳಿಸಿತು.

'ಇಂತಹ ನೀತಿಗಳನ್ನು ರೂಪಿಸುವುದು ಹಾಗಿರಲಿ, ಉದ್ಯೋಗ ಮಾರುಕಟ್ಟೆಯ ವಾಸ್ತವಗಳನ್ನು ಅರ್ಥಮಾಡಿಕೊಳ್ಳಬೇಕು' ಎಂದು ಪೀಠ ಹೇಳಿದೆ.

▶11

'ಉದ್ಯೋಗದಾತರ ಬಗ್ಗೆಯೂ ಯೋಚಿಸಿ'

ಕಾನೂನಿನ ಮೂಲಕ ಮುಟ್ಟಿನ ರಜೆಯನ್ನು ಕಡ್ಡಾಯಗೊಳಿಸುವುದರಿಂದ ಆಗುವ ಸಾಮಾಜಿಕ ಪರಿಣಾಮಗಳ ಬಗ್ಗೆಯೂ ಪೀಠ ಕಳವಳ ವ್ಯಕ್ತಪಡಿಸಿದೆ. ಇದೇ ವೇಳೆ ವೇತನ ಸಹಿತ ರಜೆ ನೀಡಬೇಕಾದ ಉದ್ಯೋಗದಾತರ ಬಗ್ಗೆಯೂ ಯೋಚಿಸಬೇಕಾಗಿದೆ ಎಂದು ಹೇಳಿದೆ.

▶11



16 ಸಚಿವರಿಗೆ ಸಿ.ಎಂ ಔತಣಕೂಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪುಟ ಪುನರ್ ರಚನೆ ವೇಳೆ ಸಚಿವ ಸ್ಥಾನಕ್ಕಾಗಿ ಒತ್ತಡ ಹಾಕಲು ಶಾಸಕರು ಭೋಜನಕೂಟದ ನೆಪದಲ್ಲಿ ಸೇರಿ ಚರ್ಚೆ ನಡೆಸಿದ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸಂಪುಟದ 16 ಸಚಿವರಿಗೆ ಇದೇ 16ರಂದು ಔತಣ ಕೂಟ ಏರ್ಪಡಿಸಿದ್ದಾರೆ.

ಸಿದ್ದರಾಮಯ್ಯನವರ ಸಂಪುಟದಲ್ಲಿ 32 ಸಚಿವರಿದ್ದು, ಎರಡು ಸ್ಥಾನಗಳು ಖಾಲಿ ಇವೆ. ಈ ಪೈಕಿ ಹಿರಿಯ ಹಾಗೂ ಪ್ರಭಾವಿ ಸಚಿವರಿಗೆ ಆಮಂತ್ರಣ ನೀಡಲಾಗಿದೆ ಎಂದು ಗೊತ್ತಾಗಿದೆ.

'ಸಂಪುಟ ಪುನರ್‌ರಚನೆ ಅಥವಾ ರಾಜಕೀಯ ಚರ್ಚೆಗಾಗಿ ಔತಣ ಕೂಟವಲ್ಲ. ಪರಿಶಿಷ್ಟ ಜಾತಿಯ ಒಳ ಮೀಸಲಾತಿಯ ಗೊಂದಲದ ಬಗ್ಗೆ ಚರ್ಚಿಸುವುದ ಮುಖ್ಯ ಉದ್ದೇಶ' ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ಹೇಳಿವೆ.

ಶಾಸಕರ ಬೇಡಿಕೆ ಬೆನ್ನಲ್ಲೇ ಔತಣ: ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳ ಬಳಿಕ ಸಂಪುಟ ಪುನರ್‌ರಚನೆ ಮಾಡಲಾಗುತ್ತದೆ ಎಂಬ ಮಾತುಗಳಿದ್ದವು. ಆದರೆ, ನಾಯಕತ್ವ ಬದಲಾವಣೆಯ ವಿಚಾರ ಮುನ್ನೆಲೆಗೆ ಬಂದು ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಪಟ್ಟು ಹಿಡಿದ ಕಾರಣ ಸಂಪುಟ ಪನರ್‌ರಚನೆ ಪ್ರಸ್ತಾವವು ನನೆಗುದಿಗೆ ಬಿದ್ದಿದೆ.



ಸಿದ್ದರಾಮಯ್ಯ

ಸಂಪುಟ ಪುನರ್ ರಚನೆ ಮಾಡದಿರುವುದು ಶಾಸಕರ ಅಸಮಾಧಾನಕ್ಕೆ ಕಾರಣವಾಗಿದೆ. ಬೌರಿಂಗ್ ಕ್ಲಬ್‌ನಲ್ಲಿ ಗುರುವಾರ ನಡೆದ ಈ ಸಭೆಯಲ್ಲಿ ಭಾಗವಹಿಸಿದ್ದ 25ಕ್ಕೂ ಹೆಚ್ಚು ಶಾಸಕರು, ತಮಗೂ ಅವಕಾಶ ಕೊಡಬೇಕೆಂದು ಹಕ್ಕೊತ್ತಾಯ ಮಂಡಿಸುವ ನಿರ್ಧಾರ ಮಾಡಿದ್ದರು. ದೆಹಲಿಗೆ ತೆರಳಿ ವರಿಷ್ಠರ ಮುಂದೆ ಬೇಡಿಕೆ ಮಂಡಿಸಬೇಕೆಂಬ ಬಗ್ಗೆಯೂ ಚರ್ಚೆ ನಡೆಸಿದ್ದರು.

▶10

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಗಸ ಇರಲಿದ್ದು, ಮಧ್ಯಾಹ್ನದ ಬಳಿಕ ಅಥವಾ ಸಂಜೆ ವೇಳೆಗೆ ಮೋಡ ಕವಿದ ವಾತಾವರಣ ಇರಲಿದೆ

ಪ್ರದರ್ಶನ ಫಲಕಗಳಲ್ಲಿ ಕನ್ನಡ ಕಡ್ಡಾಯ

ಬೆಂಗಳೂರು: ಉದ್ಯಮಗಳು, ಶೈಕ್ಷಣಿಕ ಸಂಸ್ಥೆಗಳು, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ಹೋಟೆಲ್‌ಗಳು ಸೇರಿದಂತೆ ವಿವಿಧ ಸಂಸ್ಥೆಗಳ ಪ್ರದರ್ಶನ ಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಇರಬೇಕು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರು ತಿಳಿಸಿದ್ದಾರೆ.

ಬುಧವಾರ ನಡೆದ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಸ್ವಾಯತ್ತ ಸಂಸ್ಥೆಗಳು, ಕೈಗಾರಿಕೆಗಳು, ವಿಶ್ವವಿದ್ಯಾಲಯಗಳು, ವಾಣಿಜ್ಯ ಸಂಸ್ಥೆಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನರಂಜನಾ ಕೇಂದ್ರ ಇತ್ಯಾದಿಯ ನಾಮಫಲಕದಲ್ಲಿ ಕನ್ನಡ ಅಕ್ಷರಗಳ ಗಾತ್ರ ಶೇ 60ರ ಪ್ರಮಾಣದಲ್ಲಿ ಇರಬೇಕು. ಬೇರೆ ಯಾವುದೇ ಭಾಷೆಯ ಅಕ್ಷರಗಳ ಗಾತ್ರ ಶೇ 40 ಅಥವಾ ಅದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಇರಬೇಕು ಎಂದರು. ನೂರಕ್ಕಿಂತ ಹೆಚ್ಚಿನ ಉದ್ಯೋಗಿಗಳನ್ನು ಹೊಂದಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಒಡೆತನದ ಕೈಗಾರಿಕಾ ಸಂಸ್ಥೆಗಳು, ಸಾರ್ವಜನಿಕ ವಲಯದ ಬ್ಯಾಂಕ್ ಮತ್ತು ಖಾಸಗಿ ಕೈಗಾರಿಕೆಗಳು ಸಂಸ್ಥೆಯ ದಿನ ನಿತ್ಯದ ಕಾರ್ಯನಿರ್ವಹಣೆಯಲ್ಲಿ ಕನ್ನಡ ಭಾಷೆ ಬಳಸುವ ಉದ್ದೇಶದಿಂದ ಕನ್ನಡ ಜ್ಞಾನ ಹೊಂದಿರುವ ಸಂಸ್ಥೆಯ ಹಿರಿಯ ಉದ್ಯೋಗಿ ನೇತೃತ್ವದಲ್ಲಿ ಕನ್ನಡ ಕೋಶ ಸ್ಥಾಪಿಸಲು ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಕನ್ನಡ ಜಾಗೃತಿ ಸಮಿತಿಯ ಸದಸ್ಯರಾದ ಆನಂದ ಜಿ, ಸು.ಜಗದೀಶ, ಮೀನಾಕ್ಷಿ ಎಸ್.ಬಿ, ಡಾ.ಸೌಮ್ಯ ಕೆ.ಆರ್ ಮತ್ತು ಸದಸ್ಯ ಕಾರ್ಯದರ್ಶಿಗಳಾದ ಆರ್. ಚಂದ್ರಶೇಖರ ಉಪಸ್ಥಿತರಿದ್ದರು.

ಮೊದಲ ಬಾರಿ ಆನ್‌ಲೈನ್‌ನಲ್ಲಿ ಪರೀಕ್ಷೆ

ದೂರ ಶಿಕ್ಷಣ ಬಲಪಡಿಸಲು ಮುಂದಾದ ಬೆಂಗಳೂರು ವಿಶ್ವವಿದ್ಯಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಆನ್‌ಲೈನ್ ಮತ್ತು ದೂರ ಶಿಕ್ಷಣ ನಿರ್ದೇಶನಾಲಯವು ಮೊದಲ ಬಾರಿಗೆ ಆನ್‌ಲೈನ್ ಮೂಲಕ ಪರೀಕ್ಷೆಗಳನ್ನು ನಡೆಸುವಲ್ಲಿ ಯಶಸ್ವಿಯಾಗಿದೆ. ಈ ಮೂಲಕ ಉನ್ನತ ಶಿಕ್ಷಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಹೊಸ ಮೈಲುಗಲ್ಲು ಸಾಧಿಸಿದೆ.

ಒಟ್ಟು 870 ವಿದ್ಯಾರ್ಥಿಗಳು ಮನೆಯಿಂದಲೇ ಆನ್‌ಲೈನ್ ಮೂಲಕ ಪರೀಕ್ಷೆಗೆ ಹಾಜರಾಗಿದ್ದರು. ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ ವಿದ್ಯಾರ್ಥಿಗಳ ಪೈಕಿ 697 ಮಂದಿ ಬೆಂಗಳೂರಿನಿಂದ, 123 ಮಂದಿ ರಾಜ್ಯದ ಇತರೆ ಭಾಗಗಳಿಂದ ಹಾಗೂ 48 ಮಂದಿ ಹೊರ ರಾಜ್ಯಗಳಿಂದ ಪರೀಕ್ಷೆ ಬರೆದಿದ್ದಾರೆ. ಅಲ್ಲದೆ ದುಬೈ ಹಾಗೂ ಆಸ್ಟ್ರೇಲಿಯಾದಿಂದ ತಲಾ ಒಬ್ಬ ವಿದ್ಯಾರ್ಥಿ ಪರೀಕ್ಷೆಗೆ ಹಾಜರಾಗಿದ್ದರು.

ಪರೀಕ್ಷೆಗೆ ಹಾಜರಾದವರಲ್ಲಿ 479 ಮಹಿಳೆಯರು ಮತ್ತು 391 ಪುರುಷರು ಇದ್ದಾರೆ. ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿರುವುದು ಗಮನಾರ್ಹ. 361 ಮಂದಿ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದಾರೆ. 122 ಮಂದಿ ಪರಿಶಿಷ್ಟ ಜಾತಿ ಹಾಗೂ 17 ಮಂದಿ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆ.

ಆನ್‌ಲೈನ್ ಮತ್ತು ದೂರ ಶಿಕ್ಷಣ ವಿದ್ಯಾರ್ಥಿಗಳಿಗೆ ಸಂಜೆ 5ರಿಂದ ರಾತ್ರಿ 9ರವರೆಗೆ ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸಲಾಗಿತ್ತು. ಇದರಿಂದ ಉದ್ಯೋಗದಲ್ಲಿ ಇರುವವರು ಕೂಡ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗಿದೆ.

ಯಶಸ್ವಿಯಾಗಿ ನಿರ್ವಹಣೆ

ಬೆಂಗಳೂರು ವಿಶ್ವವಿದ್ಯಾಲಯವು ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ದೂರ ಶಿಕ್ಷಣ ಮತ್ತು ಆನ್‌ಲೈನ್ ಶಿಕ್ಷಣವನ್ನು ಮತ್ತಷ್ಟು ಬಲಪಡಿಸುತ್ತಿದೆ. ಆನ್‌ಲೈನ್ ಪರೀಕ್ಷೆಗಳ ಯಶಸ್ವಿ ನಿರ್ವಹಣೆ ವಿಶ್ವವಿದ್ಯಾಲಯದ ನಾವೀನತೆ ಹಾಗೂ ಶೈಕ್ಷಣಿಕ ಗುಣಮಟ್ಟದ ಬದ್ಧತೆಗೆ ಸಾಕ್ಷಿ. ಭವಿಷ್ಯದಲ್ಲಿಯೂ ವಿದ್ಯಾರ್ಥಿಗಳಿಗೆ ಸುಲಭ ಮತ್ತು ಸಮಾನ ಶಿಕ್ಷಣ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತೇವೆ.

–ಡಾ.ಎಸ್.ಎಂ.ಜಯಕರ, ಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ

ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆ ಕಾಪಾಡುವ ಉದ್ದೇಶದಿಂದ ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನ ಹಾಗೂ ವಿ.ವಿಯ ಸಿಬ್ಬಂದಿ ಮೇಲ್ವಿಚಾರಣೆಯಲ್ಲಿ ಪರೀಕ್ಷಾ ಪ್ರಕ್ರಿಯೆ ನಡೆಯಿತು. ಪ್ರಶ್ನೆಪತ್ರಿಕೆಗಳನ್ನು ನಿಗದಿತ ಸಮಯಕ್ಕೆ ಆನ್‌ಲೈನ್ ಮೂಲಕ ರವಾನಿಸಲಾಯಿತು. ವಿದ್ಯಾರ್ಥಿಗಳು ಪರೀಕ್ಷೆ ಬರೆದ ನಂತರ ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿದ್ದು, ಬೆಂಗಳೂರು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗವು ಮೌಲ್ಯಮಾಪನ ಮಾಡಲಿದೆ.

ಎಂ.ಎ ಇಂಗ್ಲಿಷ್, ಕನ್ನಡ, ಹಿಂದಿ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಹಾಗೂ ಸಮಾಜಶಾಸ್ತ್ರ, ಎಂ.ಎಸ್‌ಸಿ ಗಣಿತ, ಎಂ.ಕಾಂ ಹಾಗೂ ಬಿ.ಕಾಂ ಸೇರಿದಂತೆ ವಿವಿಧ ಸ್ನಾತಕೋತ್ತರ ಮತ್ತು ಸ್ನಾತಕ ಪದವಿಯ ಪರೀಕ್ಷೆಗಳನ್ನು ಆನ್‌ಲೈನ್ ಮೂಲಕ ನಡೆಸಲಾಗಿದೆ.

'ಲ್ಯಾಪ್‌ಟಾಪ್, ಡೆಸ್ಕ್‌ಟಾಪ್ ಸೌಲಭ್ಯವಿಲ್ಲದ ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಕಂಪ್ಯೂಟರ್ ಸೌಲಭ್ಯಗಳನ್ನು ಬೆಂಗಳೂರು ವಿವಿ ವ್ಯವಸ್ಥೆ ಮಾಡಿತ್ತು. ಯಾವ ವಿದ್ಯಾರ್ಥಿಗೂ ಅನನುಕೂಲವಾಗದಂತೆ ನೋಡಿಕೊಳ್ಳಲಾಗಿದೆ' ಎಂದು ದೂರಶಿಕ್ಷಣ ಕೇಂದ್ರದ ನಿರ್ದೇಶಕ ಪ್ರೊ.ಮುರಳೀಧರ ಹೇಳಿದ್ದಾರೆ.

68,374 ಎಲ್‌ಇಡಿ ಬೀದಿ ದೀಪ ಅಳವಡಿಕೆ

ಬೆಂಗಳೂರು: ದಕ್ಷಿಣ ನಗರ ಪಾಲಿಕೆಯಲ್ಲಿ ಎಲ್ಲ ವಾರ್ಡ್‌ಗಳಲ್ಲಿ ವಿದ್ಯುತ್ ಉಳಿತಾಯ ಮಾಡುವ ಉದ್ದೇಶದಿಂದ 'ಇಂಧನ ದಕ್ಷ ಎಲ್.ಇ.ಡಿ' ಬೀದಿ ದೀಪಗಳನ್ನು ಅಳವಡಿಸುವ ಯೋಜನೆಯನ್ನು ಜಾರಿಗೆ ತರಲಾಗಿದೆ.

ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಖಾಲಿ ಕಂಬಗಳಿಗೆ ಹಾಗೂ ಚಾಲ್ತಿಯಲ್ಲಿರುವ ಸೋಡಿಯಂ ದೀಪಗಳನ್ನು ಬದಲಾಯಿಸಲು ಹಾಗೂ ಉದ್ಯಾನ, ಜಂಕ್ಷನ್‌ಗಳಲ್ಲಿನ ಹೈಮಾಸ್ಟ್‌ಗಳಿಗೆ ಹೊಸದಾಗಿ ಎಲ್‌ಇಡಿ ಬೀದಿ ದೀಪಗಳನ್ನು ಅಳವಡಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಕಾರ್ಯಾದೇಶ ನೀಡಲಾಗಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟಾರೆ 1,34,187 ಸಂಖ್ಯೆಯ ಬೀದಿ ದೀಪಗಳಿದ್ದು ಅದರಲ್ಲಿ 68,374 ಎಲ್‌ಇಡಿ ಬೀದಿ ದೀಪಗಳನ್ನು ಅಳವಡಿಸಲು ಉದ್ದೇಶಿಸ ಲಾಗಿದೆ ಎಂದು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.

WEEKEND CORNER



ಕಾರ್ಯಕ್ರಮದಲ್ಲಿ ಓ.ಎಲ್.ನಾಗಭೂಷಣ ಸ್ವಾಮಿ ಮಾತನಾಡಿದರು. ಡೊಮಿನಿಕ್, ಎಚ್. ಶಶಿಕಲಾ, ಮಾನಸ, ಕೆ.ಬಿ. ಕಿರಣ್ ಸಿಂಗ್, ವಡ್ಡೆ ಹೇಮಲತಾ ಹಾಗೂ ಮುನಿಯಪ್ಪ ಉಪಸ್ಥಿತರಿದ್ದರು

'ಸಾಹಿತ್ಯ ಕ್ಷೇತ್ರದಲ್ಲಿ ಎ.ಐ ಅಪಾಯಕಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಬಳಸುವುದರಿಂದ ಸಾಕಷ್ಟು ಅಪಾಯಗಳು ಎದುರಾಗುತ್ತವೆ. ಮನುಷ್ಯನ ಸೃಜನಶೀಲ ಚಿಂತನೆಗೆ ಎ.ಐ ತಂತ್ರಜ್ಞಾನ ಮಾರಕವಾಗಲಿದೆ' ಎಂದು ವಿಮರ್ಶಕ ಓ.ಎಲ್.ನಾಗಭೂಷಣ ಸ್ವಾಮಿ ಅಭಿಪ್ರಾಯಪಟ್ಟರು.

ಕನ್ನಡ ಪುಸ್ತಕ ಪ್ರಾಧಿಕಾರವು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ ಜನ್ಮಶತಮಾನೋತ್ಸವದ ಅಂಗವಾಗಿ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹಯೋಗದಲ್ಲಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಅಂಗಳದಲ್ಲಿ ತಿಂಗಳ ಪುಸ್ತಕ' ಕಾರ್ಯಕ್ರಮದಲ್ಲಿ ಮಾತನಾಡಿದರು.

'ಕಾವ್ಯ ಮೀಮಾಂಸೆ ಹಾಗೂ ವಿಮರ್ಶೆಯ ಪರಿಭಾಷೆ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ನಾವು ಇಂದಿಗೂ ಪಾಶ್ಚಾತ್ಯ ವಿಮರ್ಶೆಯ ಮಾದರಿಗಳನ್ನು ಇಟ್ಟುಕೊಂಡೇ ಸಾಹಿತ್ಯ ಕೃತಿಯೊಂದರ ತೌಲನಿಕ ಅಧ್ಯಯನ ಮಾಡುತ್ತೇವೆ. ಆಧುನಿಕ ಕಾಲಘಟ್ಟದಲ್ಲಿ ಇಂದಿನ ಮಾದರಿಗಳು ಬೇರೆಯದೆ ಆಗಿವೆ' ಎಂದರು.

'ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯ ಮಾದರಿ ಹಾಕಿಕೊಟ್ಟದ್ದು ಕುವೆಂಪು. ಅವರು ವಿಮರ್ಶೆಯ ಪರಿಭಾಷೆ ಸಿದ್ಧಾಂತದ ಪರಿಕಲ್ಪನೆಗಳ ಬಗ್ಗೆ ಒಂದು ಸಿದ್ಧ ಮಾದರಿಯನ್ನು ತೋರಿಸಿಕೊಟ್ಟರು. ಆದರೆ, ಅವು ಪಾಶ್ಚಾತ್ಯ ವಿಮರ್ಶೆಯ ದಟ್ಟ ಪ್ರಭಾವದಲ್ಲಿದ್ದವು. ಆ ದಾರಿಯಲ್ಲಿ ಮುಂದುವರಿದು, ಕನ್ನಡದ ವಿಮರ್ಶೆ ಮತ್ತು ಪೌರಾಣಿಕತೆ ಹೇಗಿರಬೇಕೆಂದು ತೋರಿಸಿಕೊಟ್ಟವರು ಜಿ.ಎಸ್. ಶಿವರುದ್ರಪ್ಪ' ಎಂದು ಸ್ಮರಿಸಿಕೊಂಡರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, 'ಸಾಹಿತ್ಯವು ಜೀವನ ವಿಧಾನ ರೂಪಿಸುವ ಜತೆಗೆ, ಬದುಕುವುದನ್ನು ಕಲಿಸುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಸಾಹಿತ್ಯದ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಕನ್ನಡ ಸಾಹಿತ್ಯದಲ್ಲಿ ಜಿ.ಎಸ್. ಶಿವರುದ್ರಪ್ಪ ಅವರ ಸಾಹಿತ್ಯ ಸಾಧನೆ ಬಣ್ಣಿಸುವುದು ಅತ್ಯಂತ ಕಷ್ಟದ ಕೆಲಸ' ಎಂದರು.

ಬೆಂಗಳೂರು ವಿ.ವಿ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕಿ ಎಚ್. ಶಶಿಕಲಾ 'ಒಂದು ಸಾಹಿತ್ಯ ಕೃತಿಯನ್ನು ಅರ್ಥ ಮಾಡಿಕೊಳ್ಳಲು ಸಾಹಿತ್ಯ ವಿಮರ್ಶೆ ಅತ್ಯಗತ್ಯ' ಎಂದು ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್, ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡೊಮಿನಿಕ್, ಮುನಿಯಪ್ಪ, ವಡ್ಡೆ ಹೇಮಲತಾ ಉಪಸ್ಥಿತರಿದ್ದರು.

ಮೂರು ವರ್ಷದ ಬಳಿಕ ಆಕರ ಕೋಶ ದಾನಿಯ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಭೀರ ಅಪ್ಲಾಸ್ಟಿಕ್ ರಕ್ತಹೀನತೆಯಿಂದ ಬಳಲುತ್ತಿದ್ದ ಯುವಕನೊಬ್ಬನಿಗೆ ಅಪರಿಚಿತ ಮಹಿಳೆಯೊಬ್ಬರು ರಕ್ತದ ಆಕರ ಕೋಶ ದಾನ ಮಾಡುವ ಮೂಲಕ ಚೇತರಿಕೆಗೆ ನೆರವಾಗಿದ್ದು ಮೂರು ವರ್ಷಗಳ ಬಳಿಕ ಡಿಕೆಎಂಎಸ್ ಫೌಂಡೇಷನ್ ನೆರವಿನಿಂದ ಈ ಇಬ್ಬರೂ ನಗರದಲ್ಲಿ ಗುರುವಾರ ಮುಖಾಮುಖಿಯಾದರು.

19 ವರ್ಷದ ಆನಂದ್ ಅವರು ತೀವ್ರ ಅಪ್ಲಾಸ್ಟಿಕ್ ರಕ್ತಹೀನತೆಯಿಂದ ಚೇತರಿಸಿಕೊಂಡು ಕಾಲೇಜಿಗೆ ಹೋಗುತ್ತಿದ್ದಾರೆ. ಅವರಿಗೆ ಬೆಂಗಳೂರಿನ 31 ವರ್ಷದ ಐಟಿ ಉದ್ಯೋಗಿ ಸ್ವಾತಿ ಎನ್ನುವವರು 2023ರಲ್ಲಿ ರಕ್ತದ ಆಕರ ಕೋಶ ದಾನ ಮಾಡಿದ್ದರು. ಈ ಇಬ್ಬರೂ ಇದೇ ಮೊದಲ ಬಾರಿ ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭೇಟಿಯಾದರು.

'ಆನಂದ್ ಅವರು 15 ವರ್ಷದವರಿದ್ದಾಗ ಗಂಭೀರ ಸ್ವರೂಪದ ಅಪ್ಲಾಸ್ಟಿಕ್ ರಕ್ತಹೀನತೆಯಿಂದ ಬಳಲುತ್ತಿರುವುದು ತಪಾಸಣೆ ವೇಳೆ ದೃಢಪಟ್ಟಿತ್ತು. ಕೋವಿಡ್-19 ಲಸಿಕೆ ಪಡೆದ ನಂತರ ಅವರಿಗೆ ನಿರಂತರ ಜ್ವರ ಕಾಡಲಾರಂಭಿಸಿತು. ಅಪ್ಲಾಸ್ಟಿಕ್ ರಕ್ತಹೀನತೆಯು ಸಾವಿಗೆ ಕಾರಣವಾಗಬಹುದಾದ ಮಾರಕ ಸಮಸ್ಯೆಯಾಗಿದೆ. ಕಾಂಡಕೋಶ ಕಸಿ ಒಂದೇ ಪರಿಹಾರವಾಗಿತ್ತು. ಅವರಿಗೆ ಹೊಂದಿಕೆಯಾಗುವ ಕಾಂಡಕೋಶ ಹುಡುಕುವುದು ಸವಾಲಾಗಿತ್ತು. ಇದರಿಂದ ಅವರ ಕುಟುಂಬವು ಭಾವನಾತ್ಮಕ ಹಾಗೂ ಆರ್ಥಿಕ ಒತ್ತಡ ಎದುರಿಸಿತ್ತು' ಎಂದು ಚಿಕಿತ್ಸೆ ಒದಗಿಸಿದ ಬಿಎಂಟಿ ಆ್ಯಂಡ್ ಎಂವಿಆರ್ ಕ್ಯಾನ್ಸರ್ ಸೆಂಟರ್‌ನ ಡಾ.ವಿ.ಕೃಷ್ಣನ್ ತಿಳಿಸಿದರು.



ಆನಂದ್ ಹಾಗೂ ಸ್ವಾತಿ

ಸ್ವಾತಿ ಅವರು 2016ರಲ್ಲಿ ಡಿಕೆಎಂಎಸ್ ನಡೆಸಿದ ರಕ್ತದ ಆಕರ ಕೋಶ ದಾನಿಗಳ ನೋಂದಣಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡು, ತಮ್ಮ ಹೆಸರು ನೋಂದಾಯಿಸಿದ್ದರು.

'2022ರಲ್ಲಿ ಡಿಕೆಎಂಎಸ್‌ನಿಂದ ದೂರವಾಣಿ ಕರೆ ಬಂದಿತು. ಯಾವುದೇ ಯೋಚನೆ ಮಾಡದೆ ರಕ್ತದ ಆಕರ ಕೋಶ ದಾನಕ್ಕೆ ಒಪ್ಪಿಗೆ ಸೂಚಿಸಿದೆ. ಕುಟುಂಬದ ಸದಸ್ಯರು ಬೆಂಬಲ ಸೂಚಿಸಿದರು' ಎಂದು ಸ್ವಾತಿ ಹೇಳಿದರು.

ಫೌಂಡೇಷನ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ಯಾಟ್ರಿಕ್ ಪಾಲ್, 'ರಕ್ತದ ಕ್ಯಾನ್ಸರ್ ಹಾಗೂ ರಕ್ತ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಸಹಾಯಕ. ಆರೋಗ್ಯವಂತ ವ್ಯಕ್ತಿಗಳು ರಕ್ತದ ಆಕರ ಕೋಶ ದಾನ ಮಾಡುವ ಮೂಲಕ ರೋಗಿಗಳ ಚೇತರಿಕೆಗೆ ನೆರವಾಗಬೇಕು. ರಾಜ್ಯದಲ್ಲಿ 49 ಸಾವಿರಕ್ಕೂ ಹೆಚ್ಚು ಜನರು ರಕ್ತದ ಆಕರ ಕೋಶ ದಾನಕ್ಕೆ ಹೆಸರು ನೋಂದಾಯಿಸಿದ್ದಾರೆ. ಇವರಲ್ಲಿ 38 ಸಾವಿರ ಮಂದಿ ಬೆಂಗಳೂರಿನಲ್ಲಿದ್ದಾರೆ' ಎಂದರು.

ಎಲೆಕ್ಟ್ರಿಕ್ ಸ್ಟೌ, ಸೌದೆ ಒಲೆಗೆ ಮೊರೆ

ಹೋಟೆಲ್, ಆಟೊ ಎಲ್‌ಪಿಜಿ ಬಂಕ್ ಬಂದ್: ಊಟಕ್ಕಾಗಿ ಕಾರ್ಮಿಕರು, ಚಾಲಕರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ಸಮಸ್ಯೆ ಬಿಗಡಾಯಿಸಿದ್ದು, ಮತ್ತಷ್ಟು ಹೋಟೆಲ್, ರೆಸ್ಟೋರೆಂಟ್‌ಗಳು ಬಂದ್ ಆಗಿವೆ.

ದರ್ಶಿನಿ, ಹೋಟೆಲ್, ರೆಸ್ಟೋರೆಂಟ್‌ಗಳ ತಿಂಡಿ, ಊಟವನ್ನೇ ಅವಲಂಬಿಸಿದ್ದ ಕಾರ್ಮಿಕರು, ಆಟೊ, ಕ್ಯಾಬ್, ಬಸ್, ಲಾರಿ ಚಾಲಕರು ಪರದಾಡುತ್ತಿದ್ದಾರೆ. ಈ ನಡುವೆ ಆಟೊ ಎಲ್‌ಪಿಜಿ ಬಂಕ್‌ಗಳಿಗೂ ಅನಿಲ ಕೊರತೆ ಎದುರಾಗಿದ್ದು, ನಗರದ ಹಲವು ಆಟೊ ಎಲ್‌ಪಿಜಿ ಬಂಕ್‌ಗಳು ಬಂದ್ ಆಗಿವೆ.

ವಾಣಿಜ್ಯ ಬಳಕೆ ಅನಿಲ ಪೂರೈಕೆ ಅಸ್ತವ್ಯಸ್ತವಾಗಿದ್ದು, ಹೋಟೆಲ್ ಉದ್ಯಮದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಹೋಟೆಲ್ ನಿರ್ವಹಣೆ, ಕೆಲಸಗಾರರ ಸಂಬಳದ ಖರ್ಚು ಹೊರೆಯಾಗುತ್ತಿದೆ. ಹಲವು ಹೋಟೆಲ್ ತೆರೆದಿದ್ದರೂ ಕಾಫಿ, ಟೀ, ಇಡ್ಲಿ, ಅನ್ನ ಸಾಂಬರ್ ಮಾತ್ರ ನೀಡಲಾಗುತ್ತಿದೆ. ಹೋಟೆಲ್, ರೆಸ್ಟೋರೆಂಟ್‌ಗಳಿಗೆ ಪೂರೈಕೆ ಮಾಡುವ ಪ್ರತಿ ಸಿಲಿಂಡರ್‌ಗೆ ₹3,500 ವರೆಗೆ ದರ ವಸೂಲಿ ಮಾಡಲಾಗುತ್ತಿದೆ.

ಪರ್ಯಾಯ ಮಾರ್ಗಗಳತ್ತ ಚಿಂತಿಸುತ್ತಿರುವ ಮಾಲೀಕರು, ಎಲೆಕ್ಟ್ರಿಕ್ ಸ್ಟೌ ಖರೀದಿ ಹಾಗೂ ಸೌದೆ ಒಲೆ ಹುಡುಕಾಟ ಆರಂಭಿಸಿದ್ದಾರೆ. ಕೆಲವೆಡೆ ಬೇರೆ ಕಡೆ ಅಡುಗೆ ಮಾಡಿಕೊಂಡು, ಹೋಟೆಲ್‌ಗೆ ತಂದು ಮಾರಾಟ ಮಾಡಲಾಗುತ್ತಿದೆ. ಗಾಂಧಿ ನಗರದಲ್ಲಿ ಐಡಿಸಿ ಹೋಟೆಲ್, ಆನಂತಂ ಕೆಫೆ, ದೊಣ್ಣೆ ಬಿರಿಯಾನಿ, ಜನತಾ ಹೋಟೆಲ್ ಬಂದ್ ಆಗಿವೆ. ವಿವಿ ಪುರಂ ಫುಡ್ ಸ್ಟ್ರೀಟ್‌ನಲ್ಲಿ ನಿತ್ಯ ಬಗೆ ಬಗೆಯ ತಿಂಡಿಗಳು ಸಿಗುತ್ತಿದ್ದವು. ಆದರೆ, ಶುಕ್ರವಾರ ಬಹುತೇಕ ಆಹಾರ ಮಳಿಗೆಗಳನ್ನು ಬಂದ್ ಮಾಡಲಾಗಿತ್ತು.

ಕಲಾಸಿಪಾಳ್ಯದಲ್ಲಿರುವ ಸೌದೆ ಡಿಪೊದಲ್ಲಿ ಸೌದೆಗೆ ಹೆಚ್ಚು ಬೇಡಿಕೆ ಬರುತ್ತಿದೆ. ನಗರದ ಪಬ್‌ಗಳು ಮತ್ತು ಬಾರ್‌ಗಳು ಮೆನುಗಳಲ್ಲಿ ಕಡಿತ ಮಾಡಿವೆ.

‘ಸೌದೆ ಒಲೆಯಲ್ಲಿ ಆಹಾರ ತಯಾರಿಸುತ್ತಿದ್ದೇವೆ. ನಿತ್ಯ ಕನಿಷ್ಠ ಐದು ಸಿಲಿಂಡರ್‌ಗಳು ಬೇಕು. ಆದರೆ, ಈಗ ಎರಡು ಸಿಲಿಂಡರ್‌ಗಳು ಮಾತ್ರ ಸಿಗುತ್ತಿವೆ. ಅದಕ್ಕೂ ₹3,000 ಪಾವತಿಸಲಾಗಿದೆ. ಅನ್ನ, ಸಾಂಬರ್ ಕಡೆ ಗಮನ ಹರಿಸಲಾಗುತ್ತಿದೆ’ ಎಂದು ಬಸವನಗುಡಿಯಲ್ಲಿರುವ ಹೋಟೆಲ್ ಮಾಲೀಕ ಭರತ್ ಕುಮಾರ್ ತಿಳಿಸಿದರು.

ಗೃಹ ಬಳಕೆ ಅನಿಲ (ಎಲ್.ಪಿ.ಜಿ) ಪೂರೈಕೆಯಲ್ಲೂ ವ್ಯತ್ಯಯ ಕಂಡು ಬಂದಿದೆ. ಸಿಲಿಂಡರ್ ಬುಕಿಂಗ್ ಸಂಖ್ಯೆಗೆ ಕರೆ ಮಾಡಿದರೆ, 1 ಸಿಲಿಂಡರ್ ಬುಕ್ ಮಾಡಿದ 24 ದಿನಗಳವರೆಗೆ ಇನ್ನೊಂದು ಬುಕಿಂಗ್ ಮಾಡಲು ಸಾಧ್ಯವಿಲ್ಲ ಎಂಬ ಸಂದೇಶ ಬರುತ್ತಿರುವ ಕಾರಣ ಸಾರ್ವಜನಿಕರೂ ಆತಂಕಗೊಂಡಿದ್ದಾರೆ. ಗ್ಯಾಸ್ ಏಜೆನ್ಸಿ ಮುಂದೆ ಗ್ರಾಹಕರು ಸಾಲುಗಟ್ಟಿ ನಿಂತಿದ್ದರು.

ನಗರದ ವ್ಯಾಪ್ತಿಯಲ್ಲಿ 140 ರಿಂದ 150 ಆಟೊ ಎಲ್‌ಪಿಜಿ ಬಂಕ್‌ಗಳಿದ್ದು ಬಹುತೇಕ ಬಂಕ್‌ಗಳಲ್ಲಿ ‘ನೋ ಸ್ಟಾಕ್’ ಫಲಕ ಹಾಕಲಾಗಿದೆ. ಆಟೊ ಎಲ್‌ಪಿಜಿ ದರದಲ್ಲೂ ಏರಿಕೆ ಕಂಡಿದ್ದು, ಪ್ರತಿ ಕೆ.ಜಿ ಗೆ ₹10 ರಿಂದ ₹20 ದರ ಏರಿಕೆಯಾಗಿದೆ. ಪ್ರತಿ ಕೆ.ಜಿ. ಗೆ ₹ 58ರಂತೆ ಆಟೊ ಎಲ್‌ಪಿಜಿ ಮಾರಾಟವಾಗುತ್ತಿತ್ತು. ಇದೀಗ ಬಂಕ್‌ಗಳಲ್ಲಿ ₹69.74ಕ್ಕೆ ಮಾರಾಟ ಮಾಡಲಾಗುತ್ತಿದೆ. ಶಿವಾಜಿ ನಗರದಲ್ಲಿ ಗೃಹ ಬಳಕೆಯ ಸಿಲಿಂಡರ್‌ಗಳಿಗಾಗಿ ವಿತರಕರು ಮತ್ತು ಗ್ರಾಹಕರ ಮಧ್ಯೆ ಜಗಳ ನಡೆಯಿತು. ಖಾಲಿ ಸಿಲಿಂಡರ್ ಹಿಡಿದು ಬಂದು ಗ್ಯಾಸ್ ಏಜೆನ್ಸಿ ಸಿಬ್ಬಂದಿಯನ್ನು ಸುತ್ತುವರೆದ ಸಾರ್ವಜನಿಕರು, ಪರಸ್ಪರ ಜಗಳವಾಡಿದ್ದಾರೆ.

‘ಯುದ್ಧದ ಪರಿಣಾಮ ನಗರದಲ್ಲಿ ಟ್ಯಾಕ್ಸಿ ಉದ್ಯಮಕ್ಕೂ ಪೆಟ್ಟು ಬಿದ್ದಿದೆ. ಸುಮಾರು 1 ಲಕ್ಷದ 30 ಸಾವಿರ ಪ್ರಯಾಣಿಕರು ನಿತ್ಯ ಪ್ರಯಾಣಿಸುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸದ್ಯ ವಿಮಾನ ಸಂಚಾರ ಇಳಿಮುಖವಾಗಿದೆ. ಮೂರರಿಂದ ನಾಲ್ಕು ಟ್ರಿಪ್ ಮಾಡುತ್ತಿದ್ದ ಟ್ಯಾಕ್ಸಿಗಳು ಈಗ ಒಂದು ಟ್ರಿಪ್ ಮಾಡುತ್ತಿವೆ’ ಎಂದು ಚಾಲಕರು ಮತ್ತು ಆಪರೇಟರ್ ಸಂಘದ ಅಧ್ಯಕ್ಷ ಹಮೀದ್ ಅಕ್ಬರ್ ಅಲಿ ತಿಳಿಸಿದರು.



ನಗರದ ವಿವಿ ಪುರಂ ನಲ್ಲಿ ಜನತಾ ಹೋಟೆಲ್ ಬಂದ್ ಮಾಡಲಾಗಿದೆ

ಎಲ್‌ಪಿಜಿ ಸಿಲಿಂಡರ್‌ಗಳ ಕಳ್ಳತನ

ಶ್ರೀರಾಂಪುರದಲ್ಲಿ ಗ್ರಾಹಕರಿಗೆ ತಲುಪಿಸಲು ತಂದಿದ್ದ ಸಿಲಿಂಡರ್‌ಗಳನ್ನು ಶುಕ್ರವಾರ ಕಳ್ಳತನ ಮಾಡಲಾಗಿದೆ.

ರಾಜಾಜಿನಗರದ ರಾಮ್ ಏಜೆನ್ಸಿಸ್ ಸಿಬ್ಬಂದಿ ಶ್ರೀರಾಂಪುರದ ಬಳಿ ಆಟೊ ನಿಲ್ಲಿಸಿ ಗ್ರಾಹಕರ ಮನೆಗೆ ಸಿಲಿಂಡರ್ ತಲುಪಿಸಲು ಒಳಗೆ ಹೋಗಿದ್ದ ವೇಳೆ ಮೂರು ಸಿಲಿಂಡರ್‌ಗಳನ್ನು ಕಳವು ಮಾಡಲಾಗಿದೆ. ಘಟನೆ ನಡೆದ ಸ್ಥಳದ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ.

‘ನಮ್ಮ ಸಿಬ್ಬಂದಿ ಮನೆಗೆ ಸಿಲಿಂಡರ್ ಕೊಡಲು ಹೋಗಿದ್ದ ಸಂದರ್ಭದಲ್ಲಿ ಕಳ್ಳರು ಆಟೊದಲ್ಲಿದ್ದ ಮೂರು ಸಿಲಿಂಡರ್ ಹೊತ್ತು ಪರಾರಿಯಾಗಿದ್ದಾರೆ’ ಎಂದು ಏಜೆನ್ಸಿಯ ರಾಜು ತಿಳಿಸಿದ್ದಾರೆ.

‘ಕೇಂದ್ರದ ಭರವಸೆ: ಆತಂಕ ಬೇಡ’

‘ಕೇಂದ್ರ ಸರ್ಕಾರ ಎಲ್‌ಪಿಜಿ ಸಿಲಿಂಡರ್ ಪೂರೈಸುವ ಭರವಸೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಹಾಗಾಗಿ ಆತಂಕ ಪಡುವ ಅವಶ್ಯಕತೆ ಇಲ್ಲ. ಇದೇ ರೀತಿ ಪರಿಸ್ಥಿತಿ ಮುಂದುವರಿದರೆ ಸಂಕಷ್ಟ ತಪ್ಪಿದಲ್ಲ. ಅಂದಾಜು 35 ಸಾವಿರ ಹೋಟೆಲ್‌ಗಳಿದ್ದು, ಕೆಲವು ಹೋಟೆಲ್‌ಗಳು ಬಂದ್ ಆಗಿವೆ. ಕೆಲವು ಹೋಟೆಲ್‌ಗಳ ಮಾಲೀಕರು ಪರ್ಯಾಯ ಮಾರ್ಗ ಹುಡುಕಿಕೊಂಡಿದ್ದಾರೆ. ಹೆದ್ದಾರಿ ಬದಿ ಬಹುತೇಕ ಹೋಟೆಲ್‌ಗಳು ಸೌದೆ ಒಲೆ ಮತ್ತು ಎಲೆಕ್ಟ್ರಿಕ್ ಸ್ಟೌ ಬಳಸುತ್ತಿದ್ದಾರೆ’ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಮಾಲೀಕರ ಸಂಘದ ಗೌರವ ಅಧ್ಯಕ್ಷ ಪಿ.ಸಿ. ರಾವ್ ‘ಪ್ರಜಾವಾಣಿ’ಗೆ ತಿಳಿಸಿದರು.


ಎಂ.ಜಿ.ರಸ್ತೆಯ ಹೋಟೆಲ್‌ವೊಂದರಲ್ಲಿ ಸೌದೆ ಒಲೆಯಲ್ಲಿ ಅಡುಗೆ ತಯಾರಿಸುತ್ತಿದ್ದ ದೃಶ್ಯ ಪ್ರಜಾವಾಣಿ ಚಿತ್ರ

ಕಾಳಸಂತೆಯಲ್ಲಿ ಎಲ್‌ಪಿಜಿ ಸಿಲಿಂಡರ್ ಮಾರಾಟ ಮಾಡುತ್ತಿರುವವರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು. ಇದಕ್ಕಾಗಿ ನಗರ ಪೊಲೀಸ್ ಕಮಿಷನರ್ ತಂಡ ರಚಿಸಿದ್ದಾರೆ
ಜಿ.ಪರಮೇಶ್ವರ, ಗೃಹ ಸಚಿವ



ಜೆ.ಸಿ ರಸ್ತೆಯಲ್ಲಿರುವ ಚಿಕ್ಕಪೇಟೆ ದೊನ್ನೆ ಬಿರಿಯಾನಿ ಹೋಟೆಲ್ ಮುಚ್ಚಲಾಗಿತ್ತು


ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಅನ್ನು ವಾಹನದಲ್ಲಿ ತೆಗೆದುಕೊಂಡು ಹೋಗುತ್ತಿರುವ ದೃಶ್ಯ


ಆರ್.ವಿ ರಸ್ತೆಯಲ್ಲಿರುವ ಫುಡ್ ಸ್ಟ್ರೀಟ್‌ನ ಹೋಟೆಲ್ ತಾತ್ಕಾಲಿಕವಾಗಿ ಬಂದ್ ಆಗಿದೆ
ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಎಲ್‌ಪಿಜಿ ಸಿಲಿಂಡರ್: ಕಾಂಗ್ರೆಸ್ ತಪ್ಪು ಮಾಹಿತಿ– ಸಚಿವ ಪ್ರಲ್ಹಾದ ಜೋಶಿ

ಬೆಂಗಳೂರು: ದೇಶದಲ್ಲಿ ಗೃಹ ಮತ್ತು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಇಲ್ಲ. ಆದರೆ, ಕಾಂಗ್ರೆಸ್ ಪಕ್ಷ ಸಿಲಿಂಡರ್ ಪೂರೈಕೆ ವಿಷಯದಲ್ಲಿ ಜನರನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನ ಮಾಡುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್‌ಪಿಜಿ ಸಿಲಿಂಡರ್, ಪೆಟ್ರೋಲ್ ಮತ್ತು ಡೀಸೆಲ್ ಕೊರತೆ ಆಗುತ್ತಿದೆ ಎಂದು ಕಾಂಗ್ರೆಸ್ ಪಕ್ಷ ಸುಳ್ಳು ಮಾಹಿತಿ ಹಬ್ಬಿಸುತ್ತಿದೆ. ಪೆಟ್ರೋಲಿಯಂ ಉತ್ಪನ್ನಗಳ ಕೊರತೆ ಆಗುವುದಿಲ್ಲ. ಕೊರತೆ ಆಗದಂತೆ ಕೇಂದ್ರ ಸರ್ಕಾರವು ಎಲ್ಲ ರೀತಿಯ ಕ್ರಮ ತೆಗೆದುಕೊಂಡಿದೆ ಎಂದರು.

ಅನಿಲವನ್ನು ವಿವಿಧ ಮೂಲಗಳಿಂದ ತರಿಸಿಕೊಳ್ಳುವ ಪ್ರಯತ್ನ ನಡೆದಿದೆ. ಈ ಮೊದಲು 20 ರಿಂದ 22 ದೇಶಗಳಿಂದ ಪೆಟ್ರೋಲಿಯಂ ಉತ್ಪನ್ನಗಳ ಆಮದು ಮಾಡಿಕೊಳ್ಳಲಾಗುತ್ತಿತ್ತು. ಈಗ ಇದು 40 ದೇಶಗಳಿಗೆ ಹೆಚ್ಚಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಜನರನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನ ಮಾಡಬಾರದು ಎಂದರು.

ಸಿಲಿಂಡರ್‌ಗಳ ಬುಕ್ಕಿಂಗ್‌ಗೆ ಒತ್ತಡ ಹೆಚ್ಚಾಗಿದೆ. ಕೆಲವರು ಅನಗತ್ಯವಾಗಿ ಸಂಗ್ರಹಿಸಿಡುವ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಲು ಕೆಲವು ನಿರ್ಬಂಧಗಳನ್ನು ವಿಧಿಸಲಾಗಿದೆ. ಜಾಗತಿಕ ಸರಕು ಸಾಗಣೆಯ ಪ್ರಮುಖ ಜಲ ಮಾರ್ಗ ಹೊರ್ಮುಜ್ ಜಲಸಂಧಿ ಮೂಲಕ ಈಗಾಗಲೇ ಒಂದು ಹಡಗು ಬಂದಿದ್ದು, ಇನ್ನೂ ಹಲವು ಹಡಗುಗಳು ಬರಲಿವೆ ಎಂದು ಜೋಶಿ ಹೇಳಿದರು.

ನಿರೀಕ್ಷಿತ ಸೇವೆ ನೀಡದ ‘ಡಿಜಿ ಯಾತ್ರಾ’

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಪರಿಚಯಿಸಲಾದ ‘ಡಿಜಿ ಯಾತ್ರಾ’ ವ್ಯವಸ್ಥೆ ನಿರೀಕ್ಷಿತ ಸೇವೆ ನೀಡುತ್ತಿಲ್ಲ ಎಂಬ ದೂರು ಕೇಳಿ ಬಂದಿದೆ.

ಮುಖ ಗುರುತಿಸುವ ತಂತ್ರಜ್ಞಾನ ಆಧಾರಿತ ಈ ವ್ಯವಸ್ಥೆಯು ಕೆಲವೊಮ್ಮೆ ಸಾಮಾನ್ಯ ಪ್ರವೇಶದ ಸಾಲಿಗಿಂತ ಉದ್ದವಾಗುತ್ತಿರುವುದು ಪ್ರಯಾಣಿಕರ ಬೇಸರಕ್ಕೆ ಕಾರಣವಾಗಿದೆ. ಸಾಮಾನ್ಯ ಸಾಲು ಹೆಚ್ಚು ವೇಗವಾಗಿ ಸಾಗುತ್ತಿರುತ್ತದೆ ಎಂದು ಪ್ರಯಾಣಿಕ ನಾಗಾರ್ಜುನ ದ್ವಾರಕನಾಥ್ ಎಂಬುವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಬಳಕೆದಾರರ ಸಂಖ್ಯೆ ಹೆಚ್ಚುತ್ತಿದೆ. ಆದರೆ, ತಾಂತ್ರಿಕವಾಗಿ ಸುಧಾರಣೆ ಕಂಡಿಲ್ಲ, ಪ್ರವೇಶ ದ್ವಾರದಲ್ಲಿರುವ ಕ್ಯಾಮೆರಾಗಳಿಗೆ ಸೂರ್ಯನ ಬೆಳಕು ನೇರವಾಗಿ ಬೀಳುವುದರಿಂದ ಮುಖ ಗುರುತಿಸುವ ಪ್ರಕ್ರಿಯೆಗೆ ಸಮಯ ಹಿಡಿಯುತ್ತಿದೆ ಎಂದೂ ಕೆಲವರು ದೂರಿದ್ದಾರೆ.

ಗಾಣಿಗರಹಳ್ಳಿ ಕೆರೆ ಪುನರುಜ್ಜೀವನಕ್ಕೆ ಚಾಲನೆ

ಕೆರೆ ಅಭಿವೃದ್ಧಿಗೆ ₹11 ಕೋಟಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸುಮಾರು ₹11 ಕೋಟಿ ವೆಚ್ಚದಲ್ಲಿ ಚಿಕ್ಕಬಾಣಾವರ ಬಳಿಯ ಗಾಣಿಗರಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಲಿದೆ ಎಂದು ಶಾಸಕ ಎಸ್.ಮುನಿರಾಜು ಹೇಳಿದರು.

ಗಾಣಿಗರಹಳ್ಳಿ ಕೆರೆ ಪುನರುಜ್ಜೀವನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಲುಷಿತಗೊಂಡಿದ್ದ ಈ ಕೆರೆಯನ್ನು ಡಾ. ಶಿವರಾಮ ಕಾರಂತ ಬಡಾವಣೆ ಅಭಿವೃದ್ಧಿಯ ಜೊತೆಗೆ ಪುನರುಜ್ಜೀವನಗೊಳಿಸಲಿದೆ ಎಂದರು.

ಸುತ್ತಮುತ್ತಲ ಜಾಗವನ್ನು ಬಿಡಿಎ ಅಭಿವೃದ್ಧಿ ಮಾಡುತ್ತಿರುವುದರಿಂದ ಅದರ ಜೊತೆಗೆ ಕಲುಷಿತಗೊಂಡಿದ್ದ ಕೆರೆಯನ್ನು ಸ್ವಚ್ಛ ಸುಂದರ ವನ್ನಾಗಿ ಅಭಿವೃದ್ಧಿ ಮಾಡಲಾಗುತ್ತಿದೆ. ಇದು ಸುಮಾರು ವರ್ಷಗಳ ಜನರ ಜೀವನ ನಾಡಿಯಂತಿತ್ತು ಎಂದರು.

ಪುನರುಜ್ಜೀವನದ ಭಾಗವಾಗಿ ಕೆರೆಯಲ್ಲಿ ಬೆಳೆದಿದ್ದ ಗಿಡಮರಗಳ ತೆರವು, ಕೆರೆಯ ಹೂಳು ತೆಗೆಯುವಿಕೆ, ಕೆರೆಯ ಉದ್ದಕ್ಕೂ ಮಣ್ಣಿನ ಏರಿ ಮತ್ತು ನಡಿಗೆ ಪಥ, ಏರಿಯ ಒಳಭಾಗದಲ್ಲಿ ಕಲ್ಲಿನ ಜೋಡಣೆ, ಕೆರೆಯ ಸುತ್ತಲೂ ತಂತಿ ಬೇಲಿ ಅಳವಡಿಕೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಕೆರೆಯ ವಿಸ್ತೀರ್ಣ ಸುಮಾರು 54 ಎಕರೆ ಇದ್ದು, ಇದರಲ್ಲಿ ಸ್ವಲ್ಪ ಜಾಗ ಒತ್ತುವರಿಯಾಗಿದೆ. ಅದನ್ನು ಸರ್ವೆ ಮಾಡಿಸಲಾಗುವುದು. ಕೆರೆಗೆ ಕಲುಷಿತ ನೀರು ಬರದಂತೆ ತಡೆಯಲಾಗುವುದು ಎಂದರು.

ಚಿಕ್ಕಬಾಣಾವರ ಪುರಸಭೆ ಮುಖ್ಯ ಅಧಿಕಾರಿ ಮಂಜುನಾಥ್, ಬಿಡಿಎ ಎಂಜಿನಿಯರ್ ಅವಲಪ್ಪ, ಬಿಜೆಪಿ ಮುಖಂಡರಾದ ಶ್ರೀನಿವಾಸಮೂರ್ತಿ, ಭಾಗ್ಯಮ್ಮ ಕೃಷ್ಣಯ್ಯ, ಗಿರೀಶ್ ಇದ್ದರು.


ಗಾಣಿಗರಹಳ್ಳಿಯ ಕೆರೆ ಅಭಿವೃದ್ಧಿಯ ನೀಲನಕ್ಷೆಯನ್ನು ಎಸ್. ಮುನಿರಾಜು ವೀಕ್ಷಿಸಿದರು

ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ

ಬೆಂಗಳೂರು: ಸ್ಪರ್ಶ್ ಆಸ್ಪತ್ರೆಗಳ ಸಮೂಹವು ‘ಲೈಫ್-ಕೋರ್ಸ್ ವ್ಯಾಕ್ಸಿನೇಷನ್’ (ಎಲ್‌ಸಿವಿ) ಕಾರ್ಯಕ್ರಮದಡಿ ರೋಗ ನಿರೋಧಕ ಲಸಿಕೆ ವಿತರಣೆ ಪ್ರಾರಂಭಿಸಿದೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆ ಅಧ್ಯಕ್ಷ ಡಾ. ಶರಣ್ ಶಿವರಾಜ್ ಪಾಟೀಲ, ‘ನಗರದಲ್ಲಿ ಈ ಲಸಿಕೆಯನ್ನು ಇದೇ ಮೊದಲ ಬಾರಿಗೆ ಪರಿಚಯಿಸಲಾಗುತ್ತಿದೆ. ಇನ್‌ಫ್ಯಾಂಟ್ರಿ ರಸ್ತೆಯಲ್ಲಿರುವ ಶಾಖೆಯಲ್ಲಿ ಈ ಲಸಿಕೆ ವಿತರಿಸಲಾಗುತ್ತದೆ’ ಎಂದು ಹೇಳಿದರು.

ಸದ್ಯ ಇಂಡಕ್ಷನ್ ಒಲೆ ಬಳಸಿ: ಮುನಿಯಪ್ಪ

ಒಂದನೇ ಪುಟದಿಂದ...

‘ಎಲ್‌ಪಿಜಿ ಸಿಲಿಂಡರ್ ಮೇಲೆ ರಾಜ್ಯ ಸರ್ಕಾರ ₹500 ತೆರಿಗೆ ಹಾಕುತ್ತಿದೆ ಎಂದು ಕೆಲವರು ಸುಳ್ಳು ಸುದ್ದಿ ಹರಡುತ್ತಿದ್ದಾರೆ. ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳಿ’ ಎಂದು ಐವನ್ ಡಿಸೋಜ ಒತ್ತಾಯಿಸಿದರು. ಆಗ ಮುನಿಯಪ್ಪ, ‘ಯಾವ ಸರ್ಕಾರ ಎಷ್ಟು ತೆರಿಗೆ ವಿಧಿಸುತ್ತದೆ ಎಂಬುದನ್ನು ಖಚಿತಪಡಿಸಿಕೊಂಡು, ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು.

ನಗರದಲ್ಲಿ ಇಂದು

‘ಶ್ರೀ ಕುಮುದೇಂದು ಮುನಿಪ್ರಣೀತ ಸಿರಿಭೂವಲಯ’ ಗ್ರಂಥ ಅಧ್ಯಯನ ಕಾರ್ಯಾಗಾರ: ಅಧ್ಯಕ್ಷತೆ: ಡಾ. ಅಹಲ್ಯಾ ಎಸ್., ಅತಿಥಿಗಳು: ಪದ್ಮಿನಿ ಪದ್ಮರಾಜ್, ಪರಂಜ್ಯೋತಿ, ಉಪಸ್ಥಿತಿ: ವಿ. ಗಿರೀಶ್ ಚಂದ್ರ, ತೇಜಸ್ವಿನಿ ಡಿ., ಆಯೋಜನೆ ಹಾಗೂ ಸ್ಥಳ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಳಿಗ್ಗೆ 9.30

ಮಹಿಳಾ ದಿನಾಚರಣೆ ಪ್ರಯುಕ್ತ ಉಪನ್ಯಾಸ, ಸನ್ಮಾನ, ಗಮಕ–ನೃತ್ಯ ರೂಪಕ: ‘ಸಂಗೀತ ಕ್ಷೇತ್ರದಲ್ಲಿ ಮಹಿಳೆ–ಅಂದು ಮತ್ತು ಇಂದು’ ವಿಷಯದ ಬಗ್ಗೆ ಉಪನ್ಯಾಸ: ಟಿ.ಎಸ್. ಸತ್ಯವತಿ, ಸಾಧಕಿಯರಿಗೆ ಸನ್ಮಾನ: ವಿಶಾಲಾಕ್ಷಿ ಶರ್ಮಾ, ದೀಪಾ ಅಜಯ್, ಶಶಿಕಲಾ ದಾನಿ, ವಂದನಾ ರಾಣೆ, ಅಂಜನಾ ಶೆಣೈ, ಅನುಪಮಾ ಶೆಣೈ, ಗಮಕ ವಾಚನ: ಶಶಿಕಲಾ ದಾನಿ, ಗಮಕ ನೃತ್ಯ ರೂಪಕ: ವಂದನಾ ರಾಣೆ, ‘ಮುಟ್ಟು ನಿಂತ ಮೇಲೆ...’ ವಿಷಯದ ಬಗ್ಗೆ ಉಪನ್ಯಾಸ: ನೇಮಿಚಂದ್ರ, ಅಧ್ಯಕ್ಷತೆ: ಶುಭಾ ವಿ., ಆಯೋಜನೆ: ಕರ್ನಾಟಕ ವಿದ್ಯುತ್ ಮಂಡಳಿ ಲೆಕ್ಕಾಧಿಕಾರಿಗಳ ಸಂಘ, ಸ್ಥಳ: ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಮಹಿಳಾ ರಾಜ್ಯ ಸಮ್ಮೇಳನ: ಉದ್ಘಾಟನೆ: ಬೈರತಿ ಸುರೇಶ್, ಅಧ್ಯಕ್ಷತೆ: ಲೀಲಾದೇವಿ ಆರ್. ಪ್ರಸಾದ್, ಸಮ್ಮೇಳನಾಧ್ಯಕ್ಷತೆ: ಗುರಮ್ಮ ಸಿದ್ದಾರೆಡ್ಡಿ, ಉಪಸ್ಥಿತಿ: ಸಿ. ಸೋಮಶೇಖರ್, ಆಯೋಜನೆ: ಕರ್ನಾಟಕ ವಚನ ಸಾಹಿತ್ಯ ಪರಿಷತ್ತು, ಸ್ಥಳ: ಅಲುಮ್ನಿ ಸಭಾಂಗಣ, ಪಶುವೈದ್ಯಕೀಯ ಕಾಲೇಜು ಆವರಣ, ಬಳ್ಳಾರಿ ಮುಖ್ಯರಸ್ತೆ, ಬೆಳಿಗ್ಗೆ 10


ಯೋಗೇಂದ್ರ ಯಾದವ್

‘ಎಸ್‌ಐಆರ್: 13 ರಾಜ್ಯಗಳಲ್ಲಿ ಏನಾಗಿದೆ? ಕರ್ನಾಟಕದಲ್ಲಿ ಏನು ಮಾಡಬೇಕಿದೆ?’ ವಿಚಾರಸಂಕಿರಣ: ದಿಕ್ಸೂಚಿ ಭಾಷಣ: ಯೋಗೇಂದ್ರ ಯಾದವ್, ಭಾಗವಹಿಸುವ ವಿವಿಧ ರಾಜ್ಯದ ಪ್ರತಿನಿಧಿಗಳು: ರಾಹುಲ್ ಶಾಸ್ತ್ರಿ, ಅವಿಕ್ ಸಹಾ, ಆಶಿಶ್ ರಂಜನ್, ಜವಾಹರ್ ಸರ್ಕಾರ, ಅಮೀರ್, ಆಯೋಜನೆ: ಜಾಗೃತ ಕರ್ನಾಟಕ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10.30


ಆರ್.ಕೆ. ಪದ್ಮನಾಭ

ಸ್ವರ ಮಯೂರ ನಾದ ನೃತ್ಯೋತ್ಸವ: ಭರತನಾಟ್ಯ, ಕಲಾದೀಪ ತಂಡದಿಂದ ಸಮೂಹ ಗಾಯನ, ಸಂಗೀತ ಮತ್ತು ನೃತ್ಯ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಹಾಗೂ ಬಿರುದು ಪ್ರದಾನ, ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಅತಿಥಿ: ಎ.ವಿ. ಶ್ರೀನಿವಾಸನ್ ಗುರೂಜಿ, ಗಾಯನ: ಆರ್.ಕೆ. ಪದ್ಮನಾಭ, ಆಯೋಜನೆ: ನಾದಾಮೃತ ಕಲಾದೀಪ ಸಂಸ್ಥೆ, ಸ್ಥಳ: ಪತ್ತಿ ಸಭಾಂಗಣ, ರಾಮಮಂದಿರ, ಎನ್. ಆರ್. ಕಾಲೊನಿ, ಮಧ್ಯಾಹ್ನ 2.45

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ವಿಚಾರಸಂಕಿರಣ: ಅತಿಥಿಗಳು: ಶಿಲ್ಪಾ ದ್ಯಾವಯ್ಯ, ಸ್ನೇಹಾ ರಾಜೀವ್, ರಾಧಾ ಹಿರೇಗೌಡರ್, ಚೇತನಾ ಎಂ.ಆರ್., ಸಯಾನಿ ಭೌಮಿಕ್, ಆಯೋಜನೆ ಹಾಗೂ ಸ್ಥಳ: ಸರ್ ರತನ್ ಟಾಟಾ ಸಭಾಂಗಣ, ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಆ್ಯಂಡ್ ಸೈನ್ಸ್, ಸೌಂದರ್ಯ ನಗರ, ಬೆಳಿಗ್ಗೆ 10.30

ಶ್ರೀನಿವಾಸ ಕಲ್ಯಾಣೋತ್ಸವ: ಮಧ್ಯಾಹ್ನ 3ಕ್ಕೆ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನದ ಆವರಣದಿಂದ ರಥೋತ್ಸವ, ಸಂಜೆ 6ರಿಂದ ಶ್ರೀನಿವಾಸ ಕಲ್ಯಾಣೋತ್ಸವ, ಅತಿಥಿಗಳು: ಡಿ.ಕೆ. ಶಿವಕುಮಾರ್, ಶಿವರಾಜ್‌ಕುಮಾರ್, ಡಿ.ಕೆ. ಸುರೇಶ್, ಕೃಷ್ಣ ಬೈರೇಗೌಡ, ಕೆ.ಆರ್. ರಮೇಶ್ ಕುಮಾರ್, ಎಚ್. ಕುಸುಮ, ಹನುಮಂತರಾಯಪ್ಪ, ಸ್ಥಳ: ಜೆ.ಪಿ.ಪಾರ್ಕ್ ಆಟದ ಮೈದಾನ, ಮತ್ತಿಕೆರೆ

ಪ್ರಥಮ ವಾರ್ಷಿಕೋತ್ಸವ: ಅತಿಥಿಗಳು: ರಜನೀಶ್ ಶರ್ಮಾ, ಎಸ್. ಶ್ರೀನಿವಾಸ್, ಎಚ್.ಎಸ್. ಸುಧೀಂದ್ರ, ಆರ್. ರಾಹುಲ್, ಎಂ.ಶ್ರೀನಿವಾಸ್ ರಾವ್, ಶ್ರೀನಿವಾಸ ದಾವುಲೂರಿ, ಎಚ್.ಎನ್. ಭಗವಾನ್, ಆಯೋಜನೆ: ಸಾಮ ಫೌಂಡೇಷನ್, ಸ್ಥಳ: ಬಿಇಎಲ್ ಕಲಾಕ್ಷೇತ್ರ ಸಭಾಂಗಣ, ಮಧ್ಯಾಹ್ನ 3

‘ಆದದ್ದೆಲ್ಲಾ ಒಳಿತೇ..?’ ನಾಟಕ ಪ್ರದರ್ಶನ: ನಿರ್ದೇಶನ: ಪ್ರಮೋದ್ ಶಿಗ್ಗಾಂವ್, ತಂಡ: ಕ್ರಿಯೇಟಿವ್ ಥಿಯೇಟರ್, ಸ್ಥಳ: ರಂಗಶಂಕರ, ಜೆ.ಪಿ. ನಗರ, ಮಧ್ಯಾಹ್ನ 3.30 ಹಾಗೂ ಸಂಜೆ 7.30



‘ದ್ವಾರನಕುಂಟೆ ಪಾತಣ್ಣ ಕಾದಂಬರಿ ಪ್ರಶಸ್ತಿ’ ಪ್ರದಾನ: ಎಲ್.ಎನ್. ಮುಕುಂದರಾಜ್, ಉದ್ಘಾಟನೆ: ಎಚ್. ಎಸ್. ರಾಘವೇಂದ್ರ ರಾವ್, ಅಧ್ಯಕ್ಷತೆ: ಬಿ.ಎಂ. ಹನೀಫ್, ಪ್ರಶಸ್ತಿ ಪುರಸ್ಕೃತರು: ಶಶಿಧರ ಹಾಲಾಡಿ, ಉಪಸ್ಥಿತಿ: ದ್ವಾರನಕುಂಟೆ ಪಾತಣ್ಣ, ಎಂ.ಎಸ್. ಆಶಾದೇವಿ, ಎನ್. ಸಂಧ್ಯಾರಾಣಿ, ಆಯೋಜನೆ: ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ, ಸ್ಥಳ: ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಸಂಜೆ 5

‘ಶಾಂತವೇರಿ ಗೋಪಾಲಗೌಡ ಪ್ರಶಸ್ತಿ’ ಪ್ರದಾನ: ಎಚ್. ವಿಶ್ವನಾಥ್, ಅತಿಥಿ: ಮೋಟಮ್ಮ, ಪ್ರಶಸ್ತಿ ಪುರಸ್ಕೃತರು: ವೈ.ಎಸ್.ವಿ. ದತ್ತ, ಅಧ್ಯಕ್ಷತೆ: ಸಿ.ಕೆ. ರಾಮೇಗೌಡ, ಉಪಸ್ಥಿತಿ: ಪಿ. ಮಲ್ಲಿಕಾರ್ಜುನಪ್ಪ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.15

ಭರತನಾಟ್ಯ ರಂಗಪ್ರವೇಶ: ಪ್ರಜ್ಞಾ ಎ. ಉಡುಪ, ಉಪಸ್ಥಿತಿ: ಪಿ.ಸಿ. ಸುಬ್ರಮಣ್ಯಂ, ಜಯಂತಿ ಎಂ. ಈಶ್ವರಪುತ್ರಿ, ಎಸ್.ಎನ್. ಸೇತುರಾಮ್, ಮಂಜುನಾಥ್ ನಾಯಕರ್, ಎಸ್. ನಂಜುಂಡ ರಾವ್, ಸಂಗೀತ ಕಛೇರಿ: ಸಂಜಯ್ ಶಾಂತಾರಾಮ್, ರಾಧಿಕಾ ಎಂ.ಕೆ. ಸ್ವಾಮಿ, ಕಾರ್ತಿಕ್ ವೈಧಾತ್ರಿ, ಪ್ರಶಾಂತ್ ರುದ್ರಪಟ್ಟಣ, ರಾಕೇಶ್, ಧನುಷ್ ಎಸ್., ಆಯೋಜನೆ: ನೃತ್ಯೋಮಾ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಚಾಮರ ವಜ್ರ, ಜಯಮಹಲ್ ಮುಖ್ಯರಸ್ತೆ, ಸಂಜೆ 5.30

‘ಸ್ವರ ಸಪ್ತತಿ’ ಸಮಾರಂಭ: ಹಿಂದೂಸ್ತಾನಿ ಶಾಸ್ತ್ರೀಯ ಗಾಯಕ ಪಂಡಿತ ಪರಮೇಶ್ವರ ಹೆಗಡೆ ಅವರಿಗೆ 70ನೇ ಜನ್ಮದಿನದ ಪ್ರಯುಕ್ತ ಗೌರವ ಸಮರ್ಪಣೆ, ದತ್ತಾತ್ರೇಯ ವೆಲಂಕರ್ ಅವರ ‘ಗಾನ ತಪಸ್ವಿ–ಪಂಡಿತ್ ಪರಮೇಶ್ವರ ಹೆಗಡೆ’ ಪುಸ್ತಕ ಬಿಡುಗಡೆ, ಅತಿಥಿಗಳು: ವಿನಾಯಕ ತೊರವಿ, ರವೀಂದ್ರ ಯಾವಗಲ್, ನಾಗರಾಜ್ ರಾವ್ ಹವಾಲ್ದಾರ್, ಕುಮಾರ್ ಬಂಗಾರಪ್ಪ, ಹಿಂದೂಸ್ತಾನಿ ಶಾಸ್ತ್ರೀಯ ಗಾಯನ: ಶುಭಾ ಮುದ್ಗಲ್, ತಬಲಾ: ಅನೀಶ್ ಪ್ರಧಾನ್, ಹಾರ್ಮೋನಿಯಂ: ಸುಧೀರ್ ನಾಯಕ್, ಆಯೋಜನೆ: ಪರಮೇಶ್ವರ ಹೆಗಡೆ ಶಿಷ್ಯರು, ಸ್ಥಳ: ಖಿಂಚ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5.30

ಉಪನ್ಯಾಸ: ‘ದೈನಂದಿನ ಜೀವನದಲ್ಲಿ ಜಾಗತೀಕರಣ: ಕೆಲಸ, ಮಾಧ್ಯಮ ಮತ್ತು ಭಾರತೀಯ ಯುವಜನರ ಆಕಾಂಕ್ಷೆ’ ವಿಷಯದ ಬಗ್ಗೆ ಉಪನ್ಯಾಸ: ಮಂಜುಳಾ ವಿ., ಅಧ್ಯಕ್ಷತೆ: ರೇಖಾ ಕೌಶಿಕ್ ಪಿ.ಆರ್., ಆಯೋಜನೆ ಹಾಗೂ ಸ್ಥಳ: ಬಿಇಎಸ್ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜು, ಜಯನಗರ, ಸಂಜೆ 7



ಅಲೆಲೆ... ಕೊರಿಯಾ ಅಲೆ!



ಕೊರಿಯಾ ಸಾಂಸ್ಕೃತಿಕ ಅಲೆ ನಮ್ಮ ಹದಿಹರೆಯದ ಹೆಣ್ಣುಮಕ್ಕಳನ್ನು ಇನ್ನಿಲ್ಲದಂತೆ ಆವರಿಸಿಕೊಳ್ಳುತ್ತಿದೆ. ಅಂಥದ್ದೇನಿದೆ ಅದರಲ್ಲಿ? ಏನಿದರ ಗುಟ್ಟು?

• ಸಿಂಧು ಕೆ.ಟಿ.

ಭಾರತದಲ್ಲಿ ಹಾಲ್ಯು (Hallyu) ಅಥವಾ ಕೊರಿಯನ್ ಸಾಂಸ್ಕೃತಿಕ ಅಲೆ ಇತ್ತೀಚಿನ ವರ್ಷಗಳಲ್ಲಿ ಸದ್ದಿಲ್ಲದೆ ಅನೇಕರನ್ನು ಆವರಿಸಿದೆ. ಮನರಂಜನೆಗೆ ಸೀಮಿತವಾಗಬೇಕಿದ್ದ ಕೊರಿಯನ್ ಡ್ರಾಮಗಳು ಅದನ್ನು ಮೀರಿ ಜನರನ್ನು ಆಕರ್ಷಿಸುತ್ತಿವೆ. ಹಗಲೂ ರಾತ್ರಿಯೆನ್ನದೆ, ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದರ ಪರಿವೆಯೇ ಇಲ್ಲದೆ ಒಂದಾದ ಮೇಲೆ ಒಂದರಂತೆ ಡ್ರಾಮಗಳನ್ನು ನೋಡುವುದರಲ್ಲಿಯೇ ಮಗ್ನರಾಗುತ್ತಿರುವ ಯುವಜನ, ಅದರಲ್ಲೂ ವಿಶೇಷವಾಗಿ ಹದಿಹರೆಯದ ಹೆಣ್ಣುಮಕ್ಕಳು ಕೊರಿಯನ್ ಡ್ರಾಮ (ಕೆ–ಡ್ರಾಮ) ಮತ್ತು ದಕ್ಷಿಣ ಕೊರಿಯಾ ಸಂಗೀತದ (ಕೆ-ಪಾಪ್/ ಬಿಟಿಎಸ್) ವ್ಯಾಮೋಹಕ್ಕೆ ಸಿಲುಕಿದ್ದಾರೆ.

ಉತ್ತರಪ್ರದೇಶದ ಗಾಜಿಯಾಬಾದ್‌ನಲ್ಲಿ ಇತ್ತೀಚೆಗೆ ಒಟ್ಟಿಗೇ ಆತ್ಮಹತ್ಯೆ ಮಾಡಿಕೊಂಡ ಮೂವರು ಯುವ ಸಹೋದರಿಯರು ಕೊರಿಯನ್ ಡ್ರಾಮ ಮತ್ತು ಆನ್‌ಲೈನ್ ಗೇಮ್‌ಗಳ ವ್ಯಸನಿಗಳಾಗಿದ್ದರು. ದಿನದ ಹೆಚ್ಚಿನ ಸಮಯವನ್ನು ಅದರಲ್ಲೇ ಕಳೆಯುತ್ತಿದ್ದರು ಮತ್ತು ಕೊರಿಯಾಕ್ಕೆ ಹೋಗುವ ಆಕಾಂಕ್ಷೆ ಹೊಂದಿದ್ದರು ಎಂಬುದು ತನಿಖೆಯಿಂದ ತಿಳಿದುಬಂದಿದೆ. ತಮಿಳುನಾಡಿನ 13 ವರ್ಷದ ಮೂವರು ಬಾಲಕಿಯರು 2024ರಲ್ಲಿ ಬಿಟಿಎಸ್ ತಂಡವನ್ನು ಭೇಟಿ ಮಾಡಲು ತಾವು ಕೂಡಿಟ್ಟ ₹14,000ದೊಂದಿಗೆ ಮನೆ ಬಿಟ್ಟು ದಕ್ಷಿಣ ಕೊರಿಯಾಕ್ಕೆ ಹೊರಟಿದ್ದರು. ರೈಲು ತಪ್ಪಿಸಿಕೊಂಡಿದ್ದ ಆ ಬಾಲಕಿಯರನ್ನು ಕೊನೆಗೆ ಪೊಲೀಸರು ರಕ್ಷಿಸಿದ್ದರು.

ಪಶ್ಚಿಮ ಬಂಗಾಳದ ಮೂವರು ಬಾಲಕಿಯರು ಕೆ-ಪಾಪ್ ತಂಡದಲ್ಲಿ ನೃತ್ಯಗಾರ್ತಿಯರಾಗಲು ಕೊರಿಯಾಕ್ಕೆ ಹೊರಟಿದ್ದ ಪ್ರಕರಣ 2023ರಲ್ಲಿ ನಡೆದಿತ್ತು. 2024ರಲ್ಲಿ ಮಹಾರಾಷ್ಟ್ರದ ಮೂವರು ಬಾಲಕಿಯರು ಅಪಹರಣದ ಕಥೆ ಕಟ್ಟಿ ಕೊರಿಯಾಕ್ಕೆ ಹೋಗುವಾಗ ಪೊಲೀಸರು ಅವರನ್ನು ತಡೆದು ಮನೆಗೆ ಕಳುಹಿಸಿದ್ದರು. 2024ರಲ್ಲಿ ನಾಗ್ಪುರದ 14 ವರ್ಷದ ಬಾಲಕಿಯೊಬ್ಬಳು ಕೊರಿಯಾಕ್ಕೆ ಹೋಗಲು ಯತ್ನಿಸಿ ವಿಫಲಳಾಗಿದ್ದಳು. ಕೊರಿಯಾದ ನಟ–ನಟಿಯರು ಮತ್ತು ಗಾಯಕರನ್ನು ಭೇಟಿ ಮಾಡಿಸುವುದಾಗಿ ಹಣ ಪಡೆದು ವಂಚಿಸಿದ ಎಷ್ಟೋ ಪ್ರಕರಣಗಳು ವರದಿಯಾಗುತ್ತಲೇ ಇರುತ್ತವೆ. ಅಷ್ಟೇ ಅಲ್ಲದೆ, ಕೊರಿಯನ್ ಆನ್‌ಲೈನ್ ಗೇಮ್ ಮೋಹದಿಂದ ಸೈಬರ್ ವಂಚನೆಗೆ ಒಳಗಾಗಿರುವವರು ಅನೇಕರಿದ್ದಾರೆ. ಈ ಪ್ರಕರಣಗಳನ್ನೆಲ್ಲಾ ಗಮನಿಸಿದರೆ, ಕುಟುಂಬ, ದೇಶ ಮತ್ತು ಸ್ನೇಹಿತರನ್ನು ಬಿಟ್ಟು ಕೊರಿಯಾದ ನಟ-ನಟಿಯರೇ ಮುಖ್ಯ ಎಂದು ಭಾವಿಸುವ ಕೆಲ ಹದಿಹರೆಯದ ಹುಡುಗಿಯರ ಮನಃಸ್ಥಿತಿ ಆತಂಕವನ್ನು ಸೃಷ್ಟಿಸುತ್ತದೆ.

ಕೋವಿಡ್ ಸಮಯದಲ್ಲಿ ದೇಶದಲ್ಲಿ ಕೊರಿಯನ್ ಅಲೆ ವೇಗವಾಗಿ ವ್ಯಾಪಿಸಿತು. ಒಟಿಟಿ ಪ್ಲಾಟ್‌ಫಾರ್ಮ್‌ಗಳ ಮೂಲಕ ಭಾರತದಲ್ಲಿ ಅತಿ ಹೆಚ್ಚು ವೀಕ್ಷಿಸಲಾಗುವ ವಿದೇಶಿ ಸರಣಿಗಳಲ್ಲಿ ಕೆ-ಡ್ರಾಮಗಳೇ ಮೊದಲ ಸ್ಥಾನದಲ್ಲಿವೆ. ನೆಟ್‌ಫ್ಲಿಕ್ಸ್ ಅಂಕಿ–ಅಂಶಗಳ ಪ್ರಕಾರ, 2020ರ ನಂತರ ದೇಶದಲ್ಲಿ ಕೊರಿಯನ್ ಡ್ರಾಮಗಳ ವೀಕ್ಷಣೆ ಶೇ 370ರಷ್ಟು ಹೆಚ್ಚಾಗಿದೆ. ಅಲ್ಲದೆ ಸ್ಥಳೀಯ ಭಾಷೆಗಳಿಗೂ ಕೊರಿಯನ್ ಡ್ರಾಮಗಳು ಭಾಷಾಂತರಗೊಳ್ಳುತ್ತಿರುವುದು ನೋಡುಗರ ಸಂಖ್ಯೆ ಹೆಚ್ಚಾಗಲು ಮತ್ತೊಂದು ಕಾರಣವಾಗಿದೆ. ಅಷ್ಟಕ್ಕೂ ಕೊರಿಯನ್ ಮನರಂಜನಾ ಕಾರ್ಯಕ್ರಮಗಳು ಭಾರತದ ಬಾಲೆಯರನ್ನು ಸೆಳೆದಿದ್ದು ಹೇಗೆ ಎಂಬ ಪ್ರಶ್ನೆಗೆ ನಾನಾ ಉತ್ತರಗಳು ಸಿಗುತ್ತವೆ.

ಕೆ–ಡ್ರಾಮಗಳು 'ಹೊಡಿ ಬಡಿ' (ಆ್ಯಕ್ಷನ್) ಕಥೆಗಳಿಗಿಂತ ಭಿನ್ನವಾಗಿ, ಭಾವನೆಗಳಿಂದ ಕೂಡಿರುವ ಕಥಾವಸ್ತುಗಳಿಗೆ ಹೆಚ್ಚು ಒತ್ತು ನೀಡುತ್ತವೆ. ಅಲ್ಲದೆ, ಭಾರತೀಯ ಮತ್ತು ಕೊರಿಯಾ ಸಂಸ್ಕೃತಿಗಳ ನಡುವೆ ಅನೇಕ ಸಾಮ್ಯತೆಗಳಿವೆ. ಕೌಟುಂಬಿಕ ಮೌಲ್ಯಗಳು, ಕುಟುಂಬಕ್ಕೆ ನೀಡುವ ಆದ್ಯತೆ, ಹಿರಿಯರಿಗೆ ನೀಡುವ ಗೌರವ, ಪ್ರೇಮಕಥೆಗಳಲ್ಲಿನ ಮುಗ್ಧತೆ ಸೇರಿದಂತೆ ಅನೇಕ ಅಂಶಗಳು ಪರದೆಯ ಮೇಲೆ ಇರುವಂತೆ ವಾಸ್ತವದಲ್ಲಿಯೂ ಇವೆ ಎಂಬ ಗ್ರಹಿಕೆ ಹೆಣ್ಣುಮಕ್ಕಳಲ್ಲಿದೆ.

ಕೆ-ಡ್ರಾಮಗಳು ಹೆಚ್ಚಾಗಿ ಮಹಿಳಾ ಪ್ರಧಾನ ಕಥಾಹಂದರವನ್ನೇ ಒಳಗೊಂಡಿರುತ್ತವೆ. ಅಲ್ಲಿನ ಮಹಿಳೆಯರು ಬರೀ ಅಡುಗೆ ಮನೆಗೆ ಸೀಮಿತವಾಗಿರದೆ, ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಸಮರ್ಥ ವ್ಯಕ್ತಿಗಳಾಗಿ ಮತ್ತು ಸ್ವಾವಲಂಬಿಗಳಾಗಿ ಚಿತ್ರಿತಗೊಂಡಿರುತ್ತಾರೆ. ಇದು ಇಲ್ಲಿನ ಯುವತಿಯರಿಗೆ ಸ್ಫೂರ್ತಿ ನೀಡುತ್ತದೆ. ಕಥಾನಾಯಕರು ಸ್ಫುರದ್ರೂಪಿಗಳಾಗಿದ್ದು, ಮೃದು ಸ್ವಭಾವವನ್ನು ಹೊಂದಿರುತ್ತಾರೆ. ಹೆಣ್ಣುಮಕ್ಕಳನ್ನು ಸಮಾನವಾಗಿ ಗೌರವಿಸುವ, ತಮ್ಮ ಭಾವನೆಗಳನ್ನು ಮುಕ್ತವಾಗಿ ಹಂಚಿಕೊಳ್ಳುವ ಮತ್ತು ಕಾಳಜಿ ತೋರುವ ವ್ಯಕ್ತಿತ್ವದವರಾಗಿರುತ್ತಾರೆ. ಇವು ಹದಿಹರೆಯದ ಹೆಣ್ಣುಮಕ್ಕಳನ್ನು ಬೇಗ ಸೆಳೆಯುತ್ತವೆ. ಹೆಚ್ಚಿನ ಕೆ–ಡ್ರಾಮಗಳಲ್ಲಿ ಅತಿರೇಕದ ಹಿಂಸೆ ಅಥವಾ ಅಶ್ಲೀಲ ದೃಶ್ಯಗಳು ಇರುವುದಿಲ್ಲ. ಭಾರತೀಯ ಧಾರಾವಾಹಿಗಳಂತೆ ಸಾವಿರಾರು ಸಂಚಿಕೆಗಳಿಗೆ ಎಳೆಯದೆ, ಕಡಿಮೆ ಸಂಚಿಕೆಗಳಲ್ಲಿಯೇ ಕಥೆಗಳು ಪೂರ್ಣಗೊಳ್ಳುತ್ತವೆ. ಹೀಗಾಗಿ, ಅವು ಯುವತಿಯರ ಮನಸ್ಸಿನಲ್ಲಿ ಜಾಗ ಪಡೆದುಕೊಳ್ಳುತ್ತಿವೆ. ಪ್ರತಿ ಸಂಚಿಕೆಯೂ ಆಸಕ್ತಿದಾಯಕವಾಗಿದ್ದು, ನೋಡುಗರನ್ನು ಹಿಡಿದಿಟ್ಟುಕೊಳ್ಳುತ್ತದೆ. ಅಂತ್ಯಭಾಗವು ರೋಚಕ ಮತ್ತು ಕುತೂಹಲದಿಂದ ಕೂಡಿರುತ್ತದೆ. ಮುಂದಿನ ಸಂಚಿಕೆಯನ್ನು ನೋಡಲೇಬೇಕೆಂಬ ಆಸಕ್ತಿ ಮೂಡಿಸುತ್ತದೆ.

ಕಣ್ಣಿಗೆ ಹಬ್ಬದಂತಿರುವ ಸಿನಿಮಾಟೊಗ್ರಫಿ, ರಮಣೀಯ ತಾಣಗಳಲ್ಲಿ ಚಿತ್ರೀಕರಣ, ಅತ್ಯುನ್ನತ ತಂತ್ರಜ್ಞಾನಗಳ ಬಳಕೆ ಮತ್ತು ಹಿನ್ನೆಲೆ ಗಾಯನದ ದೃಶ್ಯಗಳು ನೋಡುಗರನ್ನು ಬೇಸರಗೊಳಿಸುವುದಿಲ್ಲ, ಬದಲಾಗಿ ಮತ್ತಷ್ಟು ಸೆಳೆಯುತ್ತವೆ. ಶಾಲಾ-ಕಾಲೇಜುಗಳಲ್ಲಿ ಒಬ್ಬ ಸ್ನೇಹಿತೆ ಕೆ-ಪಾಪ್, ಕೆ-ಡ್ರಾಮಗಳ ಅಭಿಮಾನಿಯಾದರೆ, ಕೆಲವೇ ದಿನಗಳಲ್ಲಿ ಆ ಗುಂಪಿನ ಅನೇಕರು 'ವಿ ಲವ್ ಬಿಟಿಎಸ್ ಆರ್ಮಿ' ಎನ್ನುವಷ್ಟು ಪ್ರಭಾವಿತರಾಗುತ್ತಾರೆ. ಅವರು ಒಟ್ಟಿಗೆ ಕಳೆಯುವ ಹೆಚ್ಚಿನ ಸಮಯ, ಡ್ರಾಮ ಹಾಗೂ ಅದರಲ್ಲಿನ ನಟ-ನಟಿಯರ ಕುರಿತ ಮಾತುಕತೆಯೇ ಇರುತ್ತದೆ. ಅತಿಯಾದ ಡ್ರಾಮ ವೀಕ್ಷಣೆಯಿಂದ ವಾಸ್ತವದ ಸ್ಥಿತಿಗತಿಗಳನ್ನು ಮರೆಯುವ ಹದಿಹರೆಯದವರು, ತಾವು ಕೊರಿಯಾ ಸಂಸ್ಕೃತಿಯಲ್ಲಿ ಜೀವಿಸುತ್ತಿದ್ದೇವೆ ಎಂಬ ಭಾವನೆಯನ್ನು ಬೆಳೆಸಿಕೊಳ್ಳುತ್ತಾರೆ ಮತ್ತು ಅದನ್ನೇ ಪಾಲಿಸಲು ಪ್ರಯತ್ನಿಸುತ್ತಾರೆ.

ಕೊರಿಯನ್ ನಟ- ನಟಿಯರ ಬೆಳ್ಳಗೆ ಹೊಳೆಯುವ ಚರ್ಮ ಯುವತಿಯರನ್ನು ಹೆಚ್ಚು ಆಕರ್ಷಿಸುತ್ತಿದೆ. ತೆಳ್ಳಗೆ, ಬೆಳ್ಳಗೆ ಇರುವುದೇ ಸೌಂದರ್ಯದ ಮಾನದಂಡ ಎಂಬ ಭಾವನೆಯನ್ನು ಮೂಡಿಸಿದೆ. ಇದರಿಂದ ತಾವೂ ಹಾಗೇ ಕಾಣಲು ಬಯಸುವ ಎಷ್ಟೋ ಯುವತಿಯರು ಪ್ಲಾಸ್ಟಿಕ್ ಸರ್ಜರಿಯಂತಹವುಗಳ ಮೊರೆ ಹೋಗಿದ್ದಾರೆ. ಅಲ್ಲದೆ, ಅವರಂತೆಯೇ ಕೇಶ ವಿನ್ಯಾಸ, ಉಡುಗೆ–ತೊಡುಗೆ ಧರಿಸಲು ಇಚ್ಛಿಸುತ್ತಿದ್ದಾರೆ. ಅವರು ಬಳಸುವ ನೀರಿನ ಬಾಟಲಿಯಿಂದ ಹಿಡಿದು ಬ್ಯಾಗ್‌ನವರೆಗೆ ಎಲ್ಲ ವಸ್ತುಗಳೂ ಭಾರತದಲ್ಲಿ ಬೇಡಿಕೆ ಸೃಷ್ಟಿಸಿವೆ. ಕೊರಿಯನ್ ಸೌಂದರ್ಯವರ್ಧಕಗಳ (ಕೆ–ಬ್ಯೂಟಿ) ಬೇಡಿಕೆ ಗಣನೀಯವಾಗಿ ಹೆಚ್ಚಿದ್ದು, ದೇಶದ ಆಲಂಕಾರಿಕ ವಸ್ತುಗಳ ಮಾರುಕಟ್ಟೆಯಲ್ಲಿ ಕೊರಿಯನ್ ಉತ್ಪನ್ನಗಳ ಪಾಲು ಹಿಂದಿನ 3 ವರ್ಷಗಳಲ್ಲಿ ದುಪ್ಪಟ್ಟಾಗಿದೆ. ಸ್ವಿಗ್ಗಿ ಕಂಪನಿಯ ದತ್ತಾಂಶದ ಪ್ರಕಾರ, ಕೊರಿಯಾ ಆಹಾರವನ್ನು ತರಿಸಿಕೊಳ್ಳುವವರ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು, ನಮ್ಮ ಬೆಂಗಳೂರು ಮತ್ತು ಮೈಸೂರು ಸಹ ಇಂತಹ ನಗರಗಳಲ್ಲಿ ಸೇರಿವೆ.

ಡ್ರಾಮ ನೋಡುವ ಹೆಚ್ಚಿನವರಿಗೆ ಕೊರಿಯನ್ ಭಾಷೆ ಬರದಿದ್ದರೂ 'ಅನ್ಯಂಗ್-ಹಾಸೆಯೋ' (ನಮಸ್ಕಾರ) ಮತ್ತು 'ಸಾರಂಗ್-ಹೇ (ಪ್ರೀತಿಸುತ್ತೇನೆ) ಎಂಬಂತಹ ಕೆಲ ಪದಗಳನ್ನು ಸಲೀಸಾಗಿ ಬಳಸುತ್ತಾರೆ. ಭಾರತದಲ್ಲಿ 'ಡ್ಯು ಓಲಿಂಗೊ' (Duolingo) ಆ್ಯಪ್ ಮೂಲಕ ಕೊರಿಯನ್ ಭಾಷೆ ಕಲಿಯುವವರ ಸಂಖ್ಯೆಯಲ್ಲಿ ಪ್ರತಿವರ್ಷ ಸುಮಾರು ಶೇ 25ರಷ್ಟು ಏರಿಕೆ ಕಂಡುಬರುತ್ತಿದೆ. ಅಲ್ಲದೆ ಕೊರಿಯಾದಲ್ಲಿ ಉದ್ಯೋಗ ಮಾಡುವ, ಓದುವ ಅಥವಾ ಅಲ್ಲಿಯ ಹುಡುಗನನ್ನೇ ಮದುವೆಯಾಗಿ ಆ ದೇಶದಲ್ಲೇ ಇರುವ ಬಯಕೆ ಹಲವರಲ್ಲಿ ಮೂಡಿದೆ. ಕೆ–ಡ್ರಾಮಗಳಲ್ಲಿ ನಾಯಕ-ನಾಯಕಿಯರು ಸವಿಯುವ ಆಹಾರವನ್ನು ತಾವೂ ಆಸ್ವಾದಿಸಬೇಕೆಂಬ ಬಯಕೆ ದಿನೇ ದಿನೇ ಹೆಚ್ಚಾಗುತ್ತಿದೆ. 'ಕಿಮ್ಚಿ', 'ರಾಮನ್' (ಕೊರಿಯನ್ ನೂಡಲ್ಸ್), 'ಸುಶಿ', 'ಟೊಕ್ಬೋಕಿ'ಯಂತಹ ಕೊರಿಯನ್ ಖಾದ್ಯಗಳು ಸಾಂಪ್ರದಾಯಿಕ ಆಹಾರಕ್ಕಿಂತ ಹೆಚ್ಚು ಪ್ರಿಯವಾಗುತ್ತಿವೆ. ಇದರಿಂದ ಕೊರಿಯನ್ ರೆಸ್ಟೋರೆಂಟ್‌ಗಳು ಭಾರತದಲ್ಲಿ ಕ್ಷಿಪ್ರಗತಿಯಲ್ಲಿ ತಲೆ ಎತ್ತುತ್ತಿವೆ. ಡ್ರಾಮಗಳಲ್ಲಿ ಕಾಣುವ ಜೀವನಕ್ಕೆ ಹೆಚ್ಚು ಆಕರ್ಷಿತರಾಗಿ, ವಾಸ್ತವದಲ್ಲಿಯೂ ಅದೇ ರೀತಿಯ ಅನೇಕ ನಿರೀಕ್ಷೆಗಳನ್ನು ಇಟ್ಟುಕೊಳ್ಳುತ್ತಾರೆ. ಅದು ಸಾಧ್ಯವಾಗದೆ, ಖಿನ್ನತೆಯಂತಹ ಸಮಸ್ಯೆಗಳಿಗೆ ಒಳಗಾಗುತ್ತಾರೆ. ಸಮಾಜದ ಸಂಪರ್ಕ ಕಡಿತಗೊಳಿಸಿಕೊಂಡು, ಒಬ್ಬಂಟಿಯಾಗಿ ಇರಲು ಬಯಸುತ್ತಾರೆ. ಕೆ–ಡ್ರಾಮ ವೀಕ್ಷಣೆಗಾಗಿ ಡಿಜಿಟಲ್ ಸಾಧನಗಳ ಅತಿಯಾದ ಬಳಕೆಯು ಏಕಾಗ್ರತೆಯನ್ನು ಕುಂದಿಸಿ, ಇತರ ಕೌಶಲ ಮತ್ತು ಸಾಮರ್ಥ್ಯಗಳನ್ನು ಮರೆಮಾಡುತ್ತದೆ.

ಹೀಗಿದೆ ವಾಸ್ತವ!

ದಕ್ಷಿಣ ಕೊರಿಯಾವು ವಿಶ್ವದಲ್ಲೇ ಅತಿ ಹೆಚ್ಚು ಕೆಲಸದ ಒತ್ತಡ ಮತ್ತು ಸ್ಪರ್ಧಾತ್ಮಕ ಶಿಕ್ಷಣ ವ್ಯವಸ್ಥೆಯನ್ನು ಹೊಂದಿರುವ ದೇಶಗಳಲ್ಲಿ ಒಂದಾಗಿದೆ. ಅಲ್ಲದೆ ಅಲ್ಲಿನ ಆತ್ಮಹತ್ಯೆ ದರವು ಜಾಗತಿಕವಾಗಿ ಅತಿ ಹೆಚ್ಚಾಗಿದೆ. ಪುರುಷರಿಗಿಂತ ಮಹಿಳೆಯರಿಗೆ ಅತಿ ಕಡಿಮೆ ಸಂಬಳ, ಮಹಿಳೆಯರ ಮೇಲೆ ಸದಾ ಸುಂದರವಾಗಿ ಕಾಣಬೇಕೆಂಬ ಬಗ್ಗೆ ವಿಪರೀತ ಒತ್ತಡವಿದೆ. ಅನೇಕ ಸಾಮಾಜಿಕ ಕಟ್ಟುಪಾಡುಗಳು ಸಹ ಇವೆ. ಆದರೆ ಇವನ್ನೆಲ್ಲ ಕೆ-ಡ್ರಾಮಗಳು ತೋರಿಸುವುದಿಲ್ಲ.

ಮನರಂಜನಾ ವೇದಿಕೆಗಳ ಮೂಲಕ ಕೊರಿಯನ್ ಸಂಸ್ಕೃತಿಯು ಭಾರತದಲ್ಲಿ ಪ್ರಚುರಗೊಳ್ಳುತ್ತಿರುವುದು ಜಾಗತಿಕ ಸಂಸ್ಕೃತಿಗಳ ಸಮ್ಮಿಲನಕ್ಕೆ ದಾರಿಯಾಗಿದೆ. ಆದರೆ, ಆ ಮನರಂಜನೆಯು ವಾಸ್ತವದ ಚೌಕಟ್ಟು ಮೀರಿ, ನಮ್ಮನ್ನೇ ನಿಯಂತ್ರಿಸುವಂತಹ ಸ್ಥಿತಿ ತಲುಪುವುದು ರೋಗಗ್ರಸ್ತ ಸಮಾಜದ ಹುಟ್ಟಿಗೆ ದಾರಿ ಮಾಡಿಕೊಡುತ್ತದೆ.

ಭಾವನಾತ್ಮಕ ಬೆಂಬಲ ನೀಡಿ



ಅತಿಯಾದ ಮೊಬೈಲ್ ಬಳಕೆಯು ಯುವಜನರ ಅದರಲ್ಲೂ ಭಾವನಾಜೀವಿಗಳಾದ ಹೆಣ್ಣುಮಕ್ಕಳ ಮೇಲೆ ವ್ಯಾಪಕ ಪರಿಣಾಮ ಬೀರುತ್ತದೆ. ಇದರಿಂದ ಅವರು ಕಲ್ಪನಾಲೋಕವನ್ನೇ ನಿಜವೆಂದು ಭಾವಿಸಿ, ವಾಸ್ತವವನ್ನು ಸ್ವೀಕರಿಸಲು ತಯಾರಿಲ್ಲದ ಮನಃಸ್ಥಿತಿ ತಲುಪುತ್ತಾರೆ.

ಹೆಚ್ಚು ಸಾಮಾಜಿಕ ಸಂಪರ್ಕ ಬೆಳೆಸಿಕೊಳ್ಳುವುದು, ಸೃಜನಶೀಲ ಚಟುವಟಿಕೆಗಳಲ್ಲಿ ಭಾಗಿಯಾಗುವುದು, ಕುಟುಂಬಸ್ಥರೊಂದಿಗೆ ಹೆಚ್ಚು ಸಮಯ ಕಳೆಯುವುದು, ಧ್ಯಾನ, ಯೋಗ, ಪುಸ್ತಕ ಓದುವುದು, ಸಂಗೀತ ಕಲಿಯುವುದು ಅಥವಾ ಪ್ರವಾಸ ಹೋಗುವಂತಹ ಹೊಸ ಹವ್ಯಾಸ ಮತ್ತು ಹೊಸದನ್ನು ಕಲಿಯಲು ಪ್ರಯತ್ನಿಸುವ ಮೂಲಕ ಅಂತಹ ಮನಃಸ್ಥಿತಿಯಿಂದ ಹೊರಬರಬಹುದು.

ಮಕ್ಕಳನ್ನು ಪೋಷಕರು ಸ್ನೇಹಿತರಂತೆ ಕಾಣುವುದರ ಜೊತೆಗೆ ಅವರ ಚಲನವಲನಗಳನ್ನು ಗಮನಿಸುತ್ತಿರಬೇಕು. ಮಕ್ಕಳ ನಡೆಗೆ ಸಂಬಂಧಿಸಿದಂತೆ ಯಾವುದೇ ವಿಷಯವನ್ನು ತಕ್ಷಣವೇ ವಿರೋಧಿಸುವುದಕ್ಕಿಂತ ಹಂತ ಹಂತವಾಗಿ ಆ ಅಭ್ಯಾಸದಿಂದ ಹೊರತರಲು ಪ್ರಯತ್ನಿಸಬೇಕು. ಅವರಿಗೆ ಭಾವನಾತ್ಮಕ ಬೆಂಬಲ ನೀಡಬೇಕು.

ಸೌಜನ್ಯಾ ವಸಿಷ್ಠ, ಮೈಂಡ್ ಆ್ಯಂಡ್ ವೆಲ್‌ನೆಸ್ ಕೋಚ್

ಪ್ಯಾನಿಕ್ ಅಟ್ಯಾಕ್ ಪರಿಹಾರವೇನು?



ಅಂತರಂಗ

ಅಕ್ಷರ ದಾಮ್ಲೆ , ಮನಃಶಾಸ್ತ್ರಜ್ಞ

• **ನನ್ನ ಮಗಳಿಗೆ 13 ವರ್ಷ. ಇದ್ದಕ್ಕಿದ್ದ ಹಾಗೆ ಪ್ಯಾನಿಕ್ ಅಟ್ಯಾಕ್ ಆಗುತ್ತಾಳೆ. ನಿತ್ಯ ನಿದ್ದೆಯಲ್ಲಿ ಮಾತನಾಡುತ್ತಾಳೆ. ಇದಕ್ಕೆ ಪರಿಹಾರ ಸೂಚಿಸುವಿರಾ?**

ರಮಾ, ತುಮಕೂರು

ನಿಮ್ಮ ಪ್ರಶ್ನೆಯ ಹಿಂದೆ ಒಂದು ಗಂಭೀರವಾದ ಸಮಸ್ಯೆ ಅಡಗಿದೆ ಮತ್ತು ಇದಕ್ಕೆ ಪರಿಹಾರವನ್ನು ಕೇವಲ ಈ ಬರಹದ ಮೂಲಕ ತಿಳಿಸಲು ಸಾಧ್ಯವಿಲ್ಲ. ಯಾಕೆಂದರೆ, ಪ್ಯಾನಿಕ್ ಅಟ್ಯಾಕ್ ಅನ್ನುವುದು ಉದ್ವೇಗದ ತೀವ್ರ ರೂಪ. ಯಾವುದೇ ಸಮಸ್ಯೆ ತೀವ್ರ ರೂಪಕ್ಕೆ ತಿರುಗಿದ ಮೇಲೆ, ಅದಕ್ಕೆ ಸುಲಭವಾಗಿ ಪರಿಹಾರಗಳನ್ನು ಕೊಡುವುದು ಸಾಧ್ಯವಿಲ್ಲ. ಶುಶ್ರೂಷೆಯೊಂದೇ ದಾರಿ. ಇತ್ತೀಚೆಗಷ್ಟೇ ಸುಮಾರು ನಿಮ್ಮ ಮಗಳದೇ ವಯಸ್ಸಿನ ಇನ್ನೊಬ್ಬ ಹುಡುಗಿ ನನ್ನ ಬಳಿ ಶುಶ್ರೂಷೆಗಾಗಿ ಬಂದು ಗುಣವಾದ ಬಗೆಯನ್ನು ಹಂಚಿಕೊಳ್ಳಬಯಸುತ್ತೇನೆ.

ದೀಕ್ಷಾ (ಹೆಸರು ಬದಲಾಯಿಸಲಾಗಿದೆ) 9ನೇ ತರಗತಿಯಲ್ಲಿ ಓದುತ್ತಿದ್ದ ಹುಡುಗಿ. ಸುಮಾರು ಎಂಟು ತಿಂಗಳ ಹಿಂದೆ ಆಕೆಗೆ ಏಕಾಏಕಿ ಪ್ಯಾನಿಕ್ ಅಟ್ಯಾಕ್ ಸಮಸ್ಯೆ ಶುರುವಾಯಿತು. ಹೆತ್ತವರಿಗೆ ಯಾಕೆ, ಹೇಗೆ ಎಂಬುದು ಅರ್ಥವಾಗಲಿಲ್ಲ. ಅದು ಕೂಡಾ ರಜೆಗೆಂದು ಸುತ್ತಾಡಲು ಹೋದಂತಹ ಸಂದರ್ಭದಲ್ಲಿ.

ಆದರೆ ಅದು ಆರಂಭದಲ್ಲಿ ಒಮ್ಮೆ ಬಂದು ಆಮೇಲೆ ಕಡಿಮೆಯಾದಂತೆ ತೋರಿದ್ದರಿಂದ ಹೆತ್ತವರು ಅದನ್ನು ಹೆಚ್ಚು ಗಂಭೀರವಾಗಿ ಪರಿಗಣಿಸಲಿಲ್ಲ. ಆದರೆ, ಆಮೇಲಿನ ದಿನಗಳಲ್ಲಿ ಅದು ಎಷ್ಟರಮಟ್ಟಿನ ತೀವ್ರತೆಯನ್ನು ಪಡೆಯಿತು ಅಂದರೆ, ಆಕೆಗೆ ಪ್ಯಾನಿಕ್ ಅಟ್ಯಾಕ್ ಆದಾಗ ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದಳು. ಮೈಯೆಲ್ಲಾ ನಡುಗುತ್ತಿತ್ತು ಮತ್ತು ಹೆತ್ತವರಿಗೆ ಆ ಸಂದರ್ಭದಲ್ಲಿ ಏನು ಮಾಡಬೇಕೆಂದು ತಿಳಿಯುತ್ತಿರಲಿಲ್ಲ. ಭೀತಿಯಿಂದ ಮೂರ್ನಾಲ್ಕು ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗಿ ಶುಶ್ರೂಷೆ ಮಾಡಿಸಿದರೂ ಯಾವುದೇ ಮಹತ್ತರವಾದ ಪರಿಣಾಮ ಕಂಡುಬರಲಿಲ್ಲ. ಒಂದಷ್ಟು ಮಾತ್ರೆಗಳನ್ನು ನುಂಗಬೇಕಾದಂತಹ ಸಂದರ್ಭ, ಆ ಮಾತ್ರೆಗಳ ಕಾರಣದಿಂದಾಗಿ ಮಂಪರು, ಉದಾಸೀನ ಮತ್ತು ನಿಶ್ಶಕ್ತಿ. ಯಾವುದೇ ಕೆಲಸ ಮಾಡಲೂ ಆಸಕ್ತಿ ಇಲ್ಲ. ಮಗಳ ಇಂತಹ ಪರಿಸ್ಥಿತಿಯಿಂದ ಹೆತ್ತವರು ಕಂಗೆಟ್ಟು ಹೋಗಿದ್ದರು.

ರಾತ್ರಿ ಸರಿಯಾಗಿ ನಿದ್ದೆ ಇಲ್ಲ, ನಿದ್ದೆಯಲ್ಲಿ ಏನೇನೋ ಕನವರಿಕೆ, ಹಾಸಿಗೆಯಿಂದ ಏಳುವುದಕ್ಕೆ ಆಸಕ್ತಿ ಇಲ್ಲ, ಶರೀರವು ಯಾಕೋ ಭಾರವೆಂಬಂತೆ ಭಾಸವಾಗುವುದು, ಊಟ, ತಿಂಡಿ ಮಾಡುವುದಕ್ಕೂ ಮನಸ್ಸಿಲ್ಲ. ದೈಹಿಕ ಚಟುವಟಿಕೆಗಳೆಲ್ಲವೂ ಮೂಲೆಗುಂಪಾಗಿದ್ದವು. ಪುಸ್ತಕಗಳಿಗೆ ದೂಳು ಹಿಡಿದಿತ್ತು. ತನಗೆ ಏನಾಗುತ್ತಿದೆ ಎಂದು ಅರ್ಥವಾಗದ ಪರಿಸ್ಥಿತಿಯಲ್ಲಿ ಆಕೆ ಇದ್ದಳು. ಒಂದೊಂದು ಬಾರಿ, ತಂದೆ- ತಾಯಿಯ ಆರೈಕೆಯೂ ಭಾರವಾದಂತೆ ಆಕೆಗೆ ಅನ್ನಿಸುತ್ತಿತ್ತು. ಅವಳ ಮನಃಸ್ಥಿತಿ ಎಲ್ಲಿಯವರೆಗೆ ಹೋಗಿತ್ತು ಅಂದರೆ, ಒಂದು ದಿನ ಇದ್ದ ಅಷ್ಟೂ ಮಾತ್ರೆಗಳನ್ನು ಒಟ್ಟಿಗೇ ತೆಗೆದುಕೊಂಡು ಬಿಟ್ಟಿದ್ದಳು. ಇರುವ ಒಬ್ಬಳೇ ಮಗಳು ಹೀಗೆಲ್ಲಾ ಮಾಡಿಕೊಂಡಾಗ ತಂದೆ- ತಾಯಿಗೆ ಜೀವವೇ ಕೈಗೆ ಬಂದಂತಾಗಿತ್ತು.

ಇನ್ನೊಂದಷ್ಟು ಕೌನ್ಸೆಲಿಂಗ್ ಮಾಡಿಸಲು ಕರೆದುಕೊಂಡು ಹೋದರೂ ಹೆಚ್ಚಿನ ಪ್ರಯೋಜನವೇನೂ ಆಗಲಿಲ್ಲ. ಮುಂದೇನು ಮಾಡುವುದು ಎಂದು ತೋಚದೇ ಇದ್ದಂತಹ ಪರಿಸ್ಥಿತಿಯಲ್ಲಿ ಯಾರೋ ಒಬ್ಬರು ಹಿರಿಯರು ಅವರಿಗೆ ನನ್ನಲ್ಲಿ ಶುಶ್ರೂಷೆ ಪಡೆಯಲು ಸಲಹೆ ನೀಡಿದರು.

ಧೃತಿಗೆಟ್ಟಿದ್ದರೂ ಪ್ರಯತ್ನ ಮುಂದುವರಿಸುವ ಲಕ್ಷ್ಯವನ್ನು ಹೊಂದಿದ್ದ ಆಕೆಯ ಪೋಷಕರು ಸ್ವಲ್ಪ ಒತ್ತಾಯ ಮಾಡಿಯೇ ಆಕೆಯನ್ನು ಕರೆದುಕೊಂಡು ಬಂದಿದ್ದರು. ಮೊದಲ ಬಾರಿ ನನ್ನ ಬಳಿ ಬಂದಾಗ, ಆಕೆ ಮಾತನಾಡುವುದಕ್ಕೆ ಸಿದ್ಧಳಿರಲಿಲ್ಲ. ಹೆಚ್ಚು ಸಿಡುಕುತ್ತಿದ್ದಳು. ಆದರೂ ಹೇಗೋ ಆಕೆಯ ಮನವೊಲಿಸಿ ಒಂದು ಗಂಟೆ ಮಾತನಾಡುವ ಹಾಗೆ ಮಾಡಿದೆ. ಆಕೆಯ ಮನದಾಳದ ನೋವನ್ನು ಅರ್ಥೈಸಿಕೊಂಡು ಒಂದಷ್ಟು ಉಪಾಯಗಳನ್ನು ಹೇಳಿದೆ. ತದನಂತರ ಮುಂದಿನ ಸೆಷನ್‌ಗಳಿಗೆ ಬರುವುದಕ್ಕೆ ಆಕೆ ಒಪ್ಪಿದಳು. ಸುಮಾರು 4 ಸೆಷನ್‌ಗಳಲ್ಲಿ ಆಕೆಯಲ್ಲಿ ಎಷ್ಟೊಂದು ಬದಲಾವಣೆ ಕಂಡುಬಂತೆಂದರೆ, ಅವಳ ಪ್ಯಾನಿಕ್ ಅಟ್ಯಾಕ್ ಸುಮಾರಾಗಿ ಕಣ್ಮರೆಯಾಗಿತ್ತು. ಒಂದು ವೇಳೆ ಸಣ್ಣ ಪ್ರಮಾಣದಲ್ಲಿ ಬಂದರೂ ಅದು ಉದ್ವೇಗದ ರೂಪದಲ್ಲಿ ಇರುತ್ತಿತ್ತಷ್ಟೇ ಬಿಟ್ಟರೆ, ನೆಲದ ಮೇಲೆ ಹೊರಳಾಡುವಂತಹ ಸ್ಥಿತಿಯಲ್ಲಿ ಇರಲಿಲ್ಲ.

ಆಕೆಯ ನಿದ್ದೆಯ ಸಮಸ್ಯೆಯೂ ಸರಿಹೋಯಿತು. ರಾತ್ರಿ ಮಲಗಿದರೆ ಮಧ್ಯಾಹ್ನ ಸುಮಾರು 12 ಗಂಟೆಯ ಹೊತ್ತಿಗೆ ಕಷ್ಟಪಟ್ಟು ಏಳುತ್ತಿದ್ದವಳು, ಬೆಳಿಗ್ಗೆ 7 ಗಂಟೆಗೇ ಏಳಲು ಆರಂಭಿಸಿದಳು. ತನ್ನ ಹವ್ಯಾಸಗಳಾದ ಸಂಗೀತ, ನೃತ್ಯ, ಈಜಾಟದಂತಹ ಚಟುವಟಿಕೆಗಳಲ್ಲಿ ತೊಡಗಿಕೊಂಡಳು. ಪುಸ್ತಕದ ದೂಳು ನಿಧಾನವಾಗಿ ಮರೆಯಾಯಿತು. ಮನೆಯಲ್ಲಿ, ಮನದಲ್ಲಿ ಜೀವಂತಿಕೆ ಬಂತು. ಸುಮಾರು ತಿಂಗಳುಗಳ ಹೋರಾಟ ಮುಗಿಯಿತು.

ಇದು ಹೇಗೆ ಸಾಧ್ಯವಾಯಿತು?

- ಮೊದಲನೆಯದಾಗಿ ಅರ್ಥಮಾಡಿಕೊಳ್ಳಬೇಕಿರುವುದು, ಪ್ಯಾನಿಕ್ ಅಟ್ಯಾಕ್ ಅನ್ನುವುದು ಭಾವನಾತ್ಮಕ ಸಮಸ್ಯೆ.
- ಅದು ಒಮ್ಮಿಂದೊಮ್ಮೆಲೇ ಕಾಣಿಸಿಕೊಂಡರೂ, ಎಷ್ಟೋ ಬಾರಿ ಅದರ ಮೂಲ ನಮ್ಮ ಜೀವನದಲ್ಲಿ ನಡೆದ ಹಿಂದಿನ ಘಟನೆಗಳಲ್ಲಿ ಅಡಗಿರುತ್ತದೆ.
- ಮೂಲದಿಂದ ಬೇರು ಸಹಿತ ತೆಗೆದಾಗ ಮಾತ್ರ ನಾವು ಅದನ್ನು ಪರಿಹರಿಸಿಕೊಳ್ಳಬಹುದು.
- ಈ ರೀತಿಯ ಯಾವುದೇ ಚಿಕಿತ್ಸೆಗೆ ಸ್ವಲ್ಪ ಸಮಯವನ್ನು ಕೊಡಬೇಕು, ತಾಳ್ಮೆವಹಿಸಬೇಕು.
- ಹೀಗೆ, ಪ್ಯಾನಿಕ್ ಅಟ್ಯಾಕ್‌ನಂತಹ ಸಮಸ್ಯೆ ಇದ್ದಾಗ, ತಡಮಾಡದೇ ಚಿಕಿತ್ಸೆಯನ್ನು ಕೊಡಿಸಿ. ಬರೀ ಲೇಖನಗಳು, ಪುಸ್ತಕಗಳು, ಯೂಟ್ಯೂಬ್ ಅಥವಾ ಇನ್‌ಸ್ಟಾಗ್ರಾಂನಲ್ಲಿ ಬರುವಂತಹ ಒಂದಷ್ಟು ಸುಲಭದ ಉಪಾಯಗಳನ್ನು ಅರಿತುಕೊಂಡು ಪ್ರಯತ್ನಿಸುವುದರಿಂದ ಪರಿಹಾರ ಸಿಗಲು ಸಾಧ್ಯವಿಲ್ಲ. ಗಂಭೀರವಾದ ಸಮಸ್ಯೆಯನ್ನು ಹಗುರವಾಗಿ ಕಾಣಬೇಡಿ.

ಅಮ್ಮ ಹೇಳ್ತಾಳೆ



ತರಕಾರಿ ಬೆಂದ ನೀರನ್ನು ಹೊರಗೆ ಚೆಲ್ಲಬಾರದು. ಹಲವು ಪೌಷ್ಟಿಕಾಂಶಗಳಿಂದ ಕೂಡಿರುವ ಈ ನೀರನ್ನು ದೋಸೆ, ಚಪಾತಿ ಅಥವಾ ಪಲ್ಯ ಮಾಡುವಾಗ ಬಳಸಿದರೆ, ಅದರಲ್ಲಿರುವ ಸಂಪೂರ್ಣ ಸತ್ವವನ್ನು ಪಡೆಯಬಹುದು.

ಆಹಾ! ತಂಪು ತಂಪು ಕೂಲ್ ಕೂಲ್

• ಸುನಾದ

ಹೊರಗೆ ಅಡಿ ಇಡುತ್ತಿದ್ದಂತೆಯೇ ಬಿಸಿಲಿನ ಝಳ ಮೈಸೋಕುತ್ತದೆ. ಬಿಸಿಲು ತಪ್ಪಿಸಿ ನೆರಳಲ್ಲೇ ನಡೆಯುತ್ತೇವೆಂದರೂ ಆ ಸಮಯದಲ್ಲಿ ದೇಹದಲ್ಲಿನ ನೀರಿನ ಅಂಶ ಇಳಿಯುತ್ತದೆ. ದೇಹದ ಲವಣಾಂಶವೂ ಇಳಿಮುಖದ ಹಾದಿ ಹಿಡಿಯುತ್ತದೆ. ಅಗತ್ಯದಷ್ಟು ನೀರು ದೇಹಕ್ಕೆ ಸೇರಲಿಲ್ಲವೆಂದರೆ ನಿರ್ಜಲೀಕರಣವಾಗುತ್ತದೆ. ದೇಹದ ಆರೋಗ್ಯವನ್ನು ಸಮತೋಲಿತ ಸ್ಥಿತಿಯಲ್ಲಿ ಇಡಲೆಂದೇ ಈ ಸಮಯದಲ್ಲಿ ಪ್ರಕೃತಿಯಲ್ಲಿ ಬಗೆಬಗೆಯ ಹಣ್ಣುಗಳು ಸೃಷ್ಟಿಯಾಗುತ್ತವೆ. ಕಲ್ಲಂಗಡಿ, ಕರಬೂಜ, ಅನಾನಸ್, ಕಿತ್ತಳೆ, ಮೋಸಂಬಿ, ಬೇಲದ ಹಣ್ಣು... ಹೀಗೆ ವೈವಿಧ್ಯಮಯ ಫಲಗಳು ಬೆಳೆಯುತ್ತವೆ. ಹಣ್ಣಿನ ಸಾಂಗತ್ಯ ಬೆಳೆಸಿದರೆ ದೇಹದ ಬಳಲಿಕೆಯನ್ನು ದೂರ ತಳ್ಳಬಹುದು. ಅಂತೆಯೇ ಬಗೆಬಗೆಯ ಜ್ಯೂಸ್‌ಗಳು ರುಚಿಮೊಗ್ಗು ಅರಳಿಸುತ್ತವೆ. ಆರೋಗ್ಯವರ್ಧಕ, ರುಚಿಕರವಾದ ಈ ಜ್ಯೂಸ್‌ಗಳನ್ನು ಹೀಗೆ ಮಾಡಿನೋಡಿ.

ಕರಬೂಜ ಜ್ಯೂಸ್

ಬೇಸಿಗೆಯಲ್ಲಿ ಗಲ್ಲಿಗಲ್ಲಿಗಳಲ್ಲೂ ಠಿಕಾಣಿ ಹೂಡುವ ಕರಬೂಜ (ಮಸ್ಕ್‌ಮೆಲನ್) ಪೋಷಕಾಂಶಗಳ ಆಗರ. ಇದು ದೇಹದ ನೀರಿನಂಶವನ್ನು ಉದ್ದೀಪಿಸುವುದಲ್ಲದೆ, ಮನಸ್ಸನ್ನೂ ರಿಫ್ರೆಶ್ ಮಾಡುತ್ತದೆ. ಬಿಸಿಲಲ್ಲಿ ಹೊರಗಿನಿಂದ ಮನೆಗೆ ಬಂದಾಗ ಈ ಜ್ಯೂಸ್ ಮಾಡಿ ಕುಡಿದರೆ ಮನಸ್ಸು ಚೇತೋಹಾರಿ ಆಗುತ್ತದೆ.

ಹೀಗೆ ಮಾಡಿ: ಒಂದು ಕರಬೂಜದ ಹಣ್ಣಿನಲ್ಲಿ ಮೂರು ಜನರಿಗೆ ಆಗುವಷ್ಟು ಜ್ಯೂಸ್ ಮಾಡಬಹುದು. ಹಣ್ಣಿನ ಒಳಭಾಗವನ್ನು ಬೀಜದ ಸಮೇತ ತೆಗೆದು ಮಿಕ್ಸಿ ಜಾರ್‌ಗೆ ಹಾಕಿ. ಅದಕ್ಕೆ ಸ್ವಲ್ಪ ಹಾಲು, ಒಂದೆರಡು ಗೋಡಂಬಿ, ಬಾದಾಮಿ ಹಾಕಿ ರುಬ್ಬಬೇಕು. ಬಳಿಕ ಅದನ್ನು ಲೋಟಕ್ಕೆ ಹಾಕಿ (ಬೇಕೆಂದರೆ ಒಂದೆರಡು ಐಸ್ ಕ್ಯೂಬ್ ಹಾಕಬಹುದು) ಮೇಲೆ ಒಂದು ಚಮಚ ನೆನೆಸಿಟ್ಟ ಚಿಯಾ ಸೀಡ್ಸ್, ಸಣ್ಣಗೆ ಹೆಚ್ಚಿದ ಗೋಡಂಬಿ, ಬಾದಾಮಿ, ಪಿಸ್ತಾ ಉದುರಿಸಿದರೆ ಕರಬೂಜ ಜ್ಯೂಸ್ ಸವಿಯಲು ಸಿದ್ಧ. ಮೇಲೊಂದಿಷ್ಟು ವೆನಿಲಾ ಐಸ್‌ಕ್ರೀಮ್ ಹಾಕಿದರೆ ಮಕ್ಕಳಿಗೂ ಖುಷಿ, ದೇಹಕ್ಕೂ ತಂಪು.

ಹೆಸರುಕಾಳಿನ ಜ್ಯೂಸ್



ಹೆಸರುಕಾಳು ತಂಪು ನೀಡುವ, ಪೌಷ್ಟಿಕಾಂಶಯುಕ್ತ ಧಾನ್ಯಗಳಲ್ಲೊಂದು. ರಾತ್ರಿ ನೆನೆಸಿಟ್ಟು ಬೆಳಿಗ್ಗೆ ಮಕ್ಕಳಿಗೆ ತಿನ್ನಲು ಕೊಟ್ಟರೆ ದೂರ ಸರಿಸುವವರೇ ಹೆಚ್ಚು. ಅದೇ ಕಾಳನ್ನು ಜ್ಯೂಸ್ ರೀತಿ ಮಾಡಿಕೊಟ್ಟರೆ ಆರಾಮಾಗಿ ಹೊಟ್ಟೆಗಿಳಿಯುತ್ತದೆ. ಈ ಕಾಳನ್ನು ನೆನೆಸಿಟ್ಟು ಅಥವಾ ಒಣ ಕಾಳುಗಳನ್ನು ಹುರಿದೂ ಜ್ಯೂಸ್ ತಯಾರಿಸಬಹುದು.

ಹೀಗೆ ಮಾಡಿ: ಎರಡು ಬಟ್ಟಲು ಹೆಸರುಕಾಳನ್ನು ಚೆನ್ನಾಗಿ ತೊಳೆದು ನೀರು ಬಸಿದು ಬಾಣಲೆಯಲ್ಲಿ ಪರಿಮಳ ಬರುವವರೆಗೂ ಹುರಿಯಬೇಕು. ಇದರ ಜೊತೆಗೇ ನಾಲ್ಕೈದು ಬಾದಾಮಿ ಹಾಕಿ ಹುರಿಯಬೇಕು. ಬಳಿಕ ತಣಿಯಲು ಬಿಟ್ಟು, ಮಿಕ್ಸಿ ಜಾರ್‌ಗೆ ಹುರಿದಿಟ್ಟುಕೊಂಡ ಹೆಸರುಕಾಳು ಹಾಗೂ ಬಾದಾಮಿ ಹಾಕಿ ಅದಕ್ಕೆ ಸ್ವಲ್ಪ ಹಸಿಕೊಬ್ಬರಿ ತುರಿ, ಒಂದು ಬಟ್ಟಲು ಬೆಲ್ಲ, ಎರಡು ಏಲಕ್ಕಿ, ಸ್ವಲ್ಪ ನೀರು ಸೇರಿಸಿ ರುಬ್ಬಿಕೊಳ್ಳಿ. ಬಳಿಕ ಒಂದು ಪಾತ್ರೆಗೆ ಹಾಕಿ ಜ್ಯೂಸ್‌ಗೆ ಅಗತ್ಯವಿರುವಷ್ಟು ನೀರು, ಒಂದು ಲೋಟ ತಣ್ಣಗಿನ ಹಾಲು ಸೇರಿಸಿ ಮಿಕ್ಸ್ ಮಾಡಿ ಸವಿಯಬಹುದು. ಒಂದು ಗಂಟೆ ಫ್ರಿಜ್‌ನಲ್ಲಿಟ್ಟು ಅಥವಾ ಮಣ್ಣಿನ ಪಾತ್ರೆಯಲ್ಲಿ ಹಾಕಿಟ್ಟು ಸವಿದರೆ ರುಚಿ ಹೆಚ್ಚು. ಮೇಲೊಂದಿಷ್ಟು ಸಣ್ಣಗೆ ಹೆಚ್ಚಿದ ಒಣ ಹಣ್ಣು ಅಥವಾ ಚಿಯಾ ಸೀಡ್ಸ್ ಹಾಕಿಯೂ ಕುಡಿಯಬಹುದು.



ಬೇಲದ ಹಣ್ಣಿನ ಪಾನಕ

ಹೇರಳ ಪೌಷ್ಟಿಕಾಂಶವಿರುವ, ಪಿತ್ತಶಮನಕಾರಿ, ಅತಿ ಸುಲಭದಲ್ಲಿ ಮಾಡಬಹುದಾದ ಬೇಲದ ಹಣ್ಣಿನ ಜ್ಯೂಸ್ ದೇಹವನ್ನು ತಂಪಾಗಿಡಲು ಸಹಕಾರಿ. ಆಗೆಲ್ಲ ಗ್ರಾಮೀಣ ಭಾಗದಲ್ಲಿ ಸುಲಭದಲ್ಲಿ ಸಿಗುತ್ತಿದ್ದ ಬೇಲದ ಹಣ್ಣು ನಿಧಾನವಾಗಿ ಮರೆಯಾಗುತ್ತಿದೆ. ಬೇಸಿಗೆ ಸಮಯದಲ್ಲಿ ಮಾರುಕಟ್ಟೆಗೆ ಲಗ್ಗೆ ಇಡುವ ಬೇಲದ ಹಣ್ಣನ್ನು ತಂದು ಈ ಜ್ಯೂಸ್ ಮಾಡಿ ಸವಿಯಿರಿ.

ಹೀಗೆ ಮಾಡಿ: ಮಧ್ಯಮ ಗಾತ್ರದ ಎರಡು ಬೇಲದ ಹಣ್ಣುಗಳನ್ನು ಒಡೆದು , ತಿರುಳನ್ನು ತೆಗೆದು ಮಿಕ್ಸಿ ಜಾರ್‌ಗೆ ಹಾಕಬೇಕು. ಬಳಿಕ ರುಚಿಗೆ ಅಗತ್ಯವಿರುವಷ್ಟು ಬೆಲ್ಲ, ಒಂದು ಏಲಕ್ಕಿ, ಸ್ವಲ್ಪ ಉಪ್ಪು, ನೀರು ಹಾಕಿ ರುಬ್ಬಿಕೊಳ್ಳಬೇಕು. ಬಳಿಕ ಅದನ್ನು ಸೋಸಿ ಜ್ಯೂಸ್‌ಗೆ ಅಗತ್ಯವಿರುವಷ್ಟು ನೀರು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ ಕುಡಿಯಬಹುದು.



- ಅಡುಗೆಯಲ್ಲಿ ಹೆಸರುಕಾಳು, ಮೆಂತ್ಯೆ ಕಾಳಿನ ಬಳಕೆಯನ್ನು ಬೇಸಿಗೆಯಲ್ಲಿ ಹೆಚ್ಚಿಸಿದರೆ ಒಳಿತು.
- ವಿಟಮಿನ್ 'ಸಿ' ಅಂಶ ಹೇರಳವಾಗಿರುವ ನಿಂಬೆಹಣ್ಣು, ಬೆಟ್ಟದ ನೆಲ್ಲಿಕಾಯಿ, ಜೀರ್ಣಕ್ರಿಯೆಗೆ ಸಹಕರಿಸುವ ಪುದೀನವನ್ನು ಹೆಚ್ಚು ಬಳಸಿ.
- ನೀರಿನ ಬಾಟಲ್‌ಗೆ ಸ್ವಲ್ಪ ಪುದೀನ, ಸ್ವಲ್ಪ ಹೆಸರು ಕಾಳು, ಮೆಂತ್ಯೆ ಕಾಳು ಹಾಕಿಟ್ಟು ಆ ನೀರನ್ನು ಕುಡಿಯುತ್ತಿದ್ದರೆ ದೇಹದ ಉಷ್ಣಾಂಶವನ್ನು ದೂರಮಾಡಬಹುದು.



ಪುದೀನ ಜ್ಯೂಸ್

ಔಷಧೀಯ ಗುಣವುಳ್ಳ, ಸುಗಂಧಭರಿತ ಪುದೀನ ಜೀರ್ಣಕ್ರಿಯೆಗೆ ಹೆಚ್ಚು ಸಹಕಾರಿ. ಬೇಸಿಗೆಯಲ್ಲಿ ದೇಹದ ಜೀರ್ಣಕ್ರಿಯೆ ನಿಧಾನವಾಗಿರುತ್ತದೆ. ಹೊಟ್ಟೆ ಬಿರಿಯ ತಿಂದರೆ ಜೀರ್ಣಿಸಿಕೊಳ್ಳುವುದು ಕಷ್ಟ. ಆಗ ಪುದೀನ ಜ್ಯೂಸ್ ಮಾಡಿ ಸವಿಯಿರಿ. ಅಲ್ಲದೆ, ಕಾಡುವ ಶೀತ, ಕೆಮ್ಮಿಗೂ ಇದು ಉಪಶಮನಕಾರಿ.

ಹೀಗೆ ಮಾಡಿ: ಒಂದು ಬಟ್ಟಲು ಪುದೀನ ಎಲೆಗಳನ್ನು ಮಿಕ್ಸಿಗೆ ಹಾಕಿ ಅದಕ್ಕೆ ಸ್ವಲ್ಪ ಬೆಲ್ಲ, ಒಂದು ಇಂಚಿನಷ್ಟು ಶುಂಠಿ, ಒಂದು ನಿಂಬೆಹಣ್ಣಿನ ರಸ ಹಿಂಡಿ ರುಬ್ಬಿಕೊಳ್ಳಬೇಕು. ಬಳಿಕ ಒಂದು ಪಾತ್ರೆಗೆ ಹಾಕಿ, ಮೊದಲೇ ನೆನೆಸಿಟ್ಟ ಚಿಯಾ ಸೀಡ್ಸ್ ಹಾಕಿದರೆ ಪುದೀನ ಜ್ಯೂಸ್ ಸವಿಯಲು ಸಿದ್ಧ.

ಗೋಡೆಗಳಂತೆ ಬದುಕುವುದೇಕೆ?

• ಚಂದ್ರಶೇಖರ ಎಸ್. ಚಿನಕೇಕರ

ಭಾವಯಾನ

'ಟಕ್ ಟಕ್' ಬಾಗಿಲು ಬಡಿದ ಶಬ್ದ.

'ಯಾರ್ ಬಂದಿದ್ದಾರೆ ನೋಡೋ ಪುಟ್ಟಾ?'

ಸೋಫಾ ಮೇಲೆ ಕುಳಿತು ಮೊಬೈಲ್ ನೋಡುತ್ತಿದ್ದ 13 ವರ್ಷದ ಅವಿನಾಶ ಬಾಗಿಲು ತೆರೆದ.

'ಅಮ್ಮಾ ಯಾರೋ ಇಬ್ರು ಬಂದಿದಾರೆ' ಎಂದು ಕೂಗಿ ಹೇಳಿ ಮತ್ತೆ ಸೋಫಾದತ್ತ ಓಡಿಹೋಗಿ ಮೊಬೈಲ್ ಹಿಡಿದು ಕುಳಿತ.

*****

'ಪದ್ದು... ಪದ್ದು... ಯಾರಿದ್ದೀರಿ ಮನೇಲಿ?' ಎನ್ನುತ್ತಾ ಅಮಿತ ಮತ್ತು ಉಜ್ವಲಾ ಮುಚ್ಚಿದ್ದ ಬಾಗಿಲನ್ನು ಮುಂದಕ್ಕೆ ತಳ್ಳುತ್ತಿರುವಾಗಲೇ, ಅಲ್ಲೇ ಅಂಗಳದಲ್ಲಿ ಸ್ನೇಹಿತರೊಟ್ಟಿಗೆ ಆಟವಾಡುತ್ತಿದ್ದ 11 ವರ್ಷದ ಹರ್ಷಿತಾ 'ಯಾರ್ ಬೇಕು?' ಎಂದು ಬಂದವರನ್ನು ಮರುಪ್ರಶ್ನಿಸಿದಳು.

'ಪದ್ಮಜಾ ಇಲ್ವಾ?' ಎಂದು ಕೇಳಿದ್ದಕ್ಕೆ 'ಅಮ್ಮ ಮಾರ್ಕೆಟ್‌ಗೆ ಹೋಗಿದ್ದಾಳೆ' ಎಂದು ಹೇಳಿ, ಮರುಮಾತನಾಡದೇ ಮತ್ತೆ ಆಟದಲ್ಲಿ ತಲ್ಲೀನಳಾದಳು.

*****

'ಅತಿಥಿ ದೇವೋಭವ' ಎಂಬ ಸಂಸ್ಕೃತಿಯನ್ನು ಹೊಂದಿರುವ ನಮ್ಮಲ್ಲಿ, ಮನೆಗೆ ಬರುವ ಅತಿಥಿಗಳನ್ನು ಈಗಿನ ಮಕ್ಕಳು 'ಸ್ವಾಗತಿಸುವ' ಈ ಪರಿ, ಬಂದವರ ಮನಸ್ಸನ್ನು ಗಾಸಿಗೊಳಿಸದೇ ಇರದು. ಹೀಗಾದಾಗ, ಅತಿಥಿಗಳ ಆಗಮನದಿಂದ ಸಂಬಂಧಗಳು ಗಟ್ಟಿಯಾಗುವ ಬದಲು, ಚೆನ್ನಾಗಿರುವ ಸಂಬಂಧದಲ್ಲಿ ಬಿರುಕು ಮೂಡುವುದೇ ಹೆಚ್ಚು.

ಯಾಕೆ ಹೀಗೆ? ಹತ್ತಿಪ್ಪತ್ತು ವರ್ಷಗಳ ಹಿಂದೆ ಹೀಗಿರಲಿಲ್ಲ. ಯಾರೇ ಮನೆಗೆ ಬಂದರೂ ಮಕ್ಕಳು ಅವರನ್ನು ವಿನಯದಿಂದ ಮಾತನಾಡಿಸಿ, 'ಬನ್ನಿ, ಕುಳಿತುಕೊಳ್ಳಿ', 'ನೀರು ತಗೊಳ್ಳಿ', 'ಅಪ್ಪ–ಅಮ್ಮ ಬರ್ತಾರೆ ಕೂತಿರಿ' ಎಂದೆಲ್ಲ ಹೇಳಿ ಅತಿಥಿ ಸತ್ಕಾರ ಮಾಡುತ್ತಿದ್ದರು.

ಆದರೆ ಈಗ ಹೀಗಾಗಿದ್ದೇಕೆ ನಮ್ಮ ಜೀವನಶೈಲಿ? ಕಚೇರಿಯ ಕೆಲಸದ ಒತ್ತಡದಿಂದ ಬಳಲಿ ಬಂದ ತಂದೆ, ಮನೆಯಲ್ಲಿ ಬಿಡುವಿಲ್ಲದಷ್ಟು ಕೆಲಸದಲ್ಲಿ ತೊಡಗಿಕೊಳ್ಳುವ ತಾಯಿ, ಶಾಲೆಯಲ್ಲಿ ಕೊಟ್ಟ ಹೋಂವರ್ಕ್ ಮಾಡುವುದರಲ್ಲಿ ಮುಳುಗಿಹೋಗುವ ಮಕ್ಕಳು... ಹೀಗಾಗಿ, ಮನೆಯಲ್ಲಿ ಎಲ್ಲರೂ ಯಾವಾಗಲೂ ಬ್ಯುಸಿ, ಬ್ಯುಸಿ.

ಹಾಗಿದ್ದರೆ ಬದುಕೆಂದರೆ ಇಷ್ಟೆಯೇ? ಇದರಿಂದ ಏನು ಲಾಭ? ಶಾಲೆಯಲ್ಲಿ ಮಾಡುವುದನ್ನು ಹೋಂವರ್ಕ್ ಅಂತ ಮನೆಯಲ್ಲಿ ಮಾಡುವುದು, ಆಫೀಸಿನಲ್ಲಿ ಮಾಡಬೇಕಾದ ಕೆಲಸವನ್ನು ವರ್ಕ್ ಫ್ರಂ ಹೋಮ್ ಎಂದು ಮನೆಯಲ್ಲಿ ಮಾಡುವುದೇ ಆದರೆ ಅದನ್ನು ಮನೆ ಎಂದು ಕರೆಯಬೇಕು ಯಾಕೆ ಅನ್ನುವ ಪ್ರಶ್ನೆ ಮೂಡದೇ ಇರದು.

ಮನೆ ಅಂದರೆ ಅದಕ್ಕೆ ನಾಲ್ಕು ಗೋಡೆಗಳಿರುತ್ತವೆ. ಆದರೆ ಅಲ್ಲಿ ಇರುವ ನಾಲ್ಕು ಜನ ಗೋಡೆಗಳ ರೀತಿ ಇರಬಾರದು. ಗೋಡೆಗಳಿಗೆ ಜೀವ ಇಲ್ಲ, ಅವು ಮಾತಾಡುವುದಿಲ್ಲ. ಜೀವ ಇದ್ದವರು ಗೋಡೆಗಳಂತೆ ಬದುಕುವುದು ಜೀವನ ಅಲ್ಲ. ಅತಿಥಿ ಸತ್ಕಾರ ಮಾಡುವುದನ್ನು ಮಕ್ಕಳಿಗೆ ತಂದೆ–ತಾಯಿ ಹೇಳಿಕೊಡಬೇಕು. ಶಾಲೆಯಲ್ಲಿ ಶಿಕ್ಷಕರು ಪಾಠದೊಂದಿಗೆ ನೈತಿಕ ಶಿಕ್ಷಣ ನೀಡುವುದು ಅವಶ್ಯ. ಮೊಬೈಲ್ ಗೀಳು, ಟಿ.ವಿ. ಗೀಳು ಬಿಟ್ಟು, ಒಂದಿಷ್ಟು ಒಳ್ಳೆ ಪುಸ್ತಕ, ನಿಯತಕಾಲಿಕ, ಪತ್ರಿಕೆಗಳನ್ನು ತಾವೂ ಓದಿ ಮಕ್ಕಳಿಗೂ ಓದಲು ಹೇಳಿ. ಇದನ್ನು ನಾನು ಖುದ್ದಾಗಿ ಮಾಡಿ ಹೇಳುತ್ತಿದ್ದೇನೆ. ಹೀಗೆ ಮಾಡಿದರೆ ಮನೆಗೆ ಬಂದ ಅತಿಥಿಗಳಿಗೂ ಖುಷಿ, ನಮಗೂ ಖುಷಿ ಆಗಿಯೇ ಆಗುತ್ತದೆ.







ಕರ್ನಾಟಕ ಮಾಧ್ಯಮ ಅಕಾಡೆಮಿ ಶುಕ್ರವಾರ ಹಮ್ಮಿಕೊಂಡಿದ್ದ 2025ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪತ್ರಕರ್ತೆ ಸರಿತಾ ರೈ ಅವರಿಗೆ ವಿಶೇಷ ಪ್ರಶಸ್ತಿಯನ್ನು ಸಿದ್ದರಾಮಯ್ಯ ಪ್ರದಾನ ಮಾಡಿದರು. ರಿಜ್ವಾನ್ ಅರ್ಷದ್, ಬಿ.ಬಿ.ಕಾವೇರಿ, ಆಯೇಶಾ ಖಾನಂ ಹಾಜರಿದ್ದರು ಪ್ರಜಾವಾಣಿ ಚಿತ್ರ

ಪತ್ರಕರ್ತರು ವೃತ್ತಿ ಧರ್ಮ ಪಾಲಿಸಲಿ: ಸಿ.ಎಂ

ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಗುಂಪು, ಒಂದು ಸಿದ್ಧಾಂತಕ್ಕೆ ಮಾರುಹೋಗದೇ ಸಮಾಜವನ್ನು ಜಾಗೃತಗೊಳಿಸುತ್ತಾ ವೃತ್ತಿ ಧರ್ಮವನ್ನು ಪಾಲಿಸುವವರೇ ನಿಜವಾದ ಪತ್ರಕರ್ತರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಶುಕ್ರವಾರ ಹಮ್ಮಿಕೊಂಡಿದ್ದ 2025ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಾಜ ಮತ್ತು ಸರ್ಕಾರದ ನಡುವೆ ಸೇತುವೆಯಾಗಿ ಕೆಲಸ ಮಾಡುವವರು ಪತ್ರಕರ್ತರು. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸರ್ಕಾರ ಸ್ಪಂದಿಸುತ್ತಿದೆಯೇ ಎಂಬುದನ್ನು ಗಮನಿಸುವುದು, ಸ್ಪಂದಿಸದೇ ಇದ್ದಾಗ ಎಚ್ಚರಿಸುವುದು ಪತ್ರಕರ್ತರ ಕರ್ತವ್ಯ ಎಂದರು.

'ಜನರಿಗೆ ತಲುಪಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡಿದ್ದರಿಂದಲೇ ಗಾಂಧೀಜಿ, ಅಂಬೇಡ್ಕರ್ ಪತ್ರಕರ್ತರಾಗಿದ್ದರು. ಸರ್ಕಾರವನ್ನು ಟೀಕೆ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಸುಳ್ಳು ಸುದ್ದಿಗಳನ್ನು ಹರಡಿ ಟೀಕೆ ಮಾಡಬೇಡಿ. ಸತ್ಯವನ್ನು ಮುಂದಿಟ್ಟು ಟೀಕೆ ಮಾಡಿ' ಎಂದರು.

ಶಾಸಕ ರಿಜ್ವಾನ್ ಅರ್ಷದ್, 'ವಿಶ್ವದ ಮಾಧ್ಯಮ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ನಾವು ಕೆಳಗೆ ಇಳಿಯುತ್ತಿರುವುದು ಆತಂಕಕಾರಿ ವಿಚಾರ. ಧೈರ್ಯದಿಂದ ಕೆಲಸ ಮಾಡಿ ಸತ್ಯ ಹೇಳುವ ಪತ್ರಕರ್ತರು ಜೈಲು ಶಿಕ್ಷೆ ಅನುಭವಿಸುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಶಾ ಖಾನಂ, 'ಅಕಾಡೆಮಿಯು ವಾರ್ಷಿಕವಾಗಿ 31 ಪ್ರಶಸ್ತಿಗಳನ್ನು ನೀಡುತ್ತಿದೆ. ಇದನ್ನು ಹೆಚ್ಚಳ ಮಾಡುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಮುಂದಿನ ವರ್ಷದಿಂದ 35 ಪ್ರಶಸ್ತಿಗಳನ್ನು ನೀಡುವ ಗುರಿ ಇದೆ. ಕಲ್ಯಾಣ ಕರ್ನಾಟಕ ಕೋಶ ಮಾಡುವ ಉದ್ದೇಶ ಕೂಡ ಇದೆ' ಎಂದರು.

ಪತ್ರಕರ್ತೆ ಸರಿತಾ ರೈ ಅವರಿಗೆ ವಿಶೇಷ ಪ್ರಶಸ್ತಿ, 'ಸುಧಾ' ವಾರ ಪತ್ರಿಕೆಯ ಮುಖ್ಯ ಉಪಸಂಪಾದಕಿ ಉಮಾ ಅನಂತ್ ಸೇರಿ 20 ಜನರಿಗೆ ವಾರ್ಷಿಕ ಪ್ರಶಸ್ತಿ, 'ಪ್ರಜಾವಾಣಿ'ಯ ಬೆಳಗಾವಿ ಜಿಲ್ಲಾ ವರದಿಗಾರ ಸಂತೋಷ ಈ ಚಿನಗುಡಿ ಸೇರಿ 10 ಜನರಿಗೆ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಾಹಿತಿ ಹಂಪ ನಾಗರಾಜಯ್ಯ, ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ವಾರ್ತಾ ಇಲಖೆಯ ಕಾರ್ಯದರ್ಶಿ ಬಿ.ಬಿ. ಕಾವೇರಿ, ವಾರ್ತಾ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಉಪಸ್ಥಿತರಿದ್ದರು.



ಸಮಾರಂಭದಲ್ಲಿ ಎಚ್.ಎಲ್.ಪುಷ್ಪ ಮತ್ತು ಎನ್.ರತ್ನಮ್ಮ ಅವರಿಗೆ 'ರಾಜಲಕ್ಷ್ಮೀ ಬರಗೂರು ಪ್ರಶಸ್ತಿ' ಪ್ರದಾನ ಮಾಡಲಾಯಿತು. ಆಕಾಂಕ್ಷ್, ಮೈತ್ರಿ ಬರಗೂರು, ಬರಗೂರು ರಾಮಚಂದ್ರಪ್ಪ, ಬಿ.ರಮೇಶ್, ರಾಜಪ್ಪ ದಳವಾಯಿ ಮತ್ತು ಲೋಲಾಕ್ಷಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಯುದ್ಧದ ಪರಿಣಾಮ ಅಪಾಯಕಾರಿ: ಲೋಲಾಕ್ಷಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲೋ ದೂರದಲ್ಲಿ ನಡೆಯುತ್ತಿರುವ ಯುದ್ಧ ನಮಗೆ ಸಂಬಂಧವಿಲ್ಲ ಎನ್ನುವಂತಿಲ್ಲ. ಈಗಾಗಲೇ ಯುದ್ಧದ ಪರಿಣಾಮವನ್ನು ಎಲ್‌ಪಿಜಿ ಸಿಲಿಂಡರ್ ಕೊರತೆಯ ಮೂಲಕ ಎದುರಿಸುತ್ತಿದ್ದೇವೆ' ಎಂದು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಲೋಲಾಕ್ಷಿ ಹೇಳಿದರು.

ನಾಡೋಜ ಡಾ. ಬರಗೂರು ಪ್ರತಿಷ್ಠಾನ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಲೇಖಕಿ ಎಚ್.ಎಲ್. ಪುಷ್ಪ ಹಾಗೂ ಆದಿವಾಸಿ ಸಮುದಾಯದ ಸಾಧಕಿ ಎಸ್. ರತ್ನಮ್ಮ ಅವರಿಗೆ 'ಶ್ರೀಮತಿ ರಾಜಲಕ್ಷ್ಮೀ ಬರಗೂರು ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು. ಈ ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ.

'ಸಾವನ್ನು ಸಂಭ್ರಮಿಸುವಂತಹ ಮನಸ್ಥಿತಿಯನ್ನು ಕಾಣುತ್ತಿದ್ದೇವೆ. ಎಷ್ಟು ಮಂದಿಯನ್ನು ಯಾರು ಸಾಯಿಸುತ್ತಾರೆ ಎನ್ನುವುದರ ಆಧಾರದ ಮೇಲೆ ಆ ದೇಶದ ಶಕ್ತಿಯನ್ನು ಅಳೆಯುತ್ತಿದ್ದೇವೆ. ಯುದ್ಧದ ಪರಿಣಾಮ ಎಲ್ಲೆಡೆ ವ್ಯಾಪಿಸುವ ಸಾಧ್ಯತೆಯಿದೆ. ಆದ್ದರಿಂದ ಮೈಮರೆತು ಕುಳಿತುಕೊಳ್ಳುವ ಸಂದರ್ಭದಲ್ಲಿ ನಾವಿಲ್ಲ. ಯುದ್ಧದ ವೇಳೆ ಹೊರಹೊಮ್ಮುವ ವಿಷಾನಿಲ ವಾತಾವರಣ ಸೇರಿಕೊಂಡ ಬಳಿಕ, ಅದು ಗಾಳಿಯ ಮೂಲಕ ಇಲ್ಲಿಗೆ ಬರಲು ಬಹಳ ಸಮಯಬೇಕಿಲ್ಲ. ಅಂತಹ ವಿಷಾನಿಲ ನಮ್ಮ ಮಿದುಳಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆಯಿರುತ್ತದೆ. ಹಾಗಾಗಿ, ನಾವೆಲ್ಲ ನಿಷ್ಕ್ರಿಯವಾಗುವ ಮೊದಲು ಎಚ್ಚೆತ್ತುಕೊಳ್ಳಬೇಕು' ಎಂದರು.

'ಶಾನುಭೋಗರ ಮಗಳಾದ ರಾಜಲಕ್ಷ್ಮೀ ಅವರು ಆ ಕಾಲದಲ್ಲಿ ದಲಿತ ಹುಡುಗನನ್ನು ಪ್ರೀತಿಸಿ ಮದುವೆಯಾಗುವುದು ಸುಲಭದ ವಿಚಾರವಾಗಿರಲಿಲ್ಲ. ಅವತ್ತಿನ ಕಾಲಘಟ್ಟಕ್ಕೆ ಅವರು ತೆಗೆದುಕೊಂಡ ನಿರ್ಧಾರ, ಅವರಲ್ಲಿನ ಸಮಾಜ ಎದುರಿಸುವ ಶಕ್ತಿ ಕಾಣಬಹುದು. 21ನೇ ಶತಮಾನದಲ್ಲಿಯೂ ಮರ್ಯಾದಾ ಹತ್ಯೆ ಮಾಡುತ್ತಿರುವಾಗ, ಬರಗೂರು ರಾಮಚಂದ್ರಪ್ಪ ಹಾಗೂ ರಾಜಲಕ್ಷ್ಮೀ ಬರಗೂರು ದಂಪತಿ ಸಮಕಾಲೀನ ಸಂದರ್ಭಕ್ಕೆ ಮುಖ್ಯವಾಗುತ್ತಾರೆ' ಎಂದರು.

ಎಚ್.ಎಲ್.ಪುಷ್ಪ, 'ನೊಂದವರ ಕಷ್ಟಗಳನ್ನು ಆಲಿಸುತ್ತಿದ್ದ ರಾಜಲಕ್ಷ್ಮೀ ಅವರು, ಪ್ರೀತಿಯನ್ನು ಹಂಚುತ್ತಿದ್ದರು' ಎಂದು ಸ್ಮರಿಸಿಕೊಂಡರು.

ಎಸ್. ರತ್ನಮ್ಮ, 'ಬಂಡೀಪುರದ ಅರಣ್ಯದಲ್ಲಿ ಜನಿಸಿದ ನಾನು, ಅನ್ನಕ್ಕಾಗಿ ಶಾಲೆಗೆ ಹೋಗುತ್ತಿದ್ದೆ. ಕಾಡಿನ ಹೆಣ್ಣು ಮಗಳಾದ ನನಗೆ ಓದಿನಲ್ಲಿ ಹಲವರು ನೆರವು ನೀಡಿದ್ದರಿಂದ ಮುಂದೆ ಬರಲು ಸಾಧ್ಯವಾಯಿತು' ಎಂದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಬಿ. ರಮೇಶ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

14 ಎಕರೆ ಸರ್ಕಾರಿ ಜಮೀನು ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ₹62.52 ಕೋಟಿ ಅಂದಾಜು ಮೌಲ್ಯದ ಒಟ್ಟು 14 ಎಕರೆ 10 ಗುಂಟೆ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿ ಜಿ.ಜಗದೀಶ ಅವರ ನೇತೃತ್ವದಲ್ಲಿ ತೆರವುಗೊಳಿಸಲಾಯಿತು.

ತಾಲ್ಲೂಕುಗಳ ತಹಶೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಅಕ್ರಮವಾಗಿ ಒತ್ತುವರಿಯಾಗಿದ್ದ ಸ್ಮಶಾನ, ಸರ್ಕಾರಿ ಕೆರೆ, ಸರ್ಕಾರಿ ಜಾಗ, ಖರಾಬು ತೋಪು ಹಾಗೂ ಸರ್ಕಾರಿ ಕಟ್ಟೆ ಜಾಗಗಳಿಗೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು.

ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ದೊಡ್ಡನೆಕ್ಕುಂದಿ ಗ್ರಾಮದ ಸ.ನಂ 197ರ ಸ್ಮಶಾನ, ಭೋಗನಹಳ್ಳಿ ಗ್ರಾಮದ ಸ.ನಂ 33 ರ ಸ್ಮಶಾನ, ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ತಟಗುಪ್ಪೆ ಗ್ರಾಮದ ಸ.ನಂ 79 ರ ಸರ್ಕಾರಿ ಕೆರೆ, ತಾವರೆಕೆರೆ ಹೋಬಳಿಯ ಹುಲುವೇನಹಳ್ಳಿ ಗ್ರಾಮದ ಸ.ನಂ 8/1ಬಿ ಸರ್ಕಾರಿ ಜಾಗ, ಬೇಗೂರು ಹೋಬಳಿಯ ಸಿಂಗಸಂದ್ರ ಗ್ರಾಮದ ಸ.ನಂ 100 ರ ಸರ್ಕಾರಿ ಕೆರೆ ಒತ್ತುವರಿಯನ್ನು ತೆರವುಗೊಳಿಸಲಾಯಿತು.

ಯಲಹಂಕ ತಾಲ್ಲೂಕಿನ ಹೆಸರಘಟ್ಟ ಹೋಬಳಿಯ ಇಟ್ಟಗಲಾಪುರ ಗ್ರಾಮದ ಸ.ನಂ 38ರ ಸರ್ಕಾರಿ ಕೆರೆ, ಕಾಕೋಳು ಗ್ರಾಮದ ಸ.ನಂ 44ರ ಸರ್ಕಾರಿ ಕೆರೆ, ಜಾಲ ಹೋಬಳಿಯ ಬಾಗಲೂರು ಗ್ರಾಮದ ಸ.ನಂ 311ರ ಖರಾಬು ತೋಪು, ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ವಡೇರಹಳ್ಳಿ ಗ್ರಾಮದ ಸ.ನಂ 12ರ ಸರ್ಕಾರಿ ಕಟ್ಟೆ ಒತ್ತುವರಿಯನ್ನು ತೆರವುಗೊಳಿಸಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ಮಹಿಳಾ ಶಕ್ತಿ ಗೌರವಿಸುವುದು ಆದ್ಯ ಕರ್ತವ್ಯ: ಜಿ.ಆರ್. ಪ್ರದೀಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆಯರನ್ನು ಗೌರವಿಸುವ ಕಾರ್ಯ ಕೇವಲ ಆಚರಣೆಗೆ ಸೀಮಿತವಾಗದೆ, ಸಾಮಾಜಿಕ ಮೌಲ್ಯವಾಗಿ ಪ್ರತಿದಿನವೂ ಅಳವಡಿಸಿಕೊಳ್ಳಬೇಕಾದ ಕರ್ತವ್ಯವಾಗಿದೆ' ಎಂದು ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘದ ರಾಜ್ಯ ಘಟಕದ ಅಧ್ಯಕ್ಷ ಜಿ.ಆರ್. ಪ್ರದೀಪ್ ಅಭಿಪ್ರಾಯಪಟ್ಟರು.

ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ ಬೆಂಗಳೂರು ದಕ್ಷಿಣ ಮಹಿಳಾ ಘಟಕದ ವತಿಯಿಂದ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ಮಹಿಳಾ ಶಕ್ತಿಯನ್ನು ಗೌರವಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.' ಎಂದು ಹೇಳಿದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಶ್ವನಾಥ ಜೋಶಿ, 'ಸಂಘಟನೆಯನ್ನು ಇನ್ನಷ್ಟು ಬಲಪಡಿಸುವ ಕಾರ್ಯವಾಗಬೇಕಿದೆ. ಎಲ್ಲ ವಲಯಗಳಲ್ಲೂ ಪದಾಧಿಕಾರಿಗಳ ಸಂಖ್ಯೆ ಹೆಚ್ಚಾಗಬೇಕು. ಸದಸ್ಯರ ನೋಂದಣಿ ಪ್ರಕ್ರಿಯೆಯನ್ನು ವೇಗಗೊಳಿಸುವ ಉದ್ದೇಶದಿಂದ ಶೀಘ್ರದಲ್ಲೇ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಲಾಗುವುದು' ಎಂದರು.

ಕಾರ್ಯಕ್ರಮದ ಅಂಗವಾಗಿ ಸಾಮೂಹಿಕ ಮಹಾಲಕ್ಷ್ಮಿ ಪೂಜೆ ಹಾಗೂ ಕುಂಕುಮಾರ್ಚನೆಯನ್ನು ಭಕ್ತಿಭಾವದಿಂದ ನೆರವೇರಿಸಲಾಯಿತು. ಶಿಕ್ಷಣ, ಸಾಮಾಜಿಕ ಸೇವೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರನ್ನು ಗೌರವಿಸಲಾಯಿತು.

ಸಂಘದ ಬೆಂಗಳೂರು ದಕ್ಷಿಣ ಘಟಕದ ಅಧ್ಯಕ್ಷೆ ಪೂರ್ಣಿಮಾ, ರಾಜ್ಯ ಯುವ ಘಟಕದ ಅಧ್ಯಕ್ಷ ಕಾರ್ತಿಕ್ ಸೋಮಯಾಜಿ, ರಾಜ್ಯ ಉದ್ಯಮ ವಿಭಾಗದ ಅಧ್ಯಕ್ಷ ಶ್ರೀಧರ, ಬೆಂಗಳೂರು ದಕ್ಷಿಣ ಮಹಿಳಾ ಘಟಕದ ಅಧ್ಯಕ್ಷೆ ಜಯಶ್ರೀ ಸೂರ್ಯನಾರಾಯಣ ಉಪಸ್ಥಿತರಿದ್ದರು.

50 ವಿಭಾಗ, 150 ಉಪ ವಿಭಾಗ ರಚನೆ

ಐದು ನಗರ ಪಾಲಿಕೆಗಳ ಹೊಸ ವಾರ್ಡ್‌ನಂತೆ ಪುನರ್ ವಿಂಗಡಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ನಗರ ಪಾಲಿಕೆಗಳ 369 ವಾರ್ಡ್‌ಗಳ ಪುನರ್ ವಿಂಗಡಣೆಯ ಆಧಾರದಲ್ಲಿ 50 ವಿಭಾಗ ಹಾಗೂ 150 ಉಪ ವಿಭಾಗಗಳನ್ನು ರಚಿಸಿ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಆದೇಶಿಸಿದ್ದಾರೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ, ಪೂರ್ವ ನಗರ ಪಾಲಿಕೆ, ಪಶ್ಚಿಮ ನಗರ ಪಾಲಿಕೆ, ಉತ್ತರ ನಗರ ಪಾಲಿಕೆ, ದಕ್ಷಿಣ ನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ ವಾರ್ಡ್‌ಗಳ ಪುನರ್ ವಿಂಗಡಣೆಯಾಗಿದೆ. ಆಡಳಿತಾತ್ಮಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ವಿಭಾಗ, ಉಪ ವಿಭಾಗಗಳನ್ನು ರಚಿಸಲಾಗಿದೆ.

ಆನ್‌ಲೈನ್‌ನಲ್ಲೇ ಇ-ಖಾತಾ: ಜಿಬಿಎ ವ್ಯಾಪ್ತಿಯಲ್ಲಿ ಇ-ಖಾತಾ ವಿತರಣೆಯನ್ನು ಸರಳವಾದ ಆನ್‌ಲೈನ್ ಪ್ರಕ್ರಿಯೆಯಲ್ಲಿ ನಡೆಸಲಾಗುತ್ತಿದೆ. ಇದರಿಂದ ನಾಗರಿಕರು ಯಾವುದೇ ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡುವ ಅಗತ್ಯವಿಲ್ಲ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಸ್ಥಳೀಯ ಖಾಸಗಿ ಉದ್ಯಮಿಗಳ ಮೂಲಕ ಇ-ಖಾತಾ ಸೇವೆಗಳ ಕುರಿತ ಮಾಹಿತಿ ನೀಡಿದ ಅವರು, ಇ-ಖಾತಾ ಅರ್ಜಿಗಳನ್ನು ಆನ್‌ಲೈನ್ ಮೂಲಕ ತಪ್ಪಿಲ್ಲದಂತೆ ಸಲ್ಲಿಸಲು ಹಾಗೂ ನಾಗರಿಕರಿಗೆ ಡಿಜಿಟಲ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಹಾಯ ಮಾಡುವಂತೆ ಉದ್ಯಮಿಗಳಿಗೆ ಸೂಚಿಸಿದರು. ನಾಗರಿಕರಿಗೆ ಸರಿಯಾದ ಮಾರ್ಗದರ್ಶನ ನೀಡಿ, ಅವರ ಅರ್ಜಿಗಳು ನಿಖರವಾಗಿ ಸಲ್ಲಿಕೆಯಾಗುವಂತೆ ಸಹಕರಿಸುವುದು ನಿಮ್ಮ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಮನವರಿಕೆ ಮಾಡಿದರು.

ಇ-ಖಾತಾ ಸಂಬಂಧಿತ ವಿಷಯಗಳಿಗೆ ನಾಗರಿಕರು ಅಥವಾ ಎಲ್‌ಪಿಇಗಳು ಯಾವುದೇ ಕಚೇರಿಗಳಿಗೆ ಭೇಟಿ ನೀಡುವ ಅಗತ್ಯವಿಲ್ಲ ಅಥವಾ ಅಧಿಕಾರಿಗಳನ್ನು ನೇರವಾಗಿ ಸಂಪರ್ಕಿಸುವ ಅಗತ್ಯವಿಲ್ಲ. ಇ-ಖಾತಾ ವಿತರಣೆ ಸಂಪೂರ್ಣವಾಗಿ ಆನ್‌ಲೈನ್ ಮೂಲಕ ನಡೆಯುವುದರಿಂದ ಮಧ್ಯವರ್ತಿಗಳೊಂದಿಗೆ ಸಂಪರ್ಕ ಸಾಧಿಸುವುದನ್ನು ತಪ್ಪಿಸಿಕೊಳ್ಳುವಂತೆ ಸೂಚಿಸಲಾಯಿತು. ಸರಾಸರಿ ಮೂರರಿಂದ ನಾಲ್ಕು ಇ-ಖಾತಾ ಅರ್ಜಿಗಳನ್ನು ಅನುಮೋದಿಸಲಾಗುತ್ತಿದೆ ಎಂದು ತಿಳಿಸಿದರು.

ಮಾಹಿತಿ ತಂತ್ರಜ್ಞಾನದ (ಇ-ಆಸ್ತಿ) ಉಪ ಆಯುಕ್ತ ಮದನ್ ಮೋಹನ್ ಸಿ, ಕಂದಾಯ ವಿಭಾಗದ ಜಂಟಿ ಆಯುಕ್ತೆ ಲಕ್ಷ್ಮೀದೇವಿ ಉಪಸ್ಥಿತರಿದ್ದರು.

ಸ್ವಚ್ಛತಾ ವಿಶೇಷ ಅಭಿಯಾನ: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿರಂತರ ಸಾಮೂಹಿಕ ಸ್ವಚ್ಛತೆ ಕಾರ್ಯದಿಂದ ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆ ಹಾಗೂ ಪಾದಚಾರಿ ಒತ್ತುವರಿ ತಡೆಗಟ್ಟಲು ಸಾಧ್ಯವಾಗಿದೆ ಎಂದು ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

144 ಪೌರಕಾರ್ಮಿಕರು ಸಾಮೂಹಿಕ ಸ್ವಚ್ಛತೆ ಕಾರ್ಯದಲ್ಲಿ ಭಾಗಿಯಾಗಿದ್ದು, ಒಟ್ಟು 8.45 ಕಿಲೋಮೀಟರ್ ಸ್ವಚ್ಛಗೊಳಿಸಲಾಗಿದೆ. 6 ಜೆಸಿಬಿ, 31 ಟ್ರ್ಯಾಕ್ಟರ್‌ಗಳ ಬಳಕೆಯೊಂದಿಗೆ ರಸ್ತೆ ಬದಿಗಳಲ್ಲಿ ಸಂಗ್ರಹವಾಗಿದ್ದ 41 ಲೋಡ್ ತ್ಯಾಜ್ಯ ಹಾಗೂ 10 ಬ್ಲ್ಯಾಕ್ ಸ್ಪಾಟ್ ತೆರವುಗೊಳಿಸಲಾಗಿದೆ ಎಂದರು.

ಎಲ್ಲಿ ಎಷ್ಟು?

ಪಾಲಿಕೆ	ವಾರ್ಡ್	ವಿಭಾಗ	ಉಪ ವಿಭಾಗ
ಕೇಂದ್ರ	63	7	24
ಪೂರ್ವ	50	7	22
ಪಶ್ಚಿಮ	112	15	45
ಉತ್ತರ	72	11	30
ದಕ್ಷಿಣ	72	10	29

ಜನಗಣತಿ: ಮತಗಟ್ಟೆಗೆ ಮೂರು ಬ್ಲಾಕ್



ಜನಗಣತಿ 2027ಕ್ಕೆ ಸಂಬಂಧಿಸಿದಂತೆ ನಗರ ಪಾಲಿಕೆಗಳ ಮತಗಟ್ಟೆಗೆ ಮೂರು ಬ್ಲಾಕ್‌ಗಳ ಕಚ್ಚಾ ನಕ್ಷೆ ಸಿದ್ಧಪಡಿಸಿಕೊಳ್ಳಬೇಕು ಎಂದು ಪೂರ್ವ ನಗರ ಪಾಲಿಕೆಯ ಆಯುಕ್ತ ಡಿ.ಎಸ್. ರಮೇಶ್ ಸೂಚಿಸಿದರು.

ಮತಗಟ್ಟೆ ಪಟ್ಟಿವಾರು ತಲಾ 150ರಿಂದ 200 ಮನೆಗಳನ್ನು ಒಳಗೊಂಡ ಮೂರು ಬ್ಲಾಕ್‌ಗಳ ನಕ್ಷೆ ಸಿದ್ಧಪಡಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಗೇಲ್ ಕಂಪನಿಯಿಂದ ರಸ್ತೆ ಕತ್ತರಿಸಲು ಅನುಮತಿ ಕೋರಿ ಒಟ್ಟು 51 ಅರ್ಜಿಗಳು ಸಲ್ಲಿಸಿದ್ದು, ಸಂಬಂಧಪಟ್ಟ ಕಾರ್ಯಪಾಲಕ ಎಂಜಿನಿಯರ್ ಈ ಕೂಡಲೇ ಮಾರ್ಕ್ಸ್ ತಂತ್ರಾಂಶದಲ್ಲಿ ಆದ್ಯತೆ ಮೇರೆಗೆ ವಿಲೇವಾರಿ ಮಾಡಬೇಕು ಎಂದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವಾರ್ಡ್‌ವಾರು ಮೀಸಲಾತಿ

ವಾರ್ಡ್ ಸಂಖ್ಯೆ	ಹೆಸರು	ಮೀಸಲಾತಿ
ದಾಸರಹಳ್ಳಿ ವಿಧಾನಸಭಾ ಕ್ಷೇತ್ರ		
1	ನಾಗಸಂದ್ರ	ಸಾಮಾನ್ಯ
2	ಚೊಕ್ಕಸಂದ್ರ	ಸಾಮಾನ್ಯ (ಮಹಿಳೆ)
3	ನೆಲಗದರನಹಳ್ಳಿ	ಸಾಮಾನ್ಯ (ಮ.)
4	ಪಾರ್ವತಿ ನಗರ	ಸಾಮಾನ್ಯ
5	ರಾಜೇಶ್ವರಿನಗರ	ಸಾಮಾನ್ಯ (ಮ.)
6	ಶಿವಪುರ	ಪರಿಶಿಷ್ಟ ಜಾತಿ
7	ರಾಜಗೋಪಾಲ ನಗರ	ಸಾಮಾನ್ಯ
8	ಹೆಗ್ಗನಹಳ್ಳಿ	ಸಾಮಾನ್ಯ (ಮ.)
9	ಶ್ರೀಗಂಧನಗರ	ಹಿಂದುಳಿದ ವರ್ಗ ಎ
10	ಸುಂಕದಕಟ್ಟೆ	ಸಾಮಾನ್ಯ (ಮ.)
ಯಶವಂತಪುರ ವಿಧಾನಸಭಾ ಕ್ಷೇತ್ರ		
11	ದೊಡ್ಡ ಬಿದರಕಲ್ಲು	ಸಾಮಾನ್ಯ
12	ಅಂದ್ರಹಳ್ಳಿ	ಪರಿಶಿಷ್ಟ ಪಂಗಡ
13	ನಾಡಪ್ರಭು ಕೆಂಪೇಗೌಡ ನಗರ	ಸಾಮಾನ್ಯ
14	ಹೇರೋಹಳ್ಳಿ	ಹಿಂದುಳಿದ ವರ್ಗ ಎ (ಮ.)
15	ಬ್ಯಾಡರಹಳ್ಳಿ	ಹಿಂದುಳಿದ ವರ್ಗ ಎ
16	ಉಲ್ಲಾಳು	ಸಾಮಾನ್ಯ
17	ನಾಗದೇವನಹಳ್ಳಿ	ಸಾಮಾನ್ಯ (ಮ.)
18	ಕೆಂಗಲ್ ಹನುಮಂತಯ್ಯ ಪಶ್ಚಿಮ	ಸಾಮಾನ್ಯ
19	ಶಿವನಪಾಳ್ಯ	ಹಿಂದುಳಿದ ವರ್ಗ ಎ (ಮ.)
20	ಕೆಂಗೇರಿ ಕೋಟೆ ವಾರ್ಡ್	ಹಿಂದುಳಿದ ವರ್ಗ ಎ
21	ಕೆಂಗೇರಿ	ಹಿಂದುಳಿದ ವರ್ಗ ಎ (ಮ.)
ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ		
22	ಬಂಗಾರಪ್ಪ ನಗರ	ಸಾಮಾನ್ಯ
23	ರಾಜರಾಜೇಶ್ವರಿ ನಗರ	ಹಿಂದುಳಿದ ವರ್ಗ ಬಿ (ಮ.)
24	ಜ್ಞಾನ ಭಾರತಿ ವಾರ್ಡ್	ಸಾಮಾನ್ಯ
25	ವಿನಾಯಕ ಲೇಔಟ್	ಹಿಂದುಳಿದ ವರ್ಗ ಎ (ಮ.)
26	ಮಲ್ಲತ್ತಹಳ್ಳಿ	ಹಿಂದುಳಿದ ವರ್ಗ ಎ (ಮ.)
27	ಶ್ರೀಗಂಧದ ಕಾವಲ್	ಹಿಂದುಳಿದ ವರ್ಗ ಎ
28	ಕೊಟ್ಟಿಗೆಪಾಳ್ಯ	ಸಾಮಾನ್ಯ
29	ಚೌಡೇಶ್ವರಿ ನಗರ	ಸಾಮಾನ್ಯ
30	ಕೆಂಪೇಗೌಡ ಬಡಾವಣೆ	ಸಾಮಾನ್ಯ
31	ಫ್ರೀಡಂ ಫೈಟರ್ ವಾರ್ಡ್	ಸಾಮಾನ್ಯ
32	ಲಗ್ಗೆರೆ	ಸಾಮಾನ್ಯ
33	ಲಕ್ಷ್ಮಿ ದೇವಿ ನಗರ	ಪರಿಶಿಷ್ಟ ಜಾತಿ
34	ಪೀಣ್ಯ	ಪರಿಶಿಷ್ಟ ಜಾತಿ (ಮ.)
35	ಗೊರಗುಂಟೆಪಾಳ್ಯ	ಪರಿಶಿಷ್ಟ ಜಾತಿ (ಮ.)
ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ		
36	ನಾಲ್ವಡಿ ಕೃಷ್ಣರಾಜ ಒಡೆಯರ್ ವಾರ್ಡ್	ಪರಿಶಿಷ್ಟ ಜಾತಿ
37	ಡಾ. ಪುನೀತ್ ರಾಜ್‌ಕುಮಾರ್ ವಾರ್ಡ್	ಸಾಮಾನ್ಯ
38	ನಂದಿನಿ ಲೇಔಟ್	ಹಿಂದುಳಿದ ವರ್ಗ ಎ
39	ಜೈ ಮಾರುತಿ ನಗರ	ಸಾಮಾನ್ಯ
40	ಮಹಾಲಕ್ಷ್ಮಿಪುರಂ	ಸಾಮಾನ್ಯ
41	ನಾಗಪುರ	ಸಾಮಾನ್ಯ (ಮ.)
42	ರಾಜ ಮಯೂರ ವರ್ಮ ವಾರ್ಡ್	ಸಾಮಾನ್ಯ (ಮ.)
43	ಕೇತಮಾರನಹಳ್ಳಿ	ಸಾಮಾನ್ಯ (ಮ.)
44	ಶಂಕರ ಮಠ	ಹಿಂದುಳಿದ ವರ್ಗ ಎ
45	ಶಕ್ತಿ ಗಣಪತಿ ನಗರ	ಹಿಂದುಳಿದ ವರ್ಗ ಎ (ಮ.)
46	ಕಮಲಾನಗರ	ಸಾಮಾನ್ಯ (ಮ.)
47	ವೃಷಭಾವತಿ ನಗರ	ಸಾಮಾನ್ಯ (ಮ.)
ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ		
48	ಮತ್ತಿಕೆರೆ	ಹಿಂದುಳಿದ ವರ್ಗ ಎ
49	ಅರಮನೆ ನಗರ	ಸಾಮಾನ್ಯ
50	ಸದಾಶಿವ ನಗರ	ಸಾಮಾನ್ಯ (ಮ.)
51	ರಾಜಮಹಲ್	ಸಾಮಾನ್ಯ
52	ಕೋದಂಡರಾಮಪುರ	ಸಾಮಾನ್ಯ (ಮ.)
53	ಮಲ್ಲೇಶ್ವರ	ಸಾಮಾನ್ಯ (ಮ.)
54	ಸುಬೇದಾರ್‌ಪಾಳ್ಯ	ಸಾಮಾನ್ಯ (ಮ.)
55	ಸುಬ್ರಹ್ಮಣ್ಯನಗರ	ಸಾಮಾನ್ಯ
56	ಗಾಯತ್ರಿ ನಗರ	ಸಾಮಾನ್ಯ (ಮ.)
57	ಕುವೆಂಪು ವಾರ್ಡ್	ಹಿಂದುಳಿದ ವರ್ಗ ಎ
ರಾಜಾಜಿನಗರ ವಿಧಾನಸಭಾ ಕ್ಷೇತ್ರ		
58	ದಯಾನಂದ ನಗರ	ಪರಿಶಿಷ್ಟ ಜಾತಿ (ಮ.)
59	ಬಂಡಿ ರೆಡ್ಡಿ ವೃತ್ತ ವಾರ್ಡ್	ಪರಿಶಿಷ್ಟ ಜಾತಿ
60	ಪ್ರಕಾಶ ನಗರ	ಸಾಮಾನ್ಯ (ಮ.)
61	ದ.ರಾ. ಬೇಂದ್ರೆ ವಾರ್ಡ್	ಹಿಂದುಳಿದ ವರ್ಗ ಬಿ
62	ರಾಮ ಮಂದಿರ	ಸಾಮಾನ್ಯ (ಮ.)
63	ರಾಜಾಜಿನಗರ	ಸಾಮಾನ್ಯ
64	ಶಿವನಗರ	ಸಾಮಾನ್ಯ
65	ಮಂಜುನಾಥ ನಗರ	ಹಿಂದುಳಿದ ವರ್ಗ ಎ
66	ಸಾಣೆ ಗುರುವನ ಹಳ್ಳಿ	ಹಿಂದುಳಿದ ವರ್ಗ ಎ
67	ಬಸವೇಶ್ವರ ನಗರ	ಸಾಮಾನ್ಯ (ಮ.)
68	ಕಾಮಾಕ್ಷಿಪಾಳ್ಯ	ಸಾಮಾನ್ಯ
ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ		
69	ಅಗ್ರಹಾರ ದಾಸರಹಳ್ಳಿ	ಹಿಂದುಳಿದ ವರ್ಗ ಎ (ಮ.)
70	ಡಾ. ರಾಜ್‌ಕುಮಾರ್ ವಾರ್ಡ್	ಸಾಮಾನ್ಯ
71	ತಿಮ್ಮೇನಹಳ್ಳಿ	ಹಿಂದುಳಿದ ವರ್ಗ ಎ
72	ಕಾವೇರಿಪುರ	ಸಾಮಾನ್ಯ (ಮ.)
73	ಡಾ. ವಿಷ್ಣುವರ್ಧನ್ ವಾರ್ಡ್	ಹಿಂದುಳಿದ ವರ್ಗ ಎ (ಮ.)
74	ಪಟ್ಟೇಗಾರ ಪಾಳ್ಯ	ಸಾಮಾನ್ಯ (ಮಹಿಳೆ)
75	ಮಾರೇನಹಳ್ಳಿ ಪಶ್ಚಿಮ	ಹಿಂದುಳಿದ ವರ್ಗ ಎ (ಮ.)
76	ಮೂಡಲಪಾಳ್ಯ	ಹಿಂದುಳಿದ ವರ್ಗ ಎ (ಮ.)
77	ಮಾರುತಿ ಮಂದಿರ ವಾರ್ಡ್	ಹಿಂದುಳಿದ ವರ್ಗ ಬಿ (ಮ.)
78	ಅನುಭವ ನಗರ	ಹಿಂದುಳಿದ ವರ್ಗ ಎ (ಮ.)
79	ನಾಗರಬಾವಿ	ಸಾಮಾನ್ಯ
80	ಚಂದ್ರ ಲೇಔಟ್	ಹಿಂದುಳಿದ ವರ್ಗ ಎ
81	ನಾಯಂಡ ಹಳ್ಳಿ	ಪರಿಶಿಷ್ಟ ಜಾತಿ
ವಿಜಯನಗರ ವಿಧಾನಸಭಾ ಕ್ಷೇತ್ರ		
82	ಅತ್ತಿಗುಪ್ಪೆ	ಹಿಂದುಳಿದ ವರ್ಗ ಎ
83	ಹಂಪಿ ನಗರ	ಹಿಂದುಳಿದ ವರ್ಗ ಬಿ
84	ಹೊಸಹಳ್ಳಿ	ಹಿಂದುಳಿದ ವರ್ಗ ಎ
85	ಆದಿ ಚುಂಚನಗಿರಿ ವಾರ್ಡ್	ಹಿಂದುಳಿದ ವರ್ಗ ಬಿ
86	ವಿದ್ಯಾರಣ್ಯನಗರ	ಹಿಂದುಳಿದ ವರ್ಗ ಎ (ಮ.)
87	ಕೆ.ಪಿ ಅಗ್ರಹಾರ	ಹಿಂದುಳಿದ ವರ್ಗ ಎ (ಮ.)
88	ಸಂಗೊಳ್ಳಿ ರಾಯಣ್ಣ ವಾರ್ಡ್	ಪರಿಶಿಷ್ಟ ಪಂಗಡ (ಮ.)
89	ಬಾಪೂಜಿ ನಗರ	ಹಿಂದುಳಿದ ವರ್ಗ ಎ
90	ಕೃಷ್ಣದೇವರಾಯ ವಾರ್ಡ್	ಪರಿಶಿಷ್ಟ ಜಾತಿ (ಮ.)
91	ಗಾಳಿ ಆಂಜನೇಯ ದೇವಸ್ಥಾನ ವಾರ್ಡ್	ಸಾಮಾನ್ಯ (ಮ.)
92	ಮುನೇಶ್ವರ ಬ್ಲಾಕ್	ಸಾಮಾನ್ಯ (ಮ.)
93	ಆವಲಹಳ್ಳಿ	ಹಿಂದುಳಿದ ವರ್ಗ ಎ (ಮ.)
94	ದೀಪಾಂಜಲಿ ನಗರ	ಸಾಮಾನ್ಯ
ಬಸವನಗುಡಿ ವಿಧಾನಸಭಾ ಕ್ಷೇತ್ರ		
95	ಸ್ವಾಮಿ ವಿವೇಕಾನಂದ ವಾರ್ಡ್	ಸಾಮಾನ್ಯ (ಮ.)
96	ಕತ್ರಿಗುಪ್ಪೆ	ಸಾಮಾನ್ಯ (ಮ.)
97	ಶ್ರೀನಿವಾಸ ನಗರ	ಸಾಮಾನ್ಯ (ಮ.)
98	ಅಶೋಕ ನಗರ	ಸಾಮಾನ್ಯ
99	ಟಿ.ಆರ್ ಶಾಮಣ್ಣ ನಗರ	ಸಾಮಾನ್ಯ (ಮ.)
100	ಶ್ರೀನಗರ	ಹಿಂದುಳಿದ ವರ್ಗ ಬಿ (ಮ.)
101	ಕೆಂಪಾಂಬುಧಿ ವಾರ್ಡ್	ಹಿಂದುಳಿದ ವರ್ಗ ಬಿ
102	ಹನುಮಂತನಗರ	ಸಾಮಾನ್ಯ
103	ಎನ್.ಆರ್ ಕಾಲೊನಿ	ಸಾಮಾನ್ಯ (ಮ.)
104	ತ್ಯಾಗರಾಜನಗರ	ಸಾಮಾನ್ಯ (ಮ.)
ಪದ್ಮನಾಭನಗರ ವಿಧಾನಸಭಾ ಕ್ಷೇತ್ರ		
105	ಯಡಿಯೂರು	ಸಾಮಾನ್ಯ (ಮ.)
106	ದೇವಗಿರಿ ದೇವಸ್ಥಾನ ವಾರ್ಡ್	ಹಿಂದುಳಿದ ವರ್ಗ ಎ (ಮ.)
107	ಧರ್ಮಗಿರಿ ವಾರ್ಡ್	ಸಾಮಾನ್ಯ
108	ಗಣೇಶ ಮಂದಿರ ವಾರ್ಡ್	ಸಾಮಾನ್ಯ (ಮ.)
109	ಕಾಮಾಕ್ಯ ಲೇಔಟ್	ಸಾಮಾನ್ಯ
110	ಚಿಕ್ಕಲಸಂದ್ರ	ಸಾಮಾನ್ಯ
111	ಇಟ್ಟಮಡು	ಸಾಮಾನ್ಯ (ಮ.)
112	ಹೊಸಕೆರೆಹಳ್ಳಿ	ಸಾಮಾನ್ಯ



ಕಾರವಾರ ಬಂದರಿಗೆ ಬಂತು ಯುಎಇ ಬಿಟುಮಿನ್ ನೌಕೆ

ಪ್ರಜಾವಾಣಿ ವಾರ್ತೆ

ಕಾರವಾರ: ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಉಲ್ಬಣಿಸಿದ ಬಳಿಕ ಇಲ್ಲಿನ ವಾಣಿಜ್ಯ ಬಂದರಿಗೆ ಮೊದಲ ಬಾರಿಗೆ ಬಿಟುಮಿನ್ ಸಾಗಣೆಯ ಹಡಗು ಬಂದಿದೆ.

'ಸಂಯುಕ್ತ ಅರಬ್ ರಾಷ್ಟ್ರದಿಂದ (ಯುಎಇ) ಮಾರ್ಚ್ 3ರಂದು ಪ್ರಯಾಣ ಬೆಳೆಸಿದ್ದ ಬಾರ್ಬಡೋಸ್ ಮೂಲದ 'ಚೆಂಗ್ ಎಕ್ಸ್' ಹೆಸರಿನ ಹಡಗು ಗುರುವಾರ ರಾತ್ರಿ ಬಂದರು ತಲುಪಿತು. ಬಿಟುಮಿನ್ ಪೂರೈಸಿದ ಬಳಿಕ ಶುಕ್ರವಾರ ಸಂಜೆ ವೇಳೆಗೆ ಅದು ಪುನಃ ಯುಇಎ ಕಡೆಗೆ ಪ್ರಮಾಣ ಬೆಳೆಸಿತು' ಎಂದು ಬಂದರು ಜಲಸಾರಿಗೆ ಮಂಡಳಿಯ ಅಧಿಕಾರಿಗಳು ತಿಳಿಸಿದರು.

'ಪಶ್ಚಿಮ ಏಷ್ಯಾದಲ್ಲಿ ಯುದ್ಧದ ವಾತಾವರಣ ತೀವ್ರಗೊಂಡ ಕಾರಣ ಕಾರವಾರಕ್ಕೆ ಅರಬ್ ರಾಷ್ಟ್ರಗಳಿಂದ ಬಿಟುಮಿನ್ ಪೂರೈಸುವ ಹಡಗುಗಳು ಬರುವುದು ನಿಂತಿತ್ತು. ಯುದ್ಧ ತೀವ್ರಗೊಳ್ಳುವ ಮುನ್ನವೇ ಹೊರ್ಮುಜ್ ಜಲಸಂಧಿಯನ್ನು ದಾಟಿದ್ದ ಹಡಗು ಮಾತ್ರ ಈಗ ಇಲ್ಲಿನ ಬಂದರಿಗೆ ಬಂದಿದೆ. 3,100 ಟನ್ ಬಿಟುಮಿನ್ ಅನ್ನು ಅದು ಪೂರೈಸಿದೆ' ಎಂದು ಬಂದರು ಅಧಿಕಾರಿ ನಿತೇಶ ಸಾರಂಗ ತಿಳಿಸಿದರು.

₹4 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ, ಕಲಾ ವೇದಿಕೆ, ಸಂಗ್ರಹಾಲಯ ನಿರ್ಮಾಣ

ಮಹಾತ್ಮ ಗಾಂಧಿ ಉದ್ಯಾನಕ್ಕೆ ಹೊಸ ಸ್ಪರ್ಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಜಿ ರಸ್ತೆಯ ಆರಂಭದಲ್ಲಿರುವ ಮಹಾತ್ಮಗಾಂಧಿ ಉದ್ಯಾನಕ್ಕೆ ಸುಮಾರು ₹4 ಕೋಟಿ ವೆಚ್ಚದಲ್ಲಿ ಆಧುನಿಕ ಸ್ಪರ್ಶ ನೀಡಲಾಗುತ್ತದೆ ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಉದ್ಯಾನಕ್ಕೆ ಹಲವು ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಪ್ರವಾಸಿಗರ ಆಕರ್ಷಕ ತಾಣವನ್ನಾಗಿ ರೂಪಿಸಲಾಗುತ್ತದೆ. ಕಲಾವಿದರಿಗಾಗಿ ಮೀಸಲಾದ ವೇದಿಕೆ, ಕುಟೀರ (ಗ್ರಂಥಾಲಯ/ ಸಂಗ್ರಹಾಲಯ) ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಕಾಮಗಾರಿಗೆ ವೇಗ ನೀಡಿ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುತ್ತದ ಎಂದು ಹೇಳಿದರು.

ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿದ ರಾಜೇಂದ್ರ ಚೋಳನ್, ಎಲ್ಲವನ್ನೂ ಶೀಘ್ರ ಮುಗಿಸುವಂತೆ ಸೂಚಿಸಿದರು.

ಎಂ.ಜಿ ರಸ್ತೆಯಲ್ಲಿ ಟ್ರಿನಿಟಿ ವೃತ್ತದಿಂದ ಮಹಾತ್ಮ ಗಾಂಧೀಜಿ ಉದ್ಯಾನದವರೆಗೆ ಎರಡೂ ಬದಿ ಡಾಂಬರೀಕರಣ ಕಾಮಗಾರಿ ಪ್ರಗತಿಯಲ್ಲಿದೆ. ವಾಹನಗಳ ಸಂಚಾರಕ್ಕೆ ಯಾವುದೇ ರೀತಿಯ ತೊಂದರೆ ಆಗದಂತೆ ರಾತ್ರಿ ವೇಳೆ ಡಾಂಬರೀಕರಣ ಕಾರ್ಯವನ್ನು ಹಂತ ಹಂತವಾಗಿ ನಡೆಸಲಾಗುತ್ತಿದೆ. ಹಗಲಿನಲ್ಲಿ ರಸ್ತೆ ಬದಿಯ ಚರಂಡಿಗಳ ಹೂಳೆತ್ತುವ ಕೆಲಸ ನಡೆಯುತ್ತಿದೆ. ರಸ್ತೆ ಕಾಮಗಾರಿಯನ್ನು ಸಂಪೂರ್ಣವಾಗಿ 15 ದಿನಗಳೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ವಸಂತನಗರದಲ್ಲಿರುವ ಇಂದಿರಾ ಅಡುಗೆ ಕೋಣೆಗೆ ಎಲ್‌ಪಿಜಿ ಸಿಲಿಂಡರ್ ಸಮಸ್ಯೆ ಉಂಟಾಗದಂತೆ ನೋಡಿಕೊಂಡು, 14 ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಪೂರೈಕೆ ಮಾಡಬೇಕು ಎಂದು ಗುತ್ತಿಗೆದಾರರಿಗೆ ತಿಳಿಸಿದರು.

ಶಿವಾಜಿನಗರದ ಮಿಲ್ಲರ್ಸ್ ರಸ್ತೆಯಲ್ಲಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದಿಂದ ದ್ವಿತೀಯ ಹಂತದ ಘನತ್ಯಾಜ್ಯ ಸಂಸ್ಕರಣಾ ಘಟಕದ ಕಾಮಗಾರಿಯನ್ನು ಏಪ್ರಿಲ್ 15ರೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಿವಾಜಿನಗರ ವ್ಯಾಪ್ತಿಯಲ್ಲಿರುವ ಜಾನ್ಸನ್ ಮಾರುಕಟ್ಟೆ ಶಿಥಿಲಾವಸ್ಥೆಯಲ್ಲಿದ್ದು, ಸುಮಾರು 24,000 ಚ.ಮೀ ವ್ಯಾಪ್ತಿಯಲ್ಲಿ ವಿಸ್ತರಿಸಿದೆ. ಈ ಕಟ್ಟಡವನ್ನು ನೆಲಸಮಗೊಳಿಸಿ ವಿನೂತನ ಮಾದರಿಯಲ್ಲಿ ಮಾರುಕಟ್ಟೆ ನಿರ್ಮಿಸುವ ಉದ್ದೇಶದಿಂದ ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಎಂಜಿನಿಯರ್‌ಗೆ ಸೂಚನೆ ನೀಡಿದರು.



4 ಉದ್ದಿಮೆಗಳಿಗೆ ಬೀಗ

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯ ಅಂಜನಾಪುರ ವಾರ್ಡ್‌ನಲ್ಲಿ ಹಲವು ಪರವಾನಗಿ ಪಡೆಯದ ನಾಲ್ಕು ಉದ್ದಿಮೆಗಳಿಗೆ ಬೀಗ ಹಾಕಲಾಗಿದೆ.

ಸೂಚನಾ ಪತ್ರ ನೀಡಿ, ಸ್ವಯಂ ಪ್ರೇರಿತರಾಗಿ ಉದ್ದಿಮೆಯನ್ನು ಮುಚ್ಚಲು ತಿಳಿಸಿದ್ದರೂ ಯಾವುದೇ ಕ್ರಮಕೈಗೊಳ್ಳದ ಕಾರಣ, ಪಾಲಿಕೆ ವತಿಯಿಂದ ಬೀಗಮುದ್ರೆ ಹಾಕಲಾಗಿದೆ ಎಂದು ಆಯುಕ್ತ ಕೆ.ಎನ್. ರಮೇಶ್ ಹೇಳಿದರು.

ಉಷಾ ಎಂಟರ್‌ಪ್ರೈಸಸ್, ಪ್ಲೈ ವುಡ್ ಶಾಪ್, ವಾಡಿಯಾ ಟೆಂಬರ್ಸ್, ಟಿಂಬರ್ ಶಾಪ್, ಕ್ಯೂ. ಬಿ.ಎಸ್ ಇಂಟೆಕ್ಸ್, ಫೈಬರ್ ಶೀಟ್ಸ್ ಶಾಪ್, ಕರ್ನಾಟಕ ಪ್ಲೈ ಅಂಡ್ ವುಡ್ ಸೆಂಟರ್, ಟಿಂಬರ್ ಅಂಡ್ ವುಡ್ ಶಾಪ್‌ಗೆ ಬೀಗ ಹಾಕಲಾಗಿದೆ ಎಂದರು.

ಹರಾಜಿಗೆ ಬಾರದ ಬಿಡ್‌ದಾರರು

ಆಸ್ತಿ ತೆರಿಗೆ ಪಾವತಿಸದ 181 ಆಸ್ತಿಗಳನ್ನು ಬೆಂಗಳೂರು ದಕ್ಷಿಣ ಮತ್ತು ಉತ್ತರ ನಗರ ಪಾಲಿಕೆ ವತಿಯಿಂದ ಹರಾಜು ಹಾಕುವ ಪ್ರಕ್ರಿಯೆಗೆ ಬಿಡ್‌ದಾರರು ಭಾಗವಹಿಸಲಿಲ್ಲ. ಹೀಗಾಗಿ ಹರಾಜು ಪ್ರಕ್ರಿಯೆಯನ್ನು ಮುಂದೂಡಲಾಗಿದೆ.

ದಕ್ಷಿಣ ನಗರ ಪಾಲಿಕೆಯ ಜಯನಗರ ಹಾಗೂ ಬೊಮ್ಮನಹಳ್ಳಿ ವಲಯಗಳಲ್ಲಿ ತಲಾ 50 ಆಸ್ತಿಗಳನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಲಾಯಿತು. ಬೊಮ್ಮನಹಳ್ಳಿ ವಲಯದ 50 ಆಸ್ತಿಗಳಿಂದ ₹95,58,260 ತೆರಿಗೆ ಬಾಕಿ ಇದೆ. ಇದರಲ್ಲಿ 17 ಸುಸ್ತಿದಾರರು ಹರಾಜು ಪ್ರಕ್ರಿಯೆಗೂ ಮುನ್ನ ತೆರಿಗೆ ಪಾವತಿ ಮಾಡಿದ್ದಾರೆ. ಇನ್ನುಳಿದ 33 ಸುಸ್ತಿದಾರರ ಆಸ್ತಿಗಳ ಹರಾಜಿಗೆ ಯಾರೂ ಬಿಡ್ ಸಲ್ಲಿಸಲಿಲ್ಲ.

ಜಯನಗರ ವಲಯದ 50 ಸ್ವತ್ತುಗಳಿಂದ ₹83,59,133 ತೆರಿಗೆ ಬಾಕಿ ಇದ್ದು, ಇಬ್ಬರು ಮಾಲೀಕರು ಪಾವತಿ ಮಾಡಿದರು. ಉಳಿದ 48 ಸ್ವತ್ತುಗಳ ಹರಾಜಿಗೆ ಯಾವುದೇ ಬಿಡ್‌ದಾರರು ಆಸಕ್ತಿ ತೋರಿಸಲಿಲ್ಲ. ಈ ಸ್ವತ್ತುಗಳನ್ನು ಪಾಲಿಕೆ ವಶಕ್ಕೆ ತೆಗೆದುಕೊಂಡು, ಖಾತೆಯನ್ನು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಹೆಸರಿಗೆ ಖಾತಾ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.

ಉತ್ತರ ನಗರ ಪಾಲಿಕೆಯಲ್ಲಿ 81 ಆಸ್ತಿಗಳಿಂದ ₹1.94 ಕೋಟಿ ತೆರಿಗೆ ವಸೂಲಿಗೆ ಆಸ್ತಿ ಹರಾಜು ಪ್ರಕ್ರಿಯೆಯನ್ನು ಶುಕ್ರವಾರ ನಡೆಸಲಾಯಿತು. ಹರಾಜು ಪ್ರಕ್ರಿಯೆಯಲ್ಲಿ ಐದಕ್ಕೂ ಹೆಚ್ಚು ಜನರಿದ್ದರೂ, ಯಾವುದೇ ಆಸ್ತಿಗೆ ಬಿಡ್ ಮಾಡಲು ಮುಂದಾಗಲಿಲ್ಲ. ಈ ಹಿಂದೆ, ಮಾರ್ಚ್ 6ರಂದು ನಡೆಸಿದ ಹರಾಜಿನಲ್ಲೂ ಯಾರೂ ಭಾಗವಹಿಸಿರಲಿಲ್ಲ. ಹೀಗಾಗಿ, ಹರಾಜು ಪ್ರಕ್ರಿಯೆಗೆ ಇಡಲಾದ ಎಲ್ಲಾ ಆಸ್ತಿಗಳನ್ನು ನಗರ ಪಾಲಿಕೆಯ ವಶದಲ್ಲಿರಿಸಿ, ಮುಂದಿನ ದಿನಗಳಲ್ಲಿ ಹರಾಜು ಪ್ರಕ್ರಿಯೆಯನ್ನು ಮರು ಆಯೋಜಿಸಲಾಗುವುದು ಎಂದು ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ತಿಳಿಸಿದರು.

ನಿವೇಶನ ಹಂಚಿಕೆ: ಮಾಜಿ ಸೈನಿಕರ ಮೌನ ಪ್ರತಿಭಟನೆ



ತಹಶೀಲ್ದಾರ್ ಕಚೇರಿಯ ವ್ಯವಸ್ಥಾಪಕ ಶ್ರೀನಂದನ್ ಅವರಿಗೆ ಮಾಜಿ ಸೈನಿಕರು ಮನವಿ ಪತ್ರ ಸಲ್ಲಿಸಿದರು

ಪ್ರಜಾವಾಣಿ ವಾರ್ತೆ

ಯಲಹಂಕ: ಗಂಟಿಗಾನಹಳ್ಳಿ ಗ್ರಾಮದಲ್ಲಿ ವಿಶೇಷ ಆಶ್ರಯ ಯೋಜನೆಯಡಿ ನಿವೇಶನಗಳನ್ನು ಮಾಜಿ ಸೈನಿಕರಿಗೆ ವಿತರಿಸಬೇಕು ಎಂದು ಒತ್ತಾಯಿಸಿ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಹಾಗೂ ಅವರ ಕುಟುಂಬಸ್ಥರು ತಾಲ್ಲೂಕು ಕಚೇರಿಯ ಮುಂಭಾಗ ಮೌನ ಪ್ರತಿಭಟನೆ ನಡೆಸಿದರು.

ಸಂಘದ ಅಧ್ಯಕ್ಷ ಹರಿಕುಮಾರ್ ಎನ್.ಕೆ ಮಾತನಾಡಿ, 'ಸಂಘದಲ್ಲಿ ಸುಮಾರು ಮೂರು ಸಾವಿರ ಸೈನಿಕರು ಮತ್ತು ಮಾಜಿ ಸೈನಿಕರು ಸದಸ್ಯರಿದ್ದಾರೆ. ಇವರಲ್ಲಿ ಬಹುತೇಕರು ಆರ್ಥಿಕವಾಗಿ ಹಿಂದುಳಿದ ಸ್ಥಿತಿಯಲ್ಲಿದ್ದಾರೆ. ಬೆಂಗಳೂರಿನಲ್ಲಿ ಕಾಯಂ ಮನೆ ಅಥವಾ ನಿವೇಶನಗಳಿಲ್ಲದೆ ಸಂಕಷ್ಟ ಅನುಭವಿಸುತ್ತಿದ್ದಾರೆ. ಸೈನಿಕರು ಮತ್ತು ಮಾಜಿ ಸೈನಿಕರಿಗಾಗಿ ಸರ್ಕಾರ ಮೀಸಲಿಟ್ಟಿರುವ ಜಾಗವನ್ನು ನಿವೇಶನಗಳಾಗಿ ಹಂಚಿಕೆಮಾಡಿ ವಿತರಿಸಬೇಕು ಎಂದು ಐದು ವರ್ಷಗಳಿಂದ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಪತ್ರ ವ್ಯವಹಾರ ನಡೆಸಿ, ಮನವಿ ಸಲ್ಲಿಸಿದ್ದರೂ ಸಹ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ' ಎಂದು ದೂರಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಆರ್.ಶ್ಯಾಮಸುಂದರ್ ಮಾತನಾಡಿ, 'ಸಂಘದ ಮನವಿಯ ಮೇರೆಗೆ ಗಂಟಿಗಾನಹಳ್ಳಿ ಗ್ರಾಮದ ಸರ್ವೆ ನಂ.16, 17, 18 ಮತ್ತು 19ರಲ್ಲಿ ಇರುವ 36 ಎಕರೆ 38 ಗುಂಟೆ ಜಮೀನನ್ನು ವಿಶೇಷ ಆಶ್ರಯ ಯೋಜನೆಯಡಿ 265 ಅರ್ಹ ಮಾಜಿ ಸೈನಿಕರಿಗೆ ತಲಾ 1200 ಚದರ ಅಡಿ ಅಳತೆಯ ನಿವೇಶನವಾಗಿ ವಿಂಗಡಿಸಿ, ಮಂಜೂರು ಮಾಡಲು 2021ರಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಆದೇಶಿಸಿದ್ದರು. ನಂತರ ತಾಲ್ಲೂಕು ಪಂಚಾಯಿತಿಗೆ ಜಮೀನನ್ನು ನಿವೇಶನಗಳಾಗಿ ಹಂಚಿಕೆ ಮಾಡಲು ಸೂಚನೆ ನೀಡಲಾಗಿದ್ದರೂ ಯಾವುದೇ ಕ್ರಮಕೈಗೊಂಡಿಲ್ಲ' ಎಂದು ಆರೋಪಿಸಿದರು.

ತಹಶೀಲ್ದಾರ್ ಕಚೇರಿಯ ವ್ಯವಸ್ಥಾಪಕ ಶ್ರೀನಂದನ್ ಬಿ.ಎನ್ ಹಾಗೂ ಯಲಹಂಕ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಧು ಅವರಿಗೆ ಮನವಿಪತ್ರ ಸಲ್ಲಿಸಿದರು.

₹8.69 ಕೋಟಿ ಅಕ್ರಮ ಆಸ್ತಿ ಪತ್ತೆ



ಶ್ರೀನಿವಾಸ್

ಉಡುಪಿ: ಆದಾಯ ಮೀರಿ ಆಸ್ತಿ ಹೊಂದಿರುವ ಆರೋಪದಲ್ಲಿ ಅಬಕಾರಿ ಇಲಾಖೆಯ ಉಪ ಆಯುಕ್ತ ಶ್ರೀನಿವಾಸ್ ಟಿ.ಎಂ. ಅವರ ಮನೆ ಹಾಗೂ ಸಂಬಂಧಿತ ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ಶೋಧ ಕಾರ್ಯ ನಡೆಸಿ ₹8.69 ಕೋಟಿ ಮೌಲ್ಯದ ಅಕ್ರಮ ಆಸ್ತಿಯನ್ನು ಪತ್ತೆ ಹಚ್ಚಿದ್ದಾರೆ.

ಲೋಕಾಯುಕ್ತ ಪೊಲೀಸ್ ವಿಭಾಗದ ಉಡುಪಿ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿತ್ತು. ಅಧಿಕಾರಿಗಳು ಮಾ.11ರಂದು 15 ಸ್ಥಳಗಳಲ್ಲಿ ಏಕಕಾಲಕ್ಕೆ ಶೋಧ ನಡೆಸಿದ್ದರು. ಈ ವೇಳೆ 11 ನಿವೇಶನ, 6 ವಾಸದ ಮನೆ, 31 ಎಕರೆ ಕೃಷಿ ಜಮೀನು ಸೇರಿ ಒಟ್ಟು ₹6.90 ಕೋಟಿ ಮೌಲ್ಯದ ಸ್ಥಿರ ಆಸ್ತಿ, ₹3.95 ಲಕ್ಷ ನಗದು, ₹1.47 ಕೋಟಿ ಮೌಲ್ಯದ ಚಿನ್ನಾಭರಣ ₹25.75 ಲಕ್ಷದ ಬ್ಯಾಂಕ್ ಠೇವಣಿ, ಸೇರಿ ₹2.66 ಕೋಟಿ ಚರ ಆಸ್ತಿ ಕಂಡುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಬಿಐ ತನಿಖೆ ನಡೆಸಿ: ರೇವತಿರಾಜ್

ಎಸ್‌ಸಿಎಸ್‌ಪಿ, ಟಿಎಸ್‌ಪಿ ನಿಧಿಯಲ್ಲಿ ಅವ್ಯವಹಾರ: ಆರೋಪ

ಪ್ರಜಾವಾಣಿ ವಾರ್ತೆ



ರೇವತಿರಾಜ್

ಬೆಂಗಳೂರು: 'ಸಮಾಜ ಕಲ್ಯಾಣ ಇಲಾಖೆಯ ಅಧೀನ ಸಂಸ್ಥೆಯಾದ ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದಲ್ಲಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ನಿಧಿಯಲ್ಲಿ ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆದಿದ್ದು, ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕು' ಎಂದು ಭೀಮಪುತ್ರಿ ಬ್ರಿಗೇಡ್ ಸಂಸ್ಥಾಪಕಿ ರೇವತಿರಾಜ್ ಆರೋಪಿಸಿದ್ದಾರೆ.

'ಅಧಿಕಾರ ದುರುಪಯೋಗ, ನಕಲಿ ಟೆಂಡರ್ ಮೂಲಕ ನೂರಾರು ಕೋಟಿ ರೂಪಾಯಿ ಅಕ್ರಮ ನಡೆಸಲಾಗಿದೆ. ಅಕ್ರಮಗಳಿಗೆ ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ ಆಡಳಿತಾಧಿಕಾರಿ ಡಾ.ಕೆ.ಅಂಜುಂ ಹಫೀಜ್ ಕಾರಣಕರ್ತರಾಗಿದ್ದು, ಇವರನ್ನು ಕೂಡಲೇ ಅಮಾನತುಗೊಳಿಸಿ, ಕಾನೂನು ಕ್ರಮ ಕೈಗೊಳ್ಳಬೇಕು. ಅಂಜುಂ ಅವರು ತಮ್ಮ ತಾಯಿಯ ಖಾತೆಗೆ ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ್ದಾರೆ' ಎಂದು ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಇದೇ ವೇಳೆ ಆರೋಪಕ್ಕೆ ಸಂಬಂಧಿಸಿದ ಕೆಲವು ದಾಖಲೆಗಳನ್ನು ಅವರು ಮಾಧ್ಯಮಗಳಿಗೆ ಬಿಡುಗಡೆ ಮಾಡಿದರು.

'ಎಲ್ಲಾ ಗುತ್ತಿಗೆಗಳಲ್ಲಿ ಶೇಕಡ 40 ರಷ್ಟು ಕಮಿಷನ್ ಪಡೆಯುತ್ತಿದ್ದು, ಕೆಟಿಪಿಪಿ ಕಾಯ್ದೆಯನ್ನು ಉಲ್ಲಂಘಿಸಿದ್ದಾರೆ. ಹಾಗಾಗಿ ಅಧಿಕಾರಿ ಮತ್ತು ಕುಟುಂಬದವರ ಎಲ್ಲಾ ಬ್ಯಾಂಕ್ ಖಾತೆಯನ್ನು ತಕ್ಷಣವೇ ಮುಟ್ಟುಗೋಲು ಹಾಕಿಕೊಳ್ಳಬೇಕು' ಎಂದು ಆಗ್ರಹಿಸಿದರು.

ಬೋಗಸ್ ತರಬೇತಿ ಕಾರ್ಯಕ್ರಮ, ಸಾಫ್ಟ್‌ವೇರ್, ಡ್ರೋನ್ ತರಬೇತಿ ಹಗರಣ, ಜಿ.ಎಸ್.ಟಿ. ಅಕ್ರಮ ನಡೆಸಿರುವ ಅಂಜುಂ ಅವರ ವಿರುದ್ಧ ತನಿಖೆಯಾಗಬೇಕು. ಸಮಾಜ ಕಲ್ಯಾಣ ಇಲಾಖೆಯ ವೃಂದ ನೇಮಕಾತಿ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಅಲ್ಲದೇ ಈ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು, ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದರು.

'ಸರ್ಕಾರದ ಖಜಾನೆಯಲ್ಲಿ ಎಲ್ಲವೂ ಆನ್ ಲೈನ್ ಮೂಲಕ ಪಾವತಿಯಾಗಬೇಕು. ಆದರೆ, ಅಧಿಕಾರಿ ಬ್ಯಾಂಕ್ ಖಾತೆಗಳನ್ನು ದುರುಪಯೋಗ ಪಡಿಸಿಕೊಂಡು ದೊಡ್ಡ ಮೊತ್ತವನ್ನು ನೇರವಾಗಿ ಚೆಕ್ ಮೂಲಕ ವಿತರಿಸಿದ್ದಾರೆ. ಸರ್ಕಾರದ ಅನುಮತಿ ಇಲ್ಲದೇ ಕೋಟ್ಯಂತರ ರೂಪಾಯಿ ಮೊತ್ತವನ್ನು ಮುಂಗಡ ಪಾವತಿಸಿದ್ದಾರೆ. ಕೆಲವು ಚೆಕ್‌ಗಳನ್ನು ಅಂಜುಂ ಅವರು ಏಕಪಕ್ಷೀಯವಾಗಿ ತಮ್ಮ ಸಹಿಯೊಂದಿಗೆ ನೀಡಿದ್ದು, ಇದು ಅಧಿಕಾರದ ದುರುಪಯೋಗವಾಗಿದೆ' ಎಂದು ಅವರು ವಿವರಿಸಿದರು.

'ಅಂಜುಂ ಹಫೀಜ್ ವಿರುದ್ಧ ಜನವರಿ 29 ರಂದು ಲೋಕಾಯುಕ್ತರಿಗೆ ದೂರು ಸಲ್ಲಿಸಲಾಗಿದೆ. ಅಲ್ಲದೇ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ, ಇಲಾಖಾ ಆಯುಕ್ತರು ಹಾಗೂ ಹಿರಿಯ ಅಧಿಕಾರಿಗಳಿಗೆ ದೂರು ನೀಡಲಾಗಿದೆ. ಆಗ ಅಂಜುಂ ಹಫೀಜ್ ಅವರು ನನ್ನ ಮೇಲೆ ಸುಲಿಗೆ ಆರೋಪ ಹೊರಿಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದರು. ಪೊಲೀಸರ ಮೂಲಕ ಬಂಧಿಸಿ ನನ್ನ ಹೋರಾಟವನ್ನು ಹತ್ತಿಕ್ಕಲು ವ್ಯವಸ್ಥಿತ ಪಿತೂರಿ ನಡೆಸಿದ್ದಾರೆ. ಜೊತೆಗೆ ಅಕ್ರಮಗಳನ್ನು ಮುಚ್ಚಿ ಹಾಕಲು ರಾಜೀ ಸಂಧಾನದ ಪ್ರಯತ್ನಕ್ಕೂ ಮುಂದಾಗಿದ್ದರು' ಎಂದು ರೇವತಿರಾಜ್ ಹೇಳಿದರು.

ಅರಮನೆ ಮೈದಾನದಲ್ಲಿ ಯಾತ್ರೆ ಮತ್ತು ಪ್ರವಾಸೋದ್ಯಮ ಮೇಳಕ್ಕೆ ಚಾಲನೆ

'ಸಂಘರ್ಷ: ಪ್ರವಾಸಿಗರ ಆತಿಥ್ಯಕ್ಕೆ ಕ್ರಮ'

ಪ್ರಜಾವಾಣಿ ವಾರ್ತೆ



ಮೇಳಕ್ಕೆ ಚಾಲನೆ ನೀಡಿದ ಎಚ್.ಕೆ.ಪಾಟೀಲ ಅವರು ಚೆನ್ನಕೇಶವ ಸೇರಿ ವಿವಿಧ ದೇವಸ್ಥಾನಗಳ ಛಾಯಾಚಿತ್ರ ವೀಕ್ಷಿಸಿದರು. ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಕೆ.ವಿ.ತ್ರಿಲೋಕ್ ಚಂದ್ರ ಜತೆಗಿದ್ದರು — ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪಶ್ಚಿಮ ಏಷ್ಯಾ ದೇಶಗಳಿಂದ ಬಂದಿರುವ ಪ್ರವಾಸಿಗರಿಗೆ ಯುದ್ಧದ ಪರಿಣಾಮ ತಾಯ್ನಾಡಿಗೆ ಮರಳುವುದು ಕಷ್ಟಸಾಧ್ಯವಾಗಿದೆ. ಆ ಪ್ರವಾಸಿಗರ ಆತಿಥ್ಯ ವಹಿಸಿಕೊಳ್ಳಲು ರಾಜ್ಯ ಸರ್ಕಾರ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳುತ್ತಿದೆ' ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯ ಹಾಗೂ ರಾಜ್ಯ ಪ್ರವಾಸೋದ್ಯಮ ಇಲಾಖೆಯು ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ನಗರದ ಅರಮನೆ ಮೈದಾನದಲ್ಲಿ (ತ್ರಿಪುರ ವಾಸಿನಿ) ಹಮ್ಮಿಕೊಂಡಿರುವ ಮೂರು ದಿನಗಳ 'ಯಾತ್ರೆ ಮತ್ತು ಪ್ರವಾಸೋದ್ಯಮ ಮೇಳ'ಕ್ಕೆ (ಟಿಟಿಎಫ್) ಶುಕ್ರವಾರ ಚಾಲನೆ ನೀಡಿ, ಮಾತನಾಡಿದರು.

'ಪಶ್ಚಿಮ ಏಷ್ಯಾ ಸಂಘರ್ಷವು ಭಾರತದ ಮೇಲೆ ನೇರ ಪರಿಣಾಮ ಬೀರದಿದ್ದರೂ, ವಿದೇಶಿ ಪ್ರವಾಸಿಗರ ಪ್ರಯಾಣವನ್ನು ಅನಿಶ್ಚಿತತೆಯ ತೆಕ್ಕೆಗೆ ದೂಡಿದೆ. ವೀಸಾ ಮತ್ತು ಪ್ರಯಾಣ ನಿರ್ಬಂಧಗಳಿಂದಾಗಿ ಅನೇಕರು ತಮ್ಮ ತಾಯ್ನಾಡಿಗೆ ಮರಳಲು ಸಾಧ್ಯವಾಗುತ್ತಿಲ್ಲ. ಅಲ್ಲಿನ ಪರಿಸ್ಥಿತಿ ತಿಳಿಯಾಗುವವರೆಗೆ, ಅವರ ವಾಸ್ತವ್ಯ ಇಲ್ಲಿ ಆರಾಮದಾಯಕವಾಗಿರಲು ವೀಸಾ ನಿರ್ವಹಣೆ ಸೇರಿದಂತೆ ಅಗತ್ಯ ಸಹಾಯಕ್ಕೆ ನೆರವಾಗುತ್ತೇವೆ' ಎಂದು ಭರವಸೆ ನೀಡಿದರು.

30 ಕೋಟಿ ಜನರ ಭೇಟಿ: ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಕೆ.ವಿ. ತ್ರಿಲೋಕ್ ಚಂದ್ರ, 'ರಾಜ್ಯಕ್ಕೆ ವಾರ್ಷಿಕ 30 ಕೋಟಿಯಷ್ಟು ದೇಶೀಯ ಹಾಗೂ ಸುಮಾರು 20 ಲಕ್ಷ ವಿದೇಶಿಯರು ಭೇಟಿ ನೀಡುತ್ತಿದ್ದಾರೆ. ಈ ಸಂಖ್ಯೆಯನ್ನು ಹೆಚ್ಚಿಸಲು ಇಂತಹ ಮೇಳವನ್ನು ಆಯೋಜಿಸುತ್ತಿದ್ದೇವೆ. ರಾಜ್ಯದಲ್ಲಿ ಎಲ್ಲ ರೀತಿಯ ಪ್ರವಾಸಿ ಸ್ಥಳಗಳಿವೆ. ಕರಾವಳಿ ಪ್ರವಾಸೋದ್ಯಮಕ್ಕೂ ಇನ್ನಷ್ಟು ಉತ್ತೇಜನ ನೀಡಲಾಗುತ್ತಿದೆ. ಪ್ರವಾಸಿ ಸ್ಥಳಗಳಿಗೆ ಮೂಲಸೌಕರ್ಯ ಒದಗಿಸುವ ಜತೆಗೆ, ಹೂಡಿಕೆಗೂ ಅವಕಾಶ ಮಾಡಿಕೊಡಲಾಗಿದೆ. ದೇಶ–ವಿದೇಶದ 150ಕ್ಕೂ ಹೆಚ್ಚು ಸಂಸ್ಥೆಗಳ ಪ್ರತಿನಿಧಿಗಳನ್ನು ಈ ಮೇಳ ಆಕರ್ಷಿಸಿದೆ' ಎಂದು ಹೇಳಿದರು.

ಮೂರು ದಿನಗಳ ಈ ಮೇಳದಲ್ಲಿ ಗೋವಾ, ಕರ್ನಾಟಕ, ಮೇಘಾಲಯ, ತೆಲಂಗಾಣ, ಗುಜರಾತ್, ತಮಿಳುನಾಡು, ಜಾರ್ಖಂಡ್ ಹಾಗೂ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸೋದ್ಯಮ ಮಂಡಳಿಗಳು ಭಾಗವಹಿಸಿವೆ. ಪ್ರವಾಸ ಆಯೋಜಿಸುವ ಖಾಸಗಿ ಕಂಪನಿಗಳು, ಹೋಟೆಲ್ ಉದ್ಯಮಗಳು, ವಿಮಾನಯಾನ ಸೇರಿ ಪ್ರಯಾಣ ಸಂಸ್ಥೆಗಳೂ ಪಾಲ್ಗೊಂಡಿವೆ.

ಉದ್ಘಾಟನಾ ಸಮಾರಂಭದಲ್ಲಿ ಪ್ರವಾಸೋದ್ಯಮ ಸಚಿವಾಲಯದ ನಿರ್ದೇಶಕಿ ಸಂಧ್ಯಾ ಹರಿದಾಸ್, ಪ್ರಾದೇಶಿಕ ನಿರ್ದೇಶಕ ಡಿ. ವೆಂಕಟೇಶನ್ ಹಾಗೂ ಜಂಗಲ್ ಲಾಡ್ಜಸ್ ಆ್ಯಂಡ್ ರೆಸಾರ್ಟ್‌ನ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಶಂಕಿನಮಠ ಇದ್ದರು.

'ವಸ್ತು ಸಂಗ್ರಹಾಲಯ ಸ್ಥಾಪನೆ'

'ಐತಿಹಾಸಿಕ ಸ್ಥಳಗಳಲ್ಲಿ ಉತ್ಖನನ ಯೋಜನೆಗಳು ಮತ್ತು ತೆರೆದ ವಸ್ತುಸಂಗ್ರಹಾಲಯಗಳ ಅಭಿವೃದ್ಧಿಯತ್ತ ಗಮನಹರಿಸಲಾಗುತ್ತಿದೆ. ಲಕ್ಕುಂಡಿಯಲ್ಲಿ ಉತ್ಖನನ ಸಂದರ್ಭದಲ್ಲಿ ದೊರೆತ ಐತಿಹಾಸಿಕ ವಸ್ತುಗಳ ಪ್ರದರ್ಶನಕ್ಕೆಂದೇ ಒಂದು ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲಾಗುವುದು. ಅಲ್ಲಿ ಸುಮಾರು 1,500 ಕಲಾಕೃತಿಗಳನ್ನು ಈಗಾಗಲೇ ಸಂಗ್ರಹಿಸಲಾಗಿದೆ. ಸುಮಾರು 3,500 ವಸ್ತುಗಳನ್ನು ಸಂಶೋಧಿಸಲಾಗಿದೆ. ಇತ್ತೀಚೆಗೆ ಒಂದು ಕುಟುಂಬವು 600 ವರ್ಷಗಳಷ್ಟು ಹಳೆಯದಾದ ಆಭರಣವನ್ನು ದಾನ ಮಾಡಿದೆ. ಇದನ್ನು ದೇವಿಗೆ ಅಲಂಕರಿಸಲು ಬಳಸಲಾಗುತ್ತಿತ್ತು. ಇದರ ಮೌಲ್ಯ ಸುಮಾರು ₹5 ಕೋಟಿಯೆಂದು ತಜ್ಞರು ಅಂದಾಜಿಸಿದ್ದಾರೆ' ಎಂದು ಎಚ್.ಕೆ. ಪಾಟೀಲ ಹೇಳಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ತನ್ನನ್ನು ತಾನು ಅರಿಯುವುದು, ವಿಶ್ವಜೀವನದ ಅವಿಭಾಜ್ಯ ಅಂಗವಾಗಲು ಯತ್ನಿಸುವುದು- ಇದೇ ಮಾನವನ ಗುರಿ.

-ಮಹಾತ್ಮ ಗಾಂಧೀಜಿ

ಸಂಪಾದಕೀಯ

ತಪ್ಪುಗಳ ತಿದ್ದಿಕೊಳ್ಳದ 'ಕೆಪಿಎಸ್‌ಸಿ' ಅಭ್ಯರ್ಥಿಗಳ ಕನಸುಗಳೊಂದಿಗೆ ಆಟ

ನೇಮಕಾತಿ ಪ್ರಕ್ರಿಯೆಯಲ್ಲಿನ ಅಕ್ರಮ, ಭ್ರಷ್ಟಾಚಾರದ ಕಾರಣಕ್ಕೆ ಮತ್ತೊಮ್ಮೆ ಸುದ್ದಿಯಲ್ಲಿರುವ 'ಕರ್ನಾಟಕ ಲೋಕಸೇವಾ ಆಯೋಗ' ಹಳೆಯ ತಪ್ಪುಗಳಿಂದ ಪಾಠ ಕಲಿಯುವಂತೆ ಕಾಣಿಸುತ್ತಿಲ್ಲ; ಕಳಂಕದ ಭಾರದಿಂದ ಹೊರಬರುವ ಪ್ರಾಮಾಣಿಕ ಪ್ರಯತ್ನಗಳನ್ನೂ ನಡೆಸುತ್ತಿಲ್ಲ. ಮೂರು ದಶಕಗಳಿಂದೀಚೆಗೆ ಆಯೋಗದ ನೇಮಕಾತಿಗಳಲ್ಲಿ ಅರ್ಹರಿಗೆ ಹುದ್ದೆ ಕೊಟ್ಟ ನಿದರ್ಶನಗಳು ಅಪರೂಪ. ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಂತೂ ಪ್ರತಿಬಾರಿಯೂ ವಿವಾದದಿಂದ ಹೊರತಾಗಿದ್ದೇ ಇಲ್ಲ. ಈ ಅವಧಿಯಲ್ಲಿ ಜೆಡಿಎಸ್, ಕಾಂಗ್ರೆಸ್, ಬಿಜೆಪಿ ಮೂರೂ ಪಕ್ಷಗಳು ರಾಜ್ಯದಲ್ಲಿ ಆಡಳಿತ ನಡೆಸಿವೆ. ವಿರೋಧ ಪಕ್ಷದಲ್ಲಿದ್ದಾಗ ಕೆಪಿಎಸ್‌ಸಿಯ ಅಕ್ರಮ, ಸದಸ್ಯರ ಭ್ರಷ್ಟಾಚಾರದ ಬಗ್ಗೆ ಜೋರು ಧ್ವನಿಯಲ್ಲಿ ಅಬ್ಬರಿಸುವ ಜನಪ್ರತಿನಿಧಿಗಳು, ಅಧಿಕಾರದಲ್ಲಿದ್ದಾಗ ಆಯೋಗಕ್ಕೆ ಚಿಕಿತ್ಸೆ ನೀಡಲು ಮುಂದಾಗಿದ್ದಿಲ್ಲ. 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ 2024ರ ಫೆಬ್ರುವರಿಯಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಹಿಂದೆಲ್ಲ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದ ಬಳಿಕ, ಆಯೋಗಕ್ಕೆ ಆರೋಪಗಳು ಸುತ್ತಿಕೊಳ್ಳುತ್ತಿದ್ದವು. ಈ ಬಾರಿ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿನ ಲೋಪಗಳಿಂದ ಶುರುವಾದ ಪ್ರಮಾದಗಳ ಸರಮಾಲೆ, ಸಂದರ್ಶನಕ್ಕೆ ಆಯ್ಕೆಯಾದವರ ಪಟ್ಟಿಯವರೆಗೂ ಮುಂದುವರಿಯುತ್ತಿದೆ. ಪೂರ್ವಭಾವಿ ಪರೀಕ್ಷೆ 2024ರ ಆಗಸ್ಟ್‌ನಲ್ಲಿ ನಡೆಯಿತು. 1 ಮತ್ತು 2ನೇ ಪ್ರಶ್ನೆ ಪತ್ರಿಕೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರ ಮಾಡುವಾಗ ತಪ್ಪುಗಳೇ ವಿಜೃಂಭಿಸಿದ್ದವು.

ಪ್ರಶ್ನೆ ಮತ್ತು ಆಯ್ಕೆ ಉತ್ತರಗಳು ತದ್ವಿರುದ್ಧವಾಗಿದ್ದರೆ, ಕೆಲವು ಪ್ರಶ್ನೆಗಳು ಅರ್ಥವೇ ಆಗದಂತೆ ಇದ್ದವು. ಆಗ ಮಧ್ಯ ಪ್ರವೇಶಿಸಿದ ಸರ್ಕಾರ, ಮತ್ತೊಮ್ಮೆ ಪೂರ್ವಭಾವಿ ಪರೀಕ್ಷೆ ನಡೆಸುವಂತೆ ಸೂಚಿಸಿತು. ಅದೇ ಡಿಸೆಂಬರ್‌ನಲ್ಲಿ ಪರೀಕ್ಷೆ ನಡೆಯಿತು. 2025ರ ಮೇ ತಿಂಗಳಲ್ಲಿ ನಡೆದ ಮುಖ್ಯಪರೀಕ್ಷೆಯಲ್ಲಿ 5,700ಕ್ಕೂ ಹೆಚ್ಚು ಅಭ್ಯರ್ಥಿಗಳು ಭಾಗಿಯಾಗಿದ್ದರು. ಅವರ ಪೈಕಿ 1:3 ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ (ಸಂದರ್ಶನಕ್ಕೆ) ಆಯ್ಕೆಯಾದ 1,152 ಅಭ್ಯರ್ಥಿಗಳ ಪಟ್ಟಿಯನ್ನು ಆಯೋಗವು ಮಾರ್ಚ್ 2ರಂದು ಬಿಡುಗಡೆ ಮಾಡಿತು. ಇದು ಪ್ರಕಟವಾಗುತ್ತಿದ್ದಂತೆ, 'ಅರ್ಹತಾ ಪಟ್ಟಿ ಸಿದ್ಧಪಡಿಸುವ ವೇಳೆ ಭ್ರಷ್ಟಾಚಾರ ನಡೆದಿದ್ದು, ಒಂದು ಹುದ್ದೆಗೆ ಬಹುಕೋಟಿ ರೂಪಾಯಿ ಲಂಚ ಪಡೆಯಲಾಗಿದೆ' ಎಂಬ ಆರೋಪ ಎದುರಾಯಿತು. ಹಾಗಿದ್ದರೂ, ವ್ಯಕ್ತಿತ್ವ ಪರೀಕ್ಷೆ ವೇಳಾಪಟ್ಟಿಯನ್ನು ಆಯೋಗ ಹೊರಡಿಸಿತು.



ಹಳೆಯ ತಪ್ಪುಗಳಿಂದ ಪಾಠ ಕಲಿಯುವ ಬದಲು, ಪ್ರಮಾದಗಳ ಪರಂಪರೆಯನ್ನೇ ಮುಂದುವರಿಸಲು 'ಕೆಪಿಎಸ್‌ಸಿ' ಹಟ ಹಿಡಿದಂತಿದೆ. ಆಯೋಗದ ನೇಮಕಾತಿ ಪ್ರಕ್ರಿಯೆ ಮತ್ತೆ ವಿವಾದಕ್ಕೆ ಕಾರಣವಾಗಿದೆ.

ಅರ್ಹತಾ ಪಟ್ಟಿ ಸಿದ್ಧಪಡಿಸುವಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿ ವರದಿ ನೀಡುವಂತೆ ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಆಯೋಗದ ಕಾರ್ಯದರ್ಶಿಗೆ ಸೂಚಿಸಿದರು. 'ಯಾವುದೇ ಭ್ರಷ್ಟಾಚಾರ ನಡೆದಿಲ್ಲ. ಅತ್ಯಂತ ಪಾರದರ್ಶಕವಾಗಿ ಪರೀಕ್ಷೆ ನಡೆಸಿ ಪಟ್ಟಿ ಬಿಡುಗಡೆ ಮಾಡಲಾಗಿದೆ. ಆಧಾರವಿಲ್ಲದೆ ಆರೋಪ ಮಾಡುವುದು ಸರಿಯಲ್ಲ' ಎಂದು ಆಯೋಗದ ಕಾರ್ಯದರ್ಶಿ ಕೆ. ಜ್ಯೋತಿ ಪ್ರತಿಪಾದಿಸಿದರು. ಈ ಬೆಳವಣಿಗೆಗಳ ಮಧ್ಯೆಯೇ, ವ್ಯಕ್ತಿತ್ವ ಪರೀಕ್ಷೆಗೆ ನಿಗದಿಪಡಿಸಿದ್ದ ವೇಳಾಪಟ್ಟಿಯನ್ನು ಆಡಳಿತಾತ್ಮಕ ಕಾರಣಗಳಿಗೆ ಹಿಂಪಡೆಯಲಾಗಿದೆ ಎಂದು ಆಯೋಗ ಹೇಳಿದೆ. ನೇಮಕಾತಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪವು ವಿಧಾನಸಭೆ ಕಲಾಪದಲ್ಲೂ ಪ್ರತಿಧ್ವನಿಸಿದೆ. 'ಕೆಪಿಎಸ್‌ಸಿಯು ಉದ್ಯೋಗಾಕಾಂಕ್ಷಿಗಳ ಕನಸನ್ನೇ ಕೊಲ್ಲುವ ಕೇಂದ್ರ' ಎಂದು ವಿರೋಧ ಪಕ್ಷದ ಸದಸ್ಯರು ಆತಂಕ ವ್ಯಕ್ತಪಡಿಸಿದರೆ, 'ಆಯೋಗವನ್ನೇ ರದ್ದುಪಡಿಸಬೇಕು' ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಪಾದಿಸಿದ್ದಾರೆ. ಕೆಪಿಎಸ್‌ಸಿ ಕರ್ಮಕಾಂಡದ ಬಗ್ಗೆ ಕಲಾಪದಲ್ಲಿ ಚರ್ಚೆ ನಡೆಯುತ್ತಿರುವುದು ಹೊಸತೇನೂ ಅಲ್ಲ. 2025ರಲ್ಲಿ ನಡೆದ ಅಧಿವೇಶನದಲ್ಲಿ ನಡೆದ ಚರ್ಚೆಗೆ ಅದೇ ವರ್ಷದ ಮಾರ್ಚ್ 12ರಂದು ಉತ್ತರ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಆಯೋಗದಲ್ಲಿ ಪಾರದರ್ಶಕತೆ ತಂದು, ಉದ್ಯೋಗಾಕಾಂಕ್ಷಿಗಳಲ್ಲಿ ವಿಶ್ವಾಸ ತುಂಬಲು ಕಾಯ್ದೆಗಳಿಗೆ ತಿದ್ದುಪಡಿ ತಂದು, ನಿಯಮಗಳನ್ನು ಬದಲಾವಣೆ ಮಾಡಲಾಗುವುದು ಎಂದು ಭರವಸೆ ನೀಡಿದ್ದರು. ಅಂತಹ ಸುಧಾರಣೆಯೇನೂ ಈ ಒಂದು ವರ್ಷದಲ್ಲಿ ಕಾಣಲಿಲ್ಲ. 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯ ಅಧಿಸೂಚನೆ ಹೊರಬಿದ್ದ ಬಳಿಕ ಆಯೋಗದ ಕಾರ್ಯದರ್ಶಿಗಳಾಗಿದ್ದ ಲತಾಕುಮಾರಿ, ರಾಕೇಶ್‌ಕುಮಾರ್, ರಮಣದೀಪ್ ಚೌಧರಿ, ಆರ್. ವಿಶಾಲ್, ಹೀಗೆ ನಾಲ್ವರನ್ನು ವರ್ಗಾವಣೆ ಮಾಡಲಾಗಿದೆ. ಕಾಣದ ಕೈಗಳ ಒತ್ತಡಕ್ಕೆ ಮಣಿದು ಪ್ರಮುಖ ಹುದ್ದೆಯಲ್ಲಿರುವವರನ್ನು ವರ್ಗಾವಣೆ ಮಾಡಲಾಗಿದೆ ಎಂಬ ಆರೋಪವೂ ಇದೆ. ಆಯೋಗದ ಆಡಳಿತ ಕಾರ್ಯದರ್ಶಿಯದಾದರೂ ಪರೀಕ್ಷೆಯ ಉಸ್ತುವಾರಿ ನಿಯಂತ್ರಕರದ್ದಾಗಿದೆ. 'ನಾಲ್ಕು ವರ್ಷಗಳಿಂದ ಈ ಹುದ್ದೆಯಲ್ಲಿರುವ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಅವರನ್ನು ಈವರೆಗೂ ವರ್ಗಾವಣೆ ಮಾಡಿಲ್ಲ. ಪರೀಕ್ಷೆಗಳಲ್ಲಿನ ಲೋಪಕ್ಕೆ ಅವರೇ ಕಾರಣ' ಎಂದು ವಿಧಾನಸಭೆಯಲ್ಲಿ ಶಾಸಕರೇ ಆಪಾದಿಸಿದ್ದಾರೆ.

ಆಯೋಗವು ಸಾಂವಿಧಾನಿಕ ಸಂಸ್ಥೆಯಾಗಿರುವುದರಿಂದಾಗಿ, ತಪ್ಪಿತಸ್ಥ ಸದಸ್ಯರ ವಿರುದ್ಧ ಕ್ರಮ ಜರುಗಿಸುವ ಅಧಿಕಾರ ಸರ್ಕಾರಕ್ಕೆ ಇಲ್ಲ. ಆದರೆ, ಹೊಸದಾಗಿ ಸದಸ್ಯರ ಹೆಸರನ್ನು ರಾಜ್ಯಪಾಲರಿಗೆ ಶಿಫಾರಸು ಮಾಡುವಾಗ ಕಳಂಕರಹಿತರು, ಪ್ರಾಮಾಣಿಕರನ್ನು ಪರಿಗಣಿಸಲು ಸರ್ಕಾರ ಮುಂದಾಗಬೇಕು. ನಿವೃತ್ತ ನ್ಯಾಯಮೂರ್ತಿಗಳು, ಆಡಳಿತ ತಜ್ಞರ ಜತೆ ಸಮಾಲೋಚನೆ ನಡೆಸಿ ಆಯೋಗಕ್ಕೆ ಗಂಭೀರವಾದ ಚಿಕಿತ್ಸೆ ಮಾಡಲು ಸರ್ಕಾರ ಮುಂದಾಗಬೇಕಿದೆ. ಯುಪಿಎಸ್‌ಸಿ ಮಾದರಿಯಲ್ಲಿ ಕೆಪಿಎಸ್‌ಸಿ ರೂಪಿಸುವ ಮಾತುಗಳನ್ನು ಆಡುತ್ತಲೇ ಬಂದಿರುವ ಸರ್ಕಾರ, ಈಗಲಾದರೂ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕು.

ಯುದ್ಧ: ಮನುಷ್ಯನಷ್ಟೇ ಸಂತ್ರಸ್ತನಲ್ಲ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಯುದ್ಧವು ಮನುಷ್ಯರ ಸಾವು-ನೋವಿಗಷ್ಟೇ ಕಾರಣವಾಗುವುದಿಲ್ಲ; ಪರಿಸರ ಹಾಗೂ ಜೀವವೈವಿಧ್ಯವನ್ನೂ ತೀವ್ರವಾಗಿ ಗಾಸಿಗೊಳಿಸುತ್ತದೆ. ಇದರ ಪರಿಣಾಮವನ್ನು ತಲೆಮಾರುಗಳು ಅನುಭವಿಸಬೇಕಾಗುತ್ತದೆ. ದುರದೃಷ್ಟವಶಾತ್, ನಮ್ಮ ಬಹುತೇಕ ಯುದ್ಧವಿರೋಧಿ ಪರಿಕಲ್ಪನೆಗಳಲ್ಲಿ ಪರಿಸರ ಹಾಗೂ ಜೀವವೈವಿಧ್ಯಕ್ಕೆ ಸ್ಥಾನವಿಲ್ಲ.

ಯುದ್ಧಗಳಲ್ಲಿ ಸಂಭವಿಸುವ ಸಾವು-ನೋವುಗಳಿಂದ ಆತಂಕಗೊಳ್ಳುತ್ತೇವೆ. ಮಾನವ ಕೇಂದ್ರಿತ ಕಷ್ಟಗಳು ವಿಶ್ವಕ್ಕೆ ಎದ್ದು ಕಾಣುತ್ತವೆ. ಆದರೆ, ಯುದ್ಧಗಳಿಂದ ಜೀವವೈವಿಧ್ಯಕ್ಕೆ ಆಗುವ ದೌರ್ಜನ್ಯ ನಮ್ಮ ಗಮನಕ್ಕೆ ಬರುವುದು, ಆತಂಕಕ್ಕೆ ಕಾರಣವಾಗುವುದು ಕಡಿಮೆ. ಯುದ್ಧ ಸಾಮಗ್ರಿಗಳಿಂದಾಗುವ ಪರಿಸರದ ವಿನಾಶ ನಮ್ಮ ಹೃದಯದ ಕದ ತಟ್ಟುವಲ್ಲಿ ಸೋಲುತ್ತಲೇ ಇದೆ.

1960-70ರ ದಶಕದಲ್ಲಿ ನಡೆದ ವಿಯೆಟ್ನಾಂ ಯುದ್ಧದಲ್ಲಿ ಅಮೆರಿಕ ಸೇನೆ ಬಳಸಿದ 'ಏಜೆಂಟ್ ಆರೆಂಜ್' ಎಂಬ ರಾಸಾಯನಿಕವು ಸುಮಾರು 30 ಲಕ್ಷ ಹೆಕ್ಟೇರ್ ಅರಣ್ಯವನ್ನು ನಾಶ ಮಾಡಿತು. ವಿಷಕಾರಿ ರಾಸಾಯನಿಕದ ಪರಿಣಾಮದಿಂದ ಸಾವಿರಾರು ಜನರು ಕ್ಯಾನ್ಸರ್ ಮತ್ತು ಅಂಗವೈಕಲ್ಯದಿಂದ ಬಳಲಿದರು. ಅನೇಕ ಪ್ರಾಣಿ ಮತ್ತು ಪಕ್ಷಿ ಪ್ರಭೇದಗಳು ಸಂಪೂರ್ಣವಾಗಿ ನಾಶವಾದವು.

1983ರಿಂದ 2009ರವರೆಗೆ ಶ್ರೀಲಂಕಾದಲ್ಲಿ ನಡೆದ ಆಂತರಿಕ ಯುದ್ಧದಲ್ಲಿ ಉತ್ತರ ಮತ್ತು ಪೂರ್ವ ಶ್ರೀಲಂಕಾದ ಅರಣ್ಯ ಪ್ರದೇಶಗಳು ಸೈನಿಕ ಚಟುವಟಿಕೆಗಳಿಂದ ಗಾಸಿಗೊಂಡವು. ಈ ಪ್ರದೇಶಗಳು ಏಷ್ಯಾಟಿಕ್ ಆನೆಗಳ ಪ್ರಮುಖ ಆವಾಸ ಸ್ಥಾನವಾಗಿದ್ದವು. ಅರಣ್ಯ ಪ್ರದೇಶಗಳನ್ನು ಸೇನಾ ಶಿಬಿರಗಳು ಮತ್ತು ರಕ್ಷಣಾತ್ಮಕ ಕಟ್ಟಡಗಳಿಗಾಗಿ ತೆರವುಗೊಳಿಸಲಾಯಿತು. ಭೂಮಿಯ ಅಡಿಯಲ್ಲಿ ಸಾವಿರಾರು ಬಾಂಬ್‌ಗಳನ್ನು ಹೂಳಲಾಯಿತು. ಪರಿಸರ ಅಧ್ಯಯನಗಳ ಪ್ರಕಾರ, ಯುದ್ಧದ ಸಮಯದಲ್ಲಿ ನೂರಾರು ಆನೆಗಳು ನೆಲಬಾಂಬ್‌ಗಳ ಸ್ಫೋಟಗಳಿಂದ ಗಾಯಗೊಂಡವು ಅಥವಾ ಸಾವನ್ನಪ್ಪಿದವು. ಯುದ್ಧ ಮುಗಿದ ನಂತರವೂ ಹಲವು ವರ್ಷಗಳವರೆಗೆ ಈ ನೆಲಬಾಂಬ್‌ಗಳು ಆನೆಗಳಿಗೆ ಅಪಾಯಕಾರಿಯಾಗಿ ಪರಿಣಮಿಸಿದವು. ಅರಣ್ಯ ಪ್ರದೇಶಗಳನ್ನು ಕಳೆದುಕೊಂಡ ಆನೆಗಳು ಮಾನವ ವಾಸಸ್ಥಳಗಳತ್ತ ಸರಿದುಬಂದ ಪರಿಣಾಮ ಮಾನವ-ಆನೆ ಸಂಘರ್ಷ ಹೆಚ್ಚಿತು.

1991ರಲ್ಲಿ ನಡೆದ ಗಲ್ಫ್ ಯುದ್ಧ ಬರೀ ರಾಜಕೀಯ ಸಂಘರ್ಷವಾಗಿರಲಿಲ್ಲ. ಅದು, ಆಧುನಿಕ ಇತಿಹಾಸದ ಭೀಕರ ಪರಿಸರ ಭಯೋತ್ಪಾದನೆಗೆ ಸಾಕ್ಷಿಯಾಯಿತು. ಯುದ್ಧದಿಂದ ಹಿಮ್ಮೆಟ್ಟುತ್ತಿದ್ದ ಇರಾಕ್‌ನ ಸೈನ್ಯ ಸುಮಾರು 700 ತೈಲ ಬಾವಿಗಳಿಗೆ ಬೆಂಕಿ ಹಚ್ಚಿತು. ದಟ್ಟವಾದ ಕಪ್ಪು ಹೊಗೆ ಸೂರ್ಯನ ಕಿರಣಗಳನ್ನು ತಡೆದು, ವಾರಗಳ ಕಾಲ ಆ ಭಾಗದಲ್ಲಿ ತಾಪಮಾನ ಗಣನೀಯವಾಗಿ ಕುಸಿಯುವಂತೆ ಮಾಡಿತು. ಅಂದಾಜು 11 ದಶಲಕ್ಷ ಬ್ಯಾರೆಲ್ ತೈಲ ಪರ್ಷಿಯನ್ ಗಲ್ಫ್‌ಗೆ ಹರಿಯಿತು. ಇದು ಜಗತ್ತಿನ ಅತಿದೊಡ್ಡ ಸಮುದ್ರ ತೈಲ ಸೋರಿಕೆ ಎಂದು ದಾಖಲಾಗಿದೆ. ತೈಲವು ಪಕ್ಷಿಗಳ ರೆಕ್ಕೆಗಳ ಮೇಲೆ ಅಂಟಿಕೊಂಡಾಗ ಹಾರಲು ಸಾಧ್ಯವಾಗುವುದಿಲ್ಲ. ದೇಹದ ತಾಪಮಾನ ನಿಯಂತ್ರಣವೂ ಕಳೆದು ಹೋಗುತ್ತದೆ. ಪರಿಣಾಮವಾಗಿ ಅವು ಹಸಿವು, ಶೀತ ಅಥವಾ ವಿಷಪೂರಿತ ಪರಿಣಾಮಗಳಿಂದ ಸಾವನ್ನಪ್ಪುತ್ತವೆ. 25,000ಕ್ಕಿಂತ ಹೆಚ್ಚು ಸಮುದ್ರಪಕ್ಷಿಗಳು ತೈಲ ಮಾಲಿನ್ಯದಿಂದ ಮೃತಪಟ್ಟವು.

ಸಮುದ್ರದ ಹವಳದ ದಿಬ್ಬಗಳು ಮತ್ತು ಮೀನುಗಳ ಸಂತತಿಗೂ ತುಂಬಲಾರದ ನಷ್ಟವಾಯಿತು. ವಾತಾವರಣಕ್ಕೆ ಸೇರಿದ ಇಂಗಾಲದ ಕಣಗಳು ಮಳೆಯೊಂದಿಗೆ ಬೆರೆತು ಕಪ್ಪು ಮಳೆಯಾಗಿ ಸುರಿದವು. ಇದು ಕುವೈತ್ ಮಾತ್ರವಲ್ಲದೆ, ನೆರೆಯ ದೇಶಗಳ ಕೃಷಿಭೂಮಿಯನ್ನು ಕಲುಷಿತಗೊಳಿಸಿತು.

2022ರಿಂದ ನಡೆಯುತ್ತಿರುವ ರಷ್ಯಾ ಮತ್ತು ಉಕ್ರೇನ್ ಯುದ್ಧದಿಂದ ಹಲವಾರು ಸಂರಕ್ಷಿತ ಅರಣ್ಯ ಪ್ರದೇಶಗಳು ಹಾನಿಗೊಂಡಿವೆ. ಕಪ್ಪುಸಮುದ್ರ ತೀರದ ಜೀವಗೋಳ ಪ್ರದೇಶವು ಯುರೋಪಿನ ಅತ್ಯಂತ ಮಹತ್ವದ ಪಕ್ಷಿಗಳ ವಲಸೆ ಮಾರ್ಗಗಳಲ್ಲಿ ಒಂದಾಗಿದೆ. ಸಾವಿರಾರು ಜಲಪಕ್ಷಿಗಳು ಮತ್ತು ವಲಸೆ ಪಕ್ಷಿಗಳ ತಂಗುದಾಣವದು. ಕ್ಷಿಪಣಿ ದಾಳಿ ಮತ್ತು ಸ್ಫೋಟಗಳಿಂದ ಹುಲ್ಲುಗಾವಲು ಮತ್ತು ತೀರ ಪ್ರದೇಶಗಳು ಸುಟ್ಟುಹೋಗಿವೆ. ಸೈನಿಕ ವಾಹನಗಳ ಸಂಚಾರದಿಂದ ಪಕ್ಷಿಗಳ ಆವಾಸಸ್ಥಾನ ನಾಶವಾಗಿದೆ. ಭೀಕರ ಶಬ್ದದಿಂದ ಪಕ್ಷಿಗಳ ವಲಸೆಚಕ್ರ ಅಸ್ತವ್ಯಸ್ತವಾಗಿದೆ. ಉಕ್ರೇನ್‌ನ ಶೇ 20ರಿಂದ 30ರಷ್ಟು ಸಂರಕ್ಷಿತ ಪ್ರದೇಶಗಳು ನೇರವಾಗಿ ಅಥವಾ ಪರೋಕ್ಷವಾಗಿ ಹಾನಿಗೊಂಡಿವೆ ಎನ್ನಲಾಗಿದೆ.

ಯುದ್ಧವೆಂಬುದು ಮಾನವನ ಅಹಂಕಾರದ ಪರಾಕಾಷ್ಠೆ. ಯುದ್ಧದಿಂದ ಒಳಿತಾದ ಉದಾಹರಣೆಗಳು ಎಲ್ಲಿಯೂ ಸಿಗುವುದಿಲ್ಲ. ಬುದ್ಧಿವಂತ, ನಾಗರಿಕನೆಂದು ಕರೆದುಕೊಳ್ಳುವ ಮಾನವ ಇಂತಹ ವಿನಾಶಕ್ಕೆ ಮುಂದಾಗುತ್ತಿದ್ದಾನೆ.

ಮಾನವ ಇತಿಹಾಸದಲ್ಲಿ ಯುದ್ಧಗಳ ಕಥೆ ಹೊಸದಲ್ಲ. ಪ್ರಾಚೀನ ಕಾಲದಿಂದ ಆಧುನಿಕ ಯುಗದವರೆಗೂ ಅನೇಕ ಯುದ್ಧಗಳು ನಡೆದಿವೆ. ಇಂದಿನ ಯುದ್ಧಗಳ ಸ್ವರೂಪ ಮತ್ತು ಪರಿಣಾಮಗಳು ಹಿಂದಿನ ಯುದ್ಧಗಳಿಗೆ ಹೋಲಿಕೆಯಾಗದಷ್ಟು ಭಯಾನಕವಾಗಿವೆ. ರಷ್ಯಾ ಮತ್ತು ಉಕ್ರೇನ್ ಯುದ್ಧ ಹಾಗೂ ಇರಾನ್‌ನೊಂದಿಗೆ ಅಮೆರಿಕ-ಇಸ್ರೇಲ್ ಯುದ್ಧದ ಕರಿನೆರಳು ಇಡೀ ಜಗತ್ತಿಗೆ ಕವಿದಿದೆ. ಈ ಯುದ್ಧಗಳಲ್ಲಿ ದೊಡ್ಡ ಪ್ರಮಾಣದ ಸಾವು-ನೋವು ಸಂಭವಿಸಿದೆ, ಸಂಭವಿಸುತ್ತಿದೆ. ಲಕ್ಷಾಂತರ ಜನರು ಬೀದಿಗೆ ಬಂದಿದ್ದಾರೆ.

ರಷ್ಯಾ-ಉಕ್ರೇನ್ ಯುದ್ಧದಲ್ಲೂ ಪರಿಸರಕ್ಕೆ ಅಪಾರ ಹಾನಿಯಾಗಿದೆ. ಪರಿಸರ ಸಂಶೋಧನೆಗಳ ಪ್ರಕಾರ, ಈ ಯುದ್ಧದಿಂದ ಈಗಾಗಲೇ 150 ದಶಲಕ್ಷ ಟನ್‌ಗಿಂತ ಹೆಚ್ಚು ಇಂಗಾಲಾಮ್ಲ ವಾತಾವರಣಕ್ಕೆ ಬಿಡುಗಡೆಯಾಗಿದೆ. ಹಲವಾರು ಸಣ್ಣ ರಾಷ್ಟ್ರಗಳ ವಾರ್ಷಿಕ ಇಂಗಾಲಾಮ್ಲ ಕಕ್ಕುವಿಕೆಗಿಂತಲೂ ಹೆಚ್ಚಿನ ಪ್ರಮಾಣವಿದು. ಯುದ್ಧದ ಪರಿಣಾಮವಾಗಿ ಉಕ್ರೇನ್‌ನ ಅನೇಕ ಅರಣ್ಯ ಪ್ರದೇಶಗಳು ಸುಟ್ಟುಹೋಗಿವೆ. ಕೃಷಿ ಭೂಮಿಗಳಲ್ಲಿ ಸ್ಫೋಟಕಗಳು ಮತ್ತು ಭಾರೀ ಲೋಹಗಳ ಮಾಲಿನ್ಯ ಕಂಡುಬಂದಿದೆ. ಉಕ್ರೇನ್‌ನ ಕೆಲವು ಸಂರಕ್ಷಿತ ಪ್ರದೇಶಗಳಲ್ಲಿ ನಡೆದ ಸ್ಫೋಟಗಳಿಂದ ಸಾವಿರಾರು ಹೆಕ್ಟೇರ್ ಹುಲ್ಲುಗಾವಲು ಪ್ರದೇಶ ಮತ್ತು ಕಾಡು ಹಾನಿಗೊಳಗಾಗಿದೆ.

ಯುದ್ಧವೆಂಬುದು ಬರೀ ಮಾನವರ ನಡುವಿನ ಘರ್ಷಣೆಯಲ್ಲ; ಅದು ಭೂಮಿಯ ಮೇಲಿನ ಸಕಲ ಜೀವಜಗತ್ತಿನ ವಿರುದ್ಧ ನಡೆಯುವ ಘೋರ ದೌರ್ಜನ್ಯ.

ಯುದ್ಧಗಳಲ್ಲಿ ಬಳಸುವ ಬಾಂಬ್‌ಗಳು, ಕ್ಷಿಪಣಿಗಳು, ರಾಸಾಯನಿಕಗಳು ಭೂಮಿಯ ಮೇಲಿನ ಪರಿಸರ ವ್ಯವಸ್ಥೆಯನ್ನು ಭಾರೀ ಪ್ರಮಾಣದಲ್ಲಿ ಹಾಳು ಮಾಡುತ್ತವೆ. ಭೂಮಿಯ ಮಣ್ಣು, ನೀರು ಮತ್ತು ವಾಯುಮಂಡಲದ ಮೇಲೆ ಉಂಟಾಗುವ ಪರಿಣಾಮಗಳು ದಶಕಗಳ ಕಾಲ ಮುಂದುವರಿಯುತ್ತವೆ.

ಈಗಾಗಲೇ, ಗಂಭೀರವಾಗಿರುವ ಹವಾಮಾನ ಬದಲಾವಣೆಯ ಸಮಸ್ಯೆಯನ್ನು ಯುದ್ಧ ಮತ್ತಷ್ಟು ಸಂಕೀರ್ಣಗೊಳಿಸುತ್ತದೆ. ಬಾಂಬ್ ಸ್ಫೋಟಗಳು, ತೈಲ ಸಂಗ್ರಹಾಲಯಗಳ ಬೆಂಕಿ, ವಾಹನಗಳ ದಹನ ಮತ್ತು ಸೈನಿಕ ಚಟುವಟಿಕೆಗಳಿಂದ ದೊಡ್ಡ ಪ್ರಮಾಣದಲ್ಲಿ ಹಸಿರುಮನೆ ಅನಿಲಗಳು ಬಿಡುಗಡೆಯಾಗುತ್ತವೆ. ಇದರಿಂದ ಭೂಮಿಯ ಉಷ್ಣತೆ ವೇಗವಾಗಿ ಹೆಚ್ಚುತ್ತದೆ. ಜಾಗತಿಕ ತಾಪಮಾನ ಏರಿಕೆ, ಬರ, ಅತಿವೃಷ್ಟಿ, ಚಂಡಮಾರುತಗಳಂತಹ ಹವಾಮಾನ ವಿಪತ್ತುಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಯುದ್ಧಗಳು ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುತ್ತವೆ.

ಯುದ್ಧದ ಪರಿಣಾಮದಿಂದ ರೈತರು ಹೆಚ್ಚು ಸಂಕಷ್ಟ ಅನುಭವಿಸುತ್ತಾರೆ. ಕೃಷಿ ಭೂಮಿಗಳು ಸ್ಫೋಟಗಳಿಂದ ಹಾನಿಗೊಳಗಾಗುತ್ತವೆ. ಭೂಮಿಯಲ್ಲಿ ಉಳಿಯುವ ಸ್ಫೋಟಕ ಅವಶೇಷಗಳು ಕೃಷಿಗೆ ಅಪಾಯಕಾರಿಯಾಗುತ್ತವೆ. ಅನೇಕ ದೇಶಗಳಲ್ಲಿ ಯುದ್ಧದ ಪರಿಣಾಮವಾಗಿ ಆಹಾರ ಉತ್ಪಾದನೆ ಕುಸಿದು ಜಾಗತಿಕ ಆಹಾರ ಭದ್ರತೆಗೆ ಭಾರೀ ಸವಾಲು ಎದುರಾಗುತ್ತದೆ. ರಷ್ಯಾ-ಉಕ್ರೇನ್ ಯುದ್ಧದ ನಂತರ ಜಗತ್ತಿನ ಅನೇಕ ಭಾಗಗಳಲ್ಲಿ ಗೋಧಿ ಮತ್ತು ಧಾನ್ಯಗಳ ಬೆಲೆ ಏರಿಕೆ ಕಂಡುಬಂದಿದೆ.

ಯುದ್ಧದಿಂದ ನಿರಾಶ್ರಿತರಾಗುವವರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಮಕ್ಕಳು. ಶಿಕ್ಷಣ, ಆರೋಗ್ಯ ಸೇವೆಗಳು ಮತ್ತು ಸುರಕ್ಷತೆ ಎಲ್ಲವೂ ಕುಸಿದುಬೀಳುತ್ತವೆ. ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಯುದ್ಧದ ಪರಿಣಾಮಗಳು ದೀರ್ಘಕಾಲ ಉಳಿಯುತ್ತವೆ. ದೇಶದ ಅಭಿವೃದ್ಧಿಗೆ ಬಳಕೆಯಾಗಬೇಕಾದ ಸಂಪನ್ಮೂಲಗಳು ಶಸ್ತ್ರಾಸ್ತ್ರಗಳ ನಿರ್ಮಾಣಕ್ಕೆ ಖರ್ಚಾಗುತ್ತವೆ. ವಿಶ್ವದಾದ್ಯಂತ ವರ್ಷಕ್ಕೆ ಸುಮಾರು ಎರಡು ಟ್ರಿಲಿಯನ್ ಡಾಲರ್‌ಗಿಂತ ಹೆಚ್ಚು ಹಣವನ್ನು ರಕ್ಷಣಾ ವೆಚ್ಚಗಳಿಗೆ ಬಳಸಲಾಗುತ್ತಿದೆ ಎಂದು ಜಾಗತಿಕ ಅಂಕಿ-ಅಂಶಗಳು ಹೇಳುತ್ತವೆ. ಈ ಮೊತ್ತವನ್ನು ಪರಿಸರ ಸಂರಕ್ಷಣೆ, ಶಿಕ್ಷಣ, ಆರೋಗ್ಯ ಮತ್ತು ದಾರಿದ್ರ್ಯ ನಿರ್ಮೂಲನೆಗೆ ಬಳಸಿದ್ದರೆ ಮನುಕುಲವೇ ಸಂಪೂರ್ಣವಾಗಿ ಬದಲಾಗುತ್ತಿತ್ತು.

ಯುದ್ಧದ ಪರಿಣಾಮಗಳು ಯಾವುದೋ ಒಂದು ದೇಶಕ್ಕೆ ಸೀಮಿತವಾಗುವುದಿಲ್ಲ. ಭೂಮಂಡಲದ ವಾತಾವರಣವನ್ನೇ ಪ್ರಭಾವಿಸುತ್ತವೆ. ಇರಾನ್ ಅಥವಾ ಮಧ್ಯಪೂರ್ವದಲ್ಲಿ ಉಂಟಾಗುವ ದೊಡ್ಡ ಪ್ರಮಾಣದ ಬೆಂಕಿ ಮತ್ತು ಹೊಗೆ ಜಾಗತಿಕ ವಾಯುಮಂಡಲದಲ್ಲಿ ಹರಡುತ್ತಿದೆ. ಪಶ್ಚಿಮಘಟ್ಟಗಳ ಪರಿಸರದ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಮಳೆಯ ಚಲನೆ ಬದಲಾಗಬಹುದು.

ಮಾನವಕುಲವು ಅಹಂಕಾರವನ್ನು ಬಿಟ್ಟು ಮಾನವೀಯತೆಯ ದಾರಿಗೆ ತಿರುಗಬೇಕಾದ ಸಮಯ ಇದು. ಶಾಂತಿ, ಸಹಕಾರ ಮತ್ತು ಪರಿಸರ ಸಂರಕ್ಷಣೆ ಎಂಬ ಮೌಲ್ಯಗಳು ಮಾತ್ರ ಭೂಮಿಯ ಭವಿಷ್ಯವನ್ನು ಉಳಿಸಬಲ್ಲವು. ಯುದ್ಧಗಳಿಂದ ಯಾವ ದೇಶವೂ ಶಾಶ್ವತ ಜಯವನ್ನು ಸಾಧಿಸಿದ ಉದಾಹರಣೆ ಇಲ್ಲ. ಯುದ್ಧಗಳಿಂದ ನಾಗರಿಕತೆಗಳು ನಾಶವಾಗಿವೆ. ಮಾನವನು ತನ್ನ ಬುದ್ಧಿಶಕ್ತಿಯನ್ನು ವಿನಾಶಕ್ಕೆ ಬಳಸುವುದನ್ನು ಬಿಟ್ಟು ಜೀವಜಗತ್ತಿನ ರಕ್ಷಣೆಗೆ ವಿನಿಯೋಗಿಸಿದರೆ ಭೂಮಿಯ ಭವಿಷ್ಯ ಸುರಕ್ಷಿತವಾಗುತ್ತದೆ.



ವಾಚಕರ ವಾಣಿ

ಮೇಲ್ಮನೆಯಲ್ಲಿ ಎಲ್ಲ ವರ್ಗದವರೂ ಇರಲಿ

ರಾಜಕೀಯ ನಿರಾಶ್ರಿತರ ಶಿಬಿರವಾಗಿ ವಿಧಾನ ಪರಿಷತ್ ಬದಲಾಗಿದೆಯೇ ಎಂಬ ಪ್ರಶ್ನೆ ಜನಸಾಮಾನ್ಯರನ್ನು ಕಾಡುತ್ತಿದೆ. ನಮ್ಮದು ಪ್ರಜೆಗಳಿಂದ, ಪ್ರಜೆಗಳಿಗಾಗಿ ಇರುವ ವ್ಯವಸ್ಥೆ. ಪಕ್ಷಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಪ್ರತಿನಿಧಿಗಳನ್ನು ಆರಿಸುವುದಾದರೆ, ಅಲ್ಲಿ ಜನಸಾಮಾನ್ಯರ ಸಮಸ್ಯೆಗಳ ಚರ್ಚೆ ಸಾಧ್ಯವೆ? ವಿಧಾನ ಪರಿಷತ್‌ಗೆ ಸಂವಿಧಾನದ ಅನುಚ್ಛೇದ 171(3)(ಎ) ಮತ್ತು (ಡಿ) ಅಡಿ ಆಯ್ಕೆಯಾಗುವವರಲ್ಲಿ ಎಷ್ಟು ಮಂದಿ ಸಂಶೋಧಕರು ಅಥವಾ ವಿಷಯ ತಜ್ಞರಿದ್ದಾರೆ? ಅಧಿಕಾರ ವಂಚಿತರೇ ಇಲ್ಲಿ ಹೆಚ್ಚಾಗಿ ಕಾಣಿಸುತ್ತಿದ್ದಾರೆ. ಹಾಗಾಗಿ, ಸಂವಿಧಾನದ ಅನುಚ್ಛೇದ 171(3) ತಿದ್ದುಪಡಿಯಾಗಬೇಕು. ರೈತರು, ವೈದ್ಯರು, ವಕೀಲರು, ನಿರುದ್ಯೋಗಿ ಪದವೀಧರರ ಧ್ವನಿ ಪರಿಷತ್ತಿನಲ್ಲಿ ಕೇಳಿಸುವಂತಾಗಬೇಕಿದೆ.

ಭಾಸ್ಕರ ಮುದೇನೂರು, ರಾಣೆಬೆನ್ನೂರು

ಉಚಿತ ಶಿಕ್ಷಣ: ಕೇರಳ ಮಾದರಿಯಾಗಲಿ

ಕೇರಳದಲ್ಲಿ ಪ್ರಾಥಮಿಕ ಶಾಲೆಯಿಂದ ಪದವಿಯವರೆಗೆ ಉಚಿತ ಶಿಕ್ಷಣ ನೀಡುವ ಬಗ್ಗೆ ಅಲ್ಲಿನ ಸರ್ಕಾರ ಘೋಷಿಸಿದೆ. ಇದು ಸರ್ಕಾರಿ, ಅನುದಾನಿತ ಶಾಲೆ-ಕಾಲೇಜುಗಳಿಗೆ ಅನ್ವಯವಾಗಲಿದೆ. ಇದಕ್ಕಾಗಿ ಸರ್ಕಾರವು ₹259 ಕೋಟಿ ಅನುದಾನ ಮೀಸಲಿಟ್ಟಿದೆ. ಜನತೆಗೆ 'ಉಚಿತ' ಭಾಗ್ಯ ನೀಡುವುದಕ್ಕಿಂತ ಉಚಿತ ಶಿಕ್ಷಣ ಮತ್ತು ಆರೋಗ್ಯ ಭಾಗ್ಯ ನೀಡಬೇಕು ಎನ್ನುವ ಕೂಗು ಬಹುದಿನಗಳಿಂದ ಅಲ್ಲಿ ಕೇಳಿ ಬರುತ್ತಿತ್ತು. ಅವರ ಬೇಡಿಕೆಯು ಭಾಗಶಃ ಈಡೇರಿದೆ. ವಿಪರ್ಯಾಸವೆಂದರೆ, 'ಉಚಿತ ಭಾಗ್ಯ'ಗಳನ್ನು ಯಥಾವತ್ತಾಗಿ ನಕಲು ಮಾಡಿ ಅದರ ಲಾಭ ಪಡೆಯುತ್ತಿರುವ ಇತರೆ ರಾಜ್ಯಗಳು ಕೇರಳದ ಈ ಮಾದರಿಯ ಅನುಸರಣೆಗೆ ಹಿಂದಡಿ ಇಟ್ಟಿವೆ.

ರಮಾನಂದ ಎಸ್., ಬೆಂಗಳೂರು

ಖಾಸಗಿತನದ ಮೇಲೆ ಹಲ್ಲೆ ಸರಿಯಲ್ಲ

ಬಹುಭಾಷಾ ನಟಿ ಕನ್ನಡದ ರಶ್ಮಿಕಾ ಮಂದಣ್ಣ ಇತ್ತೀಚೆಗೆ ನಟ ವಿಜಯ್ ದೇವರಕೊಂಡ ಜೊತೆಗೆ ಸಪ್ತಪದಿ ತುಳಿದಿದ್ದಾರೆ. ಅವರ ವಿವಾಹವಾಗಿ ಇನ್ನೂ ತಿಂಗಳೂ ಆಗಿಲ್ಲ. ಕೆಲವು ಕಿಡಿಗೇಡಿಗಳು ಆಗಲೇ ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆ ತೆರೆದು ಅವರಿಬ್ಬರ ಖಾಸಗಿ ಜೀವನದ ಬಗ್ಗೆ ಸುಳ್ಳುಸುದ್ದಿ ಹರಡುತ್ತಿದ್ದಾರೆ. ಕೆಲವು ದುರುಳರು ಇವರ ಏಳಿಗೆ ಸಹಿಸದೆ ನಿರಂತರವಾಗಿ ಇಬ್ಬರನ್ನೂ ಗುರಿಯಾಗಿಸಿ ತೇಜೋವಧೆಗೆ ಇಳಿದಿರುವುದು ಕಳವಳಕಾರಿ. ಸುಳ್ಳುಸುದ್ದಿ ಹರಡಿದರೆ ಅವರಿಗೆ ಎಷ್ಟು ಆಘಾತವಾಗುತ್ತದೆ ಎಂದು ಇಂತಹ ಹಿಂಸಾನಂದಿಗಳಿಗೆ ಕಿಂಚಿತ್ತೂ ಅರ್ಥವಾಗುವುದಿಲ್ಲ. ತಾರಾಜೋಡಿಯ ಖಾಸಗಿತನದ ಮೇಲಿನ ಗಂಭೀರ ಆಕ್ರಮಣ ಆತಂಕ ಹುಟ್ಟಿಸುವಂತಹದ್ದು ಹಾಗೂ ಖಂಡನಾರ್ಹ.

ಎಚ್.ವಿ. ಶ್ರೀಧರ್, ಬೆಂಗಳೂರು

ಮೀಸಲಾತಿ ಕಗ್ಗಂಟು: ಪರಿಹಾರ ಮರೀಚಿಕೆ

ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಒಳಮೀಸಲಾತಿಯ ಗೊಂದಲ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿದೆ. ಆದರೆ, ಕಾನೂನಿನ ನೆಲೆಗಟ್ಟಿನಲ್ಲಿ ಇದಕ್ಕೆ ಪರಿಹಾರ ಕಂಡುಕೊಳ್ಳುವ ಪ್ರಯತ್ನಕ್ಕೆ ಸರ್ಕಾರ ಮುಂದಡಿ ಇಡದಿರುವುದು ಸೋಜಿಗ. ಜನಸಂಖ್ಯೆಗೆ ಅನುಗುಣವಾಗಿ ಶೋಷಿತ ಸಮುದಾಯಗಳು ಸಮಾಜದ ಮುಖ್ಯ ವಾಹಿನಿಗೆ ಬಾರದಿದ್ದಾಗ ಮೀಸಲಾತಿ ಪ್ರಮಾಣವನ್ನು ಶೇ 50ಕ್ಕಿಂತ ಹೆಚ್ಚು ನಿಗದಿಪಡಿಸಬಹುದು ಎಂದು ಸುಪ್ರೀಂ ಕೋರ್ಟ್ ವಿಶೇಷ ಪ್ರಕರಣ ಗಳಲ್ಲಿ ಹೇಳಿದೆ. ಮೀಸಲಾತಿ ಹೆಚ್ಚಳದ ವಿಷಯವು ಹೈಕೋರ್ಟ್‌ನಲ್ಲಿದೆ. ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶಗಳನ್ನು ಹೈಕೋರ್ಟ್‌ಗೆ ಮನವರಿಕೆ ಮಾಡಿಕೊಡಬೇಕಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಹೆಚ್ಚಿಸಿರುವ ಮೀಸಲಾತಿಯನ್ನು ಸಂವಿಧಾನದ 9ನೇ ಪರಿಚ್ಛೇದದಡಿ ಸೇರ್ಪಡೆಗೊಳಿಸಲು ಪಕ್ಷಭೇದ ಮರೆತು ಎಲ್ಲರೂ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕಿದೆ. ಪರಸ್ಪರ ದೂಷಣೆಯಲ್ಲಿ ತೊಡಗಿದರೆ ಯಾವುದೇ ಪ್ರಯೋಜನವಿಲ್ಲ.

ಪಂಪಾಪತಿ ಎಂ.ಜಿ., ಬೆಂಗಳೂರು

ಕೆಪಿಎಸ್‌ಸಿಯನ್ನು ಮುಚ್ಚುವುದೇ ಲೇಸು

ಕಳೆದ ಒಂದೂವರೆ ದಶಕದಿಂದ ಕರ್ನಾಟಕ ಲೋಕಸೇವಾ ಆಯೋಗ ನಡೆಸಿರುವ ನೇಮಕಾತಿಗಳು ವಿವಾದದಿಂದ ಮುಕ್ತವಾಗಿಲ್ಲ. ಇತ್ತೀಚೆಗಿನ ಕೆಎಎಸ್ ಮುಖ್ಯ ಪರೀಕ್ಷೆಯ ಫಲಿತಾಂಶವೂ ಇದರಿಂದ ಹೊರತಲ್ಲ. ಕೆಲವು ರಾಜಕಾರಣಿಗಳು ಆಯೋಗದ ಮೇಲೆ ಹಿಡಿತ ಸಾಧಿಸಿದ್ದ ಆರೋಪವೂ ಇದೆ. ಹೀಗಾದರೆ, ಪ್ರತಿಭಾನ್ವಿತ ಬಡವಿದ್ಯಾರ್ಥಿಗಳ ಪಾಡೇನು? ಸರ್ಕಾರಿ ನೌಕರಿ ಪಡೆಯಬೇಕೆಂಬ ಛಲದಿಂದ ವರ್ಷಾನುಗಟ್ಟಲೆ ಪರೀಕ್ಷೆಗೆ ತಯಾರಿ ನಡೆಸುತ್ತಾರೆ. ಕೆಪಿಎಸ್‌ಸಿ ಭ್ರಷ್ಟಾಚಾರದ ಬಗ್ಗೆ ಸದನದಲ್ಲಿ ಚರ್ಚಿಸಿದರೆ ಸಾಲದು. ಇದಕ್ಕೆ ಶಾಶ್ವತ ಪರಿಹಾರ ಕಂಡುಹಿಡಿಯದಿದ್ದರೆ ಆಯೋಗವನ್ನು ಶಾಶ್ವತವಾಗಿ ಮುಚ್ಚುವುದೇ ಲೇಸು.

ಮುರುಗೇಶ ಡಿ., ದಾವಣಗೆರೆ

ವನ್ಯಜೀವಿ ಆವಾಸ ಸಂರಕ್ಷಣೆಗೆ ಉಪೇಕ್ಷೆ

ನರಗುಂದ ತಾಲ್ಲೂಕಿನಲ್ಲಿ ಪಟ್ಟೆ ಕತ್ತೆಕಿರುಬ ಎರಡು ಮರಿಗಳಿಗೆ ಜನ್ಮ ನೀಡಿರುವ ಸುದ್ದಿಯು (ಪ್ರ.ವಾ., ಮಾರ್ಚ್ 13) ವನ್ಯಜೀವಿ ಪ್ರೇಮಿಗಳಿಗೆ ಸಂತಸ ತಂದಿದೆ. ಗದಗ ಸುತ್ತಮುತ್ತಲಿನ ಕಪ್ಪತಗುಡ್ಡ, ಲಕ್ಷ್ಮೇಶ್ವರ, ಶಿರಹಟ್ಟಿ, ಕಡಕೋಳ ಹಾಗೂ ಮುಂಡರಗಿಯಲ್ಲಿ ಕತ್ತೆಕಿರುಬಗಳಿವೆ. ನೀರುನಾಯಿ, ತೋಳ ಮತ್ತು ಜಕ್ಕನರಿ (ಬೆಂಗಾಲ್ ಫಾಕ್ಸ್)ಗಳೂ ವಾಸಿಸುತ್ತವೆ. ಇತ್ತೀಚೆಗೆ ಈ ಪ್ರದೇಶಗಳಲ್ಲಿ ವ್ಯಾಪಕವಾದ ಅರಣ್ಯ ಅತಿಕ್ರಮಣ ಹೆಚ್ಚಿದೆ. ಹುಲ್ಲುಗಾವಲಿಗೆ ಬೆಂಕಿ ಇಡುವುದು ಹಾಗೂ ವನ್ಯಜೀವಿಗಳು ವಾಸಿಸುವ ಚಿಕ್ಕಪುಟ್ಟ ಕಲ್ಲಿನ ಗುಹೆಗಳನ್ನು ವಿವೇಚನೆ ಇಲ್ಲದೆ ಕಟ್ಟಡಗಳಿಗೆ ಬಳಸಲಾಗುತ್ತಿದೆ. ಇದರಿಂದಾಗಿ ಅಪರೂಪದ ಪ್ರಾಣಿಸಂಕುಲಗಳು ತಮ್ಮ ಇರುವಿಕೆ ಸ್ಥಾಪಿಸಿಕೊಳ್ಳಲು ಒದ್ದಾಡುತ್ತಿವೆ. ಅವುಗಳ ಆವಾಸ ಉಳಿಸುವ ಬಗ್ಗೆ ವ್ಯಾಪಕ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕಿದೆ.

ಮಹಾಂತೇಶ ಗ. ಓಶಿಮಠ, ಕೈಗಾ



ಪ್ರಾದೇಶಿಕ ಬದ್ಧತೆ ಅಗತ್ಯ

ಪ್ರಾದೇಶಿಕ ಅಸ್ಮಿತೆಯೆಂದರೆ ಬರೀ ಭಾಷಾ ಪ್ರೇಮವಲ್ಲ. ಅದು ಒಂದು ರಾಜ್ಯದ ಆತ್ಮಗೌರವ. ರಾಷ್ಟ್ರೀಯ ಪಕ್ಷಗಳಲ್ಲಿ ಗುರುತಿಸಿಕೊಂಡರೂ, ರಾಜ್ಯದ ಹಿತಾಸಕ್ತಿಯ ವಿಷಯ ಬಂದಾಗ ಪಕ್ಷಾತೀತವಾಗಿ ನಿಲ್ಲುವ ಸಂಸ್ಕೃತಿ ಕರ್ನಾಟಕದ ರಾಜಕಾರಣದಲ್ಲಿ ಬೆಳೆಯಬೇಕು.

ಭೀಮಾಶಂಕರ ಪಾಟೀಲ್, ಅಧ್ಯಕ್ಷ ಕರ್ನಾಟಕ ನವನಿರ್ಮಾಣ ಸೇನೆ, 'ಎಕ್ಸ್'ನಿಂದ

ಕಿಡಿನುಡಿ



ಪರಿಶಿಷ್ಟರ ಒಳಮೀಸಲಾತಿಗೆ ಸಂಬಂಧಿಸಿದಂತೆ ಕಾಂಗ್ರೆಸ್‌ನೊಳಗೆ ವಿರೋಧದ ಲಾಬಿ ಜೋರಾಗಿದೆ. ಆ ಪಕ್ಷದೊಳಗಿನ ಆಂತರಿಕ ಕಚ್ಚಾಟವು ಪರಿಶಿಷ್ಟ ಜಾತಿ ಮತ್ತು ಪಂಗಡದ ಯುವಜನರ ಭವಿಷ್ಯಕ್ಕೆ ಪೆಟ್ಟು ನೀಡುತ್ತಿದೆ.

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಬುಧವಾರ, 14-3-2001

● **ಗಡಿ ವಿವಾದ: ಸುಪ್ರೀಂ ಕೋರ್ಟ್‌ಗೆ ತೆರಳಲು ಮಹಾರಾಷ್ಟ್ರ ಸಿದ್ಧತೆ**

ಮುಂಬೈ, ಮಾರ್ಚ್ 13 (ಪಿಟಿಐ, ಯುಎನ್‌ಐ)- ಕರ್ನಾಟಕದೊಂದಿಗಿನ ಗಡಿ ವಿವಾದ ಪರಿಹಾರಕ್ಕೆ ಸುಪ್ರೀಂ ಕೋರ್ಟ್‌ನ ಮೊರೆ ಹೋಗಲು ಮಹಾರಾಷ್ಟ್ರ ಸರ್ಕಾರ ಚಿಂತಿಸಿದೆ.

ಗಡಿ ವಿವಾದ ಪರಿಹರಿಸಿಕೊಳ್ಳಲು ತಮ್ಮ ಸರ್ಕಾರ ಮೂರು ಹಂತದ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ವಿಧಾನಸಭೆಯಲ್ಲಿ ಇಂದು ಹೇಳಿದ ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸ್ ರಾವ್ ದೇಶಮುಖ್ ಅವರು, ಸೌಹಾರ್ದ ಪರಿಹಾರ ಸಾಧ್ಯವಾಗದಿದ್ದರೆ ಮಾತ್ರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವುದಾಗಿ ತಿಳಿಸಿದರು.

75 ವರ್ಷಗಳ ಹಿಂದೆ

ಬುಧವಾರ, 14-3-1951

● **ಪಾಕಿಸ್ತಾನದ ಬೆದರಿಕೆ, ಅಪಮಾನ ಸಹಿಸಲು ಸಿದ್ಧರಿಲ್ಲ!**

ನವದೆಹಲಿ, ಮಾರ್ಚ್ 13- ಕಾಶ್ಮೀರದ ಬಗ್ಗೆ ಪಾಕಿಸ್ತಾನದ ನಾಯಕರು ಆಗಿಂದಾಗ್ಗೆ ಬೀಸುವ 'ಬೆದರಿಕೆಗಳು ಮತ್ತು ಅಸತ್ಯಗಳು', ಅಪಮಾನವನ್ನು ಸಹಿಸಲು ಭಾರತ ಸಿದ್ಧವಿಲ್ಲವೆಂದು ಪ್ರಧಾನಿ ಪಂಡಿತ ನೆಹರೂ ಈ ದಿನ ಪತ್ರಿಕಾಗೋಷ್ಠಿಯಲ್ಲಿ ಎಚ್ಚರವಿತ್ತರು.

ಭಾರತದ ವಿರುದ್ಧ ಪಾಕಿಸ್ತಾನದಲ್ಲಿ ನಡೆಯುತ್ತಿರುವ 'ಜೇಹಾದ್' (ಧರ್ಮಯುದ್ಧ) ಪ್ರಚಾರವನ್ನೂ, ಕಾಶ್ಮೀರಕ್ಕೆ ಸೇನೆ ಕಳಿಸುವುದರಲ್ಲಿ ಭಾರತ 'ನಿಗೂಢ ಪಿತೂರಿ' ಮಾಡಿತೆಂಬ ಜಫರುಲ್ಲಾ ಖಾನ್‌ರ ಭದ್ರತಾ ಸಮಿತಿ ಆರೋಪವನ್ನೂ ಪ್ರಸ್ತಾಪಿಸುತ್ತ ನೆಹರೂ, 'ಇಂತಹ ಅಪಪ್ರಚಾರದ ಬೆದರಿಕೆಗಳಿಗೆ ನಾವು ಜಗ್ಗುವುದಿಲ್ಲ' ಎಂದು ಘೋಷಿಸಿದರು.

ಚುರುಮುರಿ



ಗುಂಡುತೋಪಿನ ಎಣ್ಣೆಬಾವಿ!

● ತುರುವೇಕೆರೆ ಪ್ರಸಾದ್

ಗುದ್ಲಿಂಗ ಗುಂಡುತೋಪಲ್ಲಿ ಮರ ಕಡಿಯುತ್ತಿದ್ದಾಗ ಕೊಡಲಿ ಜಾರಿ ಕೆಳಗಿದ್ದ ಬಾವಿಗೆ ಬಿದ್ದು ಹೋಯಿತು. ಕಾವು ಕೈಲಿ ಹಿಡ್ಕೊಂಡು ಪೇಚಾಡುತ್ತಿರುವಾಗ ಮರದೇವತೆ ಪ್ರತ್ಯಕ್ಷವಾದಳು.

'ಯಾರು ನೀನು? ಮರವನ್ನೇಕೆ ಕಡಿಯುತ್ತಿರುವೆ?' ಕೇಳಿದಳು ದೇವತೆ.

'ಸಿಲಿಂಡರ್ ಖಾಲಿಯಾಗಿ ಗ್ಯಾಸ್ ದರಿದ್ರ ತಾಂಡವವಾಡ್ತೈತೆ ದೇವಿ. ಸೌದೆಯೇ ಗತಿ, ಅದಕ್ಕಾಗಿ ಮರ ಕಡೀತಿದ್ದೆ. ಹಿಂದಿನಂಗೇ ಚಿನ್ನದ್ದೋ, ಬೆಳ್ಳಿದೋ ಒಂದು ಕೊಡ್ಲಿ ತಕ್ಕೊಡು. ಪಂಚಾಯ್ತಿ ಮಾಡ್ದೆ ಸುಮ್ಕೆ ತಕಂಡು ಓಯ್ತಾ ಇರ್ತೀನಿ' ಎಂದ ಗುದ್ಲಿಂದ.

'ಮೂರ್ಖ, ಚಿನ್ನದ ಬುಗುಡಿ, ಬೆಳ್ಳಿ ಡಾಬಿಲ್ಲದೆ ಪ್ಲಾಸ್ಟಿಕ್ ಬೆಂಡೋಲೆ ನೇತಾಡಿಸಿಕೊಂಡು ಬಿಚ್ಚೋಲೆ ಗೌರಮ್ಮನಾಗಿ ಬಂದಿರುವುದು ಕಾಣುತ್ತಿಲ್ಲವೇ! ಕೊಡಲಿ ಆಸೆ ಬಿಡು. ಇಡ್ಲಿ ಹೋಟ್ಲು ಹಾಕುವ ಪರಿಸ್ಥಿತಿಯೂ ಇಲ್ಲ. ಧೈರ್ಯ ಮಾಡಿ ಕೆಳಗಿಳಿ'.

'ಅಯ್ಯೋ! ನಂಗೆ ಈಜು ಬರಕಿಲ್ಲ, ಉಸಿರು ಕಟ್ಟಿ ಸಾಯ್ತೀನಿ ಅಷ್ಟೇ!'

'ಮೂರ್ಖ, ಸಾವಿರ ಅಡಿ ಕೊರುದ್ರೂ ಹನಿ ನೀರು ಜಿನುಗಲ್ಲ, ಸುಮ್ನೆ ನನ್ ಮಾತು ಕೇಳಿ ಕೆಳಗಿಳಿ'.

ಗುದ್ಲಿಂಗ ಧೈರ್ಯ ಮಾಡಿ ಕೆಳಗಿಳಿದ. ತನ್ನ ಕೊಡಲಿ ಸಮೇತ ಒಳಗಿದ್ದ ವಸ್ತುಗಳನ್ನೆಲ್ಲಾ ಈಚೆ ತಂದ: 'ಬರೀ ಖಾಲಿ ಬಾಟ್ಲುಗಳು!' ಎನ್ನುತ್ತಾ ಮುಖ ಹಿಂಡಿದ.

'ಇದು ಎಣ್ಣೆ ಬಾವಿ! ಸಂಜೆ ಇಲ್ಲಿ ಕೂತ್ಕೊಂಡು ಕುಡಿದು ಬಾವಿ ಒಳಗೆ ಬಾಟಲ್ ಎಸೆದು ಹೋಗ್ತಾರೆ. ಒಂದು ಕಡ್ಡಿಗೀರು. ಅಳಿದುಳಿದ ಎಣ್ಣೆ ಹೊಗೆಯಾಡುತ್ತೆ. ತೈಲ ಬಾವಿ ಅಂತ ಹೇಳು. ಅವರು ತಲೆ ಕೆಡಿಸ್ಕೊಂಡು ಹುಡುಕ್ತಾರೆ. ನೀನು ಅವರು ತಂದ ಗುಂಡು, ತುಂಡು ಫಿನಿಶ್ ಮಾಡು. ಸೌದೆ ಕಡಿಯೋ ಗೋಜೇ ಇಲ್ಲ'.

'ಆಹಾ! ಎಂತಹ ಘನಾಂದಾರಿ ಐಡಿಯಾ ಕೊಟ್ಟೇಮ್ಮ? ಯಾರವ್ವಾ ನೀನು?'

'ನಾನಾ? ಹಳೇಪೇಪರ್, ಖಾಲಿ ಸೀಸ!' ಎಂದು ನಕ್ಕು, ಸೀಸೆ ತುಂಬ್ಕಂಡು ಗುದ್ಲಿಂಗನ ಕೈಲಿದ್ದ ಕೊಡ್ಲಿ, ಕಾವು ಎರಡನ್ನೂ ಕಿತ್ಕೊಂಡು ಹೋದ್ಲು. ಗುದ್ಲಿಂಗ ಇಂಗು ತಿಂದ ಮಂಗನಂತೆ ಮುಖ ಮಾಡಿದ.

ಸಂಗತ

ಲೈಂಗಿಕತೆ ಮತ್ತು ಸನ್ಯಾಸ: ಪ್ರಶ್ನೆ ಅಗತ್ಯ


ವಿರಕ್ತರ ಪೋಷಾಕಿನಲ್ಲಿ ಕಾಣಿಸಿಕೊಳ್ಳುವವರು ಎಸಗುವ ಲೈಂಗಿಕ ದೌರ್ಜನ್ಯಗಳು ಘೋರ ಅಪರಾಧ ಮಾತ್ರವಲ್ಲದೆ, ಸಮಾಜದ ನಂಬಿಕೆಗೆಸಗುವ ದ್ರೋಹವೂ ಹೌದು.

● ಹುಲಿಕಲ್ ನಟರಾಜ್

ಕರ್ನಾಟಕದ ಮಠ-ಮಾನ್ಯಗಳಿಗೆ ಮತ್ತು ಗುರುಪರಂಪರೆಗೆ ಸುದೀರ್ಘ ಇತಿಹಾಸವಿದೆ. ಆದರೆ, ರಾಜ್ಯದಲ್ಲಿನ ಇತ್ತೀಚಿನ ಕೆಲವು ಬೆಳವಣಿಗೆಗಳು ನಾಡಿನ ಗುರುಪರಂಪರೆಯನ್ನು ಗಾಸಿಗೊಳಿಸುವಂತಿವೆ. ವಿರಕ್ತರು, ಸನ್ಯಾಸತ್ವ ಸ್ವೀಕರಿಸುವವರು ತಮ್ಮ ಲೈಂಗಿಕ ವಾಂಛೆಗಳನ್ನು ನಿಯಂತ್ರಿಸಲಾಗದೆ ಹಲವು ಬಿಕ್ಕಟ್ಟುಗಳಿಗೆ ಸಿಲುಕಿಕೊಳ್ಳುತ್ತಿದ್ದಾರೆ. ಆ ಮೂಲಕ ಆದರ್ಶದ ಮಾದರಿಗಳನ್ನು ಹಾಗೂ ಜನರ ನಂಬಿಕೆಗಳನ್ನು ಹುಸಿಗೊಳಿಸುತ್ತಿದ್ದಾರೆ. ಕೆಲವರ ವರ್ತನೆಯಲ್ಲಿ ಲೈಂಗಿಕ ವಿಕೃತಿ ಕಾಣಿಸಿಕೊಂಡಿರುವುದೂ ಇದೆ. ನಾವೀಗ ವಿರಕ್ತರ ಪೋಷಕಿನಲ್ಲಿ ಇರುವವರ ಲೈಂಗಿಕ ಜೀವನದ ಬಗ್ಗೆ ಪ್ರಶ್ನೆಗಳನ್ನು ಎತ್ತಬೇಕಾಗಿದೆ.

ಸಣ್ಣ ವಯಸ್ಸಿನಲ್ಲೇ ಪೀಠಾಧಿಪತಿಯಾಗಿ, ಭಕ್ತರಿಂದ 'ಅಪ್ಪಾಜಿ' ಎಂದು ಪ್ರೀತಿ-ಭಕ್ತಿಭಾವದಿಂದ ಕರೆಸಿಕೊಳ್ಳುತ್ತಿದ್ದ ವ್ಯಕ್ತಿಯೊಬ್ಬ ಮಗುವಿನೊಂದಿಗೆ ಅನುಚಿತವಾಗಿ ವರ್ತಿಸಿರುವುದು ಸನ್ಯಾಸತ್ವದ ಪಾವಿತ್ರ್ಯಕ್ಕೆ ಅಂಟಿದ ಕಪ್ಪುಚುಕ್ಕೆಯಾಗಿದೆ. ಈ ದುರ್ವರ್ತನೆಯು ಬರೀ ವೈಯಕ್ತಿಕ ನೈತಿಕತೆಯ ಪ್ರಶ್ನೆಗೆ ಸಂಬಂಧಿಸಿದ್ದಲ್ಲ, ಬದಲಾಗಿ 'ಸನ್ಯಾಸ' ಎಂಬ ಪರಿಕಲ್ಪನೆಯ ಮೂಲ ಉದ್ದೇಶದ ಬಗ್ಗೆಯೇ ಮರುಚಿಂತನೆ ನಡೆಸುವಂತೆ ಒತ್ತಾಯಿಸುವಂತಹದ್ದು.

ಸನ್ಯಾಸದಲ್ಲಿ ಬಾಹ್ಯ ವೇಷಭೂಷಣ ಅಥವಾ ಕಾವಿ ಬಟ್ಟೆ ಮೇಲ್ನೋಟದ ಸಂಕೇತವಷ್ಟೇ. ಸನ್ಯಾಸದ ಸಿದ್ಧಿ ಇರುವುದು ಇಂದ್ರಿಯ ನಿಗ್ರಹ ಮತ್ತು ಮನೋನಿಯಂತ್ರಣದ ಸಾಧನೆಯಲ್ಲಿ. ಷಡ್ವೈರಿಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳನ್ನು ಗೆದ್ದವನೇ ನಿಜವಾದ ಸನ್ಯಾಸಿ. 'ಲೈಂಗಿಕ ಹಸಿವು' ನೈಸರ್ಗಿಕ ಪ್ರವೃತ್ತಿ. ಅದನ್ನು ಗೆಲ್ಲುವ ಆತ್ಮವಿಶ್ವಾಸ ಮತ್ತು ದೃಢ ಸಂಕಲ್ಪ ಇಲ್ಲದವರು ಸನ್ಯಾಸತ್ವ ಸ್ವೀಕರಿಸುವುದು ಸ್ವತಃ ಅವರಿಗೂ ಮತ್ತು ಅವರು ಪ್ರತಿನಿಧಿಸುವ ಸಂಸ್ಥೆಗೂ ಹಾಗೂ ಸಮಾಜಕ್ಕೂ ಅಪಾಯಕಾರಿ.



ಸಂಯಮ ಇಲ್ಲದಿರುವವರಿಗೆ ಸಂಸಾರವೇ ಲೇಸು. ಯಾರಿಗೆ ತಮ್ಮ ದೈಹಿಕ ಮತ್ತು ಲೈಂಗಿಕ ಆಸೆಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲವೋ, ಅವರು ಸನ್ಯಾಸಿಯಾಗುವ ಬದಲು ಗೃಹಸ್ಥಾಶ್ರಮ ಅಥವಾ ಸಂಸಾರ ಜೀವನವನ್ನು ಆರಿಸಿಕೊಳ್ಳುವುದು ಗೌರವಯುತವಾದ ಮಾರ್ಗ. ಬಲವಂತವಾಗಿ ಅಥವಾ ಸಾಮಾಜಿಕ ಒತ್ತಡಕ್ಕೆ ಮಣಿದು ಸನ್ಯಾಸತ್ವ ಸ್ವೀಕರಿಸಿ, ನಂತರ ಅಧರ್ಮದ ಹಾದಿಯಲ್ಲಿ ನಡೆಯುವುದು ಸಮಾಜಕ್ಕೆ ನೀಡುವ ತಪ್ಪು ಸಂದೇಶವಾಗಿದೆ. ಸನ್ಯಾಸ ಸ್ವೀಕರಿಸಿದ ನಂತರವೂ, ಅದರಿಂದ ಹೊರಬಂದು ಸಂಸಾರಿಗಳಾದವರ ಉದಾಹರಣೆಗಳಿವೆ. ಮಾನಸಿಕ ಪ್ರಬುದ್ಧತೆ ಬಂದ ನಂತರ ಸನ್ಯಾಸತ್ವ ಸ್ವೀಕರಿಸಿದವರ ನಿದರ್ಶನಗಳೂ ಇವೆ. ಮನಸ್ಸು ಪರಿಪಕ್ವಗೊಂಡ ನಂತರದ ಸನ್ಯಾಸತ್ವ ಸಮಾಜಕ್ಕೆ ಉಪಯುಕ್ತ ಆಗಬಹುದು.

ಸಂಯಮವಿಲ್ಲದ ಸನ್ಯಾಸಿ ಸಮಾಜದ ದೃಷ್ಟಿಯಲ್ಲಿ ದಾರಿ ತಪ್ಪಿದ ವ್ಯಕ್ತಿಯಂತೆ ಕಾಣಿಸುತ್ತಾನೆ. ಮಠಗಳಿಗೆ ಬರುವ ಭಕ್ತರು ಸನ್ಯಾಸಿಗಳನ್ನು ದೈವ ಸ್ವರೂಪಿಗಳೆಂದು ನಂಬುತ್ತಾರೆ. ಆ ನಂಬಿಕೆಯನ್ನು ದುರುಪಯೋಗ ಪಡಿಸಿಕೊಂಡು ಲೈಂಗಿಕ ದೌರ್ಜನ್ಯ ಎಸಗುವುದು ಕ್ಷಮಿಸಲಾಗದ ಅಪರಾಧ. ಇದನ್ನು ಕಾನೂನಿನ ಉಲ್ಲಂಘನೆ ಎಂದಷ್ಟೇ ನೋಡಲಿಕ್ಕೆ ಆಗದು. ಅದು ನೈತಿಕ ಅಧಃಪತನವೂ ಹೌದು. ರಾಜ್ಯದ ಕೆಲವು ಮಠಗಳಲ್ಲಿ ನಡೆದ ಇಂತಹ ಘಟನೆಗಳು ಸಮಾಜದ ಸ್ವಾಸ್ಥ್ಯವನ್ನು ಕಲಕಿವೆ.

ಮಠಾಧೀಶರ ಆಯ್ಕೆಯ ಸಂದರ್ಭದಲ್ಲಿ ಪಾಂಡಿತ್ಯ ಅಥವಾ ವಂಶವಾಹಿಯನ್ನಷ್ಟೇ ನೋಡದೆ, ಅವರ ಮಾನಸಿಕ ಸ್ಥಿರತೆ ಮತ್ತು ಸಂಯಮದ ಪರೀಕ್ಷೆಯೂ ನಡೆಯಬೇಕಿದೆ. ಈ ನಿಟ್ಟಿನಲ್ಲಿ, ಚಿಕ್ಕವಯಸ್ಸಿನಲ್ಲೇ ಸನ್ಯಾಸ ದೀಕ್ಷೆ ನೀಡುವುದರ ಬಗ್ಗೆ ಮರುಪರಿಶೀಲನೆ ಅಗತ್ಯವಾಗಿದೆ. ಹಾಗೆಯೇ, ಆಧುನಿಕ ಕಾಲದಲ್ಲಿ ಸನ್ಯಾಸತ್ವ ಸ್ವೀಕರಿಸುವವರಿಗೆ ಮನೋವೈಜ್ಞಾನಿಕ ಸಮಾಲೋಚನೆಯ ಅಗತ್ಯವೂ ಇದೆ. ಆಸೆಗಳಿದ್ದರೆ ಸಂಸಾರಿಯಾಗಲು ಅವರಿಗೆ ಮುಕ್ತ ಅವಕಾಶ ಮತ್ತು ಗೌರವವನ್ನು ನೀಡುವ ಆಯ್ಕೆಯನ್ನೂ ಸಮಾಜ ಮತ್ತು ವ್ಯವಸ್ಥೆ ಕಲ್ಪಿಸಿಕೊಡಬೇಕಾಗಿದೆ.

ಸನ್ಯಾಸ ಎನ್ನುವುದು ಕತ್ತಿಯ ಅಲಗಿನ ಮೇಲಿನ ನಡಿಗೆಯಂತೆ. ಯಾರಿಗೆ ಆ ದಾರಿಯಲ್ಲಿ ನಡೆಯಲು ಸಾಧ್ಯ ಇಲ್ಲವೋ ಅವರು ಸಾಮಾನ್ಯ ಮನುಷ್ಯರಾಗಿ ಬದುಕುವುದು ಉತ್ತಮವೇ ಹೊರತು, ಸನ್ಯಾಸದ ಹೆಸರಿನಲ್ಲಿ ಅಧರ್ಮ ಎಸಗಬಾರದು. ವರ್ತಮಾನದ ವಿದ್ಯಮಾನಗಳನ್ನು ನೋಡಿದರೆ, ಸಮಾಜವು ಕಾವಿಯನ್ನು ನೋಡಿ ಕೈಮುಗಿಯುವ ಅಭ್ಯಾಸವನ್ನು ಬದಲಿಸಿಕೊಳ್ಳಬೇಕಾದ ಸಂದರ್ಭ ಬಂದಂತಿದೆ. ಸತ್ಯ ಮತ್ತು ಧರ್ಮ ಎತ್ತಿ ಹಿಡಿಯುವವರನ್ನು ಗುರ್ತಿಸಬೇಕಿದೆ. ಈ ವಿಷಯದಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಸಂಗತಿ, ಭಕ್ತರ ಅತೀವ ನಂಬಿಕೆ. ಸ್ವಾಮೀಜಿಗಳನ್ನು ದೈವ ಸ್ವರೂಪಿಗಳೆಂದು ನಂಬುವ ಕೆಲವು ಭಕ್ತರು, ತಮ್ಮ ಮನೆ ಮಕ್ಕಳನ್ನು ಸನ್ಯಾಸಿಗಳ ಹತ್ತಿರ ಬಿಡುವಾಗ ಎಚ್ಚರ ವಹಿಸಬೇಕಿದೆ.

ಒಬ್ಬ ವ್ಯಕ್ತಿಗೆ ಸಂಸಾರ ಮತ್ತು ದೈಹಿಕ ಸುಖಗಳ ಬಗ್ಗೆ ಆಸೆ ಇದ್ದರೆ, ಅದರಲ್ಲಿ ಯಾವುದೇ ತಪ್ಪಿಲ್ಲ. ಆದರೆ, ಆ ಆಸೆಯನ್ನು ಮರೆಮಾಚಿ ಸನ್ಯಾಸದ ಮುಖವಾಡ ಹಾಕಿಕೊಂಡು ಲೈಂಗಿಕ ದೌರ್ಜನ್ಯ ಅಥವಾ 'ಪೀಡೋಫಿಲಿಯಾ'ದಂತಹ ವಿಕೃತ ಮನಃಸ್ಥಿತಿಯನ್ನು ಪ್ರದರ್ಶಿಸುವುದು ಸಮಾಜಕ್ಕೆ ಮಾಡುವ ಅತಿದೊಡ್ಡ ದ್ರೋಹ ಹಾಗೂ ಘೋರ ಅಪರಾಧ.

ಕಾಮವನ್ನು ಗೆಲ್ಲಲಾರದವನು ಕಾವಿ ಧರಿಸುವುದು, ಬೆಂಕಿಯನ್ನು ಅಂಗೈಯಲ್ಲಿ ಮುಚ್ಚಿಡಲು ಯತ್ನಿಸಿದಂತೆ. ಅದು ಎಂದಾದರೊಮ್ಮೆ ಸುಟ್ಟೇ ಸುಡುತ್ತದೆ. ಆದರೆ ಆ ಬೆಂಕಿ ಸಂಬಂಧಿಸಿದ ವ್ಯಕ್ತಿಯನ್ನು ಸುಡುವುದರ ಜೊತೆಗೆ ಮೌಲ್ಯ ಮಾದರಿಗಳನ್ನೂ ಸುಡುತ್ತದೆ. ಸನ್ಯಾಸತ್ವದ ಅರ್ಹತೆ ಇಲ್ಲದವರು ಸಂಸಾರಸ್ಥರಾಗಿ ಬದುಕುವುದು ಶ್ರೇಯಸ್ಕರವೇ ಹೊರತು, ಧರ್ಮದ ಹೆಸರಿನಲ್ಲಿ ಮುಗ್ಧ ಮಕ್ಕಳ ಜೀವನದೊಂದಿಗೆ ಆಟವಾಡುವುದು ಕ್ಷಮಿಸಲಾಗದ ಅಪರಾಧ. ಕಾನೂನು ಇಂತಹವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲಿ ಮತ್ತು ಸಮಾಜವು 'ಕುರುಡು ನಂಬಿಕೆ'ಯಿಂದ ಹೊರಬರಲಿ. ವಿರಕ್ತರ ಲೈಂಗಿಕತೆಯ ಬಗ್ಗೆ ಮುಕ್ತಚರ್ಚೆಗಳು ನಡೆಯಲಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕಾಸರಗೋಡು: ಕನ್ನಡದ ಅಸ್ಮಿತೆ ಮೇಲೆ ಕರಿಮೋಡ

ಕೇರಳದಲ್ಲಿ ಮಲಯಾಳ ಕಡ್ಡಾಯ ಕಾಯ್ದೆ; ಭಾಷಾ ಅಲ್ಪಸಂಖ್ಯಾತರಿಗೆ ಇರುವ ವಿನಾಯಿತಿ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ ಎಂದು ಕನ್ನಡ ಹೋರಾಟಗಾರರ ಆರೋಪ

● ವಿಕ್ರಂ ಕಾಂತಿಕೆರೆ

ಕೇರಳದಲ್ಲಿ ಮಲಯಾಳ ಅನ್ನು ಏಕೈಕ 'ಅಧಿಕೃತ ಭಾಷೆ'ಯಾಗಿ ಕಾಯ್ದೆ ಜಾರಿ ಮಾಡುವುದರೊಂದಿಗೆ ಕನ್ನಡದ ಅಸ್ಮಿತೆಯ ಮೇಲೆ ಕರಿಮೋಡ ಆವರಿಸಿದ್ದು, ಯಾವುದೇ ಸಂದರ್ಭದಲ್ಲಿ ಮಳೆಯಾಗಿ ಸುರಿದು ಪ್ರವಾಹವಾಗಿ ಕನ್ನಡವನ್ನು ಕೊಚ್ಚಿಕೊಂಡು ಹೋಗುವ ಆತಂಕ ಗಡಿನಾಡ ಕನ್ನಡಿಗರದು. ಭಾಷೆಯ ವಿಷಯದಲ್ಲಿ ಹೆಚ್ಚು ಭಾವುಕರಲ್ಲದ ಮತ್ತು ಯಾರ ಒತ್ತಾಯವೂ ಇಲ್ಲದೆ ಮಲಯಾಳ ಭಾಷೆಯನ್ನು ಬಳಸುವ ಕೇರಳದಲ್ಲಿ ಭಾಷೆಗೆ ಸಂಬಂಧಿಸಿದ ಕಾಯ್ದೆ ಜಾರಿ ಮಾಡುವ ಅಗತ್ಯವಿತ್ತೇ ಎಂಬುದರ ಕುರಿತು ಚರ್ಚೆಗಳು ನಡೆಯುತ್ತಿವೆ. ಕಾದಂಬರಿಕಾರ ಕೆ.ಪಿ.ರಾಮನುಣ್ಣಿ ನೇತೃತ್ವದ ಮಲಯಾಳ ಐಕ್ಯವೇದಿ ವರ್ಷಗಳ ಹಿಂದೆ ಪ್ರತಿಭಟನೆ ಹಮ್ಮಿಕೊಂಡ ನಂತರ ಕೇರಳದಲ್ಲಿ ಮಲಯಾಳ ಭಾಷೆಯನ್ನು ಕಡ್ಡಾಯ ಮಾಡಲಾಗಿತ್ತು. ಈಗ ಕಾಯ್ದೆಯಾಗಿ ಅದಕ್ಕೆ ತಾಂತ್ರಿಕ ರೂಪ ಸಿಕ್ಕಿದೆಯಷ್ಟೆ ಎಂದು ಹೇಳುತ್ತಾರೆ ಕಣ್ಣೂರು ವಿಶ್ವವಿದ್ಯಾಲಯ ಮಲಯಾಳ ವಿಭಾಗದ ಮುಖ್ಯಸ್ಥರಾಗಿ ನಿವೃತ್ತರಾಗಿರುವ ಪ್ರೊ.ಎ.ಎಂ.ಶ್ರೀಧರನ್.

ಭಾಷಾ ಮಸೂದೆಯನ್ನು 2025ರ ಅಕ್ಟೋಬರ್‌ನಲ್ಲಿ ಕೇರಳ ವಿಧಾನಸಭೆ ಅಂಗೀಕರಿಸಿತ್ತು. ಇದಕ್ಕೆ ರಾಜ್ಯಪಾಲರು ಈ ವರ್ಷದ ಮಾರ್ಚ್ 4ರಂದು ಅಂಕಿತ ಹಾಕುವುದರೊಂದಿಗೆ ಭಾಷಾ ಅಲ್ಪಸಂಖ್ಯಾತರಾಗಿರುವ ಕನ್ನಡಿಗರಲ್ಲಿ ತಳಮಳ ಆರಂಭವಾಗಿದೆ. ಕಾಯ್ದೆ ವಿರುದ್ಧ ಧ್ವನಿ ಎತ್ತಿದ್ದ ಕನ್ನಡ ನಾಯಕರು ಈಗ ಕಾನೂನು ಹೋರಾಟಕ್ಕೆ ಸಿದ್ಧರಾಗಿದ್ದಾರೆ. ಸರ್ಕಾರದ ಪ್ರಕಟಣೆಗಳು, ಆದೇಶಗಳು, ಸರ್ಕಾರದ ಜೊತೆಗಿನ ಸಂವಹನಕ್ಕೆ ಮಲಯಾಳ ಭಾಷೆಯನ್ನೇ ಬಳಸಬೇಕು ಎಂಬ ನಿಯಮದೊಂದಿಗೆ, ರಾಜ್ಯದ ಎಲ್ಲ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ, 10ನೇ ತರಗತಿವರೆಗೆ ಮಲಯಾಳವನ್ನು ಪ್ರಥಮ ಭಾಷೆಯಾಗಿ ಕಲಿಸುವುದು ಕಡ್ಡಾಯ ಎಂಬ ಅಂಶ ಕನ್ನಡಿಗರನ್ನು ಹೆಚ್ಚು ಚಿಂತೆಗೀಡುಮಾಡಿದೆ. ಇದು ಕನ್ನಡವನ್ನು ಕಾಸರಗೋಡಿನಲ್ಲಿ ಇಲ್ಲದೆ ಮಾಡುವ ಹುನ್ನಾರದ ಕೊನೆಯ ಅಸ್ತ್ರ ಎಂದೇ ಹೋರಾಟಗಾರರು ಮತ್ತು ಕನ್ನಡಪರ ಸಂಘಟನೆಗಳ ಮುಖಂಡರು ಅಭಿಪ್ರಾಯಪಡುತ್ತಾರೆ.

ಹಾಲಿ ಇರುವ ಅಥವಾ ಹೊಸದಾಗಿ ಸೃಷ್ಟಿಯಾಗಲಿರುವ ಇಲಾಖೆಗಳು, ಸ್ಥಳೀಯಾಡಳಿತ ಸಂಸ್ಥೆಗಳು, ಸರ್ಕಾರ ಪ್ರಾಯೋಜಿತ ಸಂಸ್ಥೆಗಳು, ಸ್ವಾಯತ್ತ ಸಂಸ್ಥೆಗಳು, ಸಹಕಾರ, ಸಾರ್ವಜನಿಕ ವಲಯದ ಸಂಸ್ಥೆಗಳು ಕಾಯ್ದೆಯ ಪ್ರಕಾರ ಮಲಯಾಳ ಭಾಷೆಗೆ ರಾಜ್ಯದ ಏಕೈಕ ಅಧಿಕೃತ ಭಾಷೆ ಸ್ಥಾನಮಾನ ಕಲ್ಪಿಸಬೇಕು ಎಂಬ ಎಚ್ಚರಿಕೆ ಕಾಯ್ದೆಯಲ್ಲಿದೆ. ಹೀಗಾಗಿ ಮಲಪ್ಪುರ, ಇಡುಕ್ಕಿ ಮುಂತಾದ ಜಿಲ್ಲೆಗಳ ಗಡಿಭಾಗದ ತಮಿಳರು ಮತ್ತು ಕಾಸರಗೋಡಿನ ಕನ್ನಡಿಗರು ಅನಿವಾರ್ಯವಾಗಿ ಮಲಯಾಳ ಭಾಷೆಗೆ ಒಗ್ಗಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣ ಆಗಲಿದೆ. ಭಾಷಾ ಅಲ್ಪಸಂಖ್ಯಾತರ ಸಾಂವಿಧಾನಿಕ ಹಕ್ಕು ಕಾಪಾಡುವುಕ್ಕೆ ಸಂಬಂಧಿಸಿದ ಅಂಶಗಳು ಕಾಯ್ದೆಯಲ್ಲಿ ಇವೆ ಎಂದು ಸರ್ಕಾರ ಹೇಳಿದ್ದರೂ ಆ ಬಗ್ಗೆ ನಂಬಿಕೆ ಇಲ್ಲ ಎಂದು ಮುಖಂಡರು ಹೇಳುತ್ತಿದ್ದಾರೆ.

ಗೊಂದಲದ ಗೂಡು: ಮಾತೃಭಾಷೆ ಮಲಯಾಳ ಅಲ್ಲದವರು ಅವರ ಶಿಕ್ಷಣವನ್ನು ಅವರ ಭಾಷೆಯಲ್ಲೇ ಪಡೆದುಕೊಳ್ಳಬಹುದು ಎಂಬ ಅಂಶ ಕಾಯ್ದೆಯಲ್ಲಿ ಇದೆ. ಆದರೆ ಅದಕ್ಕೆ ಸ್ಪಷ್ಟ ರೂಪುರೇಷೆ ಇಲ್ಲ. ಕನ್ನಡ ಮತ್ತು ತಮಿಳು ಭಾಷಿಕರಿಗೆ ಶಿಕ್ಷಣೇತರ ಕ್ಷೇತ್ರಗಳಲ್ಲಿ ಅವರವರ ಭಾಷೆಯಲ್ಲೇ ಕಡತಗಳನ್ನು ವಿಲೇ ಮಾಡಲು ಅವಕಾಶ ಇದೆ ಎಂದು ಹೇಳಲಾಗಿದೆ. ಆದರೆ ಮಲಯಾಳದಲ್ಲಿರುವ ಆದೇಶಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಮುಂದೆ ಸಾಗಿಸುವಷ್ಟರಲ್ಲಿ ತಡ ಆಗಿ ಕೊನೆಗೆ ಕನ್ನಡ ಬೇಡ ಎಂಬ ಹಂತಕ್ಕೆ ಪರಿಸ್ಥಿತಿ ತಲುಪಬಹುದು. ಇದು ಕೂಡ ಪರೋಕ್ಷವಾಗಿ ಕನ್ನಡವನ್ನು ದೂರ ಮಾಡುವ ಹುನ್ನಾರ ಎಂದು ಕರ್ನಾಟಕ ಸಮಿತಿ ಕಾಸರಗೋಡು ಅಧ್ಯಕ್ಷ ಮುರಳೀಧರ ಬಳ್ಳಕ್ಕುರಾಯ ಹೇಳುತ್ತಾರೆ.

2017ರಲ್ಲಿ ಕೇರಳ ಸರ್ಕಾರ ಮಲಯಾಳ ಭಾಷಾ ಮಸೂದೆ ಅಂಗೀಕರಿಸಿತ್ತು. ಆದರೆ, 1963ರ ಅಧಿಕೃತ ಭಾಷಾ ಕಾಯ್ದೆಗೆ ವಿರುದ್ಧವಾದ ನಿಬಂಧನೆಗಳಿಂದ ಅಲ್ಪಸಂಖ್ಯಾತ ಪ್ರದೇಶಗಳ ಕನ್ನಡ ಮತ್ತು ತಮಿಳು ಭಾಷಿಕರ ಭಾವನೆಗಳಿಗೆ ಧಕ್ಕೆಯಾಗುತ್ತಿದೆ ಎಂಬ ಕಾರಣದಿಂದ ಮಸೂದೆಗೆ ರಾಷ್ಟ್ರಪತಿ ಒಪ್ಪಿಗೆ ಸಿಕ್ಕಿರಲಿಲ್ಲ. ಲೋಪಗಳನ್ನು ತೆಗೆದುಹಾಕಿ ಹೊಸ ಮಸೂದೆ ಸಿದ್ಧಪಡಿಸಲಾಗಿತ್ತು. ಇದರ ವಿರುದ್ಧ ಕರ್ನಾಟಕ ಸರ್ಕಾರ, ಕಾಸರಗೋಡು ಕನ್ನಡಿಗರು ಆಕ್ಷೇಪ ವ್ಯಕ್ತಪಡಿಸಿದ್ದರು. ಅದಕ್ಕೆ ಕೇರಳದಿಂದ ಸ್ಪಂದನೆ ಸಿಗಲಿಲ್ಲ.

ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಹಿತಿ ಪ್ರಕಾರ ಕಾಸರಗೋಡಿನಲ್ಲಿ 7.5 ಲಕ್ಷ ಕನ್ನಡಿಗರಿದ್ದು 210 ಕನ್ನಡ ಮಾಧ್ಯಮ ಶಾಲೆಗಳಿವೆ. ಅಚ್ಚಕನ್ನಡದ 84 ಶಾಲೆಗಳು ಇವೆ. ಕಾಯ್ದೆಯಿಂದಾಗಿ ಈ ಶಾಲೆಗಳಲ್ಲಿ ಸಮಸ್ಯೆಗಳು ಆರಂಭವಾಗುವ ಆತಂಕ ಅಲ್ಲಿನವರದು. 'ಶಾಲೆಗಳಲ್ಲಿ ಮಲಯಾಳ ಕಡ್ಡಾಯ ಮಾಡಿರುವುದು ಕೇರಳದಲ್ಲಿ ಕನ್ನಡವನ್ನು ನಿಧಾನವಾಗಿ ಇಲ್ಲವಾಗಿಸುವ ಪ್ರಕ್ರಿಯೆಯ ಮೊದಲ ಹೆಜ್ಜೆ' ಎಂದು ಹೇಳುತ್ತಾರೆ ಕನ್ನಡ ಶಾಲೆ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಶ್ರೀನಿವಾಸ ರಾವ್.

ದಶಕದ ಹಿಂದೆ ಹೆಣೆದ ಬಲೆ: ಕಾಸರಗೋಡಿನಲ್ಲಿ ಕನ್ನಡ ನೆಲೆ ಕಂಡುಕೊಳ್ಳದಂತೆ ಮಾಡುವ ಹುನ್ನಾರ ನಡೆಯುತ್ತಲೇ ಇದೆ ಎಂಬುದಕ್ಕೆ ಅಲ್ಲಿ ಆಗಾಗ ನಡೆಯುವ ಕನ್ನಡಿಗರ ಹೋರಾಟಗಳೇ ಉದಾಹರಣೆ. 2016ರಲ್ಲಿ ಭಾಷಾ ಮಸೂದೆ ಜಾರಿಗೆ ತರಲು ಸಿದ್ಧತೆ ನಡೆದಿತ್ತು. ಅದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿ ಜಿಲ್ಲಾಧಿಕಾರಿಗೆ ದಿಗ್ಬಂಧನ ಹಾಕಲಾಗಿತ್ತು. ಆ ನಂತರ ಶಾಲೆಗಳಲ್ಲಿ ಮಲಯಾಳ ಕಲಿಕೆ ಐಚ್ಛಿಕ ಎಂದು ಮಾಡಿ, ಅಚ್ಚಕನ್ನಡ ಶಾಲೆಗಳಲ್ಲಿ ವಾರದಲ್ಲಿ ಒಂದು ದಿನ ಮಲಯಾಳ ಕಲಿಯಲು ಅವಕಾಶ ನೀಡಲಾಗಿತ್ತು. ಐಚ್ಛಿಕ ಆಗಿರುವುದರಿಂದ ಅದನ್ನು ವಿರೋಧಿಸಲು ಸಾಧ್ಯವಾಗಲಿಲ್ಲ. ಎರಡು ವರ್ಷ ಕಳೆದಾಗ ಅದನ್ನು ವಾರದಲ್ಲಿ ಮೂರು ದಿನಗಳಿಗೆ ವಿಸ್ತರಿಸಲಾಯಿತು. ಈ ಐಚ್ಛಿಕದ ವಿವೇಚನೆಗೆ ಈಗಲೂ ಅವಕಾಶ ಮಾಡಿಕೊಟ್ಟಿದ್ದರೆ ಒಂದು ಹಂತದವರೆಗೆ ಈ ಕಾಯ್ದೆಯನ್ನು ನಿರ್ವಾಹವಿಲ್ಲದೆ ಒಪ್ಪಿಕೊಳ್ಳಬಹುದಾಗಿತ್ತು ಎನ್ನುತ್ತಾರೆ ಕನ್ನಡ ಶಾಲೆ ಶಿಕ್ಷಕರ ಸಂಘದ ಕುಂಬಳೆ ಉಪಜಿಲ್ಲಾ ಘಟಕದ ಉಪಾಧ್ಯಕ್ಷ ಶ್ರೀಶ ಪಂಜಿತ್ತಡ್ಕ.



ಮಲಯಾಳ ಭಾಷೆ ಕಡ್ಡಾಯ ಕಾಯ್ದೆ ವಿರುದ್ಧ ಹೋರಾಟ ಹಮ್ಮಿಕೊಳ್ಳುವ ಕುರಿತು ಕಾಸರಗೋಡಿನಲ್ಲಿ ಸಭೆ ನಡೆಯಿತು

ಮುಂದಿರುವುದು ಎರಡೇ ದಾರಿಗಳು

ಮಸೂದೆಗೆ ರಾಜ್ಯಪಾಲರ ಅಂಕಿತ ಬಿದ್ದಿದೆ. ಆದ್ದರಿಂದ ಇನ್ನು ಕನ್ನಡಿಗರ ಎದುರು ಇರುವುದು ಎರಡೇ ದಾರಿಗಳು. ಒಂದು: ಹೋರಾಡಿ, ಕಾಯ್ದೆಯನ್ನು ಜಾರಿಗೊಳಿಸದಂತೆ ಸರ್ಕಾರದ ಮೇಲೆ ಒತ್ತಡ ಹೇರುವುದು. ಎರಡು: ಈ ಕಾಯ್ದೆ ಸಂವಿಧಾನ ವಿರೋಧಿಯಾಗಿದ್ದು ಕನ್ನಡಿಗರ ಹಕ್ಕಿಗೆ ಚ್ಯುತಿಯಾಗಿದೆ, ಸಾಂವಿಧಾನಿಕವಾಗಿ ಇದು ಸರಿಯೋ ತಪ್ಪೋ ಎಂದು ಪರಿಶೀಲಿಸಲು ನ್ಯಾಯಾಯಲಕ್ಕೆ ರಿಟ್ ಅರ್ಜಿ ಸಲ್ಲಿಸುವುದು ಎಂದು ಕರ್ನಾಟಕ ಸಮಿತಿ ಕಾಸರಗೋಡು ಅಧ್ಯಕ್ಷ ಮುರಳೀಧರ ಬಳ್ಳಕ್ಕುರಾಯ ಹೇಳಿದರು.

> **ಕಾಯ್ದೆಯ ಬಗ್ಗೆ ಸಮಗ್ರ ಅಧ್ಯಯನ ಆಗಬೇಕು. ಕನ್ನಡಿಗರ ಹಕ್ಕುಗಳನ್ನು ದಮನಿಸುವ ಅಂಶಗಳು ಅದರಲ್ಲಿ ಇಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು**
> **ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ**
> ಕಸಾಪ ಗಡಿನಾಡ ಘಟಕದ ಅಧ್ಯಕ್ಷ

ಕಾಯ್ದೆಯ ಮುಖ್ಯ ಅಂಶಗಳು

- ಮಲಯಾಳ ಅಧಿಕೃತ ಭಾಷೆ; ಸರ್ಕಾರಿ ಕಚೇರಿ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಬಳಕೆ ಕಡ್ಡಾಯ
- ಸರ್ಕಾರದ ಜೊತೆ ಮತ್ತು ಭಾಷಾ ಅಲ್ಪಸಂಖ್ಯಾತ ಪ್ರದೇಶ ಎಂದು ಘೋಷಿಸಿರುವಲ್ಲಿ ಸ್ಥಳೀಯಾಡಳಿತದ ಜೊತೆ ಕನ್ನಡ ಮತ್ತು ತಮಿಳಿನಲ್ಲಿ ಸಂವಹನಕ್ಕೆ ಅವಕಾಶ ನೀಡಲಾಗುತ್ತದೆ
- ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಒಂದರಿಂದ 10ನೇ ತರಗತಿವರೆಗೆ ಪ್ರಥಮ ಭಾಷೆಯಾಗಿ ಮಲಯಾಳ ಕಡ್ಡಾಯ
- ಶಾಲೆಗಳಲ್ಲಿ ಮಲಯಾಳ ಭಾಷೆ ಬಗ್ಗೆ ಪ್ರಚಾರ ಮಾಡಲು ಕ್ರಮ ಕೈಗೊಳ್ಳಲಿರುವ ಸರ್ಕಾರ
- ಅನ್ಯರಾಜ್ಯ ಮತ್ತು ವಿದೇಶದ ವಿದ್ಯಾರ್ಥಿಗಳು 9, 10ನೇ ತರಗತಿ ಮತ್ತು ಪ್ಲಸ್ ಟುನಲ್ಲಿ ಮಲಯಾಳದಲ್ಲೇ ಪರೀಕ್ಷೆ ಬರೆಯಬೇಕು ಎಂದಿಲ್ಲ
- ಮಲಯಾಳ ತಿಳಿಯದವರಿಗಾಗಿ ಸರ್ಕಾರದ ಆದೇಶಗಳನ್ನು ಇಂಗ್ಲಿಷ್‌ಗೆ ಅನುವಾದ ಮಾಡಲಾಗುತ್ತದೆ

ಕಾಸರಗೋಡಿನಲ್ಲಿ 28ರಂದು ಧರಣಿ

ಮಲಯಾಳ ಕಡ್ಡಾಯ ಮಸೂದೆಯಿಂದ ಜಿಲ್ಲೆಯ ಕನ್ನಡ ಮಾಧ್ಯಮ ಶಾಲೆಗಳನ್ನು ಹೊರತುಪಡಿಸಬೇಕು ಎಂದು ಆಗ್ರಹಿಸಿ ಮಾ.28ರಂದು ಕಾಸರಗೋಡು ತಾಲ್ಲೂಕು ಪಂಚಾಯಿತಿ ಕಚೇರಿ ಎದುರು ಧರಣಿ ನಡೆಸಲು ಹೋರಾಟಗಾರರು ನಿರ್ಧರಿಸಿದ್ದಾರೆ.

ಕಾನೂನು ಹೋರಾಟದ ಜೊತೆಯಲ್ಲಿ ಪ್ರತಿಭಟನೆಗಳನ್ನು ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲು ಮಾ.10ರಂದು ಬೀರಂತಬೈಲಿನ ಕನ್ನಡ ಅಧ್ಯಾಪಕ ಭವನದಲ್ಲಿ ನಡೆದ ಕರ್ನಾಟಕ ಸಮಿತಿ ನೇತೃತ್ವದ ಕನ್ನಡಪರ ಸಂಘಟನೆಗಳ ಜಂಟಿ ಸಭೆಯಲ್ಲಿ ನಿರ್ಧರಿಸಲಾಯಿತು.

ಬೆಳಿಗ್ಗೆ 10 ಗಂಟೆಯಿಂದ ಧರಣಿ ನಡೆಯಲಿದೆ. ಇದಕ್ಕೂ ಮೊದಲು ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿಭಟನೆಗಳನ್ನು ನಡೆಸಲು ನಿರ್ಧರಿಸಿದ ಸಭೆಯಲ್ಲಿ ಹೈಕೋರ್ಟ್‌ನಲ್ಲಿ ದಾವೆ ಹೂಡಲು ಪರಿಣತರ ಸಮಿತಿಯನ್ನು ರಚಿಸಲಾಯಿತು.

> **ಕಾಯ್ದೆ ಜಾರಿಯಾದರೆ ಕನ್ನಡವನ್ನು ಹೆಚ್ಚುವರಿಯಾಗಿ ಕಲಿಯಬೇಕಾದ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಅದು ಹೊರೆಯಾಗಲಿದೆ ಎಂದು ಪಾಲಕರು ಬಿಟ್ಟುಬಿಡುವ ಸಾಧ್ಯತೆಯೇ ಹೆಚ್ಚು**
> **ಮುರಳೀಧರ ಬಳ್ಳಕ್ಕುರಾಯ,**
> ಅಧ್ಯಕ್ಷ, ಕರ್ನಾಟಕ ಸಮಿತಿ ಕಾಸರಗೋಡು

> **ಭಾಷಾ ಅಲ್ಪಸಂಖ್ಯಾತರ ರಕ್ಷಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸೇರಿದಂತೆ ಹಲವರು ಹೇಳಿದ್ದಾರೆ, ಹೇಳುತ್ತಿದ್ದಾರೆ. ಆದರೆ ಆ ಮಾತಿನ ಮೇಲೆ ನಮಗೆ ಭರವಸೆ ಇಲ್ಲ**
> **ಶ್ರೀಶ ಪಂಜಿತ್ತಡ್ಕ**
> ಕನ್ನಡ ಶಿಕ್ಷಕರ ಸಂಘದ ಕುಂಬಳೆ ಉಪಜಿಲ್ಲಾ ಘಟಕದ ಉಪಾಧ್ಯಕ್ಷ

> **ಮಲಯಾಳ ಕಲಿತರೆ ನಷ್ಟವೇನು, ಸಂವಹನಕ್ಕೆ ಅನುಕೂಲವಲ್ಲವೇ ಎಂಬ ಭಾವನೆ ಮಾಡುವಂತೆ ಮಾಡಲಾಗುತ್ತಿದೆ. ಹಾಗಾಗದಂತೆ ನೋಡಿಕೊಳ್ಳಬೇಕಾಗಿದೆ**
> **ನಯನಾ ಗಿರೀಶ್**
> ಕನ್ನಡದ ಕಾಳಜಿಯುಳ್ಳ ಮಹಿಳೆ, ಅಡೂರು

ಬಡತನ, ಅಸಮಾನತೆ ಬಗ್ಗೆ ಹಾಡು ಕಟ್ಟಿ ಹಾಡಿದ ರ‍್ಯಾಪರ್; ಸಿನಿಮಾ ಶೈಲಿಯ ರಾಜಕಾರಣದಿಂದ ಯಶಸ್ಸು

ಬಾಲೇಂದ್ರ ಶಾ: ನೇಪಾಳ ಜೆನ್ ಝೀಗಳ 'ಕ್ರಾಂತಿ ಪುರುಷ'

● ಬಿ.ವಿ.ಶ್ರೀನಾಥ್

ಎರಡೂ ಕಿವಿಗೆ ಓಲೆ. ಮೈಮೇಲೆ ಕಪ್ಪು ಸೂಟು. ಕಣ್ಣಿಗೆ ಕಪ್ಪು ಕನ್ನಡಕ. ತರಹೇವಾರಿ ಕೇಶ ಶೈಲಿ. ಅಪರೂಪಕ್ಕೆ ತಲೆಯ ಮೇಲೆ ಟೊಪ್ಪಿಗೆ. ತಕ್ಷಣ ನೋಡಿದರೆ, ಸಿನಿಮಾ ನಟ ಇರಬಹುದೇನೋ ಅನ್ನಿಸುವ ಇವರು ಬಾಲೇಂದ್ರ ಶಾ. ನೇಪಾಳದ ಜೆನ್ ಝೀಗಳ ಪ್ರೀತಿಯ ಬಾಲೆನ್. 35 ವರ್ಷದ ಬಾಲೇಂದ್ರ, ನೇಪಾಳದ ಸಾರ್ವತ್ರಿಕ ಚುನಾವಣೆಯಲ್ಲಿ ಅತಿರಥ ಮಹಾರಥರನ್ನೆಲ್ಲ ಪರಾಭವಗೊಳಿಸಿ, ರಾಷ್ಟ್ರೀಯ ಸ್ವತಂತ್ರ ಪಕ್ಷ (ಆರ್‌ಎಸ್‌ಪಿ) ಅತಿಹೆಚ್ಚಿನ ಸ್ಥಾನ ಗೆಲ್ಲಲು ಕಾರಣರಾಗಿ, ಪ್ರಧಾನಿ ಪಟ್ಟಕ್ಕೆ ಏರಲು ಸಿದ್ಧರಾಗಿದ್ದಾರೆ.

ನಾಲ್ಕು ಬಾರಿ ದೇಶದ ಪ್ರಧಾನಿಯಾಗಿದ್ದ ಕೆ.ಪಿ.ಶರ್ಮಾ ಓಲಿ ಅವರ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ ಬಾಲೇಂದ್ರ. ಅದಕ್ಕೂ ಮಿಗಿಲಾಗಿ, ಅವರು ದೇಶದ ಕೋಟ್ಯಂತರ ಜೆನ್ ಝೀಗಳ ಮನಸ್ಸು ಗೆದ್ದಿದ್ದಾರೆ. ಅವರನ್ನು ಪ್ರಧಾನಿ ಪಟ್ಟದವರೆಗೆ ಕರೆತಂದಿರುವುದು ಅದೇ ಜೆನ್ ಝೀಗಳ ಬೆಂಬಲ.

2013ರವರೆಗೆ ಬಾಲೇಂದ್ರ ಶಾ ದೇಶದಲ್ಲಿ ಬಹುತೇಕ ಅನಾಮಿಕರಾಗಿದ್ದರು. ಹಾಡು ಬರೆದು, ಅವುಗಳಿಗೆ ಸಂಗೀತ ಸಂಯೋಜಿಸಿ ತಾವೇ ಹಾಡುವ ಅಭ್ಯಾಸ ಅವರ ಜೀವನ ಬದಲಾಯಿಸಿತು. 2012ರಲ್ಲಿ ತಮ್ಮ ಮೊದಲ ಹಿಪ್ ಹಾಪ್ ಹಾಡು ಬಿಡುಗಡೆ ಮಾಡಿದ್ದ ಅವರು, 2013ರಲ್ಲಿಯೂ ಟ್ಯೂಬ್ ರ‍್ಯಾಪ್ ಸರಣಿಯಲ್ಲಿ ಪಾಲ್ಗೊಳ್ಳುವ ಮೂಲಕ ಹೆಸರು ಮಾಡಿದರು. ಸಾಮಾಜಿಕ ಸಂಗತಿಗಳು, ಭ್ರಷ್ಟಾಚಾರ, ಅಸಮಾನತೆ, ನಗರ ಜೀವನದ ಬಗ್ಗೆ ಅನೇಕ ಹಾಡುಗಳನ್ನು ಬರೆದು, ಹಾಡಿ, ಪ್ರಸ್ತುತಪಡಿಸುವ ಮೂಲಕ ಜನಪ್ರಿಯತೆ ಗಳಿಸಿದರು. ಅವರ 'ಸಡಕ್ ಬಾಲಕ್', 'ಬಲಿದಾನ' ಮುಂತಾದ ಹಾಡುಗಳು ಯುವಜನರಲ್ಲಿ ಸಂಚಲನ ಸೃಷ್ಟಿಸಿ, ಯೂಟ್ಯೂಬ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಕೋಟ್ಯಂತರ ವೀಕ್ಷಣೆಗಳನ್ನು ಪಡೆದಿವೆ.

ನಂತರ ಬಾಲೇಂದ್ರ ಅವರ ಚಿತ್ತ ಹರಿದದ್ದು ರಾಜಕೀಯದತ್ತ. ನೇಪಾಳದಲ್ಲಿ ಪರ್ಯಾಯ ರಾಜಕಾರಣದ ಪ್ರಯತ್ನ ಆರಂಭಿಸಿ, ಅಕಾಲಿಕವಾಗಿ ಸಾವಿಗೀಡಾದ ಉಜ್ವಲ್ ಥಾಪಾ ಅವರ ಬೆಂಬಲಿಗರ ಬಲದೊಂದಿಗೆ 2022ರಲ್ಲಿ ಕಾಠ್ಮಂಡುವಿನ ಮೇಯರ್ ಸ್ಥಾನಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಪ್ರಮುಖ ಪಕ್ಷಗಳ ಅಭ್ಯರ್ಥಿಗಳನ್ನು ಮಣಿಸಿ ಕಾಠ್ಮಂಡುವಿನ ಮೇಯರ್ ಆಗಿ ಅಚ್ಚರಿ ಮೂಡಿಸಿದ್ದರು.

ಮೇಯರ್ ಆದ ನಂತರ ತಮ್ಮ ನೇರ ಆಡಳಿತ ಶೈಲಿ ಮತ್ತು ನಿರ್ಭೀತ (ಕೆಲವೊಮ್ಮೆ ಅಂಕೆ ಮೀರಿದ) ಮಾತಿನ ಮೂಲಕ ಬಾಲೇಂದ್ರ ಬಹುಬೇಗ ಜನಾದರಣೆ ಗಳಿಸಿದರು. ಅಕ್ರಮ ಕಟ್ಟಡಗಳನ್ನು ಬುಲ್ಡೋಜರ್ ಮೂಲಕ ಕೆಡವಿ ಹಾಕಿದರು. ಅವುಗಳ ಅವಶೇಷಗಳನ್ನು ಸರ್ಕಾರಿ ಕಚೇರಿಗಳ ಎದುರು ಸುರಿಯುವಂತೆ ಮಾಡಿದರು. ತ್ಯಾಜ್ಯ ನಿರ್ವಹಣೆಯಲ್ಲಿ ಸರ್ಕಾರದ ಅಸಹಕಾರ ವಿರೋಧಿಸಿ, ನೇಪಾಳದ ಪ್ರಧಾನಿ ಕಚೇರಿ ಸೇರಿದಂತೆ ಪ್ರಮುಖ ಸರ್ಕಾರಿ ಕಚೇರಿಗಳಿರುವ 'ಸಿಂಗ ದರ್ಬಾರ್' ಕಟ್ಟಡದಿಂದ ಕಸ ಸಂಗ್ರಹಣೆಯನ್ನೇ ಸ್ಥಗಿತಗೊಳಿಸಿದರು.

ನೇಪಾಳದ ವಿವಿಧ ಪಕ್ಷಗಳ ಜತೆಗೆ ಭಾರತ, ಅಮೆರಿಕ, ಚೀನಾ ದೇಶಗಳೂ ನೇಪಾಳದ ಹಿತಾಸಕ್ತಿಗೆ ವಿರುದ್ಧವಾಗಿವೆ ಎಂದು ಟೀಕಿಸುತ್ತಿದ್ದರು ಬಾಲೇಂದ್ರ. ಒಮ್ಮೆ ಗ್ರೇಟರ್ ನೇಪಾಳದ ಭೂಪಟ ಸಿದ್ಧಪಡಿಸಿ, ಅದರಲ್ಲಿ ಭಾರತದ ಹಲವು ಭಾಗಗಳನ್ನೂ ಸೇರಿಸಿ, ಅದನ್ನು ತಮ್ಮ ಕಚೇರಿಯಲ್ಲಿ ಹಾಕಿಕೊಂಡಿದ್ದರು. ಸೀತೆಯ ಬಗ್ಗೆ ತಪ್ಪು ಮಾಹಿತಿ ಹರಡಿವೆ ಎನ್ನುವ ಕಾರಣ ನೀಡಿ ಕಾಠ್ಮಂಡುವಿನಲ್ಲಿ ಹಿಂದಿ ಚಿತ್ರಗಳ ಪ್ರದರ್ಶನ ನಿಷೇಧಿಸಿದ್ದರು.

ಕಾನೂನು, ಕಟ್ಟುಪಾಡು ಎಲ್ಲವನ್ನೂ ಬದಿಗಿಟ್ಟು ತೋಚಿದ್ದನ್ನು ಫಟಾಫಟ್ ಮಾಡಿ ಮುಗಿಸುವ ಅವರ ಶೈಲಿ ಬದಲಾವಣೆಗಾಗಿ ತಹತಹಿಸುತ್ತಿದ್ದ ಯುವಜನರಿಗೆ ಇಷ್ಟವಾಯಿತು. ಜತೆಗೆ ಹಸಿ ಹಸಿ ಬೈಗುಳ ಬಳಸಿ ವಿರೋಧಿಗಳನ್ನು ಖಂಡಿಸುತ್ತಿದ್ದರು. ನೇಪಾಳದ ವಿವಿಧ ಪಕ್ಷಗಳ ಮುಖಂಡರು, ಅವರ ಭ್ರಷ್ಟಾಚಾರ, ಸ್ವಜನಪಕ್ಷಪಾತಗಳನ್ನು ತನ್ನ ಹಾಡುಗಳ ಮೂಲಕ ವ್ಯಂಗ್ಯ ಮಾಡಿದರು. 'ನೇಪಾಳ ಹಸ್ಕೊ' (ನೇಪಾಳ ನಗುತ್ತಿದೆ) ಎನ್ನುವ ಅವರ 2025ರ ಹಾಡು ದೇಶದ 'ರಾಷ್ಟ್ರಗೀತೆ'ಯಂತಾಯಿತು. ಹೀಗೆ ತಮ್ಮ ವಿಶಿಷ್ಟ ಶೈಲಿಯ ಮಾತು, ರಾಜಕಾರಣ, ಹಾಡುಗಳ ಮೂಲಕ ನೇಪಾಳದ ಜೆನ್ ಝೀಗಳ ಪಾಲಿಗೆ 'ಹೀರೋ' ಆದರು.

ನೇಪಾಳದಲ್ಲಿ ಕಮ್ಯುನಿಸ್ಟ್ ಪಾರ್ಟಿ (ಸಿಪಿಎನ್ ಯುಎಂಎಲ್) ದುರಾಡಳಿತದಿಂದ ಬೇಸತ್ತಿದ್ದ, ಬಡತನದಂತಹ ಸಮಸ್ಯೆಗಳಿಂದ ಬಸವಳಿದಿದ್ದ ನೇಪಾಳ ಜೆನ್ ಝೀಗಳಿಗೆ ಯಾವುದೇ ರಾಜಕೀಯ ಪಕ್ಷಕ್ಕೆ ಸೇರದ, ವ್ಯಾಪಾರಿ ಹಿತಾಸಕ್ತಿಯೂ ಇಲ್ಲದ ಬಾಲೇಂದ್ರ ಬಗ್ಗೆ ಸಹಜವಾಗಿಯೇ ಒಲವು ಮೂಡಿತು. ಕಳೆದ ಸೆಪ್ಟೆಂಬರ್‌ನಲ್ಲಿ ಬೀದಿಗಿಳಿದು ಬೃಹತ್ ಪ್ರತಿಭಟನೆ ನಡೆಸಿದ್ದ ಜೆನ್ ಝೀಗಳು, ಕೆ.ಪಿ.ಶರ್ಮಾ ಓಲಿ ಅವರ ಸರ್ಕಾರವನ್ನು ಪತನಗೊಳಿಸಿದ್ದರು. ಬಾಲೇಂದ್ರ ಅವರೇ ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಬೇಕು ಎನ್ನುವುದು ಆಗ ಪ್ರತಿಭಟನಕಾರರ ಒತ್ತಾಯವಾಗಿತ್ತು. ಅದನ್ನು ಬಾಲೇಂದ್ರ ನಿರಾಕರಿಸಿದ್ದರು. ಆದರೆ, ಪ್ರಧಾನಿ ಪಟ್ಟದ ಮೇಲೆ ಅವರ ಕಣ್ಣು ಇದ್ದೇ ಇತ್ತು.

ಕಳೆದ ನವೆಂಬರ್‌ನಲ್ಲಿ ತಮ್ಮ ಫೇಸ್‌ಬುಕ್ ಪೋಸ್ಟ್‌ನಲ್ಲಿ ದೇಶದ ಕಮ್ಯುನಿಸ್ಟ್ ಪಕ್ಷಗಳ ಜತೆಯಲ್ಲಿ ಆರ್‌ಎಸ್‌ಪಿಯನ್ನೂ ಹೀಗಳೆದಿದ್ದರು ಬಾಲೇಂದ್ರ. ಜನವರಿಯಲ್ಲಿ ಮೇಯರ್ ಹುದ್ದೆಗೆ ರಾಜೀನಾಮೆ ನೀಡಿ, ಅದೇ ಪಕ್ಷ ಸೇರಿದರು. ಮಾರ್ಚ್‌ನಲ್ಲಿ ನಡೆದ ಚುನಾವಣೆಯಲ್ಲಿ ಅವರೇ ಪ್ರಧಾನಿ ಅಭ್ಯರ್ಥಿ ಎಂದು ಪಕ್ಷ ತೀರ್ಮಾನಿಸಿತು. ಬದಲಾವಣೆಗಾಗಿ ತಹತಹಿಸುತ್ತಿದ್ದ ನೇಪಾಳದ ಜೆನ್ ಝೀ ಕೃಪೆಯಿಂದ ಆರ್‌ಎಸ್‌ಪಿ ಭಾರಿ ಬಹುಮತ ಪಡೆದಿದ್ದು, ಪ್ರಧಾನಿ ಹುದ್ದೆಗೇರಲು ಬಾಲೇಂದ್ರ ಸಿದ್ಧರಾಗಿದ್ದಾರೆ.

ಸಿನಿಮಾ ಶೈಲಿ: ಬಾಲೇಂದ್ರ ಅವರದ್ದು ಸಿನಿಮಾ ಶೈಲಿಯ ರಾಜಕಾರಣ. ಭಾರತದ ಎಂಜಿಆರ್, ಎನ್‌ಟಿಆರ್, ಪವನ್ ಕಲ್ಯಾಣ್, ಬಾಲಕೃಷ್ಣ ಅವರ ರಾಜಕಾರಣಕ್ಕೆ ಹತ್ತಿರದ ಶೈಲಿ ಅವರದ್ದು. 2023ರಲ್ಲಿ ಬಾಲೇಂದ್ರ ಮೇಯರ್ ಆಗಿದ್ದಾಗ ಒಂದು ಘಟನೆ ವ್ಯಾಪಕವಾಗಿ ಸುದ್ದಿಯಾಗಿತ್ತು. ರಜಾದಿನದಂದು, ಮೇಯರ್ ಅವರ ಅಧಿಕೃತ ಕಾರಿನಲ್ಲಿ ಅವರ ಪತ್ನಿ ಒಬ್ಬರೇ ತೆರಳುತ್ತಿದ್ದಾಗ, ಸಂಚಾರಿ ಪೊಲೀಸರು ಅವರನ್ನು ತಡೆದಿದ್ದರು. ಅದರಿಂದ ಕೆಂಡಾಮಂಡಲರಾಗಿದ್ದ ಬಾಲೇಂದ್ರ, ಮುಂದೆ ಹೀಗೆ ತಮ್ಮ ಕಾರನ್ನು ತಡೆದರೆ, ಪ್ರಧಾನಿ ಕಚೇರಿಗೆ ಬೆಂಕಿ ಹಾಕುವುದಾಗಿ ಗುಡುಗಿದ್ದರು. ಕಾಕತಾಳೀಯವೆಂದರೆ, ಯುವಕ್ರಾಂತಿಯ ಸಂದರ್ಭದಲ್ಲಿ ಪ್ರತಿಭಟನಕಾರರು, ಪ್ರಧಾನಿ ಕಚೇರಿಗೆ ಬೆಂಕಿ ಹಚ್ಚಿದ್ದರು.

ಸದಾ ಬಡವರು, ಅಸಮಾನತೆ ಬಗ್ಗೆ ಮಾತನಾಡುವ ಬಾಲೇಂದ್ರ ಒಮ್ಮೆ ದುಬಾರಿ ಬೆಲೆಯ ಕಾರಿನಲ್ಲಿ ಸಂಚರಿಸುವುದು ಸುದ್ದಿಯಾಗಿತ್ತು. ವಿರೋಧಿಗಳು ಅದನ್ನು ಪ್ರಶ್ನಿಸಿದಾಗ, ಸ್ನೇಹಿತರೊಬ್ಬರು ತನ್ನ ಬಳಕೆಗಾಗಿ ಕೊಟ್ಟ ಕಾರು ಅದು ಎಂದು ಸಮಜಾಯಿಷಿ ನೀಡಿದ್ದರು. ಇಂಥ ಅತಿರೇಕದ, ಯಾವುದೇ ಹೋರಾಟ, ಚಳವಳಿಯ ಹಿನ್ನೆಲೆ ಇಲ್ಲದ, ಸಾರ್ವಜನಿಕ ಸಮಸ್ಯೆಗಳ ಚರ್ಚೆ, ಸಂವಾದಕ್ಕೆ ಮುಖಾಮುಖಿಯಾಗುವುದನ್ನು ತಪ್ಪಿಸುವ ಪ್ರವೃತ್ತಿಯ ಬಾಲೇಂದ್ರ, ನೇಪಾಳವನ್ನು ಯಾವ ದಿಕ್ಕಿನಲ್ಲಿ ಮುನ್ನಡೆಸುತ್ತಾರೆ ಎನ್ನುವ ಕುತೂಹಲ ಜಾಗತಿಕ ವಲಯದಲ್ಲಿದೆ.



ಜಾಲತಾಣಗಳೇ ಸಂಪರ್ಕ ಮಾಧ್ಯಮ

ಸುಮಾರು 3.2 ಕೋಟಿ ಜನಸಂಖ್ಯೆ ಇರುವ ನೇಪಾಳದಲ್ಲಿ 35 ವರ್ಷ ಒಳಗಿನ ಯುವಜನರ ಪ್ರಮಾಣ ಶೇ 40ರಷ್ಟು. ಮುಖ್ಯವಾಹಿನಿಯ ಪತ್ರಿಕೆಗಳು, ಸುದ್ದಿ ವಾಹಿನಿಗಳಿಂದ ಆದಷ್ಟೂ ಅಂತರ ಕಾಯ್ದುಕೊಳ್ಳುವ ಬಾಲೇಂದ್ರ, ಪಾಡ್‌ಕಾಸ್ಟ್‌ಗಳು, ಸಾಮಾಜಿಕ ಜಾಲತಾಣಗಳ ಮೂಲಕ ಯುವಜನರನ್ನು ತಲುಪುತ್ತಿದ್ದಾರೆ. ಅವರಿಗೆ ಫೇಸ್‌ಬುಕ್‌ನಲ್ಲಿ 35 ಲಕ್ಷ, ಇನ್‌ಸ್ಟಾಗ್ರಾಂನಲ್ಲಿ 4 ಲಕ್ಷ ಮತ್ತು ಯೂಟ್ಯೂಬ್‌ನಲ್ಲಿ 10 ಲಕ್ಷ ಫಾಲೋವರ್‌ಗಳು ಇದ್ದಾರೆ.

ಬೆಂಗಳೂರಿನ ನಂಟು

ನೇಪಾಳದ ಹಿಂದುಳಿದ ಮಾದೇಶ್ ಪ್ರಾಂತ್ಯಕ್ಕೆ ಸೇರಿದ ಬೌದ್ಧ ಧರ್ಮದ ದಂಪತಿಯ ಮಗ ಬಾಲೇಂದ್ರ. ಅವರ ತಂದೆ ಪಾರಂಪರಿಕ ಪದ್ಧತಿಯ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು. ಚಿಕ್ಕಂದಿನಲ್ಲಿ ಚುರುಕುತನದಿಂದ ಕೂಡಿದ್ದ ಅವರಿಗೆ ಕವನ ಬರೆಯುವುದು ತಂದೆಯಿಂದ ಬಂದ ಬಳುವಳಿ. ಕಾಠ್ಮಂಡುವಿನಲ್ಲಿ ಎಂಜಿನಿಯರಿಂಗ್ ಅಧ್ಯಯನ ಮಾಡಿದ ಅವರು, ಬೆಂಗಳೂರಿನ ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಸ್ಟ್ರಕ್ಚರಲ್ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಸ್ಥಿರತೆ ತಂದುಕೊಡುವರೇ?

ನೇಪಾಳದಲ್ಲಿ ಅರಸೊತ್ತಿಗೆ, ಪ್ರಜಾಪ್ರಭುತ್ವ, ನಿರಂಕುಶಾಧಿಕಾರಗಳ ನಡುವಿನ ಮೇಲಾಟಕ್ಕೆ ದೀರ್ಘ ಇತಿಹಾಸವೇ ಇದೆ. ಅರಸೊತ್ತಿಗೆಯಿಂದ ಪ್ರಜಾಪ್ರಭುತ್ವದತ್ತ, 'ಹಿಂದೂ ರಾಷ್ಟ್ರ'ದಿಂದ 'ಜಾತ್ಯತೀತ ರಾಷ್ಟ್ರ'ದತ್ತ ನಡೆದುಬಂದ ದೇಶ ಅದು. 2006ರಲ್ಲಿ ಅಧಿಕಾರ ಬಿಟ್ಟುಕೊಡುವಂತೆ ದೊರೆ ಜ್ಞಾನೇಂದ್ರ ಶಾ ಅವರ ವಿರುದ್ಧ ಭಾರಿ ಪ್ರತಿಭಟನೆಗಳು ಆರಂಭವಾಗಿದ್ದವು. 2008ರಲ್ಲಿ ಸಂಸತ್ತು ರಾಜಪ್ರಭುತ್ವವನ್ನು ರದ್ದುಗೊಳಿಸಿತು. ಆದರೆ, ದೇಶದಲ್ಲಿ ಪ್ರಜಾಪ್ರಭುತ್ವ ಜಾರಿಯಾದ ನಂತರ ರಾಜಕೀಯ ಸ್ಥಿರತೆ ಮೂಡಲಿಲ್ಲ. 18 ವರ್ಷದಲ್ಲಿ 14 ಸರ್ಕಾರಗಳನ್ನು, 9 ಪ್ರಧಾನಿಗಳನ್ನು ಕಂಡಿತು. ಈಗ 10ನೆಯ ಪ್ರಧಾನಿಯಾಗಿ ಬಾಲೇಂದ್ರ ಶಾ ಅಧಿಕಾರ ಸ್ವೀಕರಿಸಲಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

14 ಮಾರ್ಚ್ 2026 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ದಶಮಿ ಗಂ 8-11 ನಕ್ಷತ್ರ: ಉತ್ತರಾಷಾಢ ಗಂ. 28-49 ಯೋಗ: ವರಿಯಾನ್ ಗಂ. 10-43 ಕರಣ: ವಿಷ್ಟಿ ಗಂ 8-11 ಕುಂಭ ಮಾಸದ 30 ನೇ ದಿನ. ಮಳೆ ನಕ್ಷತ್ರ : ಪೂರ್ವಾಭಾದ್ರ 3 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00 - 10-30 , **ಸೂರ್ಯೋದಯ :** 06-42 **ಸೂರ್ಯಾಸ್ತ :** 06-37, **ಮುಸ್ಲಿಂ ದಿನಾಂಕ :** 24 ರಂಜಾನ್, **ಅದೃಷ್ಟ ಸಂಖ್ಯೆ :** 2, 8

ಮೇಷ: ದೈವಬಲ ಉಂಟಾಗಿದ್ದು, ಆರ್ಥಿಕ ಪರಿಸ್ಥಿತಿ ಸುಧಾರಣೆಯತ್ತ ಸಾಗಿರುವುದನ್ನು ಅನುಭವ ಪೂರ್ವಕವಾಗಿ ಕಾಣುವಿರಿ. ಮಕ್ಕಳ ವಿಚಾರದಲ್ಲಿ ಹೆಮ್ಮೆ ಪಡುವಂಥ ಕ್ಷಣಗಳು ಎದುರಾಗಲಿವೆ.

ವೃಷಭ: ಕಂದಾಯ ಇಲಾಖೆಯ ಉನ್ನತ ಅಧಿಕಾರಿಗಳಿಗೆ ದೂರದ ಊರಿಗೆ ವರ್ಗಾವಣೆಯಾಗುವ ಸಾಧ್ಯತೆಗಳಿವೆ. ಕೈಗೆತ್ತಿಕೊಂಡಿರುವ ಕೆಲಸಗಳು ಖರ್ಚಿಗೆ ಕಾರಣವಾಗಲಿವೆ. ಯುವ ಕಲಾವಿದರಿಗೆ ಅವಕಾಶಗಳು ಲಭಿಸಲಿವೆ.

ಮಿಥುನ: ಸಮಯವನ್ನು ಅರಿತು ಅಧಿಕಾರಿ ವರ್ಗದವರಲ್ಲಿ ಎಚ್ಚರಿಕೆಯಿಂದ ವರ್ತಿಸುವುದರಿಂದ ಯಶಸ್ಸು ಹಾಗೂ ಅಭಿವೃದ್ಧಿಗೆ ಕಾರಣವಾಗುತ್ತದೆ. ಗುರು ಹಿರಿಯರ ದರ್ಶನ ಭಾಗ್ಯ ದೊರಕುತ್ತದೆ.

ಕರ್ಕಾಟಕ: ಪತ್ರಿಕೋದ್ಯಮಿಗಳಿಗೆ ಬಿಡುವಿಲ್ಲದ ಕೆಲಸಗಳು ಮತ್ತು ವಿಮರ್ಶಿಸಲು ಕಷ್ಟವಾಗುವಂತಹ ಪರಿಸ್ಥಿತಿಗಳು ಎದುರಾಗುತ್ತವೆ. ವೃತ್ತಿರಂಗದಲ್ಲಿ ತಿಳಿವಳಿಕೆ ಅಂತಿಮವೆಂದು ತಿಳಿದುಕೊಳ್ಳಬೇಡಿ.

ಸಿಂಹ: ವಿದ್ಯಾರ್ಥಿಗಳು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಮಾನ ಗಮನ ನೀಡಿದರೆ ಸಮಾಜದಲ್ಲಿ ಗುರುತಿಸುವ ವ್ಯಕ್ತಿ ಆಗಬಹುದು. ಜೀವನ ಚರಿತ್ರೆಯಲ್ಲಿ ಹೊಸದೊಂದು ಅಧ್ಯಾಯ ಪ್ರಾರಂಭವಾಗಲಿದೆ.

ಕನ್ಯಾ: ಮಹಿಳೆಯರಿಗೆ ಉನ್ನತ ಉದ್ಯೋಗ ಹಾಗೂ ಪ್ರಾಪ್ತವಯಸ್ಕರಿಗೆ ವಿವಾಹದ ಶುಭ ಫಲಗಳು ದೊರೆಯಲಿವೆ. ಸಾಮಾಜಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯು ಎಲ್ಲರ ಪ್ರಶಂಸೆಗೆ ಪಾತ್ರವಾಗುತ್ತದೆ.

ತುಲಾ: ವಿಚಾರವಾದರೂ ತೀರ್ಮಾನ ಕೈಗೊಳ್ಳುವ ಮುನ್ನ ಮನೆಯವರೊಂದಿಗೆ ಹಾಗೂ ತಿಳಿದವರೊಂದಿಗೆ ಚರ್ಚಿಸಿ ನಿರ್ಧರಿಸಿ. ಕಬ್ಬಿಣ ಹಾಗೂ ಸಿಮೆಂಟ್ ವ್ಯಾಪಾರಿಗಳಿಗೆ ಲಾಭ ಸಿಗಬಹುದು.

ವೃಶ್ಚಿಕ: ಉದ್ಯೋಗದಲ್ಲಿರುವ ಒತ್ತಡವನ್ನು ಬಗೆಹರಿಸಿಕೊಳ್ಳಲು ಹೋಗಿ ಪುನಃ ದೊಡ್ಡ ಸಮಸ್ಯೆಗೆ ಸಿಲುಕಿದಂತಾಗಬಹುದು. ಧನಾರ್ಜನೆ ಇದ್ದರೂ ಕೈಯಲ್ಲಿ ಹಣ ಇಲ್ಲದಂತೆ ಆಗುವುದು.

ಧನು: ಹಿರಿಯ ನಾಗರಿಕರು ಕೌಟುಂಬಿಕವಾಗಿ ವಹಿಸಿಕೊಂಡ ಜವಾಬ್ದಾರಿಗಳನ್ನು ಕಡಿಮೆ ಮಾಡುವ ಬಗ್ಗೆ ಗಮನಹರಿಸಿ. ಸ್ನೇಹಿತರೊಂದಿಗಿನ ಹರಟೆ ಮನಸ್ಸನ್ನು ಹಗುರಗೊಳಿಸಲು ಕಾರಣವಾಗುವುದು.

ಮಕರ: ಸರ್ಕಾರಿ ಕೆಲಸಗಳ ಪ್ರಯತ್ನ ಅಧಿಕಾರಿ ವರ್ಗದವರಲ್ಲಿ ಸಹನಶೀಲರಾಗಿ ವರ್ತಿಸಿದಲ್ಲಿ ಈಡೇರಲಿದೆ. ವ್ಯಾಪಾರ ವಾಣಿಜ್ಯ ಸಂಬಂಧಗಳನ್ನು ಹೆಚ್ಚಿಸಿಕೊಳ್ಳಲು ಪ್ರಯಾಣ ಬೆಳೆಸುವಿರಿ

ಕುಂಭ: ಕಾರ್ಮಿಕರು ಸಹನಶೀಲರಾಗಿ ಕೆಲಸದ ಬಗ್ಗೆ ಸರಿಯಾಗಿ ಗಮನ ವಹಿಸುವುದರಿಂದ ಯಶಸ್ಸು ಪಡೆಯಬಹುದು. ಸಂಘ– ಸಂಸ್ಥೆಗಳ ಅಧಿಕಾರಿಗಳಿಗೆ ಮಾತುಗಳನ್ನು ಕೇಳಬೇಕಾದ ಸಂದರ್ಭ ಬರಬಹುದು.


ಮೀನ: ಕುಟುಂಬದಲ್ಲಿ ಉತ್ತಮ ವಾತಾವರಣವಿದ್ದು ಸಂತಸ ಹಾಗೂ ಸಮಾಧಾನ ತರಲಿದೆ. ಉತ್ತಮ ಅವಕಾಶದ ಜೊತೆಯಲ್ಲಿ ಅದೃಷ್ಟವೂ ಪಾಲಿಗಿದೆ. ಪರಿಶ್ರಮದ ಜೊತೆ ಸಮಯವನ್ನು ವೃತ್ತಿಯ ಕೆಲಸಕ್ಕೆ ಮೀಸಲಿಡಿ.

ಪದಬಂಧ 6343

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
5.ಮಾಡಿದ ಕೆಲಸಕ್ಕೆ ದೊರೆತ ಲಾಭ (4)
6.ಅಡಿಯಲ್ಲಿಯೇ ಗದ್ದಲ! (4)
7.ಸೀರೆಯ ಹೊದೆಯುವ ಭಾಗ (3)
9.ಗಡಿ ಬಳಿ ತಲೆದೋರಿದ ಶೀತ (3)
10.ಉತ್ತರ ನೀಡುತ್ತಲೇ ವಹಿಸಿಕೊಂಡಿರುವ ಹೊಣೆಗಾರಿಕೆ (5)
11.ಕರಿಯ ಮರಿಯಿರುವ ಆಳವಾದ ಗುಂಡಿ (3)
12.ಸಿಹಿಯಾಗಿರುವ ಆಲೂಗಡ್ಡೆ ಜಾತಿಯ ಕಂದಮೂಲ (3)
14.ಮಾತಿನ ಜಗಳ (4)
16.ಸೋಲು ಈ ರೀತಿ ಬಂದಿದೆ (4)

ಮೇಲಿಂದ ಕೆಳಕ್ಕೆ
1.ತನ್ನನ್ನು ತಾನೇ ಹೊಗಳಿಕೊಳ್ಳುವುದು (4)
2.ಕುಟಿಲನ ವಂಶ! (2)
3.ಮಾವನ ಹೆಂಡತಿ ತಿರುಗಿದ್ದಾಳಲ್ಲಾ! (2)
4.ಎಲ್ಲೆಯ ಹತ್ತಿರ ತೋರಿದ ಅವಸರ (4)
8.ಹಳೆ ಸಾಮಾನುಗಳನ್ನು ಮಾರುವ ಸ್ಥಳ (3)
9.ವಯಸ್ಸಾದವರಲ್ಲಿ ಮೂಡುವ ಸುಕ್ಕು (3)
11.ಕಣದಲ್ಲಿ ಹಾಕಿರುವ ಲಗಾಮು (4)
13.ಗುಪ್ತವಾಗಿರುವ ಸ್ಥಿತಿ (4)
15.ಹತ್ತಿರದಲ್ಲೇ ಇರುವ ಅರಳೆ (2)
16.ಪ್ರತ್ಯಯ ಸಹಿತವಾದ ಶಬ್ದ (2)



6342ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಲಾವಿದ 3.ಪರಿತಾಪ
5.ವರಸೆ 6.ಮಡಿವಂತ
7.ಸ್ವಕಪೋಲಕಲ್ಪನೆ
10.ಆಕಸ್ಮಿಕ 11.ಚಡಾವು
14.ಯಜುರ್ವೇದ 15.ಮರಕತ

ಮೇಲಿಂದ ಕೆಳಕ್ಕೆ:
1.ಕಕ್ಕಿ 2.ವಿಧುರ
4.ಪರಾತ 5.ವಭ್ರಾಸ್ವ
6.ಮರುಕ 8.ಪೋಷಕ
9.ನೆರವು 10.ಆಲಯ
11.ಡಾಮರ 12.ಪ್ಲುತ

ಸುಡೊಕು 6727

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6			2		5		
5		4			7			
	2		5			6		7
8		1		3		7		9
			9		8		1	
9		2		5		3		6
7		3		9			6	
	8		7		5	9		
		9		8				5

6726ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

‘ಪಿ.ಎಂ ಯೋಜನೆ’ ಹೆಸರು ಬಳಸಿ ವಂಚನೆ

ಸಬ್ಸಿಡಿ ರೂಪದಲ್ಲಿ ಇ.ವಿ ಸ್ಕೂಟಿ ಕೊಡುವುದಾಗಿ ನಂಬಿಸಿ ಮೋಸ
● ಇಬ್ಬರು ಆರೋಪಿಗಳನ್ನು ಬಂಧಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ


ರಾಕೇಶ್


ಹನುಮಂತರಾಜು

ಬೆಂಗಳೂರು: ಎಲೆಕ್ಟ್ರಿಕ್ ಸ್ಕೂಟಿ (ಇ.ವಿ) ಮಾರಾಟದ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ವಂಚಿಸಿರುವ ಇಬ್ಬರು ಆರೋಪಿಗಳನ್ನು ಬಾಗಲಗುಂಟೆ ಹಾಗೂ ಪೀಣ್ಯ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನಾಗಸಂದ್ರ ಬಳಿಯ ಬೈರೇಶ್ವರ ನಗರದ ನಿವಾಸಿ ಪಿ. ರಮೇಶ್ ಅವರು ನೀಡಿದ ದೂರಿನ ಮೇಲೆ ರಾಕೇಶ್ ಬಿಲ್ಕರ್ ಹಾಗೂ ಚೊಕ್ಕಸಂದ್ರದ ಸ್ಮೃತಿ ಜೀನಾ ಅವರು ನೀಡಿದ ದೂರಿನ ಮೇಲೆ ಹನುಮಂತರಾಜು ಬಿಲ್ಕರ್ ಅವರನ್ನು ಪೀಣ್ಯ ಠಾಣೆಯ ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

‘ಪ್ರಧಾನ ಮಂತ್ರಿ ಯೋಜನೆ’ಯ ಅಡಿ ಇ.ವಿ ಸ್ಕೂಟಿ ಮಾರಾಟ ಮಾಡುವ ನೆಪದಲ್ಲಿ ಸುಮಾರು ₹35 ಸಾವಿರ ಮೌಲ್ಯದ ಸ್ಕೂಟಿಗೆ ₹1.50 ಲಕ್ಷ ಬಿಲ್ ಮಾಡಿ ಗ್ರಾಹಕರಿಗೆ ಮಾರಾಟ ಮಾಡಿದ್ದರು. ಸಬ್ಸಿಡಿ ಸೌಲಭ್ಯ ದೊರೆಯುತ್ತದೆ ಎಂಬುದಾಗಿ ನಂಬಿಸಿ ಕೋಟ್ಯಂತರ ರೂಪಾಯಿ ಲೂಟಿ ಮಾಡಿರುವ ಶಂಕೆ ಇದೆ. ಈ ರೀತಿ ನೂರಾರು ಮಂದಿಗೆ ಮೋಸ ಮಾಡಿರುವುದು ಗೊತ್ತಾಗಿದೆ. ಜ್ಯೋತಿ ಬಿಲ್ಕರ್, ಭೂಮಿಕಾ, ರತ್ನಮ್ಮ ಅವರ ವಿರುದ್ಧವೂ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಗ್ರಾಹಕರಿಂದ ₹15 ಸಾವಿರದಿಂದ ₹20 ಸಾವಿರ ಪಡೆದು ಅವರ ದಾಖಲೆಗಳನ್ನು ಸಂಗ್ರಹಿಸುತ್ತಿದ್ದರು. ಬಳಿಕ, ಆ ದಾಖಲೆಗಳನ್ನು ಬಳಸಿ ಗ್ರಾಹಕರ ಹೆಸರಿನಲ್ಲಿ ಬ್ಯಾಂಕ್‌ನಲ್ಲಿ ಸುಮಾರು ₹1.50 ಲಕ್ಷ ಸಾಲ ಮಾಡಿಸಲಾಗುತ್ತಿತ್ತು. ಈ ಹಣವನ್ನು ಇ.ವಿ ಶೋರೂಂ ಮಾಲೀಕರು ದುರುಪಯೋಗ ಮಾಡಿಕೊಂಡಿರುವ ಆರೋಪ ಇದೆ ಎಂದು ಪೊಲೀಸರು ಹೇಳಿದರು.

‘ಆಪ್ಕಿ ಇ.ವಿ’ ಶೋರೂಂ ಮಾಲೀಕರಾದ ರಾಕೇಶ್ ಮತ್ತು ಹನುಮಂತರಾಜು ವಂಚನೆಯ ಪ್ರಮುಖ ಆರೋಪಿಗಳಾಗಿದ್ದು, ಪ್ರಕರಣದಲ್ಲಿ ಬ್ಯಾಂಕ್‌ವೊಂದರ ವ್ಯವಸ್ಥಾಪಕರೂ ಭಾಗಿ ಆಗಿರುವ ಶಂಕೆ ಇದೆ’ ಎಂದು ಪೊಲೀಸರು ಹೇಳಿದರು.

ಪಿ.ರಮೇಶ್ ಅವರಿಂದ ದಾಖಲೆ ಪಡೆದಿದ್ದರು: 2025ರ ಡಿಸೆಂಬರ್‌ನಲ್ಲಿ 8ನೇ ಮೈಲು ಸಿಗ್ನಲ್ ಬಳಿಯ ಬಿಲ್ಕರ್ ಟೆಕ್ನಾಲಜಿ ಎಂಬ ಶೋರೂಂಗೆ ರಮೇಶ್ ಹೋಗಿದ್ದರು. ಅಲ್ಲಿದ್ದ ಹನುಮಂತರಾಜು ಬಿಲ್ಕರ್, ರಾಕೇಶ್ ಬಿಲ್ಕರ್, ಜ್ಯೋತಿ ಬಿಲ್ಕರ್ ಹಾಗೂ ಭೂಮಿಕಾ ಅವರು ಪ್ರಧಾನ ಮಂತ್ರಿ ಯೋಜನೆಯ ಅಡಿ ಸಬ್ಸಿಡಿ ರೂಪದಲ್ಲಿ ಇ.ವಿ ಸ್ಕೂಟಿಗಳನ್ನು ಗ್ರಾಹಕರಿಗೆ ನೀಡಲಾಗುತ್ತಿದೆ ಎಂದು ನಂಬಿಸಿದ್ದರು. ಸ್ಕೂಟಿಯ ಬೆಲೆ ₹70 ಸಾವಿರವಿದೆ. ಆದರೆ, ₹13 ಸಾವಿರ ಪಾವತಿಸಿದರೆ ಸಾಕು. ಉಳಿದ ಹಣವನ್ನು ಬ್ಯಾಂಕ್‌ನಿಂದ ಸಾಲ ಮಾಡಿಸಿಕೊಡುತ್ತೇವೆ. ಬ್ಯಾಂಕ್‌ನಿಂದ ಪಡೆದ ಸಾಲಕ್ಕೆ ಇಎಂಐ ಮೂಲಕ ನಾವೇ ಮರು ಪಾವತಿ ಮಾಡುತ್ತೇವೆ. ಆ ನಂತರ ಪ್ರಧಾನ ಮಂತ್ರಿ ಯೋಜನೆ ಅಡಿ ಸಂಪೂರ್ಣ ಹಣವು ನಿಮ್ಮ ಬ್ಯಾಂಕ್ ಖಾತೆಗೆ ಸಬ್ಸಿಡಿ ರೂಪದಲ್ಲಿ ಜಮೆಯಾಗುತ್ತದೆ ಎಂದು ಆರೋಪಿಗಳು ನಂಬಿಸಿದ್ದರು. ಅದಕ್ಕೆ ರಮೇಶ್ ಅವರು ಒಪ್ಪಿ ₹13 ಸಾವಿರ ಪಾವತಿ ಮಾಡಿದ್ದರು. ಅಲ್ಲದೇ, ಸಾಲ ಪಡೆಯಲು ಪಾನ್‌ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ನೀಡಿದ್ದರು. ಏಳು ದಿನಗಳ ಒಳಗಾಗಿ ಇ.ವಿ ವಾಹನ ನೀಡುವುದಾಗಿ ಹೇಳಿದ್ದರು. ಏಳು ದಿನ ಕಳೆದ ಮೇಲೆ ಶೋರೂಂಗೆ ತೆರಳಿ ವಿಚಾರಿಸಿದಾಗ ಇ.ವಿ ಸ್ಕೂಟಿ ನೀಡಿರಲಿಲ್ಲ’ ಎಂದು ಪೊಲೀಸರು ಹೇಳಿದರು.

‘ಇದೇ ಆರೋಪಿಗಳು ಅಯ್ಯಪ್ಪ ದೇವಸ್ಥಾನದ ಬಳಿಯೂ ಆಪ್ಕೆ ಇ.ವಿ ಎಂಬ ಶೋರೂಂ ತೆರೆದಿದ್ದರು. ಆ ಶೋರೂಂನಲ್ಲಿ ಸ್ಮೃತಿ ಜೀನಾ ಅವರಿಗೆ ವಂಚನೆ ಮಾಡಿದ್ದರು. ಅವರಿಂದ ₹25 ಸಾವಿರ ಪಡೆದಿದ್ದರು. ಅಲ್ಲದೇ ಅವರ ಹೆಸರಿನಲ್ಲಿ ₹1.35 ಲಕ್ಷ ಸಾಲ ಪಡೆದುಕೊಂಡಿದ್ದರು. ಸ್ಮೃತಿ ಖಾತೆಯಿಂದ ಪ್ರತಿ ತಿಂಗಳು ₹5,463 ಕಡಿತವಾಗುತ್ತಿದೆ. ಆದರೆ, ಇದುವರೆಗೂ ಸ್ಕೂಟಿ ನೀಡಿಲ್ಲ’ ಎಂದು ಮೂಲಗಳು ಹೇಳಿವೆ.

ಹಲವರಿಗೆ ವಂಚನೆ?

ಸಬ್ಸಿಡಿ ಕೊಡಿಸುವುದಾಗಿ ನಂಬಿಸಿ 900 ಮಂದಿಗೆ ಇ.ವಿ ಸ್ಕೂಟಿ ಕೊಡಲಾಗಿದೆ. ಆದರೆ, ಅವರ ಖಾತೆಗೆ ಯಾವುದೇ ಸಬ್ಸಿಡಿ ಹಣ ಜಮೆ ಆಗಿಲ್ಲ. ಗ್ರಾಹಕರ ಖಾತೆಯಿಂದಲೇ ಇಎಂಐ ಕಡಿತವಾಗುತ್ತಿದೆ. ಪಿ.ರಮೇಶ್ ಹಾಗೂ ಸ್ಮೃತಿ ಜೀನಾ ನೀಡಿದ ದೂರಿನ ಮೇಲೆ ತನಿಖೆ ನಡೆಸಿದಾಗ ವಂಚನೆಯ ಜಾಲ ಬಯಲಾಗಿದೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ


ಸುದ್ದಿ 2 ನಿಮಿಷ

‘ಒಳ ಮೀಸಲಾತಿ ಜಾರಿಗೆ ವಿಶೇಷ ಸಂಪುಟ ಸಭೆ ಏಕೆ?’

ಬೆಂಗಳೂರು: ರಾಜ್ಯದಲ್ಲಿ ಪರಿಶಿಷ್ಟ ಸಮುದಾಯದ ಒಳ ಮೀಸಲಾತಿ ಜಾರಿ ಮಾಡಲು ವಿಶೇಷ ಸಂಪುಟ ಸಭೆಯ ಅಗತ್ಯವಿಲ್ಲ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬದ್ಧತೆ ಇದ್ದರೆ, ಸುಪ್ರೀಂ ಕೋರ್ಟ್ ನಿರ್ದೇಶನದಂತೆ ನಾಗಮೋಹನದಾಸ್ ವರದಿ ಆಧರಿಸಿ ಒಳಮೀಸಲಾತಿ ಜಾರಿ ಮಾಡಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಹೋರಾಟ ಕೈಗೊಳ್ಳಲಾಗುವುದು’ ಎಂದು ಅವರು ಎಚ್ಚರಿಸಿದರು.

‘ಹಿಂದೆ ಐದು ವರ್ಷ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಒಳಮೀಸಲಾತಿ ಹೋರಾಟ, ಎಸ್‌ಸಿ– ಎಸ್‌ಟಿ ಜನಾಂಗಕ್ಕೆ ಮೀಸಲಾತಿ ಹೆಚ್ಚಳ ಮಾಡಬೇಕು ಎಂಬ ಕೂಗು ಕೇಳಿ ಬಂದಿತ್ತು. ಹಿಂದುಳಿದ ವರ್ಗದ ಸ್ವಾಮೀಜಿಗಳು ಪಾದಯಾತ್ರೆ ಮಾಡಿದ್ದರು. ಅಹಿಂದ ನಾಯಕ ಅಂತ ಹೇಳುವ ಮುಖ್ಯಮಂತ್ರಿ ಮುಸ್ಲಿಮರನ್ನು ಬಿಟ್ಟು ಅಹಿಂದ ವರ್ಗಕ್ಕೆ ಬದುಕಿನಲ್ಲಿ ಪರಿವರ್ತನೆ ತರುವ ಯಾವುದೇ ಒಳ್ಳೆಯ ಯೋಜನೆ ಮಾಡಿಲ್ಲ’ ಎಂದು ಆರೋಪಿಸಿದರು.



‘ಎಸ್‌ಸಿ– ಎಸ್‌ಟಿಗೆ ಮೀಸಲಿಟ್ಟ ₹60 ಸಾವಿರ ಕೋಟಿ ಹಣ ಬೇರೆ ಕಡೆಗೆ ಖರ್ಚಾಗಿದೆ. ಬಜೆಟ್‌ನಲ್ಲಿ ಹಿಂದುಳಿದ ಸಮುದಾಯಕ್ಕೆ ₹441 ಕೋಟಿ ಇಟ್ಟಿದ್ದರು. ಆ ಹಣವನ್ನು ಜಾತಿ ಗಣತಿ ಮಾಡಲು ಇಟ್ಟರು. ಅದನ್ನು ರಾಜ್ಯದ ಬೊಕ್ಕಸದಿಂದ ಖರ್ಚು ಮಾಡಬೇಕಿತ್ತು. ನಿಗಮ–ಮಂಡಳಿಗಳಲ್ಲಿ ಎಸ್‌ಸಿ ಎಸ್‌ಟಿ ಶಾಸಕರೇ ಗಂಗಾ ಕಲ್ಯಾಣಕ್ಕೆ ಹಣ ನೀಡಿಲ್ಲ’ ಎಂದು ಆರೋಪಿಸಿದರು.

ಉಪಚುನಾವಣೆಗೆ ಅಭ್ಯರ್ಥಿ ಆಯ್ಕೆ: ಬಿಜೆಪಿ ಪ್ರಮುಖರ ಚರ್ಚೆ

ಬೆಂಗಳೂರು: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಕುರಿತು ಬಿಜೆಪಿ ಪ್ರಮುಖರ ಸಮಿತಿ ಸಭೆಯಲ್ಲಿ ಚರ್ಚೆ ನಡೆಯಿತು.

‘ಎರಡೂ ಕ್ಷೇತ್ರಗಳ ಆಕಾಂಕ್ಷಿಗಳ ಪಟ್ಟಿಯನ್ನು ಸಿದ್ಧಪಡಿಸಿ ಪಕ್ಷದ ವರಿಷ್ಠರಿಗೆ ಕಳುಹಿಸಲು ತೀರ್ಮಾನಿಸಲಾಯಿತು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸುದ್ದಿಗಾರರಿಗೆ ತಿಳಿಸಿದರು.

‘ವಿಧಾನಸಭೆ, ವಿಧಾನಪರಿಷತ್ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಗೆಲ್ಲಿಸುವ ನಿಟ್ಟಿನಲ್ಲಿ ಒಟ್ಟಾಗಿ ಪ್ರಯತ್ನ ಮಾಡಬೇಕು. ಸಂಪೂರ್ಣ ಶ್ರಮ ಹಾಕಬೇಕೆಂದು ತೀರ್ಮಾನ ಆಗಿದೆ. ಪ್ರಲ್ಹಾದ ಜೋಶಿ, ಗೋವಿಂದ ಕಾರಜೋಳ ಮತ್ತು ನಾನು ದಾವಣಗೆರೆ ದಕ್ಷಿಣ ಕ್ಷೇತ್ರದ ಎಲ್ಲ ಆಕಾಂಕ್ಷಿಗಳು, ಪಕ್ಷದ ಪ್ರಮುಖರ ಜತೆ ಕುಳಿತು ಚರ್ಚಿಸಿ, ಒಗ್ಗಟಾಗಿ ಚುನಾವಣೆ ಎದುರಿಸಬೇಕು ಎಂಬ ತೀರ್ಮಾನ ಆಯಿತು’ ಎಂದರು.

ಸಭೆಯಲ್ಲಿ ರಾಜ್ಯ ಬಿಜೆಪಿ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್, ಪ್ರಲ್ಹಾದ ಜೋಶಿ, ಆರ್.ಅಶೋಕ ಪಾಲ್ಗೊಂಡಿದ್ದರು.

‘ಬಾಂಬ್’ ಪದ ಬಳಸಿ ಸಂಕಷ್ಟಕ್ಕೆ ಸಿಲುಕಿದ ಗಾಯಕ

ಬೆಂಗಳೂರು: ವಿಮಾನದಲ್ಲಿ ಪ್ರಯಾಣಿಸಬೇಕಿದ್ದ ಪ್ರಯಾಣಿಕರೊಬ್ಬರು ‘ಬಾಂಬ್’ ಪದ ಬಳಸಿ ಸಂಕಷ್ಟಕ್ಕೆ ಒಳಗಾದ ಘಟನೆ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–1ರಲ್ಲಿ ನಡೆದಿದೆ.

ಪಶ್ಚಿಮ ಬಂಗಾಳದ ರಾಜತೇಶ್ ಬೇರಾ (40) ಎಂಬವರನ್ನು ಬೆಂಗಳೂರು ವಿಮಾನ ನಿಲ್ದಾಣ ಠಾಣೆ ಪೊಲೀಸರು ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ವಿಮಾನ ನಿಲ್ದಾಣದ ಟರ್ಮಿನಲ್–1ರಿಂದ ಇಂಡಿಗೊ ವಿಮಾನವು ರಾಯಪುರಕ್ಕೆ ಹೊರಟಿತ್ತು. ಆ ಸಂದರ್ಭದಲ್ಲಿ ಘಟನೆ ನಡೆದಿದೆ.

ರಾಜತೇಶ್ ವಿಮಾನದಲ್ಲಿ ರಾಯಪುರಕ್ಕೆ ಪ್ರಯಾಣಿಸಲು ಬೋರ್ಡಿಂಗ್ ಗೇಟ್ ಸಂಖ್ಯೆ–16ರ ಬಳಿ ಬಂದಿದ್ದರು. ಸಮಯ ಮೀರಿದಾಗ ಅವರನ್ನು ಒಳಗೆ ಬಿಡಲು ಸಿಬ್ಬಂದಿ ನಿರಾಕರಿಸಿದ್ದರು. ಕೋಪಗೊಂಡ ಅವರು, ‘ವಿಮಾನದಲ್ಲಿ ಬಾಂಬ್ ಇದ್ದರೆ ನಿಲ್ಲಿಸುವುದಿಲ್ಲವೇ’ ಎಂದು ಪ್ರಶ್ನಿಸಿದ್ದರು. ಆರೋಪಿ, ಬಾಂಬ್ ಪದ ಬಳಸಿದ್ದರಿಂದ ಸಿಬ್ಬಂದಿ ಪೊಲೀಸರಿಗೆ ದೂರು ನೀಡಿದ್ದರು.

‘ಗಾಯಕ ರಾಜತೇಶ್ ಬೇರಾ ಅವರನ್ನು ಬಂಧಿಸಿ ವಿಚಾರಣೆ ನಡೆಸಲಾಯಿತು. ‘ವಿಮಾನ ನಿಲ್ದಾಣದ ಸಿಬ್ಬಂದಿಗೆ ಬೆದರಿಕೆ ಹಾಕುವ ಉದ್ದೇಶ ಇರಲಿಲ್ಲ. ವಿಮಾನ ಏರಲು ಅವಕಾಶ ನೀಡದಿರುವ ಕಾರಣಕ್ಕೆ ಕೋಪಗೊಂಡು ವಿಮಾನದಲ್ಲಿ ಬಾಂಬ್ ಇದ್ದರೆ ನಿಲ್ಲಿಸುವುದಿಲ್ಲವೇ’ ಎಂದಷ್ಟೇ ಪ್ರಶ್ನಿಸಿದ್ದೆ ಎಂಬುದಾಗಿ ಹೇಳಿಕೆ ನೀಡಿದ್ದಾರೆ. ವಿಮಾನ, ಪ್ರಯಾಣಿಕರ ಸುರಕ್ಷತೆಗೆ ತೊಂದರೆ ಆಗಬಹುದೆಂದು ಭಾವಿಸಿ ವಿಮಾನಯಾನ ಸಂಸ್ಥೆಯವರು ದೂರು ನೀಡಿದ್ದರು’ ಎಂದು ಮೂಲಗಳು ಹೇಳಿವೆ.

ರೌಡಿಶೀಟರ್ ಬಿಕ್ಲು ಶಿವು ಕೊಲೆ ಪ್ರಕರಣ • ದೋಷಾರೋಪ ಪಟ್ಟಿ ಸಲ್ಲಿಕೆ ವಿಳಂಬ

ಪ್ರಮುಖ ಆರೋಪಿಗಳಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ನಿಗದಿತ ಅವಧಿಯೊಳಗೆ ದೋಷಾರೋಪ ಪಟ್ಟಿ ಸಲ್ಲಿಸದೇ ಹೋದ ಕಾರಣ ನಾಲ್ವರು ಪ್ರಮುಖ ಆರೋಪಿಗಳಿಗೆ ಹೈಕೋರ್ಟ್ ಡಿಫಾಲ್ಟ್ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಡಿಫಾಲ್ಟ್ ಜಾಮೀನು (ನಿಗದಿತ ಅವಧಿಯಲ್ಲಿ ದೋಷಾರೋಪ ಪಟ್ಟಿ ಸಲ್ಲಿಸದೇ ಹೋದಾಗ ಸಂವಿಧಾನ ಕೊಡಮಾಡಿದ ಅವಕಾಶಗಳಿಗೆ ಅನುಗುಣವಾಗಿ ಮತ್ತು ಕಾನೂನಿನ ಅವಿಭಾಜ್ಯ ಅಧಿಕಾರ ಚಲಾಯಿಸಿ ನೀಡಲಾಗುವ ಜಾಮೀನು) ಕೋರಿ ಆರೋಪಿಗಳಾದ ಪಿ.ಜಗದೀಶ್ (53), ಕೆ.ಕಿರಣ್ (34), ಬಿ.ವಿಮಲ್ ರಾಜ್ (31) ಮತ್ತು ಆರ್.ಮದನ್ (28) ಸಲ್ಲಿಸಿದ್ದ ಪ್ರತ್ಯೇಕ ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

‘ಆರೋಪಿಗಳು ತಲಾ ₹1 ಲಕ್ಷ ಮೌಲ್ಯದ ವೈಯಕ್ತಿಕ ಬಾಂಡ್ ಮತ್ತು ಒಬ್ಬರ ಭದ್ರತೆ ಒದಗಿಸಬೇಕು. ತನಿಖೆಗೆ ಸಹಕರಿಸಬೇಕು’ ಎಂಬುದೂ ಸೇರಿದಂತೆ ಸಾಂಪ್ರದಾಯಿಕ ಷರತ್ತುಗಳ ಜೊತೆಗೆ, ಕೋಕಾ ಮೇಲ್ಮನವಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡುವ ಅಂತಿಮ ತೀರ್ಮಾನ ಈ ಜಾಮೀನು ಮಂಜೂರಾತಿ ಆದೇಶಕ್ಕೆ ಒಳಪಟ್ಟಿರುತ್ತದೆ ಎಂಬ ಷರತ್ತನ್ನೂ ನ್ಯಾಯಪೀಠ ವಿಧಿಸಿದೆ.

ಆರೋಪಿಗಳ ವಿರುದ್ಧ ರಾಜ್ಯ ಸರ್ಕಾರ ಕೋಕಾ ಕಾಯ್ದೆ ಅನ್ವಯ ಮಾಡಿದ್ದ ಆದೇಶವನ್ನು ಹೈಕೋರ್ಟ್ ಇತ್ತೀಚೆಗೆ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಪ್ರಾಸಿಕ್ಯೂಷನ್ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದೆ. ಪ್ರಕರಣದ ಐದನೇ ಆರೋಪಿಯೂ ಆದ ಬಿಜೆಪಿಯ ಶಾಸಕ ಬೈರತಿ ಬಸವರಾಜ ಅವರಿಗೆ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ಮಾ.12ರಂದು ನಿಯಮಿತ (ರೆಗ್ಯುಲರ್) ಜಾಮೀನು ಮಂಜೂರು ಮಾಡಿತ್ತು.

ಬೈರತಿ ಬಸವರಾಜ ಜೈಲಿನಿಂದ ಬಿಡುಗಡೆ


ಬೈರತಿ ಬಸವರಾಜ

ಬೆಂಗಳೂರು: ರೌಡಿ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಶುಕ್ರವಾರ ಸಂಜೆ ಬಿಡುಗಡೆಯಾದರು.

ಬೈರತಿ ಬಸವರಾಜ ಅವರಿಗೆ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯವು ಗುರುವಾರ ಷರತ್ತುಬದ್ಧ ನಿಯಮಿತ (ರೆಗ್ಯುಲರ್) ಜಾಮೀನು ಮಂಜೂರು ಮಾಡಿತ್ತು. ಜಾಮೀನು ಆದೇಶದ ಪ್ರತಿಯನ್ನು ವಕೀಲರು, ಶುಕ್ರವಾರ ಮಧ್ಯಾಹ್ನದ ವೇಳೆಗೆ ಜೈಲಿನ ಅಧಿಕಾರಿಗಳಿಗೆ ಹಸ್ತಾಂತರಿಸಿದರು. ಬಿಡುಗಡೆ ಪ್ರಕ್ರಿಯೆ ಪೂರ್ಣಗೊಂಡು, ಸಂಜೆ ವೇಳೆಗೆ ಶಾಸಕರು ಜೈಲಿನಿಂದ ಹೊರಕ್ಕೆ ಬಂದರು. ಗೇಟ್ ಬಳಿ ಜಮಾಯಿಸಿದ್ದ ಬೆಂಬಲಿಗರು ಶಾಸಕರನ್ನು ಸ್ವಾಗತಿಸಿದರು.

ಹಾರ್ಡ್ ಡಿಸ್ಕ್ ಹೊತ್ತೊಯ್ದ ‘ನಕಲಿ’ ನಿರ್ದೇಶಕ: ಪ್ರಕರಣ ದಾಖಲು

ಬೆಂಗಳೂರು: ಸಿನಿಮಾವೊಂದರ ದೃಶ್ಯಾವಳಿಗಳನ್ನು ಸಂಗ್ರಹಿಸಿದ್ದ ಹಾರ್ಡ್‌ಡಿಸ್ಕ್‌ಗಳನ್ನು ಹೊತ್ತೊಯ್ದ ‘ನಕಲಿ’ ನಿರ್ದೇಶಕನ ವಿರುದ್ಧ ಇಲ್ಲಿನ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್.ವಿ ಪ್ರೊಡಕ್ಷನ್‌ನ ಶಿವಶಂಕರ್ ಅವರು ನೀಡಿದ ದೂರಿನ ಮೇಲೆ ಚೆನ್ನೈನ ಮಂಗಳೇಶ್ವರನ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್‌ಗಳಾದ 316(2), 316(5), 318(4), 351(3)ರ ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಫೆಬ್ರುವರಿ 27ರಂದು ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ಇರುವ ಎಸ್.ವಿ ಪ್ರೊಡಕ್ಷನ್ ಕಚೇರಿಗೆ ಬಂದಿದ್ದ ಮಂಗಳೇಶ್ವರನ್, ತಮಿಳು ಭಾಷೆಯ ನಿರ್ದೇಶಕ ಎಂದು ಪರಿಚಯಿಸಿಕೊಂಡಿದ್ದರು. ‘ಅಳಗರ್ ಯಾನೈ’ ಎಂಬ ತಮಿಳು ಸಿನಿಮಾ ಚಿತ್ರೀಕರಣ ಮಾಡೋಣ ಎಂದು ಕಥೆ ಹೇಳಿದ್ದರು. ಸಿನಿಮಾ ಚಿತ್ರೀಕರಣಕ್ಕೆ ₹70 ಲಕ್ಷ ಖರ್ಚು ಆಗಲಿದೆ ಎಂಬುದಾಗಿಯೂ ತಿಳಿಸಿದ್ದರು. ಅದಕ್ಕೆ ಶಿವಶಂಕರ್ ಹಾಗೂ ಅವರ ಸ್ನೇಹಿತ ನಟೇಶ್‌ಮೂರ್ತಿ ಒಪ್ಪಿದ್ದರು. ಬಳಿಕ, ಹಲಸೂರಿನ ದೇಗುಲದಲ್ಲಿ ಪೂಜೆ ನೆರವೇರಿಸಿ, ಚಿತ್ರೀಕರಣ ಆರಂಭಿಸಲಾಗಿತ್ತು’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ತಮಿಳುನಾಡು ಹಾಗೂ ಕೇರಳದಲ್ಲಿ ಚಿತ್ರೀಕರಣ ನಡೆದಿತ್ತು. ಸಿನಿಮಾ ಚಿತ್ರೀಕರಣಕ್ಕೆ ₹1.30 ಕೋಟಿ ಖರ್ಚು ಮಾಡಲಾಗಿತ್ತು. ಚಿತ್ರೀಕರಣದ ವೇಳೆ ಮಂಗಳೇಶ್ವರನ್ ಅವರು ಕೆಟ್ಟದಾಗಿ ನಡೆದುಕೊಂಡಿದ್ದರು. ಚಿತ್ರೀಕರಣ ಮಾಡಿದ ದೃಶ್ಯಾವಳಿಗಳನ್ನು ಸಂಗ್ರಹಿಸಲು 22 ಹಾರ್ಡ್ ಡಿಸ್ಕ್‌ಗಳನ್ನು ಶಿವಶಂಕರ್ ಖರೀದಿಸಿದ್ದರು. ಎಲ್ಲ ದೃಶ್ಯಾವಳಿಗಳನ್ನು ಆ ಹಾರ್ಡ್ ಡಿಸ್ಕ್‌ನಲ್ಲಿ ಸಂಗ್ರಹಿಸಲಾಗಿತ್ತು. ಆ ಹಾರ್ಡ್ ಡಿಸ್ಕ್‌ಗಳನ್ನು ಮಂಗಳೇಶ್ವರನ್‌ಗೆ ನೀಡಲಾಗಿತ್ತು. ಬಳಿಕ ಅವರು ಯಾವುದೇ ಹಾರ್ಡ್ ಡಿಸ್ಕ್‌ಗಳನ್ನು ವಾಪಸ್ ನೀಡಿಲ್ಲ’ ಎಂದು ದೂರಿನ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

‘ಹಾರ್ಡ್ ಡಿಸ್ಕ್ ವಾಪಸ್ ಕೊಡುವಂತೆ ಕೇಳಿದ್ದಕ್ಕೆ ಬೆದರಿಕೆ ಹಾಕಿದ್ದಾರೆ. ಎಲ್ಲಾ ಹಾರ್ಡ್ ಡಿಸ್ಕ್‌ಗಳನ್ನು ಬೆಂಗಳೂರಿನ ವ್ಯಕ್ತಿಯೊಬ್ಬರಿಗೆ ನೀಡಿರುವುದಾಗಿ ಹೇಳುತ್ತಿದ್ದಾರೆ. ಜತೆಗೆ ₹5 ಲಕ್ಷ ಹಣವನ್ನೂ ಪಡೆದುಕೊಂಡಿದ್ದಾರೆ. ಮಂಗಳೇಶ್ವರನ್ ಅವರ ಹಿನ್ನೆಲೆ ಪರಿಶೀಲಿಸಿದಾಗ ‘ನಕಲಿ’ ನಿರ್ದೇಶಕ ಎಂಬುದು ಗೊತ್ತಾಯಿತು’ ಎಂದು ನಿರ್ಮಾಪಕ ಶಿವಶಂಕರ್ ಪೊಲೀಸರಿಗೆ ತಿಳಿಸಿದ್ದಾರೆ.

ತಾಯಿ, ಮಲತಂದೆ ಸೇರಿ ಮೂವರ ವಿರುದ್ಧ ಪೋಕ್ಸೊ ಪ್ರಕರಣ

ಬೆಂಗಳೂರು: ಹಣದ ಆಸೆಗೆ 15 ವರ್ಷದ ಮಗಳನ್ನು ವೇಶ್ಯಾವಾಟಿಕೆಗೆ ದೂಡಿದ್ದ ತಾಯಿ, ಮಲತಂದೆಯ ವಿರುದ್ಧ ಚಂದ್ರಾ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕಿಯ ತಾಯಿ, ಆಕೆಯ ಮಲತಂದೆ ಹಾಗೂ ಮತ್ತೊಬ್ಬ ಮಹಿಳೆಯನ್ನು ವಶಕ್ಕೆ ಪಡೆದು ಪೊಲೀಸರು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ತಾಯಿ ಹಾಗೂ ಮಲತಂದೆ ಕಾರಿನಲ್ಲಿ ಪ್ರತಿದಿನ ಬಾಲಕಿಯನ್ನು ಮಹಿಳೆಯ ಮನೆಗೆ ಕರೆದೊಯ್ದು ಬಿಡುತ್ತಿದ್ದರು. ಅಲ್ಲಿ ಬಾಲಕಿ ಸಂಜೆವರೆಗೂ ಇರುತ್ತಿದ್ದಳು. ಅಲ್ಲಿ ಬಾಲಕಿಯ ಮೇಲೆ ದೌರ್ಜನ್ಯ ಎಸಗಲಾಗುತ್ತಿತ್ತು ಎಂದು ಮೂಲಗಳು ಹೇಳಿವೆ.

‘ಬಾಲಕಿಯನ್ನು ರಕ್ಷಿಸಲಾಗಿದೆ. ಆರೋಪಿಗಳ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ’ ಎಂದು ಪೊಲೀಸರು ಹೇಳಿದರು.

ಪಶುವೈದ್ಯಕೀಯ ಕಾಲೇಜಿನ ಜಮೀನು ಹಂಚಿಕೆ ಪ್ರಶ್ನಿಸಿ ಅರ್ಜಿ

ನ್ಯಾಯಮೂರ್ತಿಗಳ ನಿವಾಸಕ್ಕೆ ಜಮೀನು: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ನಿವಾಸಗಳ ನಿರ್ಮಾಣಕ್ಕಾಗಿ ಹೆಬ್ಬಾಳ ಸಮೀಪ ಪಶುವೈದ್ಯಕೀಯ ಕಾಲೇಜಿಗೆ ಸೇರಿದ 4 ಎಕರೆ ಜಮೀನು ಹಂಚಿಕೆ ಮಾಡಿರುವುದನ್ನು ರದ್ದುಗೊಳಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸಲ್ಲಿಸಲಾಗಿರುವ ರಿಟ್ ಅರ್ಜಿಯನ್ನು ಶುಕ್ರವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಕೆ.ಎನ್.ಫಣೀಂದ್ರ ವಾದ ಆಲಿಸಿದ ನ್ಯಾಯಪೀಠ, ಮುಖ್ಯ ಕಾರ್ಯದರ್ಶಿ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ಹತ್ತು ದಿನಗಳ ಒಳಗಾಗಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿದೆ.

‘ಕರ್ನಾಟಕ ವೆಟರ್ನರಿ ಅಸೋಸಿಯೇಷನ್’ನ ಅಧಿಕೃತ ಪ್ರತಿನಿಧಿ ವಿ.ಗಿರೀಶ್ ಕುಮಾರ್, ‘ಬೆಂಗಳೂರು ಪಶುವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘ’ದ ಅಧ್ಯಕ್ಷ ಎಂ.ಎಸ್.ವಸಂತ, ‘ಸೀನಿಯರ್ ವೆಟರ್ನರಿಯನ್ ಅಸೋಸಿಯೇಷನ್ಸ್’ ಉಪಾಧ್ಯಕ್ಷ ವಿ.ರಘುರಾಮೇಗೌಡ ಮತ್ತು ‘ಡೈರಿ ಸೈನ್ಸ್ ಕಾಲೇಜ್’ನ ‘ಹಳೆಯ ವಿದ್ಯಾರ್ಥಿಗಳ ಸಂಘ’ದ ಅಧ್ಯಕ್ಷ ರಾಮಚಂದ್ರ ಈ ಅರ್ಜಿ ಸಲ್ಲಿಸಿದ್ದಾರೆ.

ಅರ್ಜಿಯಲ್ಲಿ ಏನಿದೆ?

‘ಪಶುವೈದ್ಯಕೀಯ ಕಾಲೇಜು ಸ್ಥಾಪಿಸುವ ಉದ್ದೇಶದಿಂದ ಮೈಸೂರು ಮಹಾರಾಜರು 1958ರಲ್ಲಿ ಈ ಜಮೀನನ್ನು ಹಂಚಿಕೆ ಮಾಡಿದ್ದರು. ಅದರಂತೆ ಕಾಲೇಜು ಸ್ಥಾಪನೆಯಾಗಿದೆ. 2004ರಲ್ಲಿ ಕರ್ನಾಟಕ ಪಶುವೈದ್ಯಕೀಯ, ಪ್ರಾಣಿಗಳ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲಾಗಿದೆ. ಇಲ್ಲಿ ವ್ಯಾಪಕ ಪ್ರಮಾಣದ ಸಂಶೋಧನಾ ಚಟುವಟಿಕೆಗಳೂ ನಡೆಯುತ್ತಿವೆ’ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

‘ಪಶುವೈದ್ಯಕೀಯ ಕಾಲೇಜಿನ ವಶದಲ್ಲಿರುವ ಜಾಗದಲ್ಲಿ ಹೈಕೋರ್ಟ್ ನ್ಯಾಯಮೂರ್ತಿಗಳ ನಿವಾಸಗಳ ನಿರ್ಮಾಣಕ್ಕಾಗಿ 4 ಎಕರೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆಂದು 3 ಎಕರೆಯನ್ನು ರಾಜ್ಯ ಸರ್ಕಾರ 2026ರ ಜ.8ರಂದು ಮಂಜೂರು ಮಾಡಿದೆ. ಇದು ನಿಯಮಗಳ ಉಲ್ಲಂಘನೆ. ಇದರಿಂದ ಇಲ್ಲಿನ ಪ್ರಕೃತಿಗೆ ಸಂಚಕಾರ ಬಂದೊದಗಲಿದೆ. ವಿವಿಯ ಶೈಕ್ಷಣಿಕ, ಸಂಶೋಧನೆ, ವಿಸ್ತರಣಾ ಚಟುವಟಿಕೆಗಳ ಮೇಲೆ ಪರಿಣಾಮ ಉಂಟಾಗಲಿದೆ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

ಸರ್ಕಾರದ ವಿರುದ್ಧ ಪಾದಯಾತ್ರೆ: ಡಾ. ಸುಧಾಕರ್

ಪ್ರಜಾವಾಣಿ ವಾರ್ತೆ


ಡಾ.ಕೆ. ಸುಧಾಕರ್

ನವದೆಹಲಿ: ಎಚ್.ಎನ್ ವ್ಯಾಲಿ ಹಾಗೂ ಕೆ.ಸಿ ವ್ಯಾಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ (ಎಸ್‌ಟಿಪಿ) ನೀರನ್ನು ಮೂರನೇ ಹಂತದಲ್ಲಿ ಸಂಸ್ಕರಿಸಲು ಕಾಂಗ್ರೆಸ್ ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ಪಾದಯಾತ್ರೆ ನಡೆಸಿ ಹೋರಾಟ ಮಾಡುತ್ತೇವೆ ಎಂದು ಚಿಕ್ಕಬಳ್ಳಾಪುರ ಸಂಸದ ಡಾ.ಕೆ.ಸುಧಾಕರ್ ಎಚ್ಚರಿಕೆ ನೀಡಿದರು.

ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಎಚ್.ಎನ್ ವ್ಯಾಲಿ, ಕೆ.ಸಿ ವ್ಯಾಲಿ ಯೋಜನೆಯಡಿ ಚಿಕ್ಕಬಳ್ಳಾಪುರ, ಕೋಲಾರ ಭಾಗಕ್ಕೆ 2 ಹಂತಗಳಲ್ಲಿ ನೀರು ಸಂಸ್ಕರಣೆಯಾಗಿ ಬರುತ್ತಿದೆ. ಆದರೆ, ಇತ್ತೀಚೆಗೆ ಈ ನೀರು ಸರಿಯಾಗಿ ಸಂಸ್ಕರಣೆಯಾಗುತ್ತಿಲ್ಲ ಎಂಬ ದೂರುಗಳು ಬಂದಿವೆ. ಈ ಬಗ್ಗೆ ಜಲಮಂಡಳಿ ಅಧಿಕಾರಿಗಳಿಗೆ ಸರ್ಕಾರ ಕಟ್ಟುನಿಟ್ಟಾದ ಸೂಚನೆ ನೀಡಬೇಕಿದೆ’ ಎಂದರು.

‘ಸಿಂಗಪುರದಲ್ಲಿ ಕೊಳಚೆ ನೀರನ್ನು ಕುಡಿಯುವ ಮಟ್ಟಕ್ಕೆ ಶುದ್ಧೀಕರಣ ಮಾಡಲಾಗುತ್ತಿದೆ. ತೃತೀಯ ಹಂತದ ಸಂಸ್ಕರಣೆ ನಂತರ ಇನ್ನಷ್ಟು ಫಿಲ್ಟರ್ ಮಾಡಿ ಕುಡಿಯುವ ನೀರಿಗೆ ಬಳಸಲಾಗುತ್ತಿದೆ. ಆ ನೀರು ಹರಿಯುವ ನದಿಯಷ್ಟು ಶುದ್ಧವಾಗಿದೆ. ನಮೀಬಿಯಾದಲ್ಲೂ ಇದೇ ರೀತಿ ಬಳಸಲಾಗುತ್ತಿದೆ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಇನ್ನಷ್ಟು ಶುದ್ಧ ಮಾಡುವ ಅವಕಾಶ ಸರ್ಕಾರಕ್ಕಿದೆ. ಆ ಬದ್ಧತೆ ಹಾಗೂ ಜವಾಬ್ದಾರಿ ಸರ್ಕಾರಕ್ಕೆ ಇರಬೇಕು’ ಎಂದರು.

‘ಈ ವಿಷಯದಲ್ಲಿ ಬಿಜೆಪಿ ಹೋರಾಟ ಮಾಡಲಿದೆ. ಆದರೆ, ಇದಕ್ಕಾಗಿ ಬಂದ್ ಮಾಡುವುದು ಸರಿಯಲ್ಲ. ವಿದ್ಯಾರ್ಥಿಗಳ ಪರೀಕ್ಷೆ ನಡೆಯುತ್ತಿದೆ. ಬೀದಿ ಬದಿ ವ್ಯಾಪಾರಿಗಳು ಕೆಲಸ ಮಾಡುತ್ತಿದ್ದಾರೆ. ಬಂದ್ ಮಾಡಿದರೆ ಇವರೆಲ್ಲರಿಗೂ ಸಮಸ್ಯೆ ಹೆಚ್ಚಾಗುತ್ತದೆ. ಜನರಿಗೆ ಕಷ್ಟ ಕೊಡದೆ, ಯಾರಿಗೂ ನಷ್ಟ ಉಂಟುಮಾಡದೆ ಹೋರಾಟ ಮಾಡಬೇಕಿದೆ. ಬಂದ್ ಮಾಡಲು ಬಿಜೆಪಿ ಅಥವಾ ನಾನು ಬೆಂಬಲ ಕೊಡುವುದಿಲ್ಲ. ಬಯಲುಸೀಮೆಯ 3 ಜಿಲ್ಲೆಗಳಲ್ಲಿ ನಾನು ಪಾದಯಾತ್ರೆ ಮಾಡಿ, ಹಳ್ಳಿಗಳಿಗೆ ಭೇಟಿ ನೀಡಿ ಅರಿವು ಮೂಡಿಸುತ್ತೇನೆ’ ಎಂದರು.

‘ಎತ್ತಿನಹೊಳೆ ಯೋಜನೆಗೆ ಅಗತ್ಯ ಅನುದಾನ ಒದಸಿ, ಶೀಘ್ರದಲ್ಲೇ ಕಾಮಗಾರಿ ಮುಗಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಅನಾಥ ಗಿಳಿ ಮರಿಗಳಿಗೆ 3ಡಿ ಕೃತಕ ತಾಯಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಿ ಕಳೆದುಕೊಂಡು ಅನಾಥವಾಗಿದ್ದ 46 ಗಿಳಿಮರಿಗಳ ರಕ್ಷಣೆಗೆ 3ಡಿ ತಂತ್ರಜ್ಞಾನದೊಂದಿಗೆ ತಾಯಿ ಪ್ರತಿಕೃತಿ ನಿರ್ಮಿಸಿ ಆಹಾರ ಉಣಿಸುವಲ್ಲಿ ನಗರದ ಗೋಪಾಲನ್ ಕಾಲೇಜು ವಿದ್ಯಾರ್ಥಿಗಳು ಯಶಸ್ವಿಯಾಗಿದ್ದಾರೆ.

ಅತಿ ಸೂಕ್ಷ್ಮಸ್ಥಿತಿಯಲ್ಲಿದ್ದ ಭಾರತೀಯ ಗಿಳಿಮರಿಗಳನ್ನು ರಕ್ಷಿಸಲಾಗಿತ್ತು. ಇವುಗಳಿಗೆ ಆಹಾರ ಉಣಿಸಲು ಸಿರಿಂಜ್‌ಗೆ ಮೊರೆ ಹೋಗಲಾಗಿತ್ತು. ಆದರೆ ಅವು ಆಹಾರ ಸೇವಿಸದೇ ಆರೋಗ್ಯದ ಮೇಲೆ ಪರಿಣಾಮ ಬೀರುವ ಆತಂಕ ಎದುರಾಗಿತ್ತು.

ಗೋಪಾಲನ್ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ (ಜೆಸಿಇಎಂ) ಅಂತಿಮ ವರ್ಷದ ಏರೋನಾಟಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳ ತಂಡ, ತಾಯಿ ಗಿಳಿ ಹೋಲುವ ‘ಬಯೋ ಮಿಮೆಟಿಕ್ ಮದರ್ ಪ್ಯಾರಾಕೀಟ್’ ರೂಪಿಸಿದ್ದರು. 3ಡಿ ಪ್ರಿಂಟೆಡ್ ಸಾಧನದಲ್ಲಿ ಗಿಳಿಯ ಕೊಕ್ಕಿನ ಮಾದರಿಯಲ್ಲಿ ಸಿರಿಂಜ್ ಅಳವಡಿಸಿ ಆ ಮೂಲಕ ಆಹಾರ ನೀಡಲಾಯಿತು.

‘ತಾಯಿಯಿಂದಲೇ ಆಹಾರ ಪಡೆಯುತ್ತಿರುವ ಭಾವನೆಯನ್ನು ಮರಿಗಳು ಹೊಂದಿದ್ದು, ಸುರಕ್ಷಿತವಾಗಿ ಉಣಿಸಲಾಗುತ್ತಿದೆ. ಇದು ತಾಂತ್ರಿಕ ಕೌಶಲ ಹಾಗೂ ಕರುಣೆಯ ಸಂಯೋಜನೆಯಾಗಿದೆ’ ಎಂದು ಗೋಪಾಲನ್ ಫೌಂಡೇಷನ್ ನಿರ್ದೇಶಕಿ ಸುನೀತಾ ಪ್ರಭಾಕರ್ ಹೇಳಿದ್ದಾರೆ.


ವಿದ್ಯಾರ್ಥಿಗಳು 3ಡಿ ತಂತ್ರಜ್ಞಾನ ಬಳಸಿ ಕೃತಕ ತಾಯಿ ಗಿಳಿಯೊಂದಿಗೆ ಮರಿಗಳಿಗೆ ಆಹಾರ ನೀಡಿದರು

ಗ್ರಾಮ ಆಡಳಿತ ಅಧಿಕಾರಿ ಲೋಕಾಯುಕ್ತ ಬಲೆಗೆ

ಜೊಯಿಡಾ: ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿ ಪಹಣಿಯಲ್ಲಿ ಹೆಸರು ಸೇರಿಸಲು ಲಂಚ ಪಡೆಯುತ್ತಿದ್ದ, ತಾಲ್ಲೂಕಿನ ರಾಮನಗರ ಗ್ರಾಮ ಆಡಳಿತ ಅಧಿಕಾರಿ ಸಂತೋಷ ಮ್ಯಾಗೇರಿ ಅವರನ್ನು ಶುಕ್ರವಾರ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಜಗಲಪೇಟ ನಿವಾಸಿ ಸಂದೇಶ ಗುರ್ಜರ್ ಜಮೀನಿನ ದಾಖಲೆಯಲ್ಲಿ ಹೆಸರು ಸೇರಿಸಲು ಅರ್ಜಿ ಸಲ್ಲಿಸಿದ್ದರು. ಅದಕ್ಕೆ ಸಂತೋಷ ₹18 ಸಾವಿರ ಲಂಚ ಕೇಳಿದ್ದರು. ನಾಡ ಕಚೇರಿಯಲ್ಲಿ ಶುಕ್ರವಾರ ₹ 13 ಸಾವಿರ ಲಂಚ ಪಡೆಯುವಾಗ, ಸಿಕ್ಕಿಬಿದ್ದರು’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಚಿತ್ರಾವಳಿ


ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ‘ನಾರಿ ಪವರ್ ಟೀಂ’ ನಗರದಲ್ಲಿ ಆಯೋಜಿಸಿದ್ದ ವುಮೆನ್ ಆಥಾನ್‌ನಲ್ಲಿ ಮಹಿಳೆಯರು ಪಾಲ್ಗೊಂಡಿದ್ದರು



ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ ನುರಿತ ಸಮಾಲೋಚಕರಿಂದ (Eligible consultancy services providers) ಒಟ್ಟು (1)ಕಾಮಗಾರಿ, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಸಿವಿಲ್ ನಾಲ್ಕನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಈ ವಿಭಾಗದಡಿಯಲ್ಲಿ ವಿವಿಧ ಒಟ್ಟು (2)AME ಕಾಮಗಾರಿಗಳಿಗೆ (Single cover system) & ಸರಕು ಖರೀದಿ ಒಟ್ಟು (1)ಕಾಮಗಾರಿ ಶೇಕಡಾವಾರು ದರದ ಟೆಂಡರ್‌ಗಳನ್ನು ಇ–ಪ್ರೊಕ್ಯೂರಮೆಂಟ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ಅರ್ಹ ಗುತ್ತಿಗೆದಾರರು **ದಿನಾಂಕ 13.03.2026 ರಿಂದ 24.03.2026ರ ಸಾಯಂಕಾಲ 5.00 ಗಂಟೆಯವರೆಗೆ** www.kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ ಹಾಗೂ ಸದರಿ ಕಾಮಗಾರಿಯ ಬಿಡ್ಡನ್ನು **ದಿ.25.03.2026 ಸಾಯಂಕಾಲ 5.15 ಗಂಟೆಗೆ** ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಇ–ಟೆಂಡರಿಂಗ್ ವೆಬ್‌ಸೈಟ್ www.kppp.karnataka.gov.in ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರು,
ಕೃಭಾಜನಿನಿ, ನಾಎದಂಕಾ ವಿಭಾಗ,
ರೋಡಲಬಂಡಾ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ನ್ಯಾಕ್ ಎ' ಮಾನ್ಯತೆ, ಆಸ್ತಿ ಅಧಿಕಾರಿಗಳ ಕಛೇರಿ,
ನಾಯಕ್ ಭವನ, ಗಾಕೃವಿಕೆ. ಬೆಂಗಳೂರು–560 065.

ಸಂಖ್ಯೆ.ಇ.ಒ/ಎಸ್.ಪಿ.ಒ/ಕೆಪಿಪಿಪಿ/22/2025–26 ದಿನಾಂಕ: 11–03–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಕೆ.ಜಿ–1, ಮತ್ತು ಕೆ.ಜಿ–2, ಟೆಂಡರ್ ನಿಬಂಧನೆಗೊಳಪಟ್ಟಂತೆ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

ವಿವರ: (1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 20.03.2026ರ ಸಂಜೆ 4:00 ಘಂಟೆಯವರೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.03.2026ರ ಬೆಳಿಗ್ಗೆ 10:30 ಕ್ಕೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 25.03.2026ರ ಬೆಳಿಗ್ಗೆ 10:30ಕ್ಕೆ. ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. **ಸೂಚನೆ:** ಯಾವುದೇ ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: www.kppp.karnataka.gov.in ರಲ್ಲಿ ದೊರೆಯುತ್ತದೆ ಹಾಗೂ ಈ ಕಚೇರಿಯನ್ನು, ಕಚೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ: +91-8046010000, +91-8068948777 support@eprochelpdesk.com ಅಥವಾ www.uasbangalore.edu.in ದೂರವಾಣಿ ಸಂಖ್ಯೆ: 23630128 ಸಂಪರ್ಕಿಸಬಹುದು.

ಸಹಿ/–
ಆಸ್ತಿ ಅಧಿಕಾರಿಗಳು

DIPR/CP/RO6240/AAPL/2025-26

Infosys
Navigate your next

Infosys Limited
CIN : L85110KA1981PLC013115
44, Infosys Avenue, Electronics City, Hosur Road, Bengaluru - 560 100
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE OF LOSS OF SHARE CERTIFICATES

Notice is hereby given that the following share certificate(s) issued by the Company are stated to have been lost or misplaced and the registered shareholder(s) thereof have applied for issue of duplicate share certificate(s).

Notice is hereby given that the Company will proceed to **issue Letter of Confirmation* in lieu of duplicate share certificate(s)** unless a valid objection is received by the Company within 15 days from the date of publication of this notice. No claims will be entertained by the Company with respect to the original share certificate(s) subsequent to the issue of duplicates thereof.

Name of Shareholder	Folio No.	Certificate No.	Distinctive Nos.		No. of Shares
			From	To	
T C GOPINATH	ITL018243	2386527	4479747110	4479747141	32

Any person who has/have a claim in respect of the said certificate(s) should lodge his/her/ their claim with all supporting documents with the Company at its registered office. If no valid and legitimate claim is received within 15 days from the date of publication of this notice, the Company will proceed to issue **Letter of Confirmation* in lieu of duplicate share certificate(s)** to the person listed above and no further claim would be entertained from any other person(s).

* The issuance of the LoC will remain applicable until April 1, 2026. Effective April 2, 2026, the securities will be credited directly to investors' demat accounts.

Registered Office:
Electronics City, Hosur Road,
Bengaluru - 560 100

March 13, 2026
Bengaluru, India

For **Infosys Limited**
Sd/-
A.G.S. Manikantha
Company Secretary
Membership No. A21918

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನೋಂದಾಯಿತ ಕಛೇರಿ: ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560001
ದೂರವಾಣಿ ಸಂಖ್ಯೆ: 080-22289966/22256688 ಫ್ಯಾಕ್ಸ್: 080-22264477
ಇ–ಮೇಲ್: mail@vjnl.in, ವೆಬ್‌ಸೈಟ್: www.vjnl.in CIN No: U41000KA2016SGC097260

ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ, ತುಮಕೂರು ಜಿಲ್ಲೆ–572132 ಫೋನ್ ನಂ.: 08137– 282112 ಇ–ಮೇಲ್:eeyetmadhugiri4@gmail.com

ಕ್ರ.ಸಂ: ಕಾಇಂ/ವಿಜನಿನಿ/ಎಹೊಯೋ/ಮ/ವಿ.04/ಟೆ.ಅ–14/2025–26 ದಿನಾಂಕ: 07.03.2026

ಟೆಂಡರ್ ಪ್ರಕಟಣೆ: (ಕೆ.ಪಿ.ಪಿ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್‌ನಲ್ಲಿ ಮಧುಗಿರಿ ವಿಭಾಗ ವ್ಯಾಪ್ತಿಯ, ಕೊರಟಗೆರೆ ವಿಧಾನ ಸಭಾ ಕ್ಷೇತ್ರದ ಒಟ್ಟು **03 ಕಾಮಗಾರಿಗಳಿಗೆ ರೂ.42.34 ಲಕ್ಷ ದಿಂದ ರೂ.418.63 ಲಕ್ಷಗಳಿಗೆ** ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ **ಕಾಮಗಾರಿಗಳಿಗೆ Percentage Tender** ಮೂಲಕ ಅರ್ಹ ಬಿಡ್ಡುದಾರರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ https://kppp.karnataka.gov.in ವೆಬ್‌ಸೈಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾದ ದಿನಾಂಕಗಳ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ಘಟನೆಗಳ ಕ್ಯಾಲೆಂಡರ್	ರೂ.200 ಲಕ್ಷಗಳಿಗಿಂತ ಕಡಿಮೆ ಮೊತ್ತದ ಕಾಮಗಾರಿಗಳಿಗೆ ದಿನಾಂಕಗಳ ವಿವರ	ರೂ.200 ಲಕ್ಷಗಳಿಗಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳಿಗೆ ದಿನಾಂಕಗಳ ವಿವರ
1	ಇ–ಪ್ರೊಕ್ಯೂರ್‌ಮೆಂಟ್ ನ https://kppp.karnataka.gov.in ವೆಬ್‌ಸೈಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾದ ದಿನಾಂಕ	12.03.2026 ರಿಂದ 27.03.2026 ಸಂಜೆ 5:00 ಗಂಟೆಯವರೆಗೆ	12.03.2026 ರಿಂದ 10.04.2026 ಸಂಜೆ 5:00 ಗಂಟೆಯವರೆಗೆ
2	ಕೆಪಿಪಿ–ಪೋರ್ಟಲ್ ಮೂಲಕ ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ.	27.03.2026 ಸಂಜೆ 5:00 ಗಂಟೆಯವರೆಗೆ	10.04.2026 ಸಂಜೆ 5:00 ಗಂಟೆಯವರೆಗೆ
3	ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ, ಬಿಡ್ಡುದಾರರ ದರ್ಜೆ, ಟೆಂಡರ್ ನಿಯಮ, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು ಪಡೆಯಬಹುದಾದ ದಿನಾಂಕ	18.03.2026 ರ ಸಂಜೆ 03:00 ಗಂಟೆಯವರೆಗೆ	27.03.20260 3:00 ಗಂಟೆಯವರೆಗೆ
4	ಪ್ರಿ–ಬಿಡ್ ಮೀಟಿಂಗ್, ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ, ವಿಭಾಗ ನಂ.4 ಮಧುಗಿರಿ ರವರ ಕಛೇರಿಯಲ್ಲಿ	––	27.03.2026 ರಂದು ಬೆಳಿಗ್ಗೆ 11:00 ಗಂಟೆಗೆ
5	ತಾಂತ್ರಿಕ ಬಿಡ್ ಅನ್ನು ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ, ವಿಭಾಗ ನಂ.4 ಮಧುಗಿರಿ ರವರ ಕಛೇರಿಯಲ್ಲಿ ತೆರೆಯುವ ದಿನಾಂಕ	01.04.2026 ರಂದು ಬೆಳಿಗ್ಗೆ 11:00 ಗಂಟೆಗೆ	15.04.2026 ರಂದು ಬೆಳಿಗ್ಗೆ 11:00 ಗಂಟೆಗೆ
6	ಆರ್ಥಿಕ ಬಿಡ್ ಅನ್ನು ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ, ವಿಭಾಗ ನಂ.4 ಮಧುಗಿರಿ ರವರ ಕಛೇರಿಯಲ್ಲಿ ತೆರೆಯುವ ದಿನಾಂಕ	ತಾಂತ್ರಿಕ ಬಿಡ್ ಗೆ ಅನುಮೋದನೆ ದೊರೆತ ನಂತರ	ತಾಂತ್ರಿಕ ಬಿಡ್ ಗೆ ಅನುಮೋದನೆ ದೊರೆತ ನಂತರ

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ವಿ.ಜ.ನಿ.ನಿ, ಎತ್ತಿನಹೊಳೆ ಯೋಜನಾ ವಿಭಾಗ–04 ಮಧುಗಿರಿ.

DIPR/TUM/RO-302/25-26/Oysters

‘ರೋಸ್ಟರ್ ಬಿಂದು’ಗೆ ವಿರೋಧ

24ಕ್ಕೆ ಬೆಂಗಳೂರು ಚಲೊ: ಹೋರಾಟ ಸಂಕಲ್ಪ ಸಮಾವೇಶದಲ್ಲಿ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿಯ ರೋಸ್ಟರ್ ಬಿಂದುವಿನ ಹಂಚಿಕೆ ಅವೈಜ್ಞಾನಿವಾಗಿದೆ ಎಂದು ಆರೋಪಿಸಿ, ಮಾರ್ಚ್ 24ರಂದು ‘ಬೆಂಗಳೂರು ಚಲೊ’–ಪ್ರತಿಭಟನಾ ಸಮಾವೇಶ ನಡೆಸಲು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ನಿರ್ಧರಿಸಿದೆ.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟವು ಬಂಜಾರ, ಭೋವಿ, ಕೊರಮ, ಕೊರಚ, ಛಲವಾದಿ, ಚರ್ಮಕಾರ, ಸೂಕ್ಷ್ಮಜಾತಿಗಳ ಸಂಘಗಳ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ಹೋರಾಟ ಸಂಕಲ್ಪ ಸಮಾವೇಶದಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಈಗ ಸಿದ್ಧಪಡಿಸಿರುವ ರೋಸ್ಟರ್ ಬಿಂದುಗಳನ್ನೇ ಅನುಸರಿಸಿದರೆ ಕಡಿಮೆ ಹುದ್ದೆಗಳಿರುವಲ್ಲಿ ‘ಎ’ ವರ್ಗಕ್ಕೆ ಮಾತ್ರ ಅವಕಾಶ ಸಿಗುತ್ತದೆ. ‘ಬಿ’ ಮತ್ತು ‘ಸಿ’ಯಲ್ಲಿ ಗುರುತಿಸಲಾಗಿರುವ ಸಮುದಾಯಗಳಿಗೆ ಮೀಸಲಾತಿ ದೊರೆಯುವುದಿಲ್ಲ ಎಂದು ಸಭೆಯಲ್ಲಿ ಆಕ್ಷೇಪ ವ್ಯಕ್ತವಾಯಿತು.

‘ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 17 ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಶೇ 7ಕ್ಕೆ ಹೆಚ್ಚಳ ಮಾಡಿತ್ತು. ಇದನ್ನು ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ಪ್ರಧಾನಿ ಬಳಿಗೆ ನಿಯೋಗ ಹೋಗಬೇಕು. ಒತ್ತಡ ಹೇರಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು.

ದೇಶವ್ಯಾಪಿ ನಡೆಯಲಿರುವ ಜನಗಣತಿಯ ದತ್ತಾಂಶ ಬರುವವರೆಗೆ ಏಕಪಕ್ಷೀಯ ನಿರ್ಧಾರ ಮಾಡಬಾರದು. ರಾಜ್ಯದಲ್ಲಿ ಒಳ ಮೀಸಲಾತಿ ಹಂಚಿಕೆಯ ಪ್ರಕ್ರಿಯೆ ನಡೆಸುವ ಮುನ್ನ ಸಮುದಾಯಗಳ ಮುಖಂಡರೊಂದಿಗೆ ಸಮಾಲೋಚನೆ ನಡೆಸಬೇಕು. ಶೈಕ್ಷಣಿಕ, ವಸತಿನಿಲಯ ಪ್ರವೇಶ, ನೇಮಕಾತಿಗೆ ರೋಸ್ಟರ್ ಹಂಚಿಕೆ ಮಾಡಿ ಹೊರಡಿಸಿರುವ ಎಲ್ಲ ಆದೇಶ, ಸುತ್ತೋಲೆಗಳನ್ನು ಹಿಂಪಡೆಯಬೇಕು. ಈಗಾಗಲೇ ಹೊರಡಿಸಿರುವ ವಿವಿಧ ನೇಮಕಾತಿ ಅಧಿಸೂಚನೆಗಳನ್ನು ರದ್ದುಗೊಳಿಸಬೇಕು. ಹಳೆಯ ಜಾತಿ ಪ್ರಮಾಣ ಪತ್ರಗಳನ್ನೇ ಪರಿಗಣಿಸಬೇಕು ಎಂದು ಆಗ್ರಹಿಸಲಾಯಿತು.

ಭೋವಿ ಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಶಾಸಕ ಮಾನಪ್ಪ ವಜ್ಜಲ್, ಮಾಜಿ ಸಚಿವ ಅರವಿಂದ ಲಿಂಬಾವಳಿ, ಸಮುದಾಯಗಳ ಮುಖಂಡರಾದ ಪಲ್ಲವಿ ಜಿ., ರಾಮಪ್ಪ, ಸೀತಾರಾಮ, ಕಿರಣ್ ಕುಮಾರ್, ರವಿಕುಮಾರ್, ಮುನಿರಾಜು, ರಾಜಾನಾಯ್ಕ್, ಅನಂತನಾಯ್ಕ್ ಸಹಿತ ಅನೇಕರು ಭಾಗವಹಿಸಿದ್ದರು.



ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಸಮಾವೇಶದಲ್ಲಿ ಜಯದೇವ ನಾಯ್ಕ್, ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಮಾನಪ್ಪ ವಜ್ಜಲ್, ರವಿಕುಮಾರ್, ಕೃಷ್ಣಪ್ಪ ಉಪಸ್ಥಿತರಿದ್ದರು

ಚಿಟಿಕೆ ಸುದ್ದಿ

ಹಲ್ಲೆ: ದಲಿತ ಯುವಕ ಸಾವು


ಸುದೀಪ ಪಾಂಗೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ಶಾಲೆಯ ಮಕ್ಕಳ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮದಲ್ಲಿ ಕಲ್ಲು ಎಸೆದ ಎಂದು ಆರೋಪಿಸಿ ಮೂವರು ಹಲ್ಲೆ ಮಾಡಿದ್ದರಿಂದ ಗಾಯಗೊಂಡಿದ್ದ ದಲಿತ ಸಮಾಜದ ಸುದೀಪ ಬಸವರಾಜ ಪಾಂಗೆ (19) ಎಂಬುವರು ಮೃತಪಟ್ಟಿದ್ದಾರೆ.

ತಾಲ್ಲೂಕಿನ ಸಾವಳಗಿ ಗ್ರಾಮದ ಗ್ರಾಮ ಪಂಚಾಯಿತಿ ಆವರಣದಲ್ಲಿ ಈಚೆಗೆ ಸರ್ಕಾರಿ ಕನ್ನಡ ಮಹಿಳಾ ಪ್ರಾಥಮಿಕ ಶಾಲೆಯ ಕಾರ್ಯಕ್ರಮದಲ್ಲಿ ಘಟನೆ ನಡೆದಿತ್ತು.

‘ಈ ಸಂಬಂಧ ವಿಜಯ ಸಾವಳಗಿ, ರಾಜು ಮಾಲಗಾರ, ಮಲ್ಲಿಕಾರ್ಜುನ ಮಾಳಿ ಅವರನ್ನು ಬಂಧಿಸಲಾಗಿದೆ. ಜಾತಿ ನಿಂದನೆ ಮಾಡಿ, ಹಲ್ಲೆ ಮಾಡಿರುವುದು ಗೊತ್ತಾಗಿದೆ. ಘಟನಾ ಸ್ಥಳದಲ್ಲಿನ ಸಿಸಿಟಿವಿ ಕ್ಯಾಮೆರಾಗಳನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಪ್ರಗತಿಯಲ್ಲಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಸಿಲು: ಸವಾರರಿಗೆ ನೆರಳಿನ ವ್ಯವಸ್ಥೆ

ವಿಜಯಪುರ/ಬಳ್ಳಾರಿ: ಉತ್ತರ ಕರ್ನಾಟಕದಲ್ಲಿ ತಾಪಮಾನ ದಿನದಿಂದ ದಿನಕ್ಕೆ ಏರಿಕೆ ಆಗುತ್ತಿದೆ. ಬೇಸಿಗೆಯ ಆರಂಭದಲ್ಲೇ ಸುಡುಬಿಸಿಲು ಜನರನ್ನು ಹೈರಾಣಾಗಿಸುತ್ತಿದೆ.

ಬಳ್ಳಾರಿಯ ದುರ್ಗಮ್ಮನಗುಡಿ ದೇವಾಲಯ ಸಮೀಪದ ಟ್ರಾಫಿಕ್ ಸಿಗ್ನಲ್‌ನಲ್ಲಿ ಮಹಾನಗರ ಪಾಲಿಕೆಯು ಇದೇ ಮೊದಲ ಬಾರಿಗೆ ಹಸಿರು ಹೊದಿಕೆ ಮೂಲಕ ವಾಹನ ಸವಾರರಿಗೆ ನೆರಳಿನ ವ್ಯವಸ್ಥೆ ಮಾಡಿದೆ.

ಮಾರ್ಚ್ 12ರಂದು ಉತ್ತರ ಕರ್ನಾಟಕದ ಉತ್ತರ ಕನ್ನಡದಲ್ಲಿ ಗರಿಷ್ಠ ಅಂದರೆ 40.9 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ವಿಜಯಪುರ 40.2, ಬಾಗಲಕೋಟೆ 40.5, ಗದಗ 39.1, ವಿಜಯನಗರ 40, ಬಳ್ಳಾರಿ 40.1, ಬೆಳಗಾವಿ 39.5, ಹಾವೇರಿ 39.5, ಧಾರವಾಡ 40 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ

ಜೋಶಿ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: ‘ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಆಮಿಷವೊಡ್ಡಿ ನಾಗಠಾಣ ಕ್ಷೇತ್ರದ ಮಾಜಿ ಶಾಸಕ ದೇವಾನಂದ ಚವ್ಹಾಣ ಅವರಿಂದ ₹2 ಕೋಟಿ ಸುಲಿಗೆ ಮಾಡಿದ್ದಾರೆ’ ಎಂಬ ಆರೋಪದಡಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅಣ್ಣ ಗೋಪಾಲ ಜೋಶಿ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಹುಬ್ಬಳ್ಳಿಯ ಗೋಪಾಲ್ ಜೋಶಿ, ಅವರ ಪುತ್ರ ಅಜಯ್ ಜೋಶಿ ಹಾಗೂ ವಿಜಯಲಕ್ಷ್ಮೀ ಜೋಶಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ಆದೇಶದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯ ಹಾಲಿ ಪ್ರಕರಣಕ್ಕೆ ಮಾತ್ರ ಸಂಬಂಧಿಸಿದೆ. ಉಭಯ ಪಕ್ಷಗಾರರ ನಡುವೆ ಬಾಕಿ ಇರುವ ಪ್ರಕರಣಗಳ ಮೇಲೆ ಇದು ಯಾವುದೇ ಪರಿಣಾಮ ಬೀರುವುದಿಲ್ಲ’ ಎಂದು ನ್ಯಾಯಪೀಠ ಇದೇ ವೇಳೆ ಸ್ಪಷ್ಟಪಡಿಸಿದೆ.

ಹಿಟ್ನಾಳ ಕೈಯಲ್ಲಿ ದುಬಾರಿ ವಾಚ್



ಕೊಪ್ಪಳ: ಕೊಪ್ಪಳ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ರಾಘವೇಂದ್ರ ಹಿಟ್ನಾಳ ಅವರು ಧರಿಸಿದ್ದ ದುಬಾರಿ ಬೆಲೆಯ ಹುಬ್ಲೋಟ್ ಕಂಪನಿಯ ಕೈಗಡಿಯಾರ ಸಾರ್ವಜನಿಕವಾಗಿ ಚರ್ಚೆಗೆ ಕಾರಣವಾಗಿದೆ.

ಶುಕ್ರವಾರ ತಾಲ್ಲೂಕಿನ ಹಿರೇಬಗನಾಳ ಗ್ರಾಮದಲ್ಲಿ ನಡೆದ ಕಾರ್ಯಕ್ರಮದ ವೇಳೆ ಈ ವಾಚ್ ಧರಿಸಿದ್ದರು. ವಾಚ್‌ನ ಮಾರುಕಟ್ಟೆಯ ಮೌಲ್ಯ ಕನಿಷ್ಠ ₹18 ಲಕ್ಷವಿದೆ. ಇದರ ಬಗ್ಗೆ ಪ್ರತಿಕ್ರಿಯೆ ಪಡೆಯಲು ಯತ್ನಿಸಿದರೂ ರಾಘವೇಂದ್ರ ಹಿಟ್ನಾಳ ಲಭ್ಯವಾಗಲಿಲ್ಲ.

ಸಿ.ಎಂ ಔತಣಕೂಟ

ಒಂದನೇ ಪುಟದಿಂದ...

ಮೊದಲ ಬಾರಿ ಆಯ್ಕೆಯಾಗಿದ್ದ 31 ಶಾಸಕರು ತಮ್ಮನ್ನೂ ಸಚಿವ ಸ್ಥಾನಕ್ಕೆ ಪರಿಗಣಿಸಬೇಕು ಎಂದು ಪಕ್ಷದ ನಾಯಕರಿಗೆ ಪತ್ರ ಬರೆದು ಮನವಿ ಮಾಡಿದ್ದರು.

ಔತಣ ಕೂಟವನ್ನು ಖಚಿತಪಡಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ‘ನನ್ನನ್ನೂ ಸೇರಿದಂತೆ 16 ಸಚಿವರನ್ನು ಕರೆದಿದ್ದಾರೆ. ಉಳಿದವರನ್ನು ಕರೆಯುತ್ತಾರೋ ಇಲ್ಲವೋ ಗೊತ್ತಿಲ್ಲ’ ಎಂದರು.

‘ಸಚಿವ ಸ್ಥಾನಕ್ಕೆ ಎಲ್ಲರಲ್ಲೂ ಆಕಾಂಕ್ಷೆ ಇರುತ್ತದೆ. ಎರಡೂವರೆ ವರ್ಷಗಳ ನಂತರ ಕೆಲವರನ್ನು ಕೈಬಿಟ್ಟು ಕೆಲವರನ್ನು ಸೇರ್ಪಡೆ ಮಾಡಬಹುದು ಎಂದು ನಿರೀಕ್ಷಿಸಿದ್ದವರಿಗೆ ನಿರಾಸೆಯಾಗಿರಬಹುದು. ಮೂರ್ನಾಲ್ಕು ತಿಂಗಳು ವಿಳಂಬವಾಗಿದೆ. ಸಂಪುಟ ಪುನರ್‌ರಚನೆ ಮುಖ್ಯಮಂತ್ರಿ ಹಾಗೂ ಪಕ್ಷದ ಹೈಕಮಾಂಡ್ ನಾಯಕರಿಗೆ ಬಿಟ್ಟ ವಿಚಾರ’ ಎಂದು ಹೇಳಿದರು.

ಸುದ್ದಿ 2 ನಿಮಿಷ

‘ಅಧಿವೇಶನದ ಬಳಿಕ ದೆಹಲಿಗೆ 33 ಶಾಸಕರ ನಿಯೋಗ’

ರಾಮನಗರ: ‘ನಾಯಕತ್ವ ಗೊಂದಲ ನಿವಾರಿಸಬೇಕು ಹಾಗೂ ಸಂಪುಟ ಪುನರ್‌ರಚನೆ ವೇಳೆ ಮೂರು ಸಲ ಗೆದ್ದಿರುವ 33 ಶಾಸಕರ ಹೆಸರು ಪರಿಗಣಿಸಬೇಕು ಎಂದು ಕೋರಿ ನಾನೂ ಸೇರಿದಂತೆ 33 ಶಾಸಕರ ನಿಯೋಗ ಪಕ್ಷದ ಹೈಕಮಾಂಡ್ ಭೇಟಿ ಮಾಡಲಿದ್ದೇವೆ’ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು.

ಬಿಡದಿ ವಂಡರ್‌ಲಾ ರೆಸಾರ್ಟ್ ಬಳಿ ಶುಕ್ರವಾರ ಮಾಧ್ಯಮದವರ ಜೊತೆ ಮಾತನಾಡುತ್ತಾ, ‘ಸರ್ಕಾರ ಎರಡೂವರೆ ವರ್ಷ ಪೂರೈಸಿದೆ. ಸಚಿವ ಸ್ಥಾನಕ್ಕೆ ಹೊಸಬರನ್ನು ಪರಿಗಣಿಸಬೇಕು’ ಎಂದು ಕೋರಿದರು.

2028ರಲ್ಲಿ ಪಕ್ಷ ಅಧಿಕಾರಕ್ಕೆ ಬರಲು ನಾಯಕತ್ವದ ವಿಷಯದಲ್ಲಿ ಸೂಕ್ತ ತೀರ್ಮಾನ ಅಗತ್ಯ. ಈ ಕುರಿತು ಮನವರಿಕೆ ಮಾಡಿಕೊಡಲು ಅಧಿವೇಶನದ ಬಳಿಕ 33 ಶಾಸಕರು ದೆಹಲಿಗೆ ಹೋಗುತ್ತೇವೆ’ ಎಂದರು.

‘ನೀವು ಸಚಿವ ಸ್ಥಾನದ ಆಕಾಂಕ್ಷಿಯೇ’ ಎಂಬ ಪ್ರಶ್ನೆಗೆ, ‘ನಾನೇನು ಸನ್ಯಾಸಿಯಲ್ಲ. ಐದು ಸಲ ಗೆದ್ದಿದ್ದೇನೆ’ ಎಂದು ಹೇಳಿದರು.

ಆದರೆ, ಮೂರು ಪಕ್ಷದಲ್ಲಿ ಗೆದ್ದಿರುವುದೇ ದುರಂತ. ಮೂರು ಸಲ ಜೆಡಿಎಸ್, ಬಿಜೆಪಿ, ಕಾಂಗ್ರೆಸ್‌ನಿಂದ ಒಂದೊಂದು ಸಲ ಗೆದ್ದಿರುವೆ. ಒಂದೇ ಪಕ್ಷದಲ್ಲಾಗಿದ್ದರೆ ಈ ವೇಳೆಗೆ ಸಚಿವನಾಗಿರುತ್ತಿದ್ದೆ’ ಎಂದರು.

ಡಿಸಿಎಂ ಭೇಟಿ ಮಾಡಿದ ವೀರಪ್ಪನ್ ಪುತ್ರಿ ವಿದ್ಯಾ



ಬಿಡದಿ (ರಾಮನಗರ): ಇಲ್ಲಿನ ವಂಡರ್‌ಲಾ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿರುವ ಒಡಿಶಾದ ಕಾಂಗ್ರೆಸ್ ಶಾಸಕರನ್ನು ಭೇಟಿಗೆ ಶುಕ್ರವಾರ ಸಂಜೆ ರೆಸಾರ್ಟ್‌ಗೆ ಬಂದಿದ್ದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವೀರಪ್ಪನ್ ಪುತ್ರಿ ವಿದ್ಯಾ ಭೇಟಿ ಮಾಡಿದರು.

ಶಿವಕುಮಾರ್ ಅವರು ಬರುವುದಕ್ಕೆ ಮುಂಚೆಯೇ ವಿದ್ಯಾ, ಬೆಂಬಲಿಗರೊಂದಿಗೆ ಬಂದು ಕಾಯುತ್ತಿದ್ದರು. ಡಿಸಿಎಂ ಕಾರಿನಿಂದ ಬಂದಿಳಿಯುತ್ತಿದ್ದಂತೆ ಸ್ಥಳೀಯ ಕಾಂಗ್ರೆಸ್ ನಾಯಕರು ಅವರನ್ನು ಮುತ್ತಿಕೊಂಡರು. ಇದೇ ವೇಳೆ, ಮುಖಂಡರೊಬ್ಬರು ವಿದ್ಯಾ ಅವರನ್ನು ಡಿಸಿಎಂ ಬಳಿ ಕರೆದು ಪರಿಚಯಿಸಿದರು.

ಡಿಸಿಎಂ ಅವರಿಗೆ ಫೋಟೊ ಉಡುಗೊರೆ ನೀಡಿ ನಮಸ್ಕರಿಸಿದ ಅವರು, ಭೇಟಿ ಉದ್ದೇಶ ಹೇಳಲು ಮುಂದಾದರು. ಆಗ ಆಮೇಲೆ ಮಾತನಾಡುವೆ ಎಂದು ಸಂಜ್ಞೆ ಮಾಡಿ ಶಿವಕುಮಾರ್ ಅವರು ರೆಸಾರ್ಟ್ ಒಳಕ್ಕೆ ಹೋದರು.

ತಮಿಳುನಾಡು ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ವಿದ್ಯಾ ಅವರು ಒಲವು ಹೊಂದಿದ್ದು, ಈ ಕುರಿತು ಮಾತನಾಡಲು ಬಂದಿದ್ದರು ಎಂದು ಮೂಲಗಳು ತಿಳಿಸಿವೆ.

ಶೃಂಗೇರಿ, ಹೊರನಾಡು ದೇಗುಲಗಳಲ್ಲಿ ಎಲ್‌ಪಿಜಿ ಅವಲಂಬನೆ ಇಲ್ಲ

ದಾಸೋಹ ನಿರಾತಂಕ, ಬಾಧಿಸದ ‘ಕೊರತೆ’

ಪ್ರಜಾವಾಣಿ ವಾರ್ತೆ

ಕಳಸ/ಶೃಂಗೇರಿ: ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಮತ್ತು ಹೊರನಾಡು ದೇಗುಲಗಳು ಅನ್ನ ದಾಸೋಹಕ್ಕೆ ಅಡುಗೆ ಅನಿಲದ ಮೇಲೆ ಅವಲಂಬಿತವಾಗಿಲ್ಲ.

ಎಲ್ಲೆಡೆ ಅಡುಗೆ ಅನಿಲದ ಸಮಸ್ಯೆ ಕಾಡುತ್ತಿದ್ದರೆ, ಈ ಎರಡೂ ದೇಗುಲಗಳಲ್ಲಿ ಅನ್ನದಾಸೋಹಕ್ಕೆ ಅಡುಗೆ ಅನಿಲದ ಸಮಸ್ಯೆ ಕಾಡಿಲ್ಲ. ಎರಡೂ ಕಡೆ ಉರುವಲಾಗಿ ಸೌದೆ ಹೊಟ್ಟು, ಕಾಫಿ ಪೆಲೆಟ್ಸ್ ಬಳಕೆ ಆಗುತ್ತಿದೆ.

ಶೃಂಗೇರಿಯ ಶಾರದಾ ದೇವಿಯ ದರ್ಶನಕ್ಕೆ ಬರುವ ಭಕ್ತರಿಗೆ ಪ್ರತಿನಿತ್ಯ ಊಟದ ವ್ಯವಸ್ಥೆ ಇದೆ. ಸುಮಾರು 8 ಸಾವಿರ ಜನರಿಗೆ ನಿತ್ಯ ದಾಸೋಹ ನಡೆಯಲಿದೆ. ಮರದ ಹೊಟ್ಟು ಮತ್ತು ಪುಡಿ ಸೌದೆಯ ಒಂದು ಬಾಯ್ಲರ್, ಮತ್ತೊಂದು ಡೀಸೆಲ್ ಬಾಯ್ಲರ್ ಇದೆ. ಇವೆರಡನ್ನೂ ಬಳಸಿ ಊಟ ತಯಾರಿಸಲಾಗುತ್ತಿದೆ. ಮೊದಲಿನಿಂದಲೂ ಅಡುಗೆ ಅನಿಲ ಬಳಕೆಯ ಪ್ರಯತ್ನವನ್ನೇ ಇಲ್ಲಿ ಮಾಡಿಲ್ಲ.

ಮತ್ತೊಂದೆಡೆ ಹೊರನಾಡು ಅನ್ನಪೂರ್ಣೇಶ್ವರಿ ದೇಗುಲದಲ್ಲೂ ಅಡುಗೆ ಅನಿಲದ ಮೇಲೆ ಅವಲಂಬನೆ ಆಗಿಲ್ಲ. ಕಾಫಿ ಸಿಪ್ಪೆಯ ಪೆಲೆಟ್ಸ್‌ಗಳನ್ನು ಬಳಸಿ ಅಡುಗೆ ತಯಾರಿಸಲಾಗುತ್ತಿದೆ.

‘ಕಾಫಿ ಸಿಪ್ಪೆಯಿಂದ ಪೆಲೆಟ್ಸ್(ಸಿಪ್ಪೆಯಿಂದ ಮಾಡಿದ ಸಣ್ಣ ಉಂಡೆಗಳು) ತಯಾರಿಸಲಾಗುತ್ತದೆ. ಅವುಗಳನ್ನು ಉರುವಲಿಗೆ ಬಳಸಲಾಗುತ್ತದೆ. ಪೆಲೆಟ್ಸ್‌ನಿಂದ ಸ್ಟೀಮ್ ಉತ್ಪಾದಿಸುವ ಬಾಯ್ಲರ್ ಯಂತ್ರವನ್ನು ಅಳವಡಿಸಲಾಗಿದೆ. ಹೀಗಾಗಿ, ಸಮಸ್ಯೆ ತಟ್ಟಿಲ್ಲ’ ಎಂದು ದೇಗುಲದವರು ಹೇಳುತ್ತಾರೆ.

ಹೊರನಾಡಿನಲ್ಲಿ ಪ್ರತಿನಿತ್ಯ 5 ಸಾವಿರ ಜನರಿಗೆ ಅಡುಗೆ ತಯಾರಿಸಲಾಗುತ್ತಿದೆ. ಪರೀಕ್ಷಾ ಸಮಯ ಆಗಿರುವುದರಿಂದ ಪ್ರವಾಸಿಗರ ಸಂಖ್ಯೆ ಎರಡೂ ದೇಗುಲಗಳಿಗೆ ಕಡಿಮೆ ಇದೆ.

ಬೇಲೂರು: ಚನ್ನಕೇಶವ ದೇಗುಲದಲ್ಲಿ ಅನ್ನದಾಸೋಹ ಸ್ಥಗಿತ

ಬೇಲೂರು (ಹಾಸನ): ಅಡುಗೆ ಅನಿಲ ಸಿಲಿಂಡರ್ ಕೊರತೆಯಿಂದ ಇಲ್ಲಿನ ಚನ್ನಕೇಶವ ಸ್ವಾಮಿ ದೇವಾಲಯದಲ್ಲಿ ಅನ್ನದಾಸೋಹವನ್ನು ಶುಕ್ರವಾರ ಮಧ್ಯಾಹ್ನದಿಂದ ಸ್ಥಗಿತಗೊಳಿಸಲಾಗಿದೆ.

ನಿತ್ಯ ಸಾವಿರಾರು ಭಕ್ತರು ಇಲ್ಲಿ ಊಟ ಮಾಡುತ್ತಿದ್ದು, ಪ್ರತಿ ದಿನ ಎರಡು ಸಿಲಿಂಡರ್ ಬಳಕೆಯಾಗುತ್ತಿತ್ತು. ಅನ್ನದಾಸೋಹ ಸ್ಥಗಿತಗೊಂಡ ಮಾಹಿತಿ ಇಲ್ಲದೆ ಬಂದ ಭಕ್ತರು ನಿರಾಸೆಯಿಂದ ವಾಪಸಾದರು.

ಚಾಮರಾಜನಗರ: ಆಟೊ ಗ್ಯಾಸ್ ಕೇಂದ್ರಗಳು ಬಂದ್

ಚಾಮರಾಜನಗರ: ಜಿಲ್ಲೆಯಲ್ಲಿ ಕೆಲವೆಡೆ ವಾಹನಗಳ ಸಿಎನ್‌ಜಿ ಇಂಧನದ ಕೊರತೆ ಎದುರಾಗಿದೆ. ಏಜೆನ್ಸಿಗಳಿಂದ ಸಕಾಲಕ್ಕೆ ಇಂಧನ ಪೂರೈಕೆಯಾಗದ ಪರಿಣಾಮ, ನಗರದ ಗುಂಡ್ಲುಪೇಟೆ ರಸ್ತೆಯಲ್ಲಿರುವ ಸ್ಟೆಪ್ ಗ್ಯಾಸ್ ಹಾಗೂ ನಂಜನಗೂಡು ರಸ್ತೆಯಲ್ಲಿರುವ ಆಟೋ ಗ್ಯಾಸ್ ಕೇಂದ್ರಗಳನ್ನು ಮುಚ್ಚಲಾಗಿದೆ.

ಮಾರುಕಟ್ಟೆಯಲ್ಲಿ ಸೌದೆ ಒಲೆಗಳೂ ಸಿಗುತ್ತಿಲ್ಲ. ತಮಿಳುನಾಡು, ಕೇರಳ ರಾಜ್ಯಗಳಿಂದ ಸೌದೆ ಒಲೆಗಳ ಪೂರೈಕೆ ಸ್ಥಗಿತಗೊಂಡಿದೆ ಎಂದು ಹೋಟೆಲ್ ಉದ್ಯಮಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ದಾಸ್ತಾನು ಆಧರಿಸಿ ಆದ್ಯತೆಯ ಮೇಲೆ ಸರ್ಕಾರಿ ಹಾಸ್ಟೆಲ್, ಆಸ್ಪತ್ರೆ, ಶಾಲೆಗಳಿಗೆ ಪೂರೈಕೆ ಮಾಡಲಾಗುತ್ತಿದೆ.

ಮಂಗಳೂರು: ಆನ್‌ಲೈನ್ ಆಹಾರ ಪೂರೈಕೆ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಮಂಗಳೂರು: ವಾಣಿಜ್ಯ ಬಳಕೆಯ ಅಡುಗೆ ಅನಿಲ ಕೊರತೆಯಿಂದಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಶುಕ್ರವಾರವೂ ಸಂಕಷ್ಟ ಮುಂದುವರಿಯಿತು.

ಮಂಗಳೂರು ನಗರದ ಹೋಟೆಲ್‌ಗಳ ಮೆನುವಿನಲ್ಲಿ ಇನ್ನಷ್ಟು ಖಾದ್ಯಗಳಿಗೆ ಕತ್ತರಿ ಬಿದ್ದಿದ್ದು ಕೆಲವರು ಶನಿವಾರದಿಂದ ವ್ಯವಹಾರ ಸ್ಥಗಿತಗೊಳಿಸುವ ಚಿಂತನೆಯಲ್ಲಿದ್ದಾರೆ.

ಹಲವು ಹೋಟೆಲ್‌ನವರು ಸ್ವಿಗ್ಗಿ ಮತ್ತು ಜೊಮ್ಯಾಟೊದಂಥ ಆನ್‌ಲೈನ್ ಆಹಾರ ಪೂರೈಕೆಯನ್ನು ಸ್ಥಗಿತಗೊಳಿಸಿದ್ದು ರೆಸ್ಟೋರೆಂಟ್‌ಗಳನ್ನು ಮಾತ್ರ ‘ಸೀಮಿತ’ ಖಾದ್ಯಗಳೊಂದಿಗೆ ಮುಂದುವರಿಸಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಕಟ್ಟಿಗೆ ಒಲೆಯಲ್ಲಿ ಅಡುಗೆ ಮಾಡಿ ತಂದು ರೆಸ್ಟೋರೆಂಟ್, ಆಸ್ಪತ್ರೆ ಕ್ಯಾಂಟೀನ್, ಲಾಡ್ಜ್‌ಗಳಿಗೆ ವಿತರಿಸುವ ಮಂಗಳೂರಿನ ಗೋಕುಲ್ ವೆಜ್ ಮಾಲೀಕ ವಿಠ್ಠಲ ರೈ, ‘ಒಂದೆರಡು ದಿನ ಹೇಗೋ ನಿಭಾಯಿಸಿದೆವು. ಭಾನುವಾರದಿಂದ ಇದನ್ನು ನಿಲ್ಲಿಸಬೇಕಾದ ಪರಿಸ್ಥಿತಿ ಇದೆ’ ಎಂದು ಹೇಳಿದರು.

ಉಡುಪಿ ಜಿಲ್ಲಾ ಹೋಟೆಲ್ ಮಾಲೀಕರ ಸಂಘದವರು ಸಭೆ ನಡೆಸಿ, ‘ಸಣ್ಣ, ದೊಡ್ಡ ಹೋಟೆಲ್ ಎನ್ನದೆ ಎಲ್ಲರಿಗೂ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಸಮಾನವಾಗಿ ಸರಬರಾಜಾಗಬೇಕು. ಯಾರಿಗಾದರೂ ಸಮಸ್ಯೆಯಾದರೆ ಜಿಲ್ಲೆಯಾದ್ಯಂತ ಸಮಸ್ತ ಹೋಟೆಲ್ ಬಂದ್ ಮಾಡಬೇಕು’ ಎಂದು ನಿರ್ಣಯಿಸಿದರು.

‘ಉಸಿರಿರೋವರೆಗೂ ರಾಜಕೀಯದಲ್ಲಿರುವೆ’

ನನ್ನ ಬೆಳೆಸಿದಂತೆ ಯತೀಂದ್ರ ಅವರನ್ನೂ ಬೆಳೆಸಿ– ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ


ಸಿದ್ದರಾಮಯ್ಯ

ಮೈಸೂರು: ‘ಕೊನೆಯ ಉಸಿರು ಇರುವವರೆಗೂ ರಾಜಕೀಯದಲ್ಲಿ ಇರುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಶುಕ್ರವಾರ ಹೇಳಿದರು.

ತಾಲ್ಲೂಕಿನ ವರುಣ ಹೋಬಳಿಯ ವರಕೋಡು ಗ್ರಾಮದಲ್ಲಿ ಬೀರೇಶ್ವರಸ್ವಾಮಿ ದೇವಸ್ಥಾನವನ್ನು ಉದ್ಘಾಟಿಸಿ, ನಂತರ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ರಾಜಕೀಯದಲ್ಲಿ ಗೆಲುವು, ಸೋಲು ಕಂಡಿದ್ದೇನೆ. ಆದರೆ, ಜನ ಸೇವೆ ಮಾಡುವುದನ್ನು ಮರೆತಿಲ್ಲ. ಕೈಲಾದಷ್ಟು ಜನ ಸೇವೆ ಮಾಡುತ್ತಿದ್ದೇನೆ’ ಎಂದರು.

‘ನಾನು ಕ್ಷೇತ್ರಕ್ಕೆ ಹೆಚ್ಚು ಬರಲು ಆಗುತ್ತಿಲ್ಲ. ಪುತ್ರ ಡಾ.ಯತೀಂದ್ರ ನೋಡಿಕೊಳ್ಳುತ್ತಾನೆ. ಅಭಿವೃದ್ಧಿಗಾಗಿ ಅವನು ಹೇಳಿದ ಕೆಲಸವನ್ನೆಲ್ಲ ಮಾಡಿಕೊಡುತ್ತೇನೆ. ನನ್ನನ್ನು ಬೆಳೆಸಿದಂತೆಯೇ ನೀವೆಲ್ಲರೂ ಯತೀಂದ್ರನನ್ನೂ ಬೆಳೆಸಬೇಕು. ಬೆಳೆಸುತ್ತೀರಿ ಎಂಬ ವಿಶ್ವಾಸವಿದೆ’ ಎಂದರು.

ಮರೆಯಲಾಗದು: ‘ಮೂಡಲಹುಂಡಿ ಸೇರಿ ಹುಂಡಿಗಳು ನನಗೆ ಪ್ರಿಯವಾದ ಊರುಗಳು. ನನಗೆ ರಾಜಕೀಯ ಜೀವನ ಸಿಕ್ಕಿದ್ದೇ ಇಲ್ಲಿಂದ. ಶಾಸಕ, ಸಚಿವ, ಮುಖ್ಯಮಂತ್ರಿ ಆಗಿದ್ದೇ ಈ ಜನರ ಆಶೀರ್ವಾದದಿಂದ. ಹೀಗಾಗಿ ಮೈಸೂರು ತಾಲ್ಲೂಕಿನ ಜನರನ್ನು ಎಂದಿಗೂ ಮರೆಯಲಾಗದು’ ಎಂದರು.

ಮುಖಂಡರು ನಂತರ ಅವರಿಗೆ ರೇಷ್ಮೆ ಶಾಲು ಹೊದಿಸಿ, ರೇಷ್ಮೆಗೂಡುಗಳ ಹಾರ ಹಾಕಿ ಸನ್ಮಾನಿಸಿದರು. ಬೆಳ್ಳಿಗದೆ ನೀಡಿ ಅಭಿಮಾನ ಮೆರೆದರು. ‘ವೀರ ಮಕ್ಕಳ ಕುಣಿತ’ಕ್ಕೆ ಹೆಜ್ಜೆ ಹಾಕಬೇಕು ಎಂಬ ಗ್ರಾಮಸ್ಥರ ಮನವಿಯನ್ನು ಸಿದ್ದರಾಮಯ್ಯ ಪುರಸ್ಕರಿಸಲಿಲ್ಲ.

‘ಶಾಸಕ ಎಚ್.ವೈ.ಮೇಟಿ ಕುಟುಂಬಕ್ಕೆ ಟಿಕೆಟ್’

ಬೆಳಗಾವಿ/ಬಾಗಲಕೋಟೆ: ‘ಶಾಸಕ ಎಚ್.ವೈ.ಮೇಟಿ ನಿಧನದಿಂದ ತೆರವಾಗಿರುವ ಬಾಗಲಕೋಟೆ ವಿಧಾನಸಭೆ ಕ್ಷೇತ್ರದ ಉಪಚುನಾವಣೆಗೆ ಸ್ಪರ್ಧಿಸಲು ಕಾಂಗ್ರೆಸ್‌ನಿಂದ ಮೇಟಿ ಕುಟುಂಬದವರಿಗೆ ಟಿಕೆಟ್ ಕೊಡುತ್ತೇವೆ’ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ಉಪಚುನಾವಣೆಯನ್ನು ಗೆಲ್ಲಲು ಎಲ್ಲ ತಯಾರಿ ಪೂರ್ಣಗೊಂಡಿದೆ. ಪಕ್ಷದ ಹೈಕಮಾಂಡ್ ಹಾಗೂ ಕುಟುಂಬದವರ ನಿರ್ಧಾರ ಆಧರಿಸಿ, ಮೇಟಿ ಕುಟುಂಬದ ಒಬ್ಬರಿಗೆ ಟಿಕೆಟ್ ನೀಡುತ್ತೇವೆ’ ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಬಾಗಲಕೋಟೆಯಲ್ಲಿ ಸಚಿವ ಆರ್.ಬಿ.ತಿಮ್ಮಾಪುರ ಮಾತನಾಡಿ, ‘ಉಪಚುನಾವಣೆಗೆ ಸ್ಪರ್ಧಿಸಲು ಸಾಕಷ್ಟು ಅಭ್ಯರ್ಥಿಗಳಿದ್ದಾರೆ. ಬೇರೆಯವರಿಗೆ ಟಿಕೆಟ್ ನೀಡುವ ಪ್ರಶ್ನೆಯೇ ಇಲ್ಲ. ಸಿ.ಎಂ., ಕೆಪಿಸಿಸಿ ಅಧ್ಯಕ್ಷ, ಹೈಕಮಾಂಡ್ ಚರ್ಚಿಸಿ, ಅಭ್ಯರ್ಥಿ ಹೆಸರು ಅಂತಿಮವಾಗಲಿದೆ’ ಎಂದರು.

ತಹಶೀಲ್ದಾರ್ ಪಕ್ಕ ಕೂತು ಸಭೆ ನಡೆಸಿದ ಶಾಸಕರ ಆಪ್ತ ಸಹಾಯಕ

ಪ್ರಜಾವಾಣಿ ವಾರ್ತೆ

ಕಡೂರು (ಚಿಕ್ಕಮಗಳೂರು): ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ತಹಶೀಲ್ದಾರ್ ನೇತೃತ್ವದಲ್ಲಿ ನಡೆದ ಕಂದಾಯ ಇಲಾಖೆಯ ಸಭೆಯಲ್ಲಿ ಶಾಸಕರ ಆಪ್ತ ಸಹಾಯಕ ಮಂಜುನಾಥ್, ತಹಶೀಲ್ದಾರರ ಪಕ್ಕ ಕುಳಿತು ಸಭೆ ನಡೆಸಿದ್ದಾರೆ ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ರವಿಕುಮಾರ್ ಆರೋಪಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಜಿಲ್ಲಾಧಿಕಾರಿ ಎನ್.ಎಂ. ನಾಗರಾಜ್, ‘ಈ ವಿಷಯ ನನ್ನ ಗಮನಕ್ಕೆ ಬಂದಿದೆ. ಘಟನೆಯ ಕುರಿತು ವರದಿ ನೀಡುವಂತೆ ಕಡೂರು ತಹಶೀಲ್ದಾರ್‌ಗೆ ಸೂಚಿಸಿದ್ದೇನೆ. ಅವರು ವರದಿ ನೀಡಿದ ಬಳಿಕ ಸೂಕ್ತ ಕ್ರಮ ವಹಿಸಲಾಗುವುದು’ ಎಂದು ತಿಳಿಸಿದರು.

ಕಂದಾಯ ಗ್ರಾಮ, ಉಪಗ್ರಾಮಗಳ ರಚನೆ ಬಗ್ಗೆ ಮಾರ್ಚ್ 16ರೊಳಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕಿದ್ದು, ಆ ಕುರಿತು ಎಡಿಎಲ್‌ಆರ್, ಉಪ ತಹಶೀಲ್ದಾರ್, ಕಂದಾಯ ಅಧಿಕಾರಿಗಳು, ಪಿಡಿಒಗಳ ಸಭೆಯನ್ನು ಗುರುವಾರ ಶಾಸಕ ಕೆ.ಎಸ್. ಆನಂದ್ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

ಶಾಸಕರು ಅಧಿವೇಶನದಲ್ಲಿ ಪಾಲ್ಗೊಂಡಿದ್ದ ಕಾರಣ ಸಭೆಗೆ ಹಾಜರಾಗಿರಲಿಲ್ಲ. ಆಗ ತಹಶೀಲ್ದಾರ್ ಸಿ.ಎಸ್. ಪೂರ್ಣಿಮಾ, ತಾ.ಪಂ ಇಒ ಸಿ.ಆರ್. ಪ್ರವೀಣ್ ಮತ್ತು ಆರ್‌ಎಫ್‌ಒ ಎನ್.ಆರ್. ಹರೀಶ್ ಇದ್ದ ವೇದಿಕೆಯಲ್ಲಿ ಮಂಜುನಾಥ್ ತಹಶೀಲ್ದಾರ್ ಪಕ್ಕವೇ ಕುಳಿತು ಸಭೆಯಲ್ಲಿ ಮಾಹಿತಿ ಪಡೆದಿದ್ದಾರೆ.

‘ತಾಲ್ಲೂಕು ಮಟ್ಟದ ಅಧಿಕಾರಿಗಳು ಪ್ರತಿರೋಧ ತೋರಿಸದೆ ಕರ್ತವ್ಯಲೋಪ ಎಸಗಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಈ ದೃಶ್ಯಗಳು ಹರಿದಾಡುತ್ತಿವೆ. ಜಿಲ್ಲಾಧಿಕಾರಿ ಸೂಕ್ತಕ್ರಮ ವಹಿಸಬೇಕು. ಇಲ್ಲವಾದರೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಾಜೇಂದ್ರಕುಮಾರ್ ಕಟಾರಿಯಾ ಅವರಿಗೆ ದೂರು ಸಲ್ಲಿಸಲಾಗುವುದು’ ಎಂದು ರವಿಕುಮಾರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನಿಧನ ವಾರ್ತೆ

ಡಿ.ಆರ್. ಜೈರಾಜ್


ಡಿ.ಆರ್. ಜೈರಾಜ್

ಬೆಂಗಳೂರು: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾಜಿ ಅಧ್ಯಕ್ಷ ಡಿ.ಆರ್. ಜೈರಾಜ್(75) ಶುಕ್ರವಾರ ಸಂಜೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಅವರಿಗೆ ಪತ್ನಿ, ಇಬ್ಬರು ಮಕ್ಕಳು ಇದ್ದಾರೆ. ತುಮಕೂರಿನ ಗುಬ್ಬಿಯ ಚನ್ನಬಸವೇಶ್ವರ ಚಿತ್ರಮಂದಿರದ ಮಾಲೀಕರಾಗಿದ್ದ ಅವರು 2019ರಲ್ಲಿ ಪ್ರದರ್ಶಕ ವಲಯದಿಂದ ಮಂಡಳಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಶನಿವಾರ ಬೆಳಗ್ಗೆ 7ರಿಂದ 10ರವರೆಗೆ ನಂದಿನಿ ಲೇಔಟ್‌ನಲ್ಲಿರುವ ಅವರ ಸ್ವಗೃಹದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ಮಧ್ಯಾಹ್ನದ ಮೇಲೆ ಗುಬ್ಬಿಯಲ್ಲಿ ಅಂತ್ಯಸಂಸ್ಕಾರ ನಡೆಸಲು ಕುಟುಂಬ ಸದಸ್ಯರು ತೀರ್ಮಾನಿಸಿದ್ದಾರೆ.


ಕರ್ನಾಟಕ ಮಾಧ್ಯಮ ಅಕಾಡೆಮಿ ಶುಕ್ರವಾರ ಹಮ್ಮಿಕೊಂಡಿದ್ದ 2025ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ‘ಪ್ರಜಾವಾಣಿ’ಯ ಬೆಳಗಾವಿ ಜಿಲ್ಲಾ ಹಿರಿಯ ವರದಿಗಾರ ಸಂತೋಷ ಈ ಚಿನಗುಡಿ ಅವರಿಗೆ ‘ಮೈಸೂರು ದಿಗಂತ ದತ್ತಿ’ ಪ್ರಶಸ್ತಿ ಹಾಗೂ ‘ಸುಧಾ’ ವಾರಪತ್ರಿಕೆಯ ಮುಖ್ಯ ಉಪಸಂಪಾದಕಿ ಉಮಾ ಅನಂತ್ ಅವರಿಗೆ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

ಕೊಡಗು: ಕಾಡಾನೆ ಸೆರೆ

ಸಿದ್ದಾಪುರ (ಕೊಡಗು ಜಿಲ್ಲೆ): ಇಲ್ಲಿಗೆ ಸಮೀಪದ ಚೆನ್ನಯ್ಯನಕೋಟೆ ಬಾಡಗ ಬಾಣಂಗಾಲ ಸಮೀಪ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಶುಕ್ರವಾರ ಸೆರೆ ಹಿಡಿದರು.

ಗುಹ್ಯದಲ್ಲಿ ಗುರುವಾರ ಕಾಡಾನೆ ದಾಳಿಗೆ ಸಿಲುಕಿ ಚೌರಿರ ಗಣಪತಿ ಮೃತಪಟ್ಟಿದ್ದರು. ಬಳಿಕ ನಿಗಾ ಇರಿಸಿದ್ದ ಸಿಬ್ಬಂದಿ, ಸುಮಾರು 14 ಕಿ.ಮೀ ವರೆಗೂ ಸಾಗಿದ್ದ ಕಾಡಾನೆಯನ್ನು ಹುಂಡಿ ಎಂಬ ಪ್ರದೇಶದಲ್ಲಿ 5 ಸಾಕಾನೆಗಳ ನೆರವಿನಿಂದ, ಅರಿವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿದರು.

ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ಅವರಿಗೆ ಗ್ರಾಮಸ್ಥರ ಆಗ್ರಹ

‘ಕಾರ್ಖಾನೆ ಸ್ಥಳಾಂತರಿಸಿ, ಇಲ್ಲವೇ ವಿಷ ಕೊಡಿ’

ಪ್ರಜಾವಾಣಿ ವಾರ್ತೆ

ಕೊಪ್ಪಳ: ತಾಲ್ಲೂಕಿನ ಹಿರೇಬಗನಾಳ ಗ್ರಾಮದಲ್ಲಿ ಸ್ಪಾಂಜ್ ಮತ್ತು ಐರನ್ ಕಾರ್ಖಾನೆಗಳಿಂದ ಆಗುತ್ತಿರುವ ಮಾಲಿನ್ಯದ ‘ಬಿಸಿ’, ಶುಕ್ರವಾರ ಗ್ರಾಮಕ್ಕೆ ಭೇಟಿ ನೀಡಿದ್ದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಅವರಿಗೂ ತಟ್ಟಿತು.

ಶಾಸಕ ರಾಘವೇಂದ್ರ ಹಿಟ್ನಾಳ, ಮಾಜಿ ಸಂಸದ ಸಂಗಣ್ಣ ಕರಡಿ, ಜಿಲ್ಲಾಧಿಕಾರಿ ಡಾ.ಸುರೇಶ ಇಟ್ನಾಳ ಜೊತೆ ಗ್ರಾಮಕ್ಕೆ ನರೇಂದ್ರಸ್ವಾಮಿ ಅವರು ಭೇಟಿ ನೀಡಿದ್ದರು.

ರೈತರು ಅವರಿಗೆ ಹಿರೇಬಗನಾಳದಲ್ಲಿ, ಕೃಷಿ ಸಾಮಗ್ರಿ ಸಂಗ್ರಹಿಸುವ ಕೊಠಡಿ, ಬಟ್ಟೆಗೆ ಅಂಟಿಕೊಂಡಿದ್ದ ಕಪ್ಪುಕಣಗಳ ದೂಳು, ಜಮೀನು, ಉಳ್ಳಾಗಡ್ಡಿ, ತೆಂಗಿನ ಗರಿಗಳಿಗೆ ಮೆತ್ತಿಕೊಂಡಿದ್ದ ಕಪ್ಪುಕಣಗಳನ್ನು ತೋರಿಸಿ ಗಮನಸೆಳೆದರು.

ಹೊಲಕ್ಕೆ ತೆರಳುವಾಗ ಅರ್ಧ ರಸ್ತೆಯ ತನಕ ಕಾರಿನಲ್ಲಿ ಬಂದ ನರೇಂದ್ರ ಸ್ವಾಮಿ ಅವರಿಗೆ ರೈತರು, ‘ನಮ್ಮೊಂದಿಗೆ ನಡೆದುಕೊಂಡೇ ಬನ್ನಿ, ನಿಮಗೂ ವಾಸ್ತವ ಗೊತ್ತಾಗುತ್ತದೆ’ ಎಂದು ಹೇಳಿ ನಡೆಸಿಕೊಂಡೇ ಹೊಲಕ್ಕೆ ಕರೆದೊಯ್ದರು.

ನರೇಂದ್ರಸ್ವಾಮಿ ಆಗ ಮೂಗು ಮುಚ್ಚಿಕೊಂಡೇ ಮಾಲಿನ್ಯ ಸ್ಥಳಗಳನ್ನು ವೀಕ್ಷಿಸಿದರು.

ಬಳಿಕ ಗ್ರಾಮಸ್ಥರ ಜೊತೆ ನಡೆದ ಸಭೆಯಲ್ಲಿ ಮಾತನಾಡಿ, ‘ಮಾಲಿನ್ಯ ಉಂಟುಮಾಡುತ್ತಿರುವ ಕಾರ್ಖಾನೆಗಳಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ. ತಪ್ಪಿತಸ್ಥ ಕಂಪನಿಗಳ ವಿರುದ್ಧ ಮುಲಾಜಿಲ್ಲದೆ ಕ್ರಮವಹಿಸಲಾಗುವುದು. ಮಂಡಳಿ ರೈತರ ಪರವಾಗಿದೆ’ ಎಂದು ಹೇಳಿದರು.

ಇದಕ್ಕೂ ಮೊದಲು ಗ್ರಾಮಸ್ಥರು, ‘ಮಾಲಿನ್ಯದ ದುಷ್ಪರಿಣಾಮ ಜನರ ಆರೋಗ್ಯ, ಜಲ ಹಾಗೂ ಕೃಷಿ ಮೇಲೂ ಆಗಿದೆ. ಮಾಲಿನ್ಯಕಾರಕ ಕಾರ್ಖಾನೆಗಳನ್ನು ತ್ವರಿತವಾಗಿ ಸ್ಥಳಾಂತರಿಸಲಿ. ಇಲ್ಲವೇ ನಮಗೆ ತೊಟ್ಟು ವಿಷ ಕೊಟ್ಟು ಬಿಡಿ’ ಎಂದು ನೋವು ತೋಡಿಕೊಂಡರು.


ಕೊಪ್ಪಳ ತಾಲ್ಲೂಕಿನ ಹಿರೇಬಗನಾಳ ಗ್ರಾಮಕ್ಕೆ ಶುಕ್ರವಾರ ಭೇಟಿ ನೀಡಿದ್ದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಅವರಿಗೆ ರೈತರು ತಮ್ಮ ಬಟ್ಟೆಗಳಿಗೆ ಅಂಟಿಕೊಳ್ಳುವ ಕಪ್ಪುದೂಳು ತೋರಿಸಿದರು ಪ್ರಜಾವಾಣಿ ಚಿತ್ರ

ಕೆಲಸಗಾರರನ್ನು ಓಡಿಸಿದ ಗ್ರಾಮಸ್ಥರು

ನರೇಂದ್ರಸ್ವಾಮಿ ಅವರ ಭೇಟಿ ವಿಷಯ ತಿಳಿದು ಕೊಪ್ಪಳ ತಾಲ್ಲೂಕಿನ ಕಾಸನಖಂಡಿ ಗ್ರಾಮ ಸಮೀಪದ, ಕಾರ್ಖಾನೆಗಳ ಕೆಲ ಕಾರ್ಮಿಕ ಮಹಿಳೆಯರು, ‘ದೂಳು ಬರುವುದಿಲ್ಲ. ನಮಗೆ ಕಾರ್ಖಾನೆ ಬೇಕು’ ಎಂದು ಹೇಳಲು ಬಂದಿದ್ದರು.

‘ನಾವು ನಿತ್ಯ ನರಕಯಾತನೆ ಅನುಭವಿಸುತ್ತಿದ್ದರೆ, ನೀವು ಕಾರ್ಖಾನೆಯ ಪರ ವಕಾಲತ್ತು ವಹಿಸಲು ಬಂದಿದ್ದೀರಾ’ ಎಂದು ಹಿರೇಬಗನಾಳ ಗ್ರಾಮಸ್ಥರು ತರಾಟೆಗೆ ತೆಗೆದುಕೊಳ್ಳುತ್ತಿದ್ದಂತೆ ಮಹಿಳೆಯರು ಅಲ್ಲಿಂದ ಕಾಲ್ಕಿತ್ತರು.

ಸಿಇಸಿ ಪದಚ್ಯುತಿಗೆ ನೋಟಿಸ್ ಸಲ್ಲಿಕೆ

ಲೋಕಸಭೆಯ 130, ರಾಜ್ಯಸಭೆಯ 63 ಸದಸ್ಯರಿಂದ ನೋಟಿಸ್‌ಗೆ ಸಹಿ

ನವದೆಹಲಿ (ಪಿಟಿಐ): ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸಲು ಕೋರಿ ವಿರೋಧ ಪಕ್ಷಗಳ ಸಂಸದರು ಸಂಸತ್ತಿನ ಉಭಯ ಸದನಗಳಲ್ಲಿ ಶುಕ್ರವಾರ ನೋಟಿಸ್ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಲೋಕಸಭೆಯ 130 ಸದಸ್ಯರು ಮತ್ತು ರಾಜ್ಯಸಭೆಯ 63 ಸದಸ್ಯರು ಈ ನೋಟಿಸ್‌ಗೆ ಸಹಿ ಹಾಕಿದ್ದಾರೆ ಎಂದು ಮೂಲಗಳು ಹೇಳಿವೆ. 'ಇಂಡಿಯಾ' ಒಕ್ಕೂಟದ ಪಕ್ಷಗಳ ಸದಸ್ಯರು ಇದಕ್ಕೆ ಸಹಿ ಮಾಡಿದ್ದಾರೆ. ಎಎಪಿ ಸಹ ಇದಕ್ಕೆ ಬೆಂಬಲ ವ್ಯಕ್ತಪಡಿಸಿದೆ ಎಂದು ಗೊತ್ತಾಗಿದೆ.

ಸಿಇಸಿ ಪದಚ್ಯುತಿಗೆ ಕೋರಿ ನೋಟಿಸ್ ಜಾರಿ ಆಗಿರುವುದು ಇದೇ ಮೊದಲು ಎಂದು ಮೂಲಗಳು ತಿಳಿಸಿವೆ. ಅಧಿಕಾರದಲ್ಲಿ ಪಕ್ಷಪಾತ, ತಾರತಮ್ಯದ ನಡವಳಿಕೆ, ಚುನಾವಣಾ ವಂಚನೆಯ ತನಿಖೆಗೆ ಉದ್ದೇಶಪೂರ್ವಕ ಅಡಚಣೆ ಮಾಡುವುದು, ಸಾಮೂಹಿಕವಾಗಿ ಮತದಾನದ ಹಕ್ಕನ್ನು ನಿರಾಕರಿಸುವುದು ಸೇರಿದಂತೆ ಸಿಇಸಿ ವಿರುದ್ಧ ಏಳು ಆರೋಪಗಳನ್ನು ನೋಟಿಸ್‌ನಲ್ಲಿ ಪಟ್ಟಿ ಮಾಡಲಾಗಿದೆ.

ಆಡಳಿತಾರೂಢ ಬಿಜೆಪಿಗೆ ಸಿಇಸಿ ನೆರವು ನೀಡುತ್ತಿದ್ದಾರೆ. ಪ್ರಮುಖವಾಗಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ ಬಿಜೆಪಿಗೆ ಅನುಕೂಲ ಮಾಡಿಕೊಡುವ ಉದ್ದೇಶ ಹೊಂದಿದ್ದಾರೆ ಎಂದು ಆರೋಪಿಸಲಾಗಿದೆ.

ಎಂಟು ಸದಸ್ಯರ ಅಮಾನತು ಹಿಂಪಡೆಯಲು ಆಗ್ರಹ: ಬಜೆಟ್ ಅಧಿವೇಶನದ ಆರಂಭದಲ್ಲಿ ಅಶಿಸ್ತಿನ ವರ್ತನೆ ಆರೋಪದ ಮೇರೆಗೆ ಅಮಾನತುಗೊಳಿಸಿರುವ ಕಾಂಗ್ರೆಸ್‌ನ ಏಳು ಮತ್ತು ಸಿಪಿಎಂನ ಒಬ್ಬ ಸಂಸದರ ಅಮಾನತನ್ನು ರದ್ದುಗೊಳಿಸುವಂತೆ ವಿರೋಧ ಪಕ್ಷಗಳು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಮತ್ತು ಸರ್ಕಾರವನ್ನು ಒತ್ತಾಯಿಸಿವೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಎಸ್‌ಪಿಯ ಧರ್ಮೇಂದ್ರ ಯಾದವ್, ಎನ್‌ಸಿಪಿ (ಎಸ್‌ಪಿ)ಯ ಸುಪ್ರಿಯಾ ಸುಳೆ, ಡಿಎಂಕೆಯ ಕನಿಮೊಳಿ ಮತ್ತು ಟಿಎಂಸಿಯ ಶತಾಬ್ದಿ ರಾಯ್ ಅವರು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರನ್ನು ಭೇಟಿ ಮಾಡಿ ಸಂಸದರ ಅಮಾನತು ರದ್ದುಗೊಳಿಸುವಂತೆ ಒತ್ತಾಯಿಸಿದರು ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಈ ಕುರಿತು ಸ್ಪೀಕರ್ ಜತೆ ಚರ್ಚಿಸುವುದಾಗಿ ರಿಜಿಜು ಭರವಸೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಕಾಂಗ್ರೆಸ್ ಸಂಸದರಾದ ಅಮರೀಂದರ್ ಸಿಂಗ್ ರಾಜಾ ವಾರಿಂಗ್, ಹೈಬಿ ಈಡನ್, ಟಿಎಂಸಿ ಸಂಸದರಾದ ಡೋಲಾ ಸೇನ್ ಮತ್ತಿತರರು ಎಲ್‌ಪಿಜಿ ಸಿಲಿಂಡರ್ ಸಮಸ್ಯೆ ಮೇಲೆ ಗಮನಸೆಳೆಯಲು ಶುಕ್ರವಾರ ಸಂಸತ್ತಿನ ಆವರಣದಲ್ಲಿ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

'ನೆಹರೂ ಬದುಕಿದ್ದರೆ ಕಾನ್ಶಿರಾಮ್ ಸಿ.ಎಂ ಆಗುತ್ತಿದ್ದರು'

ಲಖನೌ, ಉತ್ತರಪ್ರದೇಶ (ಪಿಟಿಐ): 'ಜವಾಹರಲಾಲ್ ನೆಹರೂ ಬದುಕಿದ್ದರೆ, ಕಾನ್ಶಿರಾಮ್ ಅವರನ್ನು ಕಾಂಗ್ರೆಸ್‌ನಿಂದಲೇ ಮುಖ್ಯಮಂತ್ರಿ ಮಾಡುತ್ತಿದ್ದರು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತಿಳಿಸಿದ್ದಾರೆ.


ಕಾನ್ಶಿರಾಮ್

ದೇಶದ ಮೊದಲ ಪ್ರಧಾನಿಯಾಗಿದ್ದ ನೆಹರೂ ಅವರು 1964ರಲ್ಲಿ ಮೃತಪಟ್ಟಿದ್ದರು. ಕಾನ್ಶಿರಾಮ್ ಅವರು 1978 ರಲ್ಲಿ ಅಖಿಲ ಭಾರತ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ನೌಕರರ ಒಕ್ಕೂಟ (ಬಿಎಎಂಸಿಇಎಫ್) ಅನ್ನು ಸ್ಥಾಪಿಸಿದ್ದರು. 1984ರಲ್ಲಿ ಬಹುಜನ್ ಸಮಾಜ ಪಕ್ಷವನ್ನು ಹುಟ್ಟುಹಾಕಿದ್ದರು.

ಕಾನ್ಶಿರಾಮ್ ಅವರ ಜನ್ಮದಿನಕ್ಕೂ ಮುನ್ನಾ ಲಖನೌದಲ್ಲಿ ಶುಕ್ರವಾರ ನಡೆದ ಸಂವಿಧಾನ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಅಮೆರಿಕದ ಮುಂದೆ ಶರಣಾದ ಮೋದಿ': 'ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಮುಂದೆ ಶರಣಾಗಿದ್ದಾರೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ವಾಗ್ದಾಳಿ ನಡೆಸಿದ್ದಾರೆ.

'ನರೇಂದ್ರ ಮೋದಿ ಮಾನಸಿಕವಾಗಿ ಕುಸಿದಿದ್ದಾರೆ. ಅವರು ಭಾರತದ ಪ್ರಧಾನಿಯಾಗಿ ಕೆಲಸ ಮಾಡುವುದಕ್ಕಿಂತ ಹೆಚ್ಚಾಗಿ ಅಮೆರಿಕಕ್ಕಾಗಿ ದುಡಿಯುತ್ತಿದ್ದಾರೆ' ಎಂದು ಆರೋಪಿಸಿದರು.

5 ಮಂಡಳಿ ಘೋಷಿಸಿದ ಮಮತಾ

ಕೋಲ್ಕತ್ತ (ಪಿಟಿಐ): 'ರಾಜ್ಯದ ಐದು ಸಮುದಾಯಗಳಿಗೆ ಸಾಂಸ್ಕೃತಿಕ ಮತ್ತು ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಲಾಗುವುದು' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶುಕ್ರವಾರ ಘೋಷಿಸಿದ್ದಾರೆ.


ಮಮತಾ ಬ್ಯಾನರ್ಜಿ

ಏಪ್ರಿಲ್‌ನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗೂ ಮುನ್ನ ಈ ಘೋಷಣೆ ಮಾಡಿರುವ ಮಮತಾ ಅವರು, 'ಹೊಸದಾಗಿ ಸ್ಥಾಪನೆಯಾಗುವ ಐದು ಮಂಡಳಿಗಳು ಸಾಂಪ್ರದಾಯಿಕ ಹಕ್ಕು ಕಾಪಾಡುತ್ತವೆ ಮತ್ತು ಈ ಸಮುದಾಯಗಳ ಸಾಮಾಜಿಕ–ಆರ್ಥಿಕ ಬೆಳವಣಿಗೆಯನ್ನು ಖಾತರಿಪಡಿಸುತ್ತವೆ' ಎಂದು ಹೇಳಿದ್ದಾರೆ.

'ಮುಂಡಾ, ಕೋರಾ (ಪರಿಶಿಷ್ಟ ಪಂಗಡ), ಡೋಮ (ಪರಿಶಿಷ್ಟ ಜಾತಿ), ಕುಂಭಕಾರ್, ಸದ್‌ಗೋಪ್ (ಇತರೆ ಹಿಂದುಳಿದ ವರ್ಗ) ಸಮುದಾಯಗಳಿಗೆ ನಮ್ಮ ಸರ್ಕಾರವು ಶೀಘ್ರದಲ್ಲೇ ಸಾಂಸ್ಕೃತಿಕ ಮತ್ತು ಅಭಿವೃದ್ಧಿ ಮಂಡಳಿ ಸ್ಥಾಪಿಸಲು ಉದ್ದೇಶಿಸಿದೆ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಉಲ್ಲೇಖಿಸಿದ್ದಾರೆ.

'2013ರಿಂದಲೂ ನಮ್ಮ ಸರ್ಕಾರವು ದುರ್ಬಲ ಸಮುದಾಯದವರಿಗಾಗಿ ಇಂತಹ ಮಂಡಳಿಗಳನ್ನು ಸ್ಥಾಪಿಸಿದ್ದು, ಅವರ ಸರ್ವತೋಮುಖ ಅಭಿವೃದ್ಧಿಯನ್ನು ಖಾತ್ರಿಪಡಿಸಿದೆ' ಎಂದು ಹೇಳಿದ್ದಾರೆ.

'ಯಾವೊಂದು ಸಮುದಾಯವು ಹಿಂದುಳಿಯದಂತೆ ನೋಡಿಕೊಳ್ಳುವುದು ನಮ್ಮ ಬದ್ಧತೆ. ಎಲ್ಲರ ಮೊಗದಲ್ಲೂ ನಗು ಮೂಡುವಂತೆ ಮಾಡುವ ಸಂಕಲ್ಪ ನಮ್ಮ ಸರ್ಕಾರದ್ದಾಗಿದೆ' ಎಂದು ಹೇಳಿದ್ದಾರೆ.

'ಟ್ರಾನ್ಸ್‌ಜೆಂಡರ್' ತಿದ್ದುಪಡಿ ಮಸೂದೆ ಮಂಡನೆ

ಲಿಂಗತ್ವ ಅಲ್ಪಸಂಖ್ಯಾತರು (ಟ್ರಾನ್ಸ್‌ಜೆಂಡರ್) ಪದಕ್ಕೆ ನಿಖರವಾದ ವ್ಯಾಖ್ಯಾನ ಒದಗಿಸಲು ಮತ್ತು ಅಂತಹವರ ಮೇಲೆ ಉಂಟಾಗುವ ಹಾನಿಯ ತೀವ್ರತೆಗೆ ತಕ್ಕಂತೆ ಶಿಕ್ಷಿಸಲು ಪೂರಕವಾದ ಮಸೂದೆಯನ್ನು ಲೋಕಸಭೆಯಲ್ಲಿ ಶುಕ್ರವಾರ ಮಂಡಿಸಲಾಯಿತು.

'ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು (ಹಕ್ಕುಗಳ ರಕ್ಷಣೆ) ತಿದ್ದುಪಡಿ ಮಸೂದೆಯನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ವೀರೇಂದ್ರ ಕುಮಾರ್ ಪರಿಚಯಿಸಿದರು.

ಕಾನೂನಿನ ಪ್ರಯೋಜನಗಳನ್ನು ತಲುಪಿಸಲು ಟ್ರಾನ್ಸ್‌ಜೆಂಡರ್‌ಗಳ ಸರಿಯಾದ ಗುರುತಿಸುವಿಕೆ ಮತ್ತು ರಕ್ಷಣೆಗೆ ನಿಖರವಾದ ವ್ಯಾಖ್ಯಾನ ಅಗತ್ಯವಿದೆ ಎಂದು ಮಸೂದೆಯಲ್ಲಿ ಹೇಳಲಾಗಿದೆ. ಅಗತ್ಯವಿದ್ದರೆ ತಜ್ಞರ ಸಲಹೆ ಪಡೆಯುವ ಆಯ್ಕೆಯನ್ನು ಮಸೂದೆ ಹೊಂದಿದೆ.

ಕಲಬೆರಕೆ ಹಾಲು: ಸಾವಿನ ಸಂಖ್ಯೆ 14ಕ್ಕೆ

ರಾಜಮಹೇಂದ್ರವರಂ (ಆಂಧ್ರ ಪ್ರದೇಶ) (ಪಿಟಿಐ): ಪೂರ್ವ ಗೋದಾವರಿ ಜಿಲ್ಲೆಯ ರಾಜ ಮಹೇಂದ್ರವರಂನಲ್ಲಿ ಶಂಕಿತ ಕಲಬೆರಕೆ ಹಾಲು ಸೇವನೆ ಪ್ರಕರಣದಲ್ಲಿ ಮೃತಪಟ್ಟವರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ. ಆರು ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



'ಮೃತರಾದ 14 ಮಂದಿ ಕೂಡ ವಿಷಕಾರಿ ಏಥೆನಾಲ್ ಗ್ಲೈಕಾಲ್ ಸೇರಿದ್ದ ಹಾಲು ಸೇವನೆ ಮಾಡಿದ್ದರಿಂದ ಮೂತ್ರಪಿಂಡ ವೈಫಲ್ಯಕ್ಕೆ ಒಳಗಾಗಿ ಬಹು ಅಂಗಾಂಗ ವೈಫಲ್ಯದಿಂದ ಮೃತಪಟ್ಟಿದ್ದಾರೆ ಎಂದು ಪ್ರಯೋಗಾಲಯದ ವರದಿಯಲ್ಲಿ ಕಂಡುಬಂದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಬರಿಮಲೆಯ ದೇಗುಲಕ್ಕೆ ಮಹಿಳೆಯರ ಪ್ರವೇಶ ಕುರಿತು ಸಿಪಿಎಂ ಹೇಳಿಕೆ

'ಕೇರಳ ಸರ್ಕಾರದಿಂದ ಸೂಕ್ತ ನಿರ್ಧಾರ'

ತಿರುವನಂತಪುರ (ಪಿಟಿಐ): ಶಬರಿಮಲೆ ಅಯ್ಯಪ್ಪ ದೇಗುಲವನ್ನು ಪ್ರವೇಶಿಸಲು ಮಹಿಳೆಯರಿಗೆ ಅವಕಾಶ ನೀಡಬೇಕೆ ಎಂಬುದಕ್ಕೆ ಸಂಬಂಧಿಸಿದಂತೆ, ಕಾನೂನು ಹಾಗೂ ಸಾಂವಿಧಾನಿಕ ಅಂಶಗಳನ್ನು ಪರಿಶೀಲಿಸಿದ ನಂತರ ಸೂಕ್ತ ಪ್ರತಿಕ್ರಿಯೆ ನೀಡಬೇಕು ಎಂದು ಎಲ್‌ಡಿಎಫ್ ಸರ್ಕಾರವು ನಿರ್ಧರಿಸಿದೆ ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಎಂ.ವಿ. ಗೋವಿಂದನ್ ಅವರು ಶುಕ್ರವಾರ ತಿಳಿಸಿದ್ದಾರೆ.

'ಸುಪ್ರೀಂ ಕೋರ್ಟ್ ಏಳು ಪ್ರಶ್ನೆಗಳಿಗೆ ರಾಜ್ಯ ಸರ್ಕಾರದ ಪ್ರತಿಕ್ರಿಯೆ ಕೋರಿದೆ. ಅದರಲ್ಲಿ ಅಯ್ಯಪ್ಪನ ಸನ್ನಿಧಿಯನ್ನು ಪ್ರವೇಶಿಸಲು ಮಹಿಳೆಯರಿಗೆ ಅವಕಾಶ ನೀಡಬೇಕೆ ಎಂಬುದು ಇಲ್ಲ' ಎಂದು ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.



'ಇದು ಕೇವಲ ಶಬರಿಮಲೆಗೆ ಸಂಬಂಧಿಸಿದ್ದಲ್ಲ. ಸುಪ್ರೀಂ ಕೋರ್ಟ್‌ನ ಮುಂದಿರುವ ಸಾಂವಿಧಾನಿಕ ವಿಷಯವಾಗಿದ್ದು, ಎಲ್ಲ ಧರ್ಮಗಳಿಗೆ ಸಂಬಂಧಿಸಿದ್ದು' ಎಂದಿದ್ದಾರೆ.

ಟಿಡಿಬಿ ವಿರೋಧ: ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ 10ರಿಂದ 50 ವರ್ಷದ ಒಳಗಿನ ಮಹಿಳೆಯರಿಗೆ ಪ್ರವೇಶ ಕಲ್ಪಿಸುವುದನ್ನು ವಿರೋಧಿಸಿ ದೇವಸ್ಥಾನದ ಆಡಳಿತ ಮಂಡಳಿಯು ಈಚೆಗೆ ನಿರ್ಧಾರ ಕೈಗೊಂಡಿದೆ.

ತಂತ್ರಿ ಜಾಮೀನು ರದ್ದಿಗೆ ಅರ್ಜಿ

ಕೊಚ್ಚಿ (ಪಿಟಿಐ): ಶಬರಿಮಲೆ ದೇವಾಲಯದ ಚಿನ್ನ ನಾಪತ್ತೆ ಪ್ರಕರಣದ ಆರೋಪಿ ಮುಖ್ಯ ಅರ್ಚಕ ಕಂಡರಾರು ರಾಜೀವರು (ತಂತ್ರಿ) ಅವರಿಗೆ ನೀಡಿರುವ ಜಾಮೀನನ್ನು ರದ್ದುಗೊಳಿಸುವಂತೆ ಕೋರಿ, ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಶುಕ್ರವಾರ ಕೇರಳ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

'ವಾಸ್ತವಾಂಶ, ನಿರ್ದಿಷ್ಟ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಕಂಡರಾರು ರಾಜೀವರು ಅವರಿಗೆ ಜಾಮೀನು ನೀಡಲಾಗಿದೆ' ಎಂದು ಪ್ರತಿಪಾದಿಸಿರುವ ಎಸ್‌ಐಟಿ, ಜಾಮೀನು ರದ್ದುಗೊಳಿಸುವಂತೆ ಕೇಳಿದೆ.

ದೇವಾಲಯದ ಚಿನ್ನ ನಾಪತ್ತೆ ಪ್ರಕರಣದಲ್ಲಿ ಸಾಕ್ಷ್ಯಾಧಾರದ ಕೊರತೆಯ ಕಾರಣ ಕೊಲ್ಲಂನ ವಿಚಾರಣಾ ಆಯುಕ್ತ ಮತ್ತು ವಿಚಕ್ಷಣ ನಾಯಾಲಯದ ವಿಶೇಷ ನ್ಯಾಯಾಧೀಶ ಫೆಬ್ರುವರಿ 18ರಂದು ಆರೋಪಿಯಾದ ಮುಖ್ಯ ಅರ್ಚಕ ಕಂಡರಾರರು ರಾಜೀವರು ಅವರಿಗೆ ಜಾಮೀನು ನೀಡಿದ್ದರು.

ದೇವಾಲಯದ ದ್ವಾರಪಾಲಕ ವಿಗ್ರಹಗಳು ಮತ್ತು ಗರ್ಭಗುಡಿಯ ಬಾಗಿಲು ಚೌಕಟ್ಟುಗಳಿಂದ ಚಿನ್ನವನ್ನು ದುರುಪಯೋಗಪಡಿಸಿಕೊಂಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆ ನಡೆಸುತ್ತಿದೆ.

ಆರ್‌ಎಸ್‌ಎಸ್ ಸಮಾವೇಶ ಆರಂಭ

ಚಂಡೀಗಢ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಉನ್ನತ ಸಮಿತಿ 'ಅಖಿಲ ಭಾರತೀಯ ಪ್ರತಿನಿಧಿ ಸಭಾ'ದ (ಎಬಿಪಿಎಸ್) ಮೂರು ದಿನಗಳ ಸಮಾವೇಶವು ಹರಿಯಾಣದ ಸಮಾಲಖಾದಲ್ಲಿ ಶುಕ್ರವಾರ ಪ್ರಾರಂಭವಾಯಿತು.

ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಹಾಗೂ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರು ಸಭೆಯನ್ನು ಉದ್ಘಾಟಿಸಿದರು. ಕಳೆದ ವರ್ಷ ಸಂಘ ಕೈಗೊಂಡಿದ್ದ ಕಾರ್ಯಗಳು ಹಾಗೂ ಭವಿಷ್ಯದ ಯೋಜನೆಗಳ ಕುರಿತು ಈ ಸಮಾವೇಶದಲ್ಲಿ ಚರ್ಚಿಸಲಾಗುತ್ತದೆ.


ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಆರ್‌ಎಸ್‌ಎಸ್‌ನ 32 ಅಂಗಸಂಸ್ಥೆಗಳ ಅಧ್ಯಕ್ಷರು ಹಾಗೂ ಇತರ ಹಿರಿಯ ಕಾರ್ಯಕರ್ತರು ಸೇರಿದಂತೆ 1,487 ಮಂದಿ ಸಭೆಯಲ್ಲಿ ಭಾಗಿಯಾಗಿದ್ದಾರೆ.

ಸರ್ಕಾರದ ಪ್ರಯತ್ನಗಳಿಂದಾಗಿ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಪರಿಸ್ಥಿತಿ ಕ್ರಮೇಣವಾಗಿ ಸಹಜ ಸ್ಥಿತಿಗೆ ಮರಳುತ್ತಿದೆ. ಮಣಿಪುರದಲ್ಲೂ ಪರಿಸ್ಥಿತಿ ಸ್ಥಿರವಾಗಿದೆ ಎಂದು ಸಂಘವು ಗಮನಿಸಿದೆ. ಹಿಂದೂಗಳ ಹಕ್ಕುಗಳು ಹಾಗೂ ಹಿತಾಸಕ್ತಿಯನ್ನು ಕಾಪಾಡಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನೂ ಕೈಗೊಳ್ಳುವಂತೆ ಸಂಘವು ಅಲ್ಲಿನ ಸರ್ಕಾರಕ್ಕೆ ಒತ್ತಾಯಿಸಿತು ಎಂದು ಸಂಘದ ಮುಖಂಡರು ತಿಳಿಸಿದರು.

ಸಂಘದ ಶತಮಾನೋತ್ಸವದ ಅಂಗವಾಗಿ ಈ ವರ್ಷ ಆಯೋಜಿಸಿದ ಕಾರ್ಯಕ್ರಮಗಳು ಹಾಗೂ ಯೋಜನೆಗಳ ಕುರಿತು ಹಾಗೂ ದೇಶದ ಸ್ಥಿತಿಗತಿಯ ಕುರಿತು ಚರ್ಚಿಸಲಾಗುವುದು ಎಂದರು.

'10 ಕೋಟಿಗೂ ಹೆಚ್ಚು ಮನೆ ತಲುಪಿದ್ದೇವೆ'

ಈ ವರ್ಷ ಶಾಖೆಗಳ ವಿಸ್ತರಣೆ ಹಾಗೂ ಸಾರ್ವಜನಿಕ ಸಂಪರ್ಕ ಅಭಿಯಾನಗಳ ಮೇಲೆ ವಿಶೇಷ ಒತ್ತು ನೀಡಲಾಗುತ್ತಿದೆ. 'ಗೃಹ ಸಂಪರ್ಕ' (ಸಾಮೂಹಿಕ ಸಂಪರ್ಕ) ಕಾರ್ಯಕ್ರಮದ ಅಡಿಯಲ್ಲಿ ದೇಶದಾದ್ಯಂತ 10 ಕೋಟಿಗೂ ಹೆಚ್ಚಿನ ಮನೆಗಳನ್ನು ತಲುಪಿದ್ದೇವೆ. 55,000ಕ್ಕೂ ಹೆಚ್ಚು ಮುಸ್ಲಿಂ ಮತ್ತು 54,000 ಕ್ರಿಶ್ಚಿಯನ್ ಮನೆಗಳನ್ನು ಸಂಪರ್ಕಿಸಲಾಗಿದೆ. ಬುಡಕಟ್ಟು ಪ್ರದೇಶಗಳನ್ನೂ ತಲುಪಿದ್ದೇವೆ. ನಾವು ಹೋದಲ್ಲೆಲ್ಲಾ ಆತ್ಮೀಯ ಸ್ವಾಗತ ದೊರೆತಿದೆ ಎಂದು ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರಚಾರ ವಿಭಾಗದ ಮುಖ್ಯಸ್ಥ ಸುನೀಲ್ ಅಂಬೇಕರ್ ಹಾಗೂ ಜಂಟಿ ಪ್ರಧಾನ ಕಾರ್ಯದರ್ಶಿ ಸಿ.ಆರ್ ಮುಕುಂದ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ಸುನೀಲ್ ಅಂಬೇಕರ್

ದೇಶದಲ್ಲಿ 36,000ಕ್ಕಿಂತ ಹೆಚ್ಚು ಕಡೆ ಹಿಂದೂ ಸಮ್ಮೇಳನಗಳನ್ನು ನಡೆಸಲಾಗಿದೆ. ಸಾಮಾಜಿಕ ಸಾಮರಸ್ಯ, ಕುಟುಂಬದ ಮೌಲ್ಯಗಳ ಸಂರಕ್ಷಣೆ, ಪರಿಸರ ಸಂರಕ್ಷಣೆ, ಸ್ವಾವಲಂಬನೆ, ನಾಗರಿಕ ಮತ್ತು ಸಂವಿಧಾನಗಳ ಕರ್ತವ್ಯಗಳ ಪಾಲನೆಯನ್ನು ಒಳಗೊಂಡಿರುವ ಆರ್‌ಎಸ್‌ಎಸ್‌ನ 'ಪಂಚ ಪರಿವರ್ತನ' ಉಪಕ್ರಮದ ಬಗ್ಗೆ ಅವರು ಮಾತನಾಡಿದರು.

ಮುಟ್ಟಿನ ರಜೆ ನೀತಿ: ಸುಪ್ರೀಂ ಕೋರ್ಟ್ ಕಳವಳ

ಒಂದನೇ ಪುಟದಿಂದ...

ಅಲ್ಲದೇ 'ಬಹುಮುಖ್ಯವಾಗಿ ಯುವತಿಯರಲ್ಲಿ ತಾವು ಕೀಳು ಎಂಬ ಭಾವನೆ ಮೂಡದಿರುವಂತೆ ನೋಡಿಕೊಳ್ಳಬೇಕು' ಎಂದಿದೆ.

ಅರ್ಜಿದಾರರ ಪರವಾಗಿ ಹಾಜರಾದ ವಕೀಲ ಎಂ.ಆರ್ ಶಂಶಾದ್ ಅವರು, 'ಈಗಾಗಲೇ ಕರ್ನಾಟಕ, ಒಡಿಶಾ ರಾಜ್ಯಗಳು ಮತ್ತು ಕೆಲವು ಸಂಸ್ಥೆಗಳು ಮುಟ್ಟಿನ ರಜೆಯನ್ನು ನೀಡಲು ಕ್ರಮ ಕೈಗೊಂಡಿವೆ. ಕೇರಳದ ಶಾಲೆಗಳಲ್ಲಿ ಮುಟ್ಟಿನ ಸಂದರ್ಭದಲ್ಲಿ ವಿದ್ಯಾರ್ಥಿನಿಯರಿಗೆ ರಜೆ ನೀಡಲಾಗುತ್ತಿದೆ. ಕೆಲವು ಖಾಸಗಿ ಕಂಪನಿಗಳಲ್ಲಿ ಸ್ವಯಂ ಪ್ರೇರಣೆಯಿಂದ ಮಹಿಳಾ ಉದ್ಯೋಗಿಗಳಿಗೆ ಮುಟ್ಟಿನ ರಜೆಯನ್ನು ನೀಡಲಾಗುತ್ತಿದೆ' ಎಂದು ಪೀಠದ ಗಮನಕ್ಕೆ ತಂದರು.

'ಪುರುಷರೊಂದಿಗೆ ಸರಿಸಮಾನವಾಗಿರಲು ಆಗದಂತಹ ಕೆಲವು ನೈಸರ್ಗಿಕ ಸಮಸ್ಯೆಗಳು ಮಹಿಳೆಯರಿಗೆ ಇವೆ' ಎಂದು ಅರ್ಜಿದಾರರು ಹೇಳಲು ಹೊರಟಿದ್ದಾರೆ. ಈ ಅರ್ಜಿಯ ಹಿಂದೆ ಬೇರೆ ಆಳವಾದ ಉದ್ದೇಶವಿದೆ. ಇದು ಮಹಿಳೆಯರ ಬಗೆಗಿನ ನೈಜ ಕಾಳಜಿಯ ಅರ್ಜಿ ಅಲ್ಲ' ಎಂದು ಅಭಿಪ್ರಾಯಪಟ್ಟ ಪೀಠವು, ಮಹಿಳೆಯರಿಗೆ ವೇತನ ಸಹಿತ ಮುಟ್ಟಿನ ರಜೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ವಿಲೇವಾರಿ ಮಾಡಿತು.

ಮುಟ್ಟಿನ ರಜೆ ನೀತಿಗೆ ಸಂಬಂಧಿಸಿದಂತೆ ಅರ್ಜಿದಾರರು ಈಗಾಗಲೇ ಸಂಬಂಧಿಸಿದ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಹಾಗಾಗಿ, ಈ ಬಗ್ಗೆ ಆದೇಶ ಕೋರಿ ಪದೇ ಪದೇ ಕೋರ್ಟ್ ಮೆಟ್ಟಿಲೇರುವ ಅಗತ್ಯವಿಲ್ಲ ಎಂದೂ ನ್ಯಾಯಪೀಠ ಎಚ್ಚರಿಕೆ ನೀಡಿತು.

'ಉದ್ಯೋಗದಾತರ ಬಗ್ಗೆಯೂ ಯೋಚಿಸಿ'

ಒಂದನೇ ಪುಟದಿಂದ...

ಮುಟ್ಟಿನ ರಜೆ 'ಕಾನೂನಾತ್ಮಕವಾಗಿ ಕಡ್ಡಾಯ' ಎಂದು ಹೇಳಿದರೆ ಯಾರೂ ಮಹಿಳೆಯರಿಗೆ ಕೆಲಸ ಕೊಡಲು ಮುಂದೆ ಬರುವುದಿಲ್ಲ. ಯಾರೂ ಅವರನ್ನು ನ್ಯಾಯಾಂಗ ಅಥವಾ ಸರ್ಕಾರಿ ಕೆಲಸಗಳಿಗೆ ತೆಗೆದುಕೊಳ್ಳುವುದಿಲ್ಲ. ಅವರ ವೃತ್ತಿಜೀವನ ಮುಗಿದೇಹೋಗುತ್ತದೆ. ಹಾಗಾಗಿ, 'ವ್ಯವಹಾರದ ಮಾದರಿ' ದೃಷ್ಟಿಯಿಂದಲೂ ಈ ಸಮಸ್ಯೆಯನ್ನು ನೋಡಬೇಕು ಎಂದು ನ್ಯಾಯಪೀಠ ಹೇಳಿತು.

'ಸ್ವಯಂಪ್ರೇರಿತವಾಗಿ ಮುಟ್ಟಿನ ರಜೆ ನೀಡುವ ಕ್ರಮ ಅತ್ಯುತ್ತಮವಾಗಿದೆ. ಇದು ಸ್ವಾಗತಾರ್ಹ. ಆದರೆ, ಕಾನೂನಿನ ಮೂಲಕ ಇಂತಹ ನಿಬಂಧನೆಗಳನ್ನು ಕಡ್ಡಾಯಗೊಳಿಸುವಾಗ ಎಚ್ಚರ ವಹಿಸಬೇಕು' ಎಂದು ಸಿಜೆಐ ಹೇಳಿದರು.

ರಾಜ್ಯ ರೆಸಾರ್ಟ್‌ನಲ್ಲಿ ಒಡಿಶಾ 'ಕೈ' ಶಾಸಕರು

ಒಂದನೇ ಪುಟದಿಂದ...

ಶಾಸಕರೊಂದಿಗೆ ಹೊರಗಡೆ ಬಂದು ಫೋಟೊ ತೆಗೆಸಿಕೊಂಡರು. ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಹಾಗೂ ಚನ್ನಪಟ್ಟಣ ಶಾಸಕ ಸಿ.ಪಿ.ಯೋಗೇಶ್ವರ್ ಜತೆಗಿದ್ದರು.

ಗೆಲುವಿಗೆ ಬೇಕು 30 ಮತ: ಒಡಿಶಾ ವಿಧಾನಸಭೆ ಸದಸ್ಯ ಬಲ 147 ಆಗಿದೆ. ರಾಜ್ಯಸಭೆಯ 4 ಸ್ಥಾನಗಳಿಗೆ 5 ಮಂದಿ ಸ್ಪರ್ಧಿಸಿದ್ದಾರೆ. ಇದರಲ್ಲಿ ಬಿಜೆಪಿಯ 3, ಬಿಜೆಡಿಯ 1 ಹಾಗೂ ಕಾಂಗ್ರೆಸ್ ಮತ್ತು ಬಿಜು ಜನತಾ ದಳದ (ಬಿಜೆಡಿ) ಅಭ್ಯರ್ಥಿಯಾಗಿ ಒಡಿಶಾ ವೈದ್ಯಕೀಯ ವಿಶ್ವವಿದ್ಯಾಲಯ ಮಾಜಿ ನಿರ್ದೇಶಕ ಡಾ. ದತ್ತೇಶ್ವರ್ ಹೋಟ ಸ್ಪರ್ಧಿಸಿದ್ದಾರೆ.

ಗೆಲುವಿಗೆ ಪ್ರತಿ ಅಭ್ಯರ್ಥಿ 30 ಮತ ಪಡೆಯಬೇಕು. ಸದ್ಯ ಬಿಜೆಡಿಯ 18, ಕಾಂಗ್ರೆಸ್‌ನ 14 ಹಾಗೂ ಸಿಪಿಎಂನ ಒಬ್ಬರು ಸೇರಿ 32 ಮತಗಳು ವಿರೋಧಪಕ್ಷಗಳ ಬಳಿ ಲಭ್ಯವಿವೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

'ಬಿಜೆಪಿಯಿಂದ 'ಕೈ' ಶಾಸಕರಿಗೆ ಆಮಿಷ'

ಶಾಸಕರ ಭೇಟಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, 'ರಾಜ್ಯಸಭೆ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಒಡಿಶಾದಲ್ಲಿ ಆಪರೇಷನ್ ಕಮಲಕ್ಕೆ ಮುಂದಾಗಿದೆ. ನಮ್ಮ ಶಾಸಕರಿಗೆ ವಿವಿಧ ಆಮಿಷ ಒಡ್ಡುತ್ತಿದೆ' ಎಂದು ಆರೋಪಿಸಿದರು. ಹಾಗಾಗಿ, ಮತದಾನದ ದಿನದವರೆಗೆ ಕರ್ನಾಟಕಕ್ಕೆ ಬಂದು ಇರುವುದಾಗಿ ಅಲ್ಲಿನ ಕಾಂಗ್ರೆಸ್ ಅಧ್ಯಕ್ಷ ಭಕ್ತ ಚರಣ್ ದಾಸ್ ಹೇಳಿದರು. ಅದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಕಾಂಗ್ರೆಸ್, ಬಿಜೆಡಿ, ಸಿಪಿಎಂ ಒಮ್ಮತದ ಅಭ್ಯರ್ಥಿ ಕಣಕ್ಕಿಳಿಸಿವೆ. ನಮ್ಮ ಅಭ್ಯರ್ಥಿ ಗೆಲ್ಲಲಿದ್ದು, ಈ ಗೆಲುವು ಇಂಡಿಯಾ ಮೈತ್ರಿಕೂಟಕ್ಕೆ ಬಲ ತುಂಬಲಿದೆ' ಎಂದರು.

ಟ್ರಬಲ್ ಶೂಟರ್ ಆಗಿ ಡಿಕೆಶಿ ಪಾತ್ರ

ಬೆಂಗಳೂರು: ಕಾಂಗ್ರೆಸ್ ಪಕ್ಷ ಸಂಕಷ್ಟಕ್ಕೆ ಸಿಲುಕಿದ ಸನ್ನಿವೇಶಗಳಲ್ಲಿ 'ಆಪತ್ಬಾಂಧವ'ನ ಪಾತ್ರವನ್ನು ಡಿ.ಕೆ.ಶಿವಕುಮಾರ್ ಸಮರ್ಥವಾಗಿ ನಿರ್ವಹಿಸುತ್ತಲೇ ಬಂದಿದ್ದಾರೆ.

2002ರಲ್ಲಿ ಎಸ್.ಎಂ. ಕೃಷ್ಣ ನೇತೃತ್ವದ ಸರ್ಕಾರ ರಾಜ್ಯದಲ್ಲಿತ್ತು. ಆಗ ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸ್‌ರಾವ್ ದೇಶಮುಖ್ ನೇತೃತ್ವದ ಮೈತ್ರಿ ಸರ್ಕಾರವನ್ನು ಅಸ್ಥಿರಗೊಳಿಸುವ ಯತ್ನ ನಡೆದಿತ್ತು. ಶಾಸಕರ ಖರೀದಿ ತಪ್ಪಿಸಲು ಕಾಂಗ್ರೆಸ್‌ನ 40ಕ್ಕೂ ಹೆಚ್ಚು ಶಾಸಕರನ್ನು ಕರೆತಂದು, ಬೆಂಗಳೂರಿನ ರೆಸಾರ್ಟ್‌ನಲ್ಲಿ ರಕ್ಷಿಸಲಾಗಿತ್ತು. ಈ ಹೊಣೆ ಶಿವಕುಮಾರ್ ಹೆಗಲೇರಿತ್ತು.

2017ರಲ್ಲಿ ಸೋನಿಯಾಗಾಂಧಿ ಅವರ ಆಪ್ತ ಅಹಮದ್ ಪಟೇಲ್ ಗುಜರಾತ್‌ನಿಂದ ರಾಜ್ಯಸಭೆಗೆ ಸ್ಪರ್ಧಿಸಿದ್ದರು. ಪಟೇಲ್‌ರನ್ನು ಸೋಲಿಸಲು ಬಿಜೆಪಿ ಯತ್ನಿಸಿತ್ತು. ಆಗ ಆ ಶಾಸಕರ ಕರೆತಂದು, ಬಿಡದಿಯ ಈಗಲ್‌ಟನ್ ರೆಸಾರ್ಟ್‌ನಲ್ಲಿ ರಕ್ಷಿಸಲಾಗಿತ್ತು. ಆಗ ಐ.ಟಿ ದಾಳಿ ನಡೆದಿತ್ತು. ಇದರಿಂದ ಡಿ.ಕೆ. ಶಿವಕುಮಾರ್ ಜೈಲುವಾಸವನ್ನೂ ಅನುಭವಿಸಿದ್ದರು.

ಬಿಹಾರದ ನವಾದಾದಲ್ಲಿ ನಕ್ಸಲ್ ಸೆರೆ

ಪಟ್ನಾ, ಬಿಹಾರ (ಪಿಟಿಐ): ಇಲ್ಲಿನ ನವಾದಾ ಜಿಲ್ಲೆಯಲ್ಲಿ ಶುಕ್ರವಾರ ಬೆಳಿಗ್ಗೆ ನಕ್ಸಲ್ ಒಬ್ಬರನ್ನು ಬಂಧಿಸಲಾಗಿದ್ದು, ಮೂರು ರೈಫಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ವಿಶೇಷ ತನಿಖಾ ತಂಡ, ಜಿಲ್ಲಾ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಪಿಎಲ್‌ಎಫ್‌ಐನ ಸದಸ್ಯ ಅಜಿತ್ ಕುಮಾರ್ ಯಾದವ್ ಅವರನ್ನು ರಜೌಲಿ ಬ್ಲಾಕ್‌ನಲ್ಲಿ ಬಂಧಿಸಲಾಗಿದೆ.



ತಪ್ಪು ಮಾಹಿತಿ ವಿರುದ್ಧ ಕ್ರಮ: ವಿಚಾರಣೆಗೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ತಿರುಪತಿಯ ಲಡ್ಡು ಪ್ರಸಾದದಲ್ಲಿ ಕಲಬೆರಕೆ ತುಪ್ಪ ಬಳಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಸ್ಟರ್ ಹಾಗೂ ಸಾರ್ವಜನಿಕವಾಗಿ ಹೇಳಿಕೆ ನೀಡುವ ಮೂಲಕ ತಪ್ಪು ಮಾಹಿತಿ ನೀಡುತ್ತಿರುವ ವ್ಯಕ್ತಿ ಮತ್ತು ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.


ಈ ವಿಚಾರಕ್ಕೆ ಸಂಬಂಧಿಸಿದಂತೆ ಶುಕ್ರವಾರ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಲ್‌ಮಾಲ್ಯಾ ಬಾಗ್ಚಿ ಅವರನ್ನು ಒಳಗೊಂಡ ನ್ಯಾಯಪೀಠ, 'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ' ಎಂದು ಅರ್ಜಿದಾರರಿಗೆ ತಿಳಿಸಿತು.



'ನೀವು ತಜ್ಞರಾದದ್ದಾದರೂ ಹೇಗೆ? ಅದನ್ನು ಹೋಗಿ ಅಧಿಕಾರಿಗೆ ತಿಳಿಸಿ' ಎಂದು ಅರ್ಜಿದಾರರ ಪರ ವಕೀಲರಿಗೆ ನ್ಯಾಯಪೀಠ ತಿಳಿಸಿತು.

ತನಿಖಾ ಸಂಸ್ಥೆಯು ಏನೇ ಪತ್ತೆಹಚ್ಚಿದರೂ ಅದನ್ನು ನ್ಯಾಯಾಲಯದ ಮುಂದೆ ಮಂಡಿಸಲಾಗುತ್ತದೆ ಎಂದು ಸಿಜೆಐ ತಿಳಿಸಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 23,639
ಇಂದಿನ ಅಂತ್ಯ: 23,151
ದಿನದ ಕನಿಷ್ಠ: 23,112
488

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹480
12 ಕ್ಕೆ ₹72
ಮೈಸೂರು: 100 ಕ್ಕೆ ₹485

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹211.50
ಆರ್‌ಎಸ್‌ಎಸ್-5 ₹205.50
ಗುಡ್ ಲಾಟ್ ₹188

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹493-770
ದ್ವಿತಳಿ (ಬಿ.ವಿ) ₹377-889

ಮುದ್ರೆಮನೆ ಕಾಫಿ
ಎಪಿ ₹22900
ಎಸಿ ₹13100
ಆರ್‌ಪಿ ₹18550
ಆರ್‌ಸಿ ₹9880

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1710 (1720)
ಸೋಯಾ (ರಿಫೈನ್ಡ್) ₹1440 (1430)
ಸೂರ್ಯಕಾಂತಿ (ರಿಫೈನ್ಡ್) ₹1710 (1730)
ಪಾಮೋಲಿನ್ ₹1430 (1425)

ಮರ್ಸಿಡಿಸ್ ಬೆಂಜ್ ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಜರ್ಮನಿ ಮೂಲದ ಐಷಾರಾಮಿ ಕಾರು ತಯಾರಿಕಾ ಕಂಪನಿ ಮರ್ಸಿಡಿಸ್ ಬೆಂಜ್ ಭಾರತದಲ್ಲಿ, ಕಾರುಗಳ ಬೆಲೆಯನ್ನು ಶೇ 2ರಷ್ಟು ಏರಿಕೆ ಮಾಡಿದೆ.

ಪರಿಷ್ಕೃತ ಬೆಲೆ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ.

ಕರೆನ್ಸಿ ಮೌಲ್ಯದಲ್ಲಿನ ಏರಿಳಿತ ಮತ್ತು ತಯಾರಿಕಾ ವೆಚ್ಚದ ಹೆಚ್ಚಳವು ವಾಹನಗಳ ಬೆಲೆ ಏರಿಕೆಗೆ ಕಾರಣ ಎಂದು ಕಂಪನಿ ಶುಕ್ರವಾರ ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)
13-03-2026

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1720 (1730)
ಒಂದು ವಾರದ ಡೆಲಿವರಿ	1715 (1725)
ಪಾಮ್ ವಾರದ ಡೆಲಿವರಿ	1428 (1423)
ಸೂರ್ಯಕಾಂತಿ ಎಣ್ಣೆ ಕಚ್ಚಾ	1690 (1600)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,58,000 (1,59,200)
ಬೆಳ್ಳಿ ಕೆ.ಜಿಗೆ	2,61,000 (2,63,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಷೇರುಪೇಟೆ: ನಿಲ್ಲದ ಕರಡಿ ಕುಣಿತ

ಒಂದೇ ದಿನ ಕರಗಿದ ಹೂಡಿಕೆದಾರರ ಸಂಪತ್ತು ₹10.24 ಲಕ್ಷ ಕೋಟಿ

ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾದ ಸಂಘರ್ಷದ ಪರಿಣಾಮವಾಗಿ ದೇಶದ ಷೇರುಪೇಟೆಗಳಲ್ಲಿ 'ಕರಡಿ ಕುಣಿತ'ವು ಶುಕ್ರವಾರವೂ ಮುಂದುವರಿದಿದೆ. ಇದರಿಂದ ಷೇರುಪೇಟೆ ವಹಿವಾಟಿನಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಶೇ 2ರಷ್ಟು ಕುಸಿದಿವೆ.

ಕಚ್ಚಾ ತೈಲದ ಬೆಲೆ ಏರಿಕೆಯು ಹಣದುಬ್ಬರ ಹೆಚ್ಚಳದ ಆತಂಕ ಉಂಟು ಮಾಡಿದೆ. ವಿದೇಶಿ ಬಂಡವಾಳದ ನಿರಂತರ ಹೊರಹರಿವು ಮತ್ತು ರೂಪಾಯಿ ಮೌಲ್ಯದ ಇಳಿಕೆಯು ಹೂಡಿಕೆದಾರರ ಮೇಲೆ ಪರಿಣಾಮ ಬೀರಿವೆ. ಇವು ಷೇರುಪೇಟೆ ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,470 ಅಂಶ (ಶೇ 1.93ರಷ್ಟು)



ಇಳಿಕೆಯಾಗಿ, 74,563ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ವೇಳೆ 1,579 ಅಂಶ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 488 ಅಂಶ (ಶೇ 2.06ರಷ್ಟು) ಕಡಿಮೆಯಾಗಿ, 23,151ಕ್ಕೆ ಕೊನೆಗೊಂಡಿದೆ.

ಷೇರುಪೇಟೆ ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಶುಕ್ರವಾರದ ವಹಿವಾಟಿನಲ್ಲಿ ₹10.24 ಲಕ್ಷ ಕೋಟಿಯಷ್ಟು ಕರಗಿದೆ.

ಫೆಬ್ರುವರಿ 27ರಿಂದ ಮಾರ್ಚ್ 13ರವರೆಗೆ ಸೆನ್ಸೆಕ್ಸ್ 6,723 ಅಂಶ (ಶೇ 8.27ರಷ್ಟು) ಕುಸಿದಿದೆ. ಇದರಿಂದ ₹33.68 ಲಕ್ಷ ಕೋಟಿ ಸಂಪತ್ತು ಕರಗಿದೆ.

ಲಾರ್ಸನ್ ಆ್ಯಂಡ್ ಟೊಬ್ರೊ, ಟಾಟಾ ಸ್ಟೀಲ್, ಎಸ್‌ಬಿಐ, ಭಾರತ್ ಎಲೆಕ್ಟ್ರಾನಿಕ್ಸ್, ಮಾರುತಿ ಸುಜುಕಿ ಮತ್ತು ಅಲ್ಟ್ರಾಟೆಕ್ ಸಿಮೆಂಟ್‌ನ ಷೇರಿನ ಮೌಲ್ಯದಲ್ಲಿ ಇಳಿಕೆ ಆಗಿದೆ. ಹಿಂದುಸ್ತಾನ್ ಯೂನಿಲಿವರ್ ಮತ್ತು ಭಾರ್ತಿ ಏರ್‌ಟೆಲ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

'ಕಚ್ಚಾ ತೈಲದ ಬೆಲೆ ಏರಿಕೆಯು ಹಣದುಬ್ಬರ, ಚಾಲ್ತಿ ಖಾತೆ ಕೊರತೆ ಹೆಚ್ಚಳ ಮತ್ತು ಕಂಪನಿಗಳ ಲಾಭದ ಮೇಲೆ ಪರಿಣಾಮ ಬೀರುವ ನಿರೀಕ್ಷೆಯನ್ನು ಉಂಟು ಮಾಡಿದೆ. ಇದರಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಗಳಲ್ಲಿ ಹೂಡಿಕೆ ಮಾಡಲು ಮುಂದಾಗಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡವು' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ವೆಲ್ತ್ ಮ್ಯಾನೇಜ್‌ಮೆಂಟ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕಾ ಹೇಳಿದ್ದಾರೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಜಪಾನ್, ಶಾಂಘೈ ಮತ್ತು ಹಾಂಗ್ ಕಾಂಗ್ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇ 0.25ರಷ್ಟು ಏರಿಕೆಯಾಗಿದ್ದು, ಪ್ರತೀ ಬ್ಯಾರಲ್ 100.7 ಡಾಲರ್ ಆಗಿದೆ.

ಮುಖ್ಯಾಂಶಗಳು
- ಫೆ. 27ರಿಂದ ಮಾರ್ಚ್ 13ರವರೆಗೆ ಸೆನ್ಸೆಕ್ಸ್ 6,723 ಅಂಶ ಕುಸಿತ
- ಈ ಅವಧಿಯಲ್ಲಿ ಕರಗಿದ ಹೂಡಿಕೆದಾರರ ಸಂಪತ್ತು ₹33 ಲಕ್ಷ ಕೋಟಿ
- ಪ್ರತೀ ಬ್ಯಾರಲ್ ಬ್ರೆಂಟ್ ಕಚ್ಚಾ ತೈಲದ ದರವು 100.7 ಡಾಲರ್

ಬೆಳ್ಳಿ ಧಾರಣೆ ₹11 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿದಿದೆ.



10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹2 ಸಾವಿರ ಕಡಿಮೆಯಾಗಿ, ₹1,63,200ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹11 ಸಾವಿರ ಇಳಿಕೆಯಾಗಿ, ₹2,65,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಸುದ್ದಿ 2 ನಿಮಿಷ

ಜಿಡಿಪಿ: ಶೇ 7.5ರಷ್ಟು ನಿರೀಕ್ಷೆ-ಫಿಚ್

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 7.5ರಷ್ಟು ಮತ್ತು 2026-27ರಲ್ಲಿ ಶೇ 6.7ರಷ್ಟು ಆಗಬಹುದು ಎಂದು ಫಿಚ್ ರೇಟಿಂಗ್ಸ್ ಸಂಸ್ಥೆಯು ತನ್ನ ಅಂದಾಜನ್ನು ಪರಿಷ್ಕರಿಸಿದೆ.

2025-26ರ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಶೇ 7.4ರಷ್ಟು ಮತ್ತು 2026-27ರಲ್ಲಿ ಶೇ 6.4ರಷ್ಟು ಆಗಲಿದೆ ಎಂದು ಫಿಚ್ ಸಂಸ್ಥೆಯು ಕಳೆದ ವರ್ಷದ ಡಿಸೆಂಬರ್‌ನಲ್ಲಿ ಅಂದಾಜಿಸಿತ್ತು. ದೇಶದಲ್ಲಿ ಗ್ರಾಹಕರು ಹೆಚ್ಚು ವೆಚ್ಚ ಮಾಡುತ್ತಿರುವುದು ಪರಿಷ್ಕರಣೆಗೆ ಕಾರಣ ಎಂದು ತಿಳಿಸಿದೆ.

2026ರ ಕ್ಯಾಲೆಂಡರ್ ವರ್ಷದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಪ್ರತೀ ಬ್ಯಾರಲ್‌ಗೆ ಸರಾಸರಿ 70 ಡಾಲರ್ ಇರುವ ನಿರೀಕ್ಷೆ ಇದೆ ಎಂದು ಹೇಳಿದೆ.

ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಸಂಘರ್ಷವು ಇಂಧನ ಬೆಲೆಗಳಲ್ಲಿ ಭಾರಿ ಅಥವಾ ಶಾಶ್ವತ ಏರಿಕೆಗೆ ಕಾರಣವಾಗುವುದಿಲ್ಲ ಎಂಬ ಅಂದಾಜಿನ ಮೇರೆಗೆ, 2026ರಲ್ಲಿ ಜಾಗತಿಕ ಜಿಡಿಪಿ ಬೆಳವಣಿಗೆ ಶೇ 2.6ರಷ್ಟು ಆಗಬಹುದು ಎಂದು ಅಂದಾಜಿಸಿರುವುದಾಗಿ ಫಿಚ್ ತನ್ನ ಜಾಗತಿಕ ಆರ್ಥಿಕ ಮುನ್ನೋಟದ ವರದಿಯಲ್ಲಿ ತಿಳಿಸಿದೆ.

ಕಚ್ಚಾ ತೈಲ ಬೆಲೆಯು ಪ್ರತಿ ಬ್ಯಾರಲ್‌ಗೆ 100 ಡಾಲರ್‌ಗೆ ತಲುಪಿ ಅಲ್ಲಿಯೇ ಉಳಿದರೆ ಜಾಗತಿಕ ಬೆಳವಣಿಗೆಯ ಮೇಲೆ ಪರಿಣಾಮ ಬೀರಲಿದೆ ಎಂದು ಫಿಚ್ ರೇಟಿಂಗ್ಸ್‌ನ ಮುಖ್ಯ ಅರ್ಥಶಾಸ್ತ್ರಜ್ಞ ಬ್ರಿಯಾನ್ ಕೌಲ್ಟನ್ ಹೇಳಿದ್ದಾರೆ.



ಹೆಚ್ಚುತ್ತಿರುವ ಹಣದುಬ್ಬರವು ಜನರ ವೆಚ್ಚ ಮಾಡುವುದನ್ನು ಮಿತಿಗೊಳಿಸಲಿದೆ. ಇದರಿಂದ 2026-27ರ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಜಿಡಿಪಿ ಬೆಳವಣಿಗೆ ನಿಧಾನವಾಗುವ ನಿರೀಕ್ಷೆ ಇದೆ ಎಂದು ಹೇಳಿದೆ.

5 ಕೋಟಿ ಟನ್ ಕಬ್ಬಿಣದ ಅದಿರು ಉತ್ಪಾದಿಸಿದ ಎನ್‌ಎಂಡಿಸಿ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದ ಆರಂಭದಿಂದ ಇದುವರೆಗೆ ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮವು (ಎನ್‌ಎಂಡಿಸಿ) 5 ಕೋಟಿ ಟನ್ ಕಬ್ಬಿಣದ ಅದಿರನ್ನು ಉತ್ಪಾದನೆ ಮಾಡಿದೆ.

ಒಂದೇ ಆರ್ಥಿಕ ವರ್ಷದಲ್ಲಿ 5 ಕೋಟಿಗೂ ಹೆಚ್ಚು ಟನ್ ಕಬ್ಬಿಣದ ಅದಿರನ್ನು ಉತ್ಪಾದನೆ ಮಾಡಿದ ದೇಶದ ಮೊದಲ ಗಣಿಗಾರಿಕಾ ಕಂಪನಿಯಾಗಿ ಎನ್‌ಎಂಡಿಸಿ ಇತಿಹಾಸ ನಿರ್ಮಿಸಿದೆ ಎಂದು ಕಂಪನಿ ತಿಳಿಸಿದೆ.

1958ರಲ್ಲಿ ಆರಂಭವಾದ ಎನ್‌ಎಂಡಿಸಿ, 1978ರಲ್ಲಿ 1 ಕೋಟಿ ಟನ್ ಕಬ್ಬಿಣದ ಅದಿರನ್ನು ಉತ್ಪಾದಿಸಿತ್ತು. ಇದೀಗ ಇದಕ್ಕೆ ಐದು ಪಟ್ಟು ಹೆಚ್ಚು ಉತ್ಪಾದನೆಯಾಗಿದೆ ಎಂದು ತಿಳಿಸಿದೆ.

'5 ಕೋಟಿ ಟನ್ ಕಬ್ಬಿಣದ ಅದಿರನ್ನು ಉತ್ಪಾದಿಸುವ ಮೂಲಕ ಎನ್‌ಎಂಡಿಸಿ ಗಮನಾರ್ಹ ಸಾಧನೆ ಮಾಡಿದೆ. ಈ ಮೈಲಿಗಲ್ಲು ಕಂಪನಿಯ ಕಾರ್ಯಾಚರಣೆಯನ್ನು ಮತ್ತಷ್ಟು ಬಲಪಡಿಸಲಿದೆ' ಎಂದು ಎನ್‌ಎಂಡಿಸಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಅಮಿತವ ಮುಖರ್ಜಿ ಹೇಳಿದ್ದಾರೆ.

ಇಂಧನ ಶುಲ್ಕ ವಿಧಿಸಲಿರುವ ಇಂಡಿಗೊ

ನವದೆಹಲಿ (ಪಿಟಿಐ): ದೇಶದ ವಿಮಾನಯಾನ ಕಂಪನಿ ಇಂಡಿಗೊ, ದೇಶ ಮತ್ತು ಅಂತರ ರಾಷ್ಟ್ರೀಯ ವಿಮಾನದ ಟಿಕೆಟ್‌ಗಳ ಮೇಲೆ ಇಂಧನ ಶುಲ್ಕವಾಗಿ ₹425ರಿಂದ ₹2,300ರವರೆಗೆ ವಿಧಿಸಿದೆ. ಈ ಶುಲ್ಕವು ಶನಿವಾರದಿಂದಲೇ ಜಾರಿಗೆ ಬರಲಿದೆ.

ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಸಂಘರ್ಷದಿಂದ ವಿಮಾನ ಇಂಧನ ದರದಲ್ಲಿ ಏರಿಕೆಯಾಗಿದೆ. ಹೀಗಾಗಿ ಇಂಧನ ಶುಲ್ಕ ವಿಧಿಸಲಾಗುತ್ತಿದೆ ಎಂದು ಕಂಪನಿ ಶುಕ್ರವಾರ ತಿಳಿಸಿದೆ.

ದೇಶಿ ವಾಯು ಮಾರ್ಗಗಳಲ್ಲಿ ಸಂಚರಿಸುವ ಇಂಡಿಗೊ ವಿಮಾನಗಳಿಗೆ ಇಂಧನ ಶುಲ್ಕವಾಗಿ ₹425 ವಿಧಿಸಲಾಗುವುದು. ಪಶ್ಚಿಮ ಏಷ್ಯಾಕ್ಕೆ ಪ್ರಯಾಣಿಸುವ ಇಂಡಿಗೊದ ವಿಮಾನದ ಟಿಕೆಟ್ ಬೆಲೆಯಲ್ಲಿ ₹900 ಹೆಚ್ಚಳ ಮಾಡಲಾಗಿದೆ.

ಆಗ್ನೇಯ ಏಷ್ಯಾ ಮತ್ತು ಚೀನಾ, ಆಫ್ರಿಕಾಕ್ಕೆ ₹1,800 ಮತ್ತು ಯುರೋಪ್‌ಗೆ ಪ್ರಯಾಣಿಸುವ ಇಂಡಿಗೊ ವಿಮಾನಗಳ ಟಿಕೆಟ್ ಮೇಲೆ ₹2,300 ಇಂಧನ ಶುಲ್ಕ ವಿಧಿಸಲಾಗಿದೆ ಎಂದು ತಿಳಿಸಿದೆ.

ನೋಯ್ಡಾ ಬಳಿ ಎಂಆರ್‌ಒ ಘಟಕ

ಮುಂಬೈ (ಪಿಟಿಐ): ನೋಯ್ಡಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಹಯೋಗದೊಂದಿಗೆ ವಿಮಾನ ನಿರ್ವಹಣೆ, ದುರಸ್ತಿ ಮತ್ತು ಕೂಲಂಕಷ ಪರೀಕ್ಷಾ (ಎಂಆರ್‌ಒ) ಘಟಕವನ್ನು ಉತ್ತರ ಪ್ರದೇಶದ ಜೇವರ್‌ನಲ್ಲಿ ಸ್ಥಾಪಿಸಲಾಗುವುದು ಎಂದು ದೇಶದ ವಿಮಾನಯಾನ ಸಂಸ್ಥೆ ಆಕಾಸಾ ಏರ್ ಶುಕ್ರವಾರ ತಿಳಿಸಿದೆ.

ಈ ಘಟಕವನ್ನು ಆಕಾಸಾ ಏರ್ ನಿರ್ವಹಣೆ ಮಾಡಲಿದ್ದು, ಸುಧಾರಿತ ಎಂಆರ್‌ಒ ಸೇವೆಗಳನ್ನು ಈ ಘಟಕವು ಒದಗಿಸಲಿದೆ.

ದೇಶದ ವಿಮಾನಯಾನ ವಲಯದ ಮೂಲಸೌಕರ್ಯವನ್ನು ಬಲಪಡಿಸುವ ಉದ್ದೇಶ ಹೊಂದಲಾಗಿದೆ. ಜೊತೆಗೆ ದೇಶದ ಪ್ರಮುಖ ಎಂಆರ್‌ಒ ಕೇಂದ್ರವನ್ನಾಗಿ ನೋಯ್ಡಾದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮಾಡುವ ಗುರಿ ಹೊಂದಲಾಗಿದೆ ಎಂದು ಹೇಳಿದೆ.

ಈ ಪಾಲುದಾರಿಕೆಯು ದೇಶದ ಎಂಆರ್‌ಒ ಸಾಮರ್ಥ್ಯವನ್ನು ಹೆಚ್ಚಿಸುವುದು ಮಾತ್ರವಲ್ಲದೆ, ಈ ಪ್ರದೇಶದಲ್ಲಿ ಉದ್ಯೋಗಾವಕಾಶಗಳ ಸೃಷ್ಟಿ ಮತ್ತು ಕೌಶಲ ಅಭಿವೃದ್ಧಿ ಮಾಡಲಿದೆ ಎಂದು ನೋಯ್ಡಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ಕ್ರಿಸ್ಟೋಫ್ ಸ್ನೆಲ್‌ಮನ್ ಹೇಳಿದ್ದಾರೆ.



ಹಟ್ಟಿ ಚಿನ್ನದ ಗಣಿ ಕಂಪನಿ ಅಧ್ಯಕ್ಷ ಜೆ.ಟಿ.ಪಾಟೀಲ ಅವರು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶುಕ್ರವಾರ ಲಾಭಾಂಶದ ಚೆಕ್ ನೀಡಿದರು

ಹಟ್ಟಿ ಚಿನ್ನದ ಗಣಿ: ಲಾಭಾಂಶ ವಿತರಣೆ

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದ ಗಣಿ (ರಾಯಚೂರು ಜಿಲ್ಲೆ): ಇಲ್ಲಿನ ಚಿನ್ನದ ಗಣಿ ಕಂಪನಿ 2024-25ನೇ ಸಾಲಿನಲ್ಲಿ ₹436 ಕೋಟಿ ಲಾಭ ಗಳಿಸಿದ್ದು, ಅದರಲ್ಲಿ ₹97.25 ಕೋಟಿ ಲಾಭಾಂಶವನ್ನು ರಾಜ್ಯ ಸರ್ಕಾರಕ್ಕೆ ನೀಡಿದೆ.

ಜೊತೆಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ₹5 ಕೋಟಿಯನ್ನೂ ಕಂಪನಿ ನೀಡಿದೆ.

ಬೆಂಗಳೂರಿನಲ್ಲಿ ಕಂಪನಿ ಅಧ್ಯಕ್ಷ ಜೆ.ಟಿ.ಪಾಟೀಲ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಸಂಬಂಧ ಚೆಕ್‌ಗಳನ್ನು ಹಸ್ತಾಂತರಿಸಿದರು.

ಗಣಿ ಮತ್ತು ಭೂವಿಜ್ಞಾನ ಇಲಾಖೆ ಕಾರ್ಯದರ್ಶಿ ರೋಹಿಣಿ ಸಿಂಧೂರಿ, ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಚಿನ್ನದ ಗಣಿ ಕಂಪನಿ ವ್ಯವಸ್ಥಾಪಕ ನಿರ್ದೇಶಕಿ ಶಿಲ್ಪಾ ಹಾಜರಿದ್ದರು.

ಎಲ್‌ಪಿಜಿ ಕೊರತೆಯ ನೆಪವೊಡ್ಡಿ ಇಂದಿರಾ ಕ್ಯಾಂಟೀನ್ ಮುಚ್ಚುವ ಸರ್ಕಾರದ ನಿರ್ಧಾರ ಸರಿಯೇ?
• ಸರಿ • ತಪ್ಪು • ತಟಸ್ಥ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ರಷ್ಯಾ ತೈಲ ಖರೀದಿ: ನಿರ್ಬಂಧ ಸಡಿಲಿಸಿದ ಅಮೆರಿಕ

ವಾಷಿಂಗ್ಟನ್ (ಪಿಟಿಐ): ಜಾಗತಿಕವಾಗಿ ತೈಲ ಬೆಲೆ ಏರುತ್ತಿರುವ ಹಿನ್ನೆಲೆಯಲ್ಲಿ ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕದ ಆಡಳಿತವು ರಷ್ಯಾದಿಂದ ತೈಲ ಖರೀದಿಸಲು ಇತರ ದೇಶಗಳ ಮೇಲೆ ಹೇರಿದ್ದ ನಿರ್ಬಂಧವನ್ನು ತಾತ್ಕಾಲಿಕವಾಗಿ ಸಡಿಲಗೊಳಿಸಿದೆ.

ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳ್ಳುವ ಲಕ್ಷಣಗಳು ತಕ್ಷಣಕ್ಕೆ ಗೋಚರಿಸದ ಕಾರಣ ಅಮೆರಿಕ ಈ ನಿರ್ಧಾರಕ್ಕೆ ಬಂದಿದೆ. ಈ ನಿಟ್ಟಿನಲ್ಲಿ ಭಾರತದ ಮೇಲಿನ ನಿರ್ಬಂಧವನ್ನು ಇತ್ತೀಚೆಗಷ್ಟೇ (ಮಾ. 5ರಂದು) ಸಡಿಲಿಸಿದ್ದ ಅಮೆರಿಕ, ಈಗ ಅದೇ ರೀತಿ ಇತರ ದೇಶಗಳಿಗೂ ಸಡಿಲಿಕೆಯನ್ನು ವಿಸ್ತರಿಸಿದೆ.

ಈಗಾಗಲೇ ರಷ್ಯಾದ ಹಲವು ತೈಲ ಹಡಗುಗಳು ಸಮುದ್ರದಲ್ಲಿ ಸಿಲುಕಿದ್ದು, ಅವುಗಳಿಂದ ಇತರ ದೇಶಗಳು ತೈಲ ಖರೀದಿಸಬಹುದು ಎಂದು ಅದು ಹೇಳಿದೆ.

ಅಂತರರಾಷ್ಟ್ರೀಯ ಇಂಧನ ಮಾರುಕಟ್ಟೆಯಲ್ಲಿ ಸ್ಥಿರತೆಯನ್ನು ಉತ್ತೇಜಿಸಲು ಅಮೆರಿಕ ಕೆಲ ನಿರ್ಣಾಯಕ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಇರಾನ್ ಬೆದರಿಕೆಯಿಂದ ಉಂಟಾಗಿರುವ ಅಸ್ಥಿರತೆಯನ್ನು ಸರಿಪಡಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಅಮೆರಿಕದ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಲ್ಪಾವಧಿಯ ಈ ಕ್ರಮವು ಈಗಾಗಲೇ ಸಾಗಣೆಯಲ್ಲಿರುವ ತೈಲಕ್ಕೆ ಮಾತ್ರ ಅನ್ವಯಿಸುತ್ತದೆ. ರಷ್ಯಾಕ್ಕೆ ಇದರಿಂದ ಹೆಚ್ಚಿನ ಆರ್ಥಿಕ ಲಾಭ ಆಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)
ದೊಡ್ಡ ₹1400-2000
ಮಧ್ಯಮ ₹800-1400
ಸಣ್ಣ ₹400-800

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹20000-20000
ಮಧುಗಿರಿ ₹11500-13000

ಅಡಿಕೆ ಧಾರಣೆ

ಮಾರುಕಟ್ಟೆ	ತಳಿ	ಧಾರಣೆ
ಕುಮಟಾ	ಚಾಲಿ	46899-49599
	ಚಿಪ್ಪು	28569-35869
	ಕೋಕ	15689-34089
	ಫ್ಯಾಕ್ಟರಿ	12089-28600
	ಹೊಸಚಾಲಿ	41599-47319
ಪುತ್ತೂರು	ಕೋಕ	20000-35000
	ಹೊಸತು	26000-46000
ಶಿವಮೊಗ್ಗ	ಸರಕು	50859-91700
	ಬೆಟ್ಟೆ	50119-62910
	ರಾಶಿ	47089-54869
	ಗೊರಬಲು	19000-401
ಶಿರಸಿ	ಬೆಟ್ಟೆ	41298-50205
	ಬಿಳಿಗೋಟು	28400-42699
	ಚಾಲಿ	43218-47501
	ಕೆಂಪುಗೋಟು	22698-38298
	ರಾಶಿ	50005-55218
ಯಲ್ಲಾಪುರ	ಅಪಿ	59999-63399
	ಬಿಳಿಗೋಟು	16000-42811
	ಕೋಕ	12909-33299
	ಹಳೆಚಾಲಿ	48889-49899
	ಹೊಸಚಾಲಿ	38011-47599
	ಕೆಂಪುಗೋಟು	23009-39399
	ರಾಶಿ	40016-58630
	ತಟ್ಟಿಬೆಟ್ಟೆ	35899-50219

ಇರಾನ್ ಸುದ್ದಿ ಪ್ರಸಾರ: ಸಿಎನ್‌ಎನ್ ವಿರುದ್ಧ ಅಮೆರಿಕ ಟೀಕೆ

ವಾಷಿಂಗ್ಟನ್ (ಎಪಿ): ಇರಾನ್‌ನ ಹೊಸ ಪರಮೋಚ್ಚ ನಾಯಕ ಆಯತೊಲ್ಲಾ ಮೊಜ್ತಬಾ ಖಮೇನಿ ಅವರ ಸಾರ್ವಜನಿಕ ಭಾಷಣದ ಒಂದು ಭಾಗವನ್ನು ಪ್ರಸಾರ ಮಾಡಿದ್ದಕ್ಕಾಗಿ ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕ ಸರ್ಕಾರ ಸಿಎನ್‌ಎನ್ ವಾಹಿನಿಯನ್ನು ತೀವ್ರವಾಗಿ ಖಂಡಿಸಿದೆ.

ಇರಾನ್ ಮೇಲೆ ದಾಳಿ ನಡೆಸುತ್ತಿರುವ ಸಮಯದಲ್ಲಿ ಅಮೆರಿಕ ವಿರೋಧಿ ನಿಲುವುಗಳನ್ನು ಬಿತ್ತರಿಸಿದ್ದಕ್ಕಾಗಿ, ಮೂರು ದಿನಗಳಲ್ಲಿ ಎರಡನೇ ಬಾರಿಗೆ ಸಿಎನ್‌ಎನ್ ನೆಟ್‌ವರ್ಕ್ ವಿರುದ್ಧ ಅಮೆರಿಕ ಹರಿಹಾಯ್ದಿದೆ. 'ಇರಾನ್‌ನ ಸರ್ಕಾರಿ ಟಿ.ವಿಯ ಸುಳ್ಳು ಸುದ್ದಿಯನ್ನು ಸಿಎನ್‌ಎನ್ ನಾಲ್ಕು ನಿಮಿಷಗಳ ಕಾಲ ನಿರಂತರವಾಗಿ ತನ್ನ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರ ಮಾಡಿದೆ' ಎಂದು ಶ್ವೇತಭವನವು ಹೇಳಿದೆ.

ಟೆಹರಾನ್ ಮೇಲೆ ತೀವ್ರ ದಾಳಿ

ವಾರ್ಷಿಕ 'ಖುದ್ಸ್ ದಿನ' ರ‍್ಯಾಲಿಯ ತಾಣದಲ್ಲಿ ಭಾರಿ ಸ್ಫೋಟ

ದುಬೈ (ಎಪಿ/ ಎಎಫ್‌ಪಿ): ಇರಾನ್‌ನ ರಾಜಧಾನಿ ಟೆಹರಾನ್‌ನಲ್ಲಿ ಶುಕ್ರವಾರ 'ಖುದ್ಸ್ ದಿನ' ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ಸಾವಿರಾರು ಮಂದಿ ಸೇರಿದ್ದ ಸ್ಥಳದಲ್ಲಿ ಭಾರಿ ಸ್ಫೋಟ ಸಂಭವಿಸಿದೆ.

ಸಾವು-ನೋವಿನ ಬಗ್ಗೆ ತಕ್ಷಣಕ್ಕೆ ಮಾಹಿತಿ ಲಭ್ಯವಾಗಿಲ್ಲ. ಈ ಪ್ರದೇಶದಲ್ಲಿ ದಾಳಿ ನಡೆಯಲಿದೆ ಎಂದು ಇಸ್ರೇಲ್ ಸೇನೆ ಎಚ್ಚರಿಕೆ ನೀಡಿತ್ತು ಎಂದು ಸರ್ಕಾರಿ ಸ್ವಾಮ್ಯದ ಸುದ್ದಿವಾಹಿನಿ ವರದಿ ಮಾಡಿದೆ.

ಇಂಕ್ವಿಲಾಬ್ ಸ್ಟ್ರೀಟ್‌ನಲ್ಲಿ ಟೆಹರಾನ್ ವಿಶ್ವವಿದ್ಯಾಲಯದ ಬಳಿಯ ಫಿರ್ದೋಸಿ ಚೌಕದಲ್ಲಿ ಸ್ಫೋಟ ಸಂಭವಿಸಿದೆ. ಈ ಸ್ಥಳವು 'ಖುದ್ಸ್' ಅಥವಾ 'ಜೆರುಸಲೇಂ' ದಿನದ ಅಂಗವಾಗಿ ನಡೆದ ರ‍್ಯಾಲಿಯ ಕೇಂದ್ರ ಸ್ಥಾನ ಆಗಿತ್ತು.

ಇಸ್ರೇಲ್ ಮತ್ತು ಅಮೆರಿಕ ಪಡೆಗಳು ರ‍್ಯಾಲಿ ಆರಂಭಕ್ಕೆ ಮುನ್ನ ಟೆಹರಾನ್ನಾದ್ಯಂತ ತೀವ್ರ ವೈಮಾನಿಕ ದಾಳಿ ನಡೆಸಿದ್ದವು. ಈ ದಾಳಿಯ ಹೊರತಾಗಿಯೂ ಸಾವಿರಾರು ಮಂದಿ ಬೀದಿಗಿಳಿದು, 'ಇಸ್ರೇಲ್‌ಗೆ ಸಾವಾಗಲಿ', 'ಅಮೆರಿಕಕ್ಕೆ ಸಾವಾಗಲಿ' ಎಂದು ಘೋಷಣೆ ಕೂಗಿದರು.

'ಖುದ್ಸ್' ರ‍್ಯಾಲಿ ನಡೆಯುತ್ತಿದ್ದ ಸಂದರ್ಭದಲ್ಲಿ ಯಾವ ತಾಣವನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ ಎಂಬ ಬಗ್ಗೆ ಇಸ್ರೇಲ್ ಸೇನೆ ಯಾವುದೇ ಹೇಳಿಕೆ ನೀಡಿಲ್ಲ. ಪ್ರತಿ ವರ್ಷ ನಡೆಯುವ ರ‍್ಯಾಲಿಯಲ್ಲಿ ಇರಾನ್‌ನ ಪ್ರಮುಖ ನಾಯಕರು ಪಾಲ್ಗೊಳ್ಳುವರು.



ದಕ್ಷಿಣ ಲೆಬನಾನ್‌ನ ಅಬ್ಬಾಸಿಯಾ ಪಟ್ಟಣದ ಕಟ್ಟಡವೊಂದನ್ನು ಇಸ್ರೇಲ್ ಸೇನೆ ಗುರಿಯಾಗಿಸಿದ ಕ್ಷಣ –ಎಎಫ್‌ಪಿ ಚಿತ್ರ

ಇರಾನ್‌ನ ನ್ಯಾಯಾಂಗದ ಮುಖ್ಯಸ್ಥ ಗುಲಾಂಹೊಸೇನ್ ಮೊಹ್ಸೆನಿ ಅವರು ರ‍್ಯಾಲಿಯ ತಾಣದಲ್ಲಿ ಸರ್ಕಾರಿ ಸುದ್ದಿವಾಹಿನಿ ಜತೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ಸ್ಫೋಟ ಸಂಭವಿಸಿದೆ. ತಕ್ಷಣವೇ ಅಲ್ಲಿದ್ದ ಅಂಗರಕ್ಷಕರು ಅವರನ್ನು ಸುತ್ತುವರಿದರು. ಈ ವೇಳೆ ತಮ್ಮ ಮುಷ್ಟಿಯನ್ನು ಎತ್ತಿ ತೋರಿಸಿದ ಅವರು, 'ಕ್ಷಿಪಣಿಗಳ ಮಳೆ ಸುರಿದರೂ ನಾವು ಹಿಂದೆ ಸರಿಯುವುದಿಲ್ಲ' ಎಂದು ಹೇಳಿದರು.

ರ‍್ಯಾಲಿಯಲ್ಲಿದ್ದ ಹಿರಿಯ ಭದ್ರತಾ ಅಧಿಕಾರಿ ಅಲಿ ಲಾರೀಜಾನಿ, 'ಇಸ್ರೇಲ್ ನಡೆಸಿದ ದಾಳಿ 'ಅದರ ಹತಾಶೆಯ ಸಂಕೇತ' ಎಂದರು.

'ಖುದ್ಸ್ ದಿನ'ವು ರಂಜಾನ್ ತಿಂಗಳ ಕೊನೆಯ ಶುಕ್ರವಾರದಂದು ನಡೆಯುವ ಕಾರ್ಯಕ್ರಮವಾಗಿದೆ. ಪ್ಯಾಲೆಸ್ಟೀನಿಯರಿಗೆ ಬೆಂಬಲ ಸೂಚಿಸಿ, ಇಸ್ರೇಲ್ ವಿರುದ್ಧ ನಡೆಯುವ ರ‍್ಯಾಲಿಯಲ್ಲಿ ಸಾವಿರಾರು ಮಂದಿ ಪಾಲ್ಗೊಳ್ಳುವರು.

'ಕ್ಷಿಪಣಿ ಲಾಂಚರ್‌ಗಳು, ರಕ್ಷಣಾ ವ್ಯವಸ್ಥೆಗಳು ಮತ್ತು ಶಸ್ತ್ರಾಸ್ತ್ರ ತಯಾರಿಕಾ ಕೇಂದ್ರಗಳು ಸೇರಿದಂತೆ ತನ್ನ ವಾಯುಪಡೆಯು ಕಳೆದ 24 ಗಂಟೆಗಳಲ್ಲಿ ಇರಾನ್‌ನಲ್ಲಿ 200ಕ್ಕೂ ಹೆಚ್ಚು ಗುರಿಗಳನ್ನು ನಾಶಪಡಿಸಿದೆ' ಎಂದು ಇಸ್ರೇಲ್ ಹೇಳಿದೆ.

ಇಸ್ರೇಲ್‌ನಲ್ಲಿ 60 ಮಂದಿಗೆ ಗಾಯ: ಹಿಜ್ಬುಲ್ಲಾ ಬಂಡುಕೋರರು ನಡೆಸಿದ ರಾಕೆಟ್ ದಾಳಿಯಲ್ಲಿ ಉತ್ತರ ಇಸ್ರೇಲ್‌ನಲ್ಲಿ ಸುಮಾರು 60 ಮಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ. ದಕ್ಷಿಣ ಲೆಬನಾನ್‌ನಲ್ಲಿರುವ ಇಸ್ರೇಲ್ ಪಡೆಗಳು ಮತ್ತು ಉತ್ತರ ಇಸ್ರೇಲ್‌ನ ಪಟ್ಟಣಗಳನ್ನು ಗುರಿಯಾಗಿಸಿ ದಾಳಿ ನಡೆದಿದೆ.

ಇಸ್ರೇಲ್ ಸೇನೆಯ ದಾಳಿಯಲ್ಲಿ ಬೈರೂತ್‌ನ ನೈರುತ್ಯ ಭಾಗದಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಇನ್ನೊಂದು ದಾಳಿಯಲ್ಲಿ ಅಪಾರ್ಟ್‌ಮೆಂಟ್‌ವೊಂದಕ್ಕೆ ಹಾನಿಯಾಗಿದೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ತಿಳಿಸಿದೆ.

ಸಂಘರ್ಷ ಆರಂಭವಾದ ಬಳಿಕ ಲೆಬನಾನ್‌ನಲ್ಲಿ 600ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ ಎಂದು ಇಲಾಖೆ ತಿಳಿಸಿದೆ. ಸುಮಾರು 8 ಲಕ್ಷ ಮಂದಿ ನಿರಾಶ್ರಿತರಾಗಿದ್ದಾರೆ ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ಸಂಸ್ಥೆ ಮಾಹಿತಿ ನೀಡಿದೆ.

ಅಮೆರಿಕ ವಿಮಾನ ಪತನ; ಆರು ಜನರ ಸಾವು

ವಾಷಿಂಗ್ಟನ್: ಅಮೆರಿಕ ಸೇನೆಯ ಇಂಧನ ತುಂಬಿಸುವ 'ಕೆಸಿ-135' ವಿಮಾನ ಇರಾಕ್‌ನ ಪಶ್ಚಿಮ ಭಾಗದಲ್ಲಿ ಗುರುವಾರ ಪತನಗೊಂಡಿದ್ದು, ಎಲ್ಲ ಆರು ಸಿಬ್ಬಂದಿ ಮೃತಪಟ್ಟಿದ್ದಾರೆ.

'ದುರ್ಘಟನೆಗೆ ಕಾರಣ ಪತ್ತೆಹಚ್ಚಲು ತನಿಖೆ ಪ್ರಗತಿಯಲ್ಲಿದೆ. ಶತ್ರುಗಳು ನಡೆಸಿದ ದಾಳಿಯಿಂದ ಅಥವಾ ಫ್ರೆಂಡ್ಲಿ ಫೈರ್‌ನಿಂದ ವಿಮಾನ ಪತನಗೊಂಡಿಲ್ಲ' ಎಂದು ಅಮೆರಿಕ ಸೇನೆಯ ಸೆಂಟ್ರಲ್ ಕಮಾಂಡ್ ಶುಕ್ರವಾರ ತನ್ನ ಹೇಳಿಕೆಯಲ್ಲಿ ತಿಳಿಸಿದೆ. 'ಎರಡು ವಿಮಾನಗಳನ್ನು ಒಳಗೊಂಡ ಈ ಘಟನೆಯಲ್ಲಿ ಒಂದು ವಿಮಾನ ಪತನಗೊಂಡಿದೆ. ಇನ್ನೊಂದು ವಿಮಾನ ಸುರಕ್ಷಿತವಾಗಿದೆ' ಎಂದಿದೆ.

'ವಿಮಾನವನ್ನು ನಾವೇ ಹೊಡೆದುರುಳಿಸಿದ್ದೇವೆ' ಎಂದು ಇರಾಕ್‌ನಲ್ಲಿರುವ ಇರಾನ್ ಬೆಂಬಲಿತ 'ದಿ ಇಸ್ಲಾಮಿಕ್ ರೆಸಿಸ್ಟೆನ್ಸ್' ಸಂಘಟನೆ ತಿಳಿಸಿದೆ. 'ಕೆಸಿ-135 ಸ್ಟ್ರಾಟೋಟ್ಯಾಂಕರ್' ವಿಮಾನವನ್ನು ಅಮೆರಿಕ ಸೇನೆಯು ಇತರ ವಿಮಾನಗಳಿಗೆ ಆಗಸದಲ್ಲೇ ಇಂಧನ ತುಂಬಿಸಲು ಬಳಸುತ್ತದೆ. ಯುದ್ಧ ಆರಂಭವಾದ ಬಳಿಕ ಅಮೆರಿಕವು ಕಳೆದುಕೊಂಡ ನಾಲ್ಕನೇ ವಿಮಾನ ಇದಾಗಿದೆ.

'ಮೊಜ್ತಬಾ ಗಾಯಗೊಂಡಿದ್ದಾರೆ'

ತಮ್ಮನ್ನು ತಾವು ಪರಮೋಚ್ಚ ನಾಯಕ ಎಂದು ಕರೆಸಿಕೊಳ್ಳುವ ವ್ಯಕ್ತಿ (ಮೊಜ್ತಬಾ ಖಮೇನಿ) ಗಾಯಗೊಂಡಿದ್ದು, ಅಂಗವಿಕಲರಾಗಿರುವ ಸಾಧ್ಯತೆಯಿದೆ. ಅವರು ನಿನ್ನೆ ದುರ್ಬಲ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಧ್ವನಿ ಅಥವಾ ವಿಡಿಯೊ ಇರಲಿಲ್ಲ. ಅದು ಲಿಖಿತ ಹೇಳಿಕೆಯಾಗಿತ್ತು. ಇರಾನ್‌ನಲ್ಲಿ ಸಾಕಷ್ಟು ಕ್ಯಾಮೆರಾಗಳು ಮತ್ತು ವಾಯ್ಸ್ ರೆಕಾರ್ಡರ್‌ಗಳು ಲಭ್ಯವಿರುವಾಗ ಲಿಖಿತ ಹೇಳಿಕೆ ನೀಡಿದ್ದು ಏಕೆ? ಅದು ಏಕೆ ಎಂಬುದು ನಿಮಗೆ ತಿಳಿದಿದೆ ಎಂದು ಭಾವಿಸುತ್ತೇನೆ. ಅವರ ತಂದೆಯ ಹತ್ಯೆಯಾಗಿದೆ. ಅವರು ಹೆದರಿದ್ದು, ಅಡಗಿಕೊಂಡಿದ್ದಾರೆ

ಪೀಟ್ ಹೆಗ್ಸೆತ್, ಅಮೆರಿಕದ ರಕ್ಷಣಾ ಕಾರ್ಯದರ್ಶಿ

'ನಾಯಕರ ಹತ್ಯೆ; ಗೌರವದ ಸಂಗತಿ'

ವಾಷಿಂಗ್ಟನ್: ಇರಾನ್‌ನ ನಾಯಕತ್ವವನ್ನು ನಾಶ ಮಾಡಿರುವುದು ತಮಗೆ ಗೌರವ ತರುವ ವಿಷಯ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ಅವರು (ಇರಾನ್ ನಾಯಕತ್ವ) ಕಳೆದ 47 ವರ್ಷಗಳಿಂದ ಪ್ರಪಂಚದಾದ್ಯಂತ ಅಮಾಯಕರನ್ನು ಕೊಲ್ಲುತ್ತಿದ್ದಾರೆ. ಈಗ ನಾನು ಅಮೆರಿಕದ 47ನೇ ಅಧ್ಯಕ್ಷನಾಗಿದ್ದುಕೊಂಡು ಆ ನಾಯಕರನ್ನು ಕೊಲ್ಲುತ್ತಿದ್ದೇನೆ. ಹಾಗೆ ಮಾಡುವುದು ಬಲು ದೊಡ್ಡ ಗೌರವದ ಸಂಗತಿ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಭಾರತದ ಹಡಗುಗಳಿಗೆ ಅನುಮತಿ

ಒಂದನೇ ಪುಟದಿಂದ...

ಜೈಶಂಕರ್ ಮಾತುಕತೆ: ಹೊರ್ಮುಜ್ ಜಲಸಂಧಿಯ ಎರಡೂ ಬದಿಗಳಲ್ಲಿ ಬೀಡುಬಿಟ್ಟಿರುವ ಭಾರತದ 28 ವ್ಯಾಪಾರಿ ಹಡಗುಗಳಿಗೆ ಸುರಕ್ಷಿತ ಮಾರ್ಗವನ್ನು ಖಾತರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಅವರೊಂದಿಗೆ ಮಾತುಕತೆ ನಡೆಸಿದರು.

ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಆರಂಭವಾದಾಗಿನಿಂದ ಉಭಯ ನಾಯಕರ ನಡುವೆ ನಡೆದ ನಾಲ್ಕನೇ ಸುತ್ತಿನ ಮಾತುಕತೆ ಇದಾಗಿದೆ. ಇಬ್ಬರೂ ನಾಯಕರು ದೂರವಾಣಿ ಮೂಲಕ ಗುರುವಾರ ರಾತ್ರಿ ಮಾತನಾಡಿದ್ದಾರೆ.

'ಇರಾನ್ ವಿದೇಶಾಂಗ ಸಚಿವರ ಜತೆ ಮಾತುಕತೆ ನಡೆಸಿದ್ದೇನೆ. ದ್ವಿಪಕ್ಷೀಯ ವಿಷಯಗಳು ಮತ್ತು ಬ್ರಿಕ್ಸ್ ಸಂಬಂಧಿತ ವಿಷಯಗಳನ್ನು ಈ ವೇಳೆ ಚರ್ಚಿಸಿದ್ದೇವೆ' ಎಂದು ಜೈಶಂಕರ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ಇಸ್ರೇಲ್ ಮತ್ತು ಅಮೆರಿಕ ನಡೆಸುತ್ತಿರುವ ದಾಳಿ ಮತ್ತು ಅದರ ಪರಿಣಾಮಗಳು ಹಾಗೂ ಪ್ರಾದೇಶಿಕ ಸ್ಥಿತಿಗತಿ ಕುರಿತು ಅರಾಘ್ಚಿ ಅವರು ಈ ವೇಳೆ ಮಾಹಿತಿ ನೀಡಿದ್ದಾರೆ. ದಾಳಿಗಳಿಗೆ ಪ್ರತಿಯಾಗಿ ಸ್ವಯಂ ರಕ್ಷಣೆ ಮಾಡಿಕೊಳ್ಳುವುದು ಇರಾನ್‌ನ ಹಕ್ಕಾಗಿದೆ ಎಂದೂ ಅವರು ಜೈಶಂಕರ್ ಅವರಿಗೆ ತಿಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಇರಾನ್ ಮೇಲಿನ ಇಸ್ರೇಲ್ ಮತ್ತು ಅಮೆರಿಕದ ಆಕ್ರಮಣವನ್ನು ಜಾಗತಿಕ ಮತ್ತು ಪ್ರಾದೇಶಿಕ ವೇದಿಕೆಗಳು ಹಾಗೂ ಸಂಸ್ಥೆಗಳು ತೀವ್ರವಾಗಿ ಖಂಡಿಸಬೇಕು ಎಂದು ಅವರು ಈ ವೇಳೆ ಒತ್ತಿ ಹೇಳಿದ್ದಾರೆ ಎಂದು ಗೊತ್ತಾಗಿದೆ.

ಗಲ್ಫ್ ಮೇಲೆ ಇರಾನ್ ದಾಳಿ

ಒಂದನೇ ಪುಟದಿಂದ...

'ಹೊರ್ಮುಜ್ ಜಲಸಂಧಿ ಮೂಲಕ ಸಾಗುವ ಹಡಗುಗಳಿಗೆ ಅಗತ್ಯವಿದ್ದರೆ ಅಮೆರಿಕ ನೌಕಾಪಡೆಯು ಬೆಂಗಾವಲು ಒದಗಿಸಲಿದೆ' ಎಂದು ಟ್ರಂಪ್ ಅವರು 'ಫಾಕ್ಸ್ ನ್ಯೂಸ್'ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ. 'ಮುಂದಿನ ವಾರ ಇರಾನ್ ಮೇಲೆ ಇನ್ನಷ್ಟು ದಾಳಿ ನಡೆಯಲಿದೆ' ಎಂದೂ ಗುಡುಗಿದ್ದಾರೆ.

'ಇರಾನ್ ಬಳಿ ಇದೀಗ ನೌಕಾಪಡೆ ಮತ್ತು ವಾಯುಪಡೆ ಇಲ್ಲ. ಅವರಲ್ಲಿದ್ದ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ನಾಶಪಡಿಸಲಾಗಿದೆ. ಅವರ ನಾಯಕರನ್ನೂ ಹತ್ಯೆ ಮಾಡಲಾಗಿದೆ' ಎಂದು ಟ್ರಂಪ್ ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ಶುಕ್ರವಾರ ಮುಂಜಾನೆ ಇರಾನ್ ಹಾರಿಸಿದ ಸುಮಾರು 50 ಡ್ರೋನ್‌ಗಳನ್ನು ಸೌದಿ ಅರೇಬಿಯಾದ ವಾಯು ರಕ್ಷಣಾ ವ್ಯವಸ್ಥೆ ನಾಶಪಡಿಸಿದೆ. ಒಮಾನ್‌ನ ಸೊಹಾರ್ ನಲ್ಲಿರುವ ಕೈಗಾರಿಕಾ ಪ್ರದೇಶಕ್ಕೆ ಎರಡು ಡ್ರೋನ್‌ಗಳು ಅಪ್ಪಳಿಸಿ ಭಾರತದ ಇಬ್ಬರು ಪ್ರಜೆಗಳು ಮೃತಪಟ್ಟಿದ್ದಾರೆ ಎಂದು ಒಮಾನ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಬಹರೇನ್‌ನಲ್ಲಿ ದಾಳಿಯ ಬಗ್ಗೆ ಎಚ್ಚರಿಕೆ ನೀಡುವ ಸೈರನ್‌ಗಳು ಮೊಳಗಿದವು. ದುಬೈನಲ್ಲಿ ಕೈಗಾರಿಕಾ ಪ್ರದೇಶದಿಂದ ದಟ್ಟ ಹೊಗೆ ಎದ್ದಿದ್ದು, ಕ್ಷಿಪಣಿಯ ಅವಶೇಷ ಬಿದ್ದು ಬೆಂಕಿ ಹೊತ್ತಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದುಬೈ ಇಂಟರ್‌ನ್ಯಾಶನಲ್ ಫೈನಾನ್ಶಿಯಲ್ ಸೆಂಟರ್‌ನಲ್ಲಿರುವ ಕಟ್ಟಡದ ಮೇಲೆ ಕ್ಷಿಪಣಿಯ ಅವಶೇಷ ಬಿದ್ದು ಹಾನಿ ಉಂಟಾಗಿದೆ.

₹1 ಲಕ್ಷ ಕೋಟಿ ಮೊತ್ತದ 'ಆರ್ಥಿಕ ಸ್ಥಿರೀಕರಣ ನಿಧಿ'

ಒಂದನೇ ಪುಟದಿಂದ...

ಈಗಾಗಲೇ ಈ ಸಾಲಿನ ಬಜೆಟ್‌ನಲ್ಲಿ ₹80 ಸಾವಿರ ಕೋಟಿ ಕೋರಿಕೆ ಸಲ್ಲಿಸಲಾಗಿದ್ದು, ಹೆಚ್ಚುವರಿಯಾಗಿ 2.01 ಲಕ್ಷ ಕೋಟಿಗೆ ಅನುಮತಿ ಕೋರಲಾಗಿದೆ ಎಂದು ಸಚಿವರು ತಿಳಿಸಿದರು.

ಪೂರಕ ಬೇಡಿಕೆಗಳಲ್ಲಿ ₹1 ಲಕ್ಷ ಕೋಟಿ ಮೊತ್ತದ ಆರ್ಥಿಕ ಸ್ಥಿರೀಕರಣ ನಿಧಿ ಸ್ಥಾಪನೆಗೆ ಅನುದಾನವನ್ನೂ ಕೋರಲಾಗಿದೆ. ರಕ್ಷಣಾ ಸಚಿವಾಲಯಕ್ಕೆ ₹41,822 ಕೋಟಿ, ರಸಗೊಬ್ಬರ ಸಬ್ಸಿಡಿಗೆ ₹19,230 ಕೋಟಿ, ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಗೆ ₹23,641 ಕೋಟಿ ಹೆಚ್ಚುವರಿ ವೆಚ್ಚಕ್ಕಾಗಿ ಸಂಸತ್ತಿನ ಅನುಮೋದನೆ ಕೋರಲಾಗಿದೆ ಎಂದು ನಿರ್ಮಲಾ ವಿವರಿಸಿದರು.

ಪ್ರಸಕ್ತ ಆರ್ಥಿಕ ವರ್ಷದ (2025-26) ಹಣಕಾಸು ಕೊರತೆಯು ಪರಿಷ್ಕೃತ ಅಂದಾಜು ಮಿತಿಯೊಳಗೇ ಇರುತ್ತದೆ ಎಂದರು. ಈ ಪ್ರಸ್ತಾವನೆಯು ಲೋಕಸಭೆಯಲ್ಲಿ ಧ್ವನಿಮತದ ಮೂಲಕ ಅಂಗೀಕಾರ ಪಡೆಯಿತು.

ಎಲ್‌ಪಿಜಿ: ಉತ್ಪಾದನೆ ಶೇ 30ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಗೃಹಬಳಕೆಗೆ ಅಡುಗೆ ಅನಿಲದ (ಎಲ್‌ಪಿಜಿ) ನಿರಂತರ ಪೂರೈಕೆಯನ್ನು ಖಚಿತಪಡಿಸಲಾಗಿದೆ. ಹೀಗಾಗಿ ಜನರು ಆತಂಕಗೊಂಡು ಸಿಲಿಂಡರ್‌ಗಳಿಗಾಗಿ ಬುಕಿಂಗ್‌ಗಳನ್ನು ಮಾಡುವ ಅಗತ್ಯವಿಲ್ಲ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ದೇಶೀಯವಾಗಿ ಎಲ್‌ಪಿಜಿ ಉತ್ಪಾದನೆಯು ಮಾರ್ಚ್ 5ರಿಂದ ಶೇ 30ರಷ್ಟು ಹೆಚ್ಚಾಗಿದೆ. ದೇಶದಲ್ಲಿ ಎಲ್ಲೂ ಎಲ್‌ಪಿಜಿ ಕೊರತೆಯಿಲ್ಲ. ಯಾವುದೇ ಡೀಲರ್‌ಗಳ ಬಳಿ ಎಲ್‌ಪಿಜಿ 'ಡ್ರೈ ಔಟ್' ಆಗಿಲ್ಲ. ಹೀಗಾಗಿ ಜನ ಆತಂಕಕ್ಕೆ ಒಳಗಾಗಿ ಬುಕಿಂಗ್ ಮಾಡುವ ಅಗತ್ಯವಿಲ್ಲ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಶ್ಚಿಮ ಏಷ್ಯಾದ ಸಂಘರ್ಷಕ್ಕೂ ಮುನ್ನ ಸರಾಸರಿ 55.7 ಲಕ್ಷ ಇದ್ದ 'ಬುಕಿಂಗ್', ಯುದ್ಧ ಆರಂಭದ ಬಳಿಕ 75.7 ಲಕ್ಷಕ್ಕೆ ಹೆಚ್ಚಾಗಿದೆ. ಇದು ಜನರು ಆತಂಕಕ್ಕೆ ಒಳಗಾಗಿ 'ಬುಕಿಂಗ್' ಮಾಡಿರುವುದನ್ನು ತೋರಿಸುತ್ತದೆ ಎಂದು ಅವರು ವಿವರಿಸಿದರು. ಭಾರತಕ್ಕೆ ಹೆಚ್ಚಿನ ಪ್ರಮಾಣದ ಎಲ್‌ಪಿಜಿ ಹೊರ್ಮುಜ್ ಜಲಸಂಧಿ ಮೂಲಕ ಬರುತ್ತದೆ. ಹೀಗಾಗಿ ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಭಾರತಕ್ಕೆ ತೀವ್ರ ಕಳವಳಕಾರಿಯಾಗಿದೆ.

ರಾಮಾಯಣ–2 ಚಿತ್ರೀಕರಣ ಪ್ರಾರಂಭ

ಬಹು ನಿರೀಕ್ಷಿತ 'ರಾಮಾಯಣ-2' ಚಿತ್ರದ ಚಿತ್ರೀಕರಣ ಮುಂಬೈನಲ್ಲಿ ಪ್ರಾರಂಭವಾಗಿದ್ದು, ರಣಬೀರ್ ಕಪೂರ್ ಚಿತ್ರೀಕರಣದಲ್ಲಿ ಭಾಗಿಯಾಗಿದ್ದಾರೆಂದು ಹಿಂದಿ ಮಾಧ್ಯಮಗಳು ವರದಿ ಮಾಡಿವೆ. ನಿತೇಶ್ ತಿವಾರಿ ನಿರ್ದೇಶನದ ಈ ಚಿತ್ರದಲ್ಲಿ ರಣಬೀರ್ ರಾಮನ ಪಾತ್ರ ಮಾಡುತ್ತಿದ್ದಾರೆ. ವಸ್ತ್ರ ವಿನ್ಯಾಸಕಿ ರಿಂಪಲ್, ರಣಬೀರ್ ಕಪೂರ್ ಜತೆಗೆ ಸೆಟ್‌ನಲ್ಲಿರುವ ಛಾಯಾಚಿತ್ರವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ. ನಿರ್ಮಾಪಕ ನಮಿತ್ ಮಲ್ಹೋತ್ರ ಕೂಡ ಚಿತ್ರೀಕರಣ ಪ್ರಾರಂಭವಾಗಿರುವ ಸುಳಿವು ನೀಡಿದ್ದಾರೆ.


ಸಾಯಿ ಪಲ್ಲವಿ


ಚಿತ್ರದ ಸೆಟ್‌ನಲ್ಲಿ ರಿಂಪಲ್ ನರುಲ್ಲ ಜತೆ ರಣಬೀರ್ ಕಪೂರ್

ಎರಡು ಭಾಗಗಳಲ್ಲಿ ಈ ಸಿನಿಮಾ ಸಿದ್ಧಗೊಳ್ಳುತ್ತಿದೆ. ಮೊದಲ ಭಾಗದ ಚಿತ್ರೀಕರಣ ಈಗಾಗಲೇ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಮೊದಲ ಭಾಗವನ್ನು ಈ ವರ್ಷ ದೀಪಾವಳಿ ಸಮಯದಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಪ್ರೇಕ್ಷಕರ ಪ್ರತಿಕ್ರಿಯೆಗಾಗಿ ಚಿತ್ರದ ಒಂದಷ್ಟು ದೃಶ್ಯಗಳನ್ನು ಚಿತ್ರತಂಡ ಜನಪ್ರಿಯ ನಿರ್ದೇಶಕ ಕ್ರಿಸ್ಟೋಫರ್ ನೋಲನ್ ಸೇರಿದಂತೆ ಅಮೆರಿಕದಲ್ಲಿನ ಆಯ್ದ ಪ್ರೇಕ್ಷಕರಿಗೆ ಈಗಾಗಲೇ ತೋರಿಸಿದ್ದು, ಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂಬ ವರದಿಯಿದೆ.

ಚಿತ್ರದಲ್ಲಿ ಯಶ್ ಕೂಡ ನಟಿಸುತ್ತಿದ್ದಾರೆ. ರಾವಣನಾಗಿ ಕಾಣಿಸಿಕೊಳ್ಳುತ್ತಿರುವ ಯಶ್ ಕೂಡ ಶೀಘ್ರದಲ್ಲಿ ಚಿತ್ರತಂಡ ಸೇರಿಕೊಳ್ಳಲಿದ್ದಾರೆ. ಹನುಮಂತನಾಗಿ ಸನ್ನಿ ಡಿಯೋಲ್ ನಟಿಸುತ್ತಿದ್ದು, ಅವರು ಸದ್ಯ ಎ.ಆರ್. ಮುರುಗದಾಸ್ ನಿರ್ದೇಶನದ ಬೇರೊಂದು ಸಿನಿಮಾದ ಚಿತ್ರೀಕರಣದಲ್ಲಿದ್ದಾರೆ. ಅದು ಮುಗಿದ ತಕ್ಷಣ ಅವರು ಕೂಡ 'ರಾಮಾಯಣ-2' ಚಿತ್ರ ತಂಡ ಸೇರಿಕೊಳ್ಳಲಿದ್ದಾರೆ ಎನ್ನಲಾಗಿದೆ.


ಸೀತೆಯಾಗಿ ಸಾಯಿ ಪಲ್ಲವಿ ಕಾಣಿಸಿಕೊಳ್ಳುತ್ತಿದ್ದಾರೆ. ಸೀತಾಪಹರಣ ನಂತರದ ಕಥೆ 'ರಾಮಾಯಣ-2'ರಲ್ಲಿರಲಿದೆ. ರಾಮ-ರಾವಣರ ಯುದ್ಧದ ಸನ್ನಿವೇಶಗಳು ಚಿತ್ರೀಕರಣಗೊಳ್ಳಲಿದ್ದು, ರಣಬೀರ್ ಹಾಗೂ ಯಶ್ ನಡುವಿನ ಸಮರದ ಸನ್ನಿವೇಶಗಳು ಈ ಭಾಗದಲ್ಲಿ ಹೆಚ್ಚಿರಲಿವೆ.

ರಣಬೀರ್ ಕಪೂರ್ ಮಾರ್ಚ್ ತಿಂಗಳಲ್ಲಿ ಸಂಜಯ್ ಲೀಲಾ ಬನ್ಸಾಲಿ ಅವರ 'ಲವ್ ಆ್ಯಂಡ್ ವಾರ್' ಚಿತ್ರದ ಚಿತ್ರೀಕರಣದಲ್ಲಿ ಭಾಗವಹಿಸಬೇಕಿತ್ತು. ಆದರೆ, ಬನ್ಸಾಲಿ ಅವರ ಆರೋಗ್ಯ ಸಮಸ್ಯೆಯಿಂದಾಗಿ ಆ ಚಿತ್ರದ ಚಿತ್ರೀಕರಣ ಮುಂದಕ್ಕೆ ಹೋಗಿದೆ. ಹೀಗಾಗಿ ರಣಬೀರ್ ರಾಮಾಯಣ ಸೆಟ್‌ಗೆ ಮರಳಿದ್ದಾರೆ.

KD ಹಾಡಿಗೆ ನೋರಾ ಹೆಜ್ಜೆ

ಧ್ರುವ ಸರ್ಜಾ ನಟನೆಯ, ಪ್ರೇಮ್ ನಿರ್ದೇಶನದ 'KD–ದಿ ಡೆವಿಲ್' ಸಿನಿಮಾ ಏ.30ರಂದು ಬಿಡುಗಡೆಯಾಗುತ್ತಿದ್ದು, ಸಿನಿಮಾದಲ್ಲಿ ಹಾಡೊಂದಕ್ಕೆ ನಟಿ ನೋರಾ ಫತೇಹಿ ಹೆಜ್ಜೆ ಹಾಕಿದ್ದಾರೆ.

ಹಿಂದಿ, ತಮಿಳು ಹಾಗೂ ತೆಲುಗಿನ ಹಲವು ಸಿನಿಮಾಗಳಲ್ಲಿ ಐಟಂ ಹಾಡುಗಳಿಗೆ ಹೆಜ್ಜೆ ಹಾಕಿರುವ ನೋರಾ 'KD' ಮೂಲಕ ಕನ್ನಡಕ್ಕೂ ಬಂದಿದ್ದಾರೆ. 'ಸರ್ಸೆ ನಿನ್ನ ಸೆರಗು..' ಎನ್ನುವ ಹಾಡು ಮಾರ್ಚ್ 14ರಂದು ಬಿಡುಗಡೆಯಾಗಲಿದ್ದು, ಕನ್ನಡದಲ್ಲಿ ಐಶ್ವರ್ಯ ರಂಗರಾಜನ್ ದನಿಯಾಗಿದ್ದಾರೆ. ತೆಲುಗು ಹಾಗೂ ಹಿಂದಿಯಲ್ಲಿ ಗಾಯಕಿ ಮಂಗ್ಲಿ ಈ ಹಾಡು ಹಾಡಿದ್ದಾರೆ. ಈ ಪ್ಯಾನ್ ಇಂಡಿಯಾ ಸಿನಿಮಾದಲ್ಲಿ 1970-75ರಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್‌ಸ್ಟರ್ ಕಥೆ ಇದೆ. ರೀಷ್ಮಾ ನಾಣಯ್ಯ ಚಿತ್ರದ ನಾಯಕಿ. ಬಾಲಿವುಡ್‌ನ ಸಂಜಯ್ ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್ ತಾರಾಬಳಗದಲ್ಲಿದ್ದಾರೆ.


ನೋರಾ ಫತೇಹಿ


ನದೃಸಾ ಚಿತ್ರತಂಡ

'ನದೃಸಾ' ಟೀಸರ್ ಬಿಡುಗಡೆ

ಹೊಸಬರೇ ಸೇರಿ ನಿರ್ಮಾಣ ಮಾಡಿರುವ 'ನದೃಸಾ' ಎಂಬ ಸಿನಿಮಾದ ಟೀಸರ್ ಬಿಡುಗಡೆಗೊಂಡಿದೆ. ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಸಮಾಧಿಯ ಮುಂದೆ ಇತ್ತೀಚೆಗೆ ಟೀಸರ್ ಬಿಡುಗಡೆ ಮಾಡಿದೆ ಚಿತ್ರತಂಡ.

ಚಂದ್ರನಾಯ್ಕ ಎನ್ನುವವರು ಸೂರ್ಯಚಂದ್ರ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಈ ಸಿನಿಮಾಗೆ ಬಂಡವಾಳ ಹೂಡಿದ್ದಾರೆ. ಹಲವು ನಿರ್ದೇಶಕರ ಬಳಿ ಕೆಲಸ ಮಾಡಿರುವ ಮಣಿರಾಜ್ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ.

ನಯನ, ಧೃತಿ ಮತ್ತು ಸಾನ್ವಿ ಹೀಗೆ ಮೂರು ಪಾತ್ರಗಳ ಸುತ್ತ ಸಿನಿಮಾದ ಕಥೆ ಸಾಗುತ್ತದೆ. ಹೀಗಾಗಿ ಶೀರ್ಷಿಕೆಯಾಗಿ ಪಾತ್ರಗಳ ಹೆಸರಿನ ಮೊದಲ ಅಕ್ಷರಗಳನ್ನೇ ಇಡಲಾಗಿದೆ. ನಯನ, ಧೃತಿ, ಸಾನ್ವಿ ಉಳಿದಂತೆ ಆನಂದ್, ಗೀತ, ಪ್ರಸಾದ್ ಜಾಕಿ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಶೀಘ್ರದಲ್ಲೇ ತಂಬಾಕು ಖರೀದಿ

ರಾಜ್ಯದ ನಿಯೋಗಕ್ಕೆ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಗೋಯಲ್ ಭರವಸೆ

ಪ್ರಜಾವಾಣಿ ವಾರ್ತೆ5

ನವದೆಹಲಿ: ಕರ್ನಾಟಕದಲ್ಲಿ ಸೋಮವಾರದಿಂದಲೇ ತಂಬಾಕು ಖರೀದಿ ಮಾಡುವುದಾಗಿ ರಾಜ್ಯದ ನಿಯೋಗಕ್ಕೆ ಕೇಂದ್ರ ಸರ್ಕಾರ ಭರವಸೆ ನೀಡಿದೆ.


ಈ ಸಂಬಂಧ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಅವರು ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪೀಯೂಷ್ ಗೋಯಲ್ ಅವರ ಜತೆ ಶುಕ್ರವಾರ ಮಾತುಕತೆ ನಡೆಸಿದರು.

'ಸೋಮವಾರದಿಂದಲೇ ತಂಬಾಕು ಖರೀದಿ, ವಿದೇಶ ಮಾರುಕಟ್ಟೆಗಳಿಗೆ ರಫ್ತು, ಹೊಸ ವಿದೇಶಿ ಮಾರುಕಟ್ಟೆಗಳ ಅನ್ವೇಷಣೆ ಸೇರಿದಂತೆ ಬೆಳೆಗಾರರ ಬೇಡಿಕೆಗಳಿಗೆ ಸಚಿವರು ಸ್ಪಂದಿಸಿದರು. ಅಲ್ಲದೆ, ಈ ಸಂದರ್ಭದಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟಿನ ಶಮನಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸಚಿವ ಗೋಯಲ್ ಅವರು ತಮ್ಮ ಸಚಿವಾಲಯದ ಉನ್ನತ ಅಧಿಕಾರಿಗಳು ಹಾಗೂ ತಂಬಾಕು ಖರೀದಿಸುವ ಉದ್ಯಮದ ಪ್ರಮುಖರ ಜತೆ ಮಾತನಾಡಿ ಬೆಳೆಗಾರರ ನೆರವಿಗೆ ಬರುವಂತೆ ಸೂಚಿಸಿದರು' ಎಂದು ಕುಮಾರಸ್ವಾಮಿ ಮಾಹಿತಿ ನೀಡಿದರು.

ನಿಯೋಗದಲ್ಲಿ ಮಾಜಿ ಸಚಿವ ಸಾ.ರಾ. ಮಹೇಶ್, ಮೈಸೂರು -ಕೊಡಗು ಸಂಸದ ಯದುವೀರ್ ಒಡೆಯರ್, ಶಾಸಕರಾದ ಎ. ಮಂಜು, ಜಿ.ಡಿ. ಹರೀಶ್ ಗೌಡ, ಸಿ.ಎನ್. ಮಂಜೇಗೌಡ, ಮಾಜಿ ಶಾಸಕರಾದ ಮಹದೇವು, ಅಶ್ವಿನ್ ಕುಮಾರ್, ಕೋಲಾರ ಸಂಸದ ಮಲ್ಲೇಶ್ ಬಾಬು ಇದ್ದರು.

ಸಭೆ ನಂತರ ಸುದ್ದಿಗಾರರ ಜತೆಗೆ ಮಾತನಾಡಿದ ಸಾ.ರಾ.ಮಹೇಶ್, 'ಸೋಮವಾರದಿಂದ ತಂಬಾಕು ಖರೀದಿಗೆ ಸಚಿವ ಗೋಯಲ್ ಸೂಚನೆ ನೀಡಿದ್ದಾರೆ' ಎಂದು ಹೇಳಿದರು.

'ಅಲ್ಲದೆ, 190 ದೇಶಗಳ ರಾಯಭಾರಿಗಳಿಗೆ ಪತ್ರ ಬರೆದು ಮುಕ್ತ ಮಾರುಕಟ್ಟೆಯಲ್ಲಿ ತಂಬಾಕು ಖರೀದಿಗೆ ಕೋರಿಕೆ ಸಲ್ಲಿಸಲಾಗುವುದು. ಅಲ್ಲದೆ, ಈವರೆಗೆ ರಫ್ತು ಮಾಡದಿರುವ ದೇಶಗಳಿಗೂ ತಂಬಾಕು ರಫ್ತು ಮಾಡುವ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಕೇಂದ್ರ ವಾಣಿಜ್ಯ ಸಚಿವರು ಭರವಸೆ ನೀಡಿದ್ದಾರೆ' ಎಂದರು. ತಂಬಾಕಿಗೆ ಬೆಂಬಲ ಬೆಲೆ ನೀಡಬೇಕೆಂದು ರಾಜ್ಯ ಸರ್ಕಾರಕ್ಕೆ ಮನವಿ ಮಾಡುತ್ತೇವೆ ಎಂದರು.


ರಾಜ್ಯದ ನಿಯೋಗದ ಜತೆಗೆ ಪೀಯೂಷ್ ಗೋಯಲ್ ಚರ್ಚಿಸಿದರು

'ಮಾರುಕಟ್ಟೆ ವ್ಯವಸ್ಥೆಗೆ ಮನವಿ'

'ಖರೀದಿ ನಿಲ್ಲಿಸಿರುವ ಪರಿಣಾಮದಿಂದ ತಂಬಾಕು ಬೆಲೆಯಲ್ಲಿ ಕುಸಿತ ಆಗಿದೆ. ಕೆ.ಜಿ.ಗೆ ₹320ರಿಂದ ₹250 ವರೆಗೂ ಕುಸಿತ ಕಂಡಿದೆ. ಹೀಗಾಗಿ, ಗೋಯಲ್ ಅವರನ್ನು ಭೇಟಿಯಾಗಿ ಬೆಲೆ ಹೆಚ್ಚಿಸುವ ಮತ್ತು ಪರಿಹಾರ ನೀಡುವ ಬಗ್ಗೆ ಮನವಿ ಮಾಡಲಾಗಿದೆ. ಸೂಕ್ತವಾದ ಮಾರುಕಟ್ಟೆ ವ್ಯವಸ್ಥೆ ನೀಡಲು ಕೇಳಿದ್ದೇವೆ' ಎಂದು ಸಾ.ರಾ.ಮಹೇಶ್ ಹೇಳಿದರು.

ಶಾಸಕ ಎ. ಮಂಜು ಮಾತನಾಡಿ, 'ಕರ್ನಾಟಕದಲ್ಲಿ 100 ದಶಲಕ್ಷ ಟನ್ ತಂಬಾಕು ಬೆಳೆಯಲು ತಂಬಾಕು ಮಂಡಳಿ ಅವಕಾಶ ನೀಡಿದೆ. ಈ ವರ್ಷ 80 ದಶಲಕ್ಷ ಟನ್ ತಂಬಾಕು ಬೆಳೆಯಲಾಗಿದೆ. ನಾವು ಬೆಳೆದ ಸೊಪ್ಪನ್ನು ಸರ್ಕಾರ ನಿರ್ಧಾರ ಮಾಡಿದ ಬೆಲೆಯಲ್ಲಿ ಖರೀದಿ ಮಾಡಬೇಕಿದೆ. ಈ ಹಿಂದೆ ಖರೀದಿ ಭರವಸೆ ನೀಡಿದ ಕಂಪನಿಗಳು ಖರೀದಿ ಮಾಡಿಲ್ಲ. ಈಗ ಬೆಳೆದ ಸೊಪ್ಪನ್ನು ಕೂಡಲೇ ಖರೀದಿ ಮಾಡಬೇಕು. ಕೇಂದ್ರ ಸರ್ಕಾರ ಇದರಲ್ಲಿ ಮಧ್ಯ ಪ್ರವೇಶ ಮಾಡಬೇಕು ಎಂದು ಮನವಿ ಮಾಡಿದ್ದೇವೆ' ಎಂದರು.

ಸೈಬರ್ ಅಪರಾಧ ಕ್ರಮಕ್ಕೆ ಸೂಚನೆ

ನವದೆಹಲಿ (ಪಿಟಿಐ): 'ಸೈಬರ್ ಅಪರಾಧಗಳಿಗೆ ಮಹಿಳೆಯರು ಮತ್ತು ಮಕ್ಕಳು ಬಲಿಯಾಗುವುದು ಹೆಚ್ಚುತ್ತಿದ್ದು, ಇದನ್ನು ತಡೆಗಟ್ಟಲು ಕಾನೂನು ಕ್ರಮಗಳನ್ನು ಬಿಗಿಗೊಳಿಸುವ ಜತೆಯಲ್ಲೇ, ಸಂಘಟಿತ ಪ್ರಯತ್ನಗಳನ್ನು ನಡೆಸಬೇಕು' ಎಂದು ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಹೇಳಿದ್ದಾರೆ.

ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರವು ಇಲ್ಲಿ ಆಯೋಜಿಸಿದ್ದ 'ಮಹಿಳೆಯರು ಮತ್ತು ಮಕ್ಕಳ ಮೇಲಿನ ಆನ್‌ಲೈನ್ ಅಪರಾಧ'ಗಳಿಗೆ ಸಂಬಂಧಿಸಿದ ಸಂವಾದದಲ್ಲಿ ಅವರು ಮಾತನಾಡಿದರು.

'ಸೈಬರ್ ಅಪರಾಧಗಳನ್ನು ಮಟ್ಟಹಾಕಲು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮಟ್ಟದಲ್ಲಿ ಸಾಂಸ್ಥಿಕ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ. ಬಲಿಪಶುಗಳಾಗುವವರಿಗೆ ನೆರವು ನೀಡಲು ವಿಶೇಷ ಘಟಕಗಳನ್ನು ಅಭಿವೃದ್ಧಿಪಡಿಸಬೇಕು. ಮಹಿಳೆಯರು, ಮಕ್ಕಳ ಮೇಲಿನ ಸೈಬರ್ ಅಪರಾಧಗಳ ತನಿಖೆಗೆ ಕಾನೂನು ಜಾರಿ ಸಂಸ್ಥೆಗಳು ಆದ್ಯತೆ ನೀಡಬೇಕು' ಎಂದರು.

ಪಕ್ಷದ ಹೆಸರು ಘೋಷಿಸಿದ ಶಶಿಕಲಾ

ಚೆನ್ನೈ (ಪಿಟಿಐ): ಹೊಸ ರಾಜಕೀಯ ಪಕ್ಷ ಸ್ಥಾಪಿಸಿರುವ ವಿ.ಕೆ.ಶಶಿಕಲಾ ಅವರು, ಪಕ್ಷದ ಹೆಸರು 'ಆಲ್ ಇಂಡಿಯಾ ಪುರಚ್ಚಿ ತಲೈವರ್ ಮಕ್ಕಳ್ ಮುನ್ನೇತ್ರ ಕಳಗಂ' (ಎಐಪಿಟಿಎಂಎಂಕೆ) ಎಂದು ಶುಕ್ರವಾರ ಘೋಷಿಸಿದ್ದಾರೆ.


ವಿ.ಕೆ.ಶಶಿಕಲಾ

ಎಐಎಡಿಎಂಕೆಯಿಂದ ಉಚ್ಚಾಟನೆಗೊಂಡಿರುವ ಶಶಿಕಲಾ ನೂತನ ಪಕ್ಷ ಸ್ಥಾಪಿಸುವುದಾಗಿ ಇತ್ತೀಚೆಗೆ ಘೋಷಿಸಿದ್ದರು. ಎಐಎಡಿಎಂಕೆ ನಾಯಕಿ, ದಿವಂಗತ ಜೆ.ಜಯಲಲಿತಾ ಅವರ ಜನ್ಮದಿನದ ಅಂಗವಾಗಿ ರಾಮನಾಥಪುರಂ ಜಿಲ್ಲೆಯ ಕಮುದಿಯಲ್ಲಿ ಫೆಬ್ರುವರಿ 24ರಂದು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪಕ್ಷದ ಬಾವುಟವನ್ನು ಅನಾವರಣಗೊಳಿಸಿದ್ದರು. ಈಗ, ಪಕ್ಷದ ಹೆಸರನ್ನು ಘೋಷಿಸಿದ್ದಾರೆ.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಕ್ಷದ ಚಿಹ್ನೆ ತೆಂಗಿನ ತೋಟ ಆಗಿದ್ದು, ಇದು ಏಕತೆಯನ್ನು ಸೂಚಿಸುತ್ತದೆ. ಈ ಉದ್ದೇಶ ಸಾಧನೆಗಾಗಿ ನಾನು ಯಾವಾಗಲೂ ಶ್ರಮಿಸುತ್ತಿದ್ದೇನೆ' ಎಂದು ಹೇಳಿದರು.

'ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಸಮಾನ ಮನಸ್ಕ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳಲಾಗುವುದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ತಮಿಳುನಾಡು ಜನರ ಏಳಿಗೆಗಾಗಿ ನಾವು ಒಳ್ಳೆಯ ಕೆಲಸ ಮಾಡಬೇಕು. ಇದಕ್ಕಾಗಿ ನಮ್ಮ ಆಲೋಚನೆ ಮತ್ತು ಸಿದ್ಧಾಂತಗಳಿಗೆ ಹೊಂದಿಕೆಯಾಗುವ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳಲಾಗುವುದು' ಎಂದು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ಕೆಎಂಡಿಕೆಗೆ ಎರಡು ಕ್ಷೇತ್ರ ಹಂಚಿಕೆ



ಚೆನ್ನೈ (ಪಿಟಿಐ): ತಮಿಳುನಾಡು ಆಡಳಿತಾರೂಢ ಡಿಎಂಕೆ ಪಕ್ಷವು ಮುಂಬರಲಿರುವ ವಿಧಾನಸಭಾ ಚುನಾವಣೆಗಾಗಿ ತನ್ನ ಮಿತ್ರ ಪಕ್ಷ ಕೊಂಗುನಾಡು ಮಕ್ಕಳ್ ದೇಸಿಯ ಕಾಚಿ ಗೆ (ಕೆಎಂಡಿಕೆ) ಎರಡು ಕ್ಷೇತ್ರಗಳನ್ನು ಹಂಚಿಕೆ ಮಾಡಿರುವುದಾಗಿ ಶುಕ್ರವಾರ ಘೋಷಿಸಿದೆ.

ಡಿಎಂಕೆ ಪಕ್ಷದ ಕೇಂದ್ರ ಕಚೇರಿಯಲ್ಲಿ ನಡೆದ ಸಭೆ ಬಳಿಕ ಕೆಎಂಡಿಕೆಗೆ ಎರಡು ಕ್ಷೇತ್ರಗಳನ್ನು ಬಿಟ್ಟುಕೊಡಲಾಗಿದ್ದು, ಡಿಎಂಕೆ ಪಕ್ಷದ ಚಿಹ್ನೆ ಅಡಿಯಲ್ಲಿಯೇ ಕೆಎಂಡಿಕೆ ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ ಎಂದೂ ಡಿಎಂಕೆ ಪ್ರಕಟಣೆಯಲ್ಲಿ ತಿಳಿಸಿದೆ.

2021ರ ಚುನಾವಣೆಯಲ್ಲಿ ಕೆಎಂಡಿಕೆ ಅಭ್ಯರ್ಥಿಗಳು ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರು. ಪಕ್ಷದ ಕಾರ್ಯದರ್ಶಿ ಇ.ಆರ್.ಈಶ್ವರನ್ ಅವರು ತಿರುಚನಕೋಡೆ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದರು.

ಈವರೆಗೆ ಡಿಎಂಕೆ ಪಕ್ಷವು ತನ್ನ ಮುಖ್ಯ ಮಿತ್ರಪಕ್ಷವಾಗಿರುವ ಕಾಂಗ್ರೆಸ್‌ಗೆ 28 ಕ್ಷೇತ್ರಗಳು, ಎಂಡಿಎಂಕೆಗೆ ನಾಲ್ಕು, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಹಾಗೂ ಎಂಎಂಕೆಗೆ ತಲಾ ಎರಡು ಕ್ಷೇತ್ರಗಳನ್ನು ಹಂಚಿಕೆ ಮಾಡಿದೆ. ಏಪ್ರಿಲ್‌ನಲ್ಲಿ ವಿಧಾನಸಭಾ ಚುನಾವಣೆ ನಡೆಯುವ ಸಾಧ್ಯತೆಗಳಿದೆ.

ಹೆಬ್ಬಕ್ಕ ಪಕ್ಷಿಯ 2 ಮರಿಗಳ ಜನನ

ನವದೆಹಲಿ (ಪಿಟಿಐ): ರಾಜಸ್ಥಾನದಲ್ಲಿರುವ ತಳಿ ಸಂವರ್ಧಕ ಕೇಂದ್ರದಲ್ಲಿ 'ಹೆಬ್ಬಕ್ಕ' ಪಕ್ಷಿಯ (ಗ್ರೇಟ್ ಇಂಡಿಯನ್ ಬಸ್ಟರ್ಡ್) ಎರಡು ಮರಿಗಳು ಜನಿಸಿವೆ.



'ಅಳಿವಿನಂಚಿನಲ್ಲಿರುವ ಈ ಪಕ್ಷಿಗಳ ಸಂರಕ್ಷಣೆಗಾಗಿ ಸ್ಥಾಪಿಸಿರುವ 'ಪ್ರಾಜೆಕ್ಟ್ ಗ್ರೇಟ್ ಇಂಡಿಯನ್ ಬಸ್ಟರ್ಡ್' (ಜಿಐಬಿ) ನಾಲ್ಕನೇ ವರ್ಷಕ್ಕೆ ಕಾಲಿಟ್ಟಿದೆ. ಗ್ರೇಟ್ ಇಂಡಿಯನ್ ಬಸ್ಟರ್ಡ್ ಮರಿಗಳ ಪೈಕಿ ಒಂದು ನೈಸರ್ಗಿಕ ಸಂಯೋಗದಿಂದ ಮತ್ತು ಇನ್ನೊಂದು ಕೃತಕ ಗರ್ಭಧಾರಣೆಯ ಮೂಲಕ ಜನಿಸಿದೆ. ಕೇಂದ್ರದಲ್ಲಿ ಈಗ ಒಟ್ಟು 70 ಪಕ್ಷಿಗಳಿವೆ' ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು 'ಎಕ್ಸ್'ನಲ್ಲಿ ಶುಕ್ರವಾರ ತಿಳಿಸಿದ್ದಾರೆ.

'ಈ ಪ್ರಭೇದದ ಸಂರಕ್ಷಣೆಯ ಪ್ರಯತ್ನಗಳಲ್ಲಿ ಇದು ಪ್ರಮುಖ ಮೈಲಿಗಲ್ಲಾಗಿದೆ. ಈ ವರ್ಷ ಪಳಗಿಸಿದ ಕೆಲ ಮರಿಗಳನ್ನು ಕಾಡಿಗೆ ಹಂತ ಹಂತವಾಗಿ ಬಿಡಲಾಗುವುದು. ಈ ಯೋಜನೆಯ ಪಾಲಿಗೆ ಇದು ಹೊಸ ಸವಾಲಿನ ಆರಂಭವಾಗಿದೆ' ಎಂದು ಹೇಳಿದ್ದಾರೆ.

ನ್ಯುಮೋನಿಯಾ ಲಸಿಕೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಹಿರಿಯ ನಾಗರಿಕರಿಗೆ ನ್ಯುಮೋನಿಯಾ ಲಸಿಕೆ ಹಾಕಿಸಬೇಕು ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್. ಮಂಜುನಾಥ್ ಆಗ್ರಹಿಸಿದರು.

ಲೋಕಸಭೆಯಲ್ಲಿ ಗುರುವಾರ ನಡೆದ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ದೇಶದಲ್ಲಿ ಶೇ 97ರಷ್ಟು ಮಕ್ಕಳಿಗೆ ಲಸಿಕೆ ಹಾಕಿಸಲಾದೆ. ನಮ್ಮ ಜನರ ಜೀವಿತಾವಧಿ ಈಗ 71–72 ವರ್ಷಗಳು. 40 ಲಕ್ಷ ಜನರು ನ್ಯುಮೋನಿಯಾದಿಂದ ನರಳಿದ್ದಾರೆ.


ಡಾ. ಸಿ. ಎನ್. ಮಂಜುನಾಥ್

ಈ ಕಾಯಿಲೆಯ ಮರಣ ಪ್ರಮಾಣ ಶೇ 17ರಿಂದ ಶೇ 40ರಷ್ಟು ಇದೆ. ಹಿರಿಯ ನಾಗರಿಕರಿಗೆ ಒಂದು ಸಲ ಲಸಿಕೆ ಹಾಕಿಸುವ ಮೂಲಕ ಈ ಕಾಯಿಲೆಯನ್ನು ನಿಯಂತ್ರಿಸಬಹುದು' ಎಂದು ಸಲಹೆ ನೀಡಿದರು.

'ಕೈಗಾರಿಕೀಕರಣದಿಂದ ವ್ಯಾಪಕ ಪ್ರಮಾಣದಲ್ಲಿ ಕೊಳಚೆ ನೀರು ಉತ್ಪಾದನೆಯಾಗುತ್ತಿದೆ. ಬೆಂಗಳೂರಿನಲ್ಲಿ ಕೊಳಚೆ ನೀರನ್ನು ಸಂಸ್ಕರಿಸಿ ಪಕ್ಕದ ಕೋಲಾರ ಹಾಗೂ ಚಿಕ್ಕಬಳ್ಳಾಪುರದ ಕೆರೆಗಳಿಗೆ ಹರಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ, ತೃತೀಯ ಹಂತದ ಸಂಸ್ಕರಣೆ ಮಾಡಿದ ಬಳಿಕವಷ್ಟೇ ಕೆರೆಗಳಿಗೆ ಈ ನೀರನ್ನು ಹರಿಸಬೇಕು. ಆದರೆ, ದ್ವಿತೀಯ ಹಂತದ ಸಂಸ್ಕರಣೆ ಮಾಡಿ ಕೆರೆಗಳಿಗೆ ಬಿಡಲಾಗುತ್ತಿದೆ. ಇದರಿಂದ ತರಕಾರಿಗಳು ವಿಷಮಯವಾಗುತ್ತಿದೆ. ಕೊಳವೆಬಾವಿಗಳ ನೀರು ಪರಿಶುದ್ಧವಾಗಿಲ್ಲ. ಎರಡನೇ ಹಂತದ ಸಂಸ್ಕರಣಾ ಘಟಕಗಳನ್ನು ಮೂರನೇ ಹಂತಕ್ಕೆ ಮೇಲ್ದರ್ಜೆಗೆ ಏರಿಸಲು ಜಲಶಕ್ತಿ ಹಾಗೂ ಪರಿಸರ ಸಚಿವಾಲಯಗಳು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಅಪಹರಿಸಿ, ಚಿತ್ರಹಿಂಸೆ: ಪ್ರಕರಣ

ಪಾಲ್ಘರ್ (ಪಿಟಿಐ): ಮಹಾರಾಷ್ಟ್ರದ ಠಾಣೆ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯದ ವ್ಯಕ್ತಿಯೊಬ್ಬನನ್ನು ಇಟ್ಟಿಗೆ ಭಟ್ಟಿ ಮಾಲೀಕ ಅಪಹರಿಸಿ, ಚಿತ್ರಹಿಂಸೆ ನೀಡಿದ್ದಾನೆ ಎಂದು ಪೊಲೀಸರು ಶುಕ್ರವಾರ ತಿಳಿಸಿದರು.

ಸುಭಾಷ್ ಶಿನ್ವರ್ ಭೋಯಿರ್ (25) ಅವರನ್ನು ಮರಕ್ಕೆ ತಲೆಕೆಳಗಾಗಿ ನೇತು ಹಾಕಿ, ಆರೋಪಿ ನಂದು ದೇವಲೀಕರ್ ಮತ್ತು ಆತನ ಸಹಚರ ಬುಧವಾರ ಚಿತ್ರಹಿಂಸೆ ನೀಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಗಳು ಭಿವಂಡಿ ನಿವಾಸಿಗಳಾಗಿದ್ದು, ಇಬ್ಬರ ವಿರುದ್ಧ ದೂರು ದಾಖಲಿಸಿಕೊಳ್ಳಲಾಗಿದೆ. ತನಿಖೆ ನಡೆಯುತ್ತಿದೆ ಎಂದು ಮೂಲಗಳು ಹೇಳಿವೆ.

'ಸುಭಾಷನ ಅಣ್ಣನಿಗೆ ಭಟ್ಟಿ ಮಾಲೀಕ ₹50 ಸಾವಿರ ಸಾಲ ನೀಡಿದ್ದ. ಅಣ್ಣನನ್ನು ಹುಡುಕುವ ನೆಪದಲ್ಲಿ ಬುಧವಾರ ಮಧ್ಯಾಹ್ನ ಸುಭಾಷ್ ಅವರನ್ನು ವಾಹನಕ್ಕೆ ಹತ್ತಿಸಿಕೊಂಡಿದ್ದಾನೆ. ಇಟ್ಟಿಗೆ ಭಟ್ಟಿಗಳಲ್ಲಿ ಹುಡುಕಿ, ಆತ ಸಿಗದ ಕಾರಣ ಸುಭಾಷ್ ಅವರನ್ನು ಭಿವಂಡಿ ಬಳಿಯಿರುವ ಇಟ್ಟಿಗೆ ಭಟ್ಟಿಗೆ ಕರೆದುಕೊಂಡು ಹೋಗಿ ಹಲ್ಲೆ ನಡೆಸಿದ್ದಾನೆ. ಕೈ-ಕಾಲು ಕಟ್ಟಿ, ಮರಕ್ಕೆ ತಲೆಕೆಳಗಾಗಿ ನೇತು ಹಾಕಿದ್ದಾರೆ. ಅಲ್ಲದೇ, ಗಾಯಕ್ಕೆ ಖಾರದ ಪುಡಿ ಹಾಕಿ ಹಿಂಸೆ ನೀಡಿದ್ದಾರೆ ಎಂದು ಎಫ್‌ಐಆರ್ ದಾಖಲಾಗಿದೆ.

'ಕಾಂಗ್ರೆಸ್‌ನಿಂದ ಎಲ್‌ಪಿಜಿ ಭೀತಿ'

ನವದೆಹಲಿ: 'ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಬಗ್ಗೆ ಸಾರ್ವಜನಿಕರಲ್ಲಿ ಆತಂಕ ಮೂಡಿಸಲು ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಗಳು ಪ್ರಯತ್ನಿಸುತ್ತಿವೆ. ಈ ಪಕ್ಷಗಳ ಆಡಳಿತವಿರುವ ರಾಜ್ಯಗಳಿಂದ ಮಾತ್ರ ಇಂತಹ ಸುದ್ದಿಗಳು ಹೊರಬರುತ್ತಿವೆ' ಎಂದು ಬಿಜೆಪಿ ಆರೋಪಿಸಿದೆ.

'ಸಿಲಿಂಡರ್ ಕೊರತೆ ಬಗ್ಗೆ ಸುದ್ದಿ ಬಂದ ಮೊದಲ ರಾಜ್ಯ ಕರ್ನಾಟಕ ನಂತರ ಪಶ್ಚಿಮ ಬಂಗಾಳ' ಎಂದು ಬಿಜೆಪಿ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ 'ಎಕ್ಸ್'ನಲ್ಲಿ ಶುಕ್ರವಾರ ಪೋಸ್ಟ್ ಮಾಡಿದ್ದಾರೆ.

ಬಿಜೆಪಿ ಸದಸ್ಯ ಜಗ್ಗೇಶ್ ರಾಜ್ಯಸಭೆಯಲ್ಲಿ ಕೇಳಿದ ಪ್ರಶ್ನೆಗೆ ಸಚಿವ ಅಶ್ವಿನಿ ವೈಷ್ಣವ್ ಸ್ಪಷ್ಟನೆ

'ಬೆಂಗಳೂರು–ಮುಂಬೈ ಹೈ ಸ್ಪೀಡ್ ರೈಲು ಇಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು–ಬೆಳಗಾವಿ–ಮುಂಬೈ ನಡುವೆ ಹೈ ಸ್ಪೀಡ್ ರೈಲು ಮಾರ್ಗ ಆರಂಭಿಸುವ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದಿಲ್ಲ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸ್ಪಷ್ಟಪಡಿಸಿದ್ದಾರೆ.

ಈ ಮಾರ್ಗದಲ್ಲಿ ಹೈ ಸ್ಪೀಡ್ ರೈಲು ಸೇವೆ ಆರಂಭಿಸಲು ಪ್ರಸ್ತಾವ ಬಂದಿದೆಯೇ, ಕಾರ್ಯಸಾಧ್ಯತಾ ವರದಿ ಅಥವಾ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗಿದೆಯೇ ಎಂದು ಬಿಜೆಪಿ ಸದಸ್ಯ ಜಗ್ಗೇಶ್ ಅವರು ರಾಜ್ಯಸಭೆಯಲ್ಲಿ ಶುಕ್ರವಾರ ಪ್ರಶ್ನೆ ಕೇಳಿದ್ದರು.

ಮುಖ್ಯಾಂಶಗಳು

- ಬಜೆಟ್‌ನಲ್ಲಿ ಏಳು ಹೈ ಸ್ಪೀಡ್ ರೈಲು ಮಾರ್ಗ ಘೋಷಣೆ
- ಆರ್ಥಿಕ ಕಾರ್ಯಸಾಧ್ಯತೆ ಅಧ್ಯಯನ

ಇದಕ್ಕೆ ಉತ್ತರ ನೀಡಿರುವ ವೈಷ್ಣವ್, 'ಈ ಸಲದ ಬಜೆಟ್‌ನಲ್ಲಿ ಏಳು ಹೈ ಸ್ಪೀಡ್ ರೈಲು ಮಾರ್ಗಗಳನ್ನು ಘೋಷಿಸಲಾಗಿದೆ. ಹೆಚ್ಚು ಬಂಡವಾಳ ಹೂಡಿಕೆ ಅಗತ್ಯವಿರುವುದರಿಂದ ಯೋಜನೆಯನ್ನು ಮಂಜೂರು ಮಾಡುವ ನಿರ್ಧಾರವು ಡಿಪಿಆರ್ ಫಲಿತಾಂಶ, ತಾಂತ್ರಿಕ-ಆರ್ಥಿಕ ಕಾರ್ಯಸಾಧ್ಯತಾ ಅಧ್ಯಯನಗಳು ಮತ್ತು ಸಂಪನ್ಮೂಲಗಳ ಲಭ್ಯತೆಯಂತಹ ಹಲವು ಅಂಶಗಳನ್ನು ಅವಲಂಬಿಸಿರುತ್ತದೆ' ಎಂದು ತಿಳಿಸಿದ್ದಾರೆ.

ಕೇಂದ್ರ ಬಜೆಟ್ ಬಳಿಕ ರೈಲ್ವೆ ಸಚಿವರನ್ನು ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಹಾಗೂ ಎಚ್.ಡಿ.ಕುಮಾರಸ್ವಾಮಿ ಭೇಟಿ ಮಾಡಿ ಬೆಂಗಳೂರು–ಮುಂಬೈ ನಡುವೆ ಹೈ ಸ್ಪೀಡ್ ರೈಲು ಮಾರ್ಗಕ್ಕೆ ಒತ್ತಾಯಿಸಿದ್ದರು. ಕೆಲವೇ ದಿನಗಳಲ್ಲಿ ಈ ಮಾರ್ಗ ಘೋಷಣೆ ಮಾಡುವುದಾಗಿ ರೈಲ್ವೆ ಸಚಿವರು ಭರವಸೆ ನೀಡಿದ್ದಾರೆ ಎಂದು ಉಭಯ ಸಚಿವರು ಹೇಳಿಕೆ ನೀಡಿದ್ದರು.



ಮಹಿಳಾ ಹಾಕಿ ವಿಶ್ವಕಪ್‌ಗೆ ನೇರ ಅರ್ಹತೆ ಪಡೆದ ಸಂಭ್ರಮದಲ್ಲಿ ಭಾರತ ತಂಡದ ಆಟಗಾರ್ತಿಯರು ಹಾಕಿ ಇಂಡಿಯಾ ಚಿತ್ರ

ಮನೀಷಾ ಮಿಂಚು: ಫೈನಲ್‌ಗೆ ಭಾರತ

ಮಹಿಳೆಯರ ವಿಶ್ವಕಪ್ ಹಾಕಿ ಅರ್ಹತಾ ಟೂರ್ನಿ ● ಸೆಮಿಯಲ್ಲಿ ಇಟಲಿಗೆ ನಿರಾಸೆ

ಮುಖ್ಯಾಂಶಗಳು

- ಫೈನಲ್‌ನಲ್ಲಿ ಭಾರತಕ್ಕೆ ಇಂಗ್ಲೆಂಡ್ ಎದುರಾಳಿ
- ಮತ್ತೊಂದು ಸೆಮಿಯಲ್ಲಿ ಇಂಗ್ಲೆಂಡ್‌ಗೆ 2–0ಯಿಂದ ಸ್ಕಾಟ್ಲೆಂಡ್ ವಿರುದ್ಧ ಜಯ

ಫೈನಲ್ ಇಂದು

ಭಾರತ V/s ಇಂಗ್ಲೆಂಡ್
ತಾಣ: ಹೈದರಾಬಾದ್
ಪಂದ್ಯ ಆರಂಭ: ರಾತ್ರಿ 7:30
ಲೈವ್: ಸ್ಟಾರ್ ಸ್ಪೋರ್ಟ್ಸ್ ಖೇಲ್, ಜಿಯೊಹಾಟ್‌ಸ್ಟಾರ್ ಆ್ಯಪ್

ಹೈದರಾಬಾದ್ (ಪಿಟಿಐ): ಮನೀಷಾ ಚೌಹಾಣ್ ಅವರು ಗಳಿಸಿದ ಏಕೈಕ ಗೋಲಿನ ಬಲದಿಂದ ಭಾರತ ಮಹಿಳೆಯರ ಹಾಕಿ ತಂಡವು ವಿಶ್ವಕಪ್ ಅರ್ಹತಾ ಸುತ್ತಿನ ಸೆಮಿಫೈನಲ್‌ನಲ್ಲಿ ಜಯಭೇರಿ ಬಾರಿಸಿತು. ಫೈನಲ್ ಪಂದ್ಯಕ್ಕೆ ಲಗ್ಗೆ ಇಟ್ಟಿತು. ಅಂತಿಮ ಪಂದ್ಯದಲ್ಲಿ ಭಾರತವು ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಇಲ್ಲಿನ ಜಿ.ಎಂ.ಸಿ. ಬಾಲಯೋಗಿ (ಗಚ್ಚಿಬೌಲಿ ಹಾಕಿ ಸಂಕೀರ್ಣ) ಕ್ರೀಡಾಂಗಣದಲ್ಲಿ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಭಾರತವು ಇಟಲಿ ವಿರುದ್ಧ 1–0ಯಿಂದ ಗೆದ್ದಿತು.

ಈ ಪಂದ್ಯದ ಮೊದಲ ಕ್ವಾರ್ಟರ್‌ನಲ್ಲಿ ಉಭಯ ತಂಡಗಳೂ ರೋಚಕ ಹಣಾಹಣಿ ನಡೆಸಿದವು. ಈ ಅವಧಿಯಲ್ಲಿ ಮಿಡ್‌ಫೀಲ್ಡ್‌ನಲ್ಲಿ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಉಭಯ ತಂಡಗಳ ಆಟಗಾರ್ತಿಯರು ಪೈಪೋಟಿ ನಡೆಸಿದರು. ಈ ಹೊತ್ತಿನಲ್ಲಿ ಇಟಲಿಯ ಆಟಗಾರ್ತಿಯರು ಆಕ್ರಮಣ ಶೈಲಿಯ ಆಟವಾಡಿದರು. ಇದರಿಂದಾಗಿ ಅವರಿಗೆ ಗೋಲು ಗಳಿಸುವ ಕೆಲವು ಅವಕಾಶಗಳೂ ಸೃಷ್ಟಿಯಾಗಿದ್ದವು. ಆದರೆ ಫಲಪ್ರದವಾಗಲಿಲ್ಲ.

ಎರಡನೇ ಕ್ವಾರ್ಟರ್‌ನಲ್ಲಿ ಭಾರತ ಮರುಹೋರಾಟ ಮಾಡಿತು. 18ನೇ ನಿಮಿಷದಲ್ಲಿ ಭಾರತವು ಮೊದಲ ಪೆನಾಲ್ಟಿ ಕಾರ್ನರ್ ಗಿಟ್ಟಿಸುವಲ್ಲಿ ಯಶಸ್ವಿಯಾಯಿತು. ನವನೀತ್ ಕೌರ್ ಅವರ ಹೊಡೆತವನ್ನು ತಡೆಯುವಲ್ಲಿ ಇಟಲಿ ಗೋಲ್‌ಕೀಪರ್ ಲೂಸಿಯಾ ಐನೆಸ್ ಕಾರುಸೊ ಯಶಸ್ವಿಯಾದರು. 27ನೇ ನಿಮಿಷದಲ್ಲಿ ಮತ್ತೊಂದು ಪೆನಾಲ್ಟಿ ಕಾರ್ನರ್ ಲಭಿಸಿತು. ಆದರೆ ಅದರಲ್ಲಿಯೂ ಗೋಲು ಆಗಲಿಲ್ಲ. ಇದಾಗಿ ಎರಡು ನಿಮಿಷಗಳ ನಂತರ ಮತ್ತೊಂದು ಪೆನಾಲ್ಟಿ ಕಾರ್ನರ್ ಲಭಿಸಿತು. ನವನೀತ್ ಅವರ ಗುರಿ ತಪ್ಪಿತು.

ದ್ವಿತೀಯಾರ್ಧದ ಆರಂಭದಲ್ಲಿ ಇಟಲಿ ಭಾರಿ ಪೈಪೋಟಿಯೊಡ್ಡಿತು. ಪದೇ ಪದೇ ಗೋಲುಪೆಟ್ಟಿಗೆಯತ್ತ ದಂಡೆತ್ತಿ ಬಂದ ಇಟಲಿ ಆಟಗಾರ್ತಿಯರನ್ನು ತಡೆಗಟ್ಟುವಲ್ಲಿ ಭಾರತದ ಗೋಲ್‌ಕೀಪರ್ ಬಿಚುದೇವಿ ಕರಿಬಮ್ ಯಶಸ್ವಿಯಾದರು.

ಆದರೆ 40ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಕಾರ್ನರ್ ಭಾರತಕ್ಕೆ ವರದಾನವಾಯಿತು. ಮನೀಷಾ ಅವರು ಮಾಡಿದ ಡ್ರ್ಯಾಗ್‌ಫ್ಲಿಕ್ ಫಲ ನೀಡಿತು. ಇಟಲಿಯ ರಕ್ಷಣಾ ಪಡೆಯನ್ನು ದಾಟಿದ ಚೆಂಡು ಗೋಲುಪೆಟ್ಟಿಗೆಗೆ ಸೇರಿದಾಗ ಭಾರತದ ಪಾಳೆಯದಲ್ಲಿ ಸಂಭ್ರಮ ಮುಗಿಲುಮುಟ್ಟಿತು.

ಅಂತಿಮ ಕ್ವಾರ್ಟರ್‌ನಲ್ಲಿಯೂ ಭಾರತಕ್ಕೆ ಎರಡು ಪೆನಾಲ್ಟಿ ಕಾರ್ನರ್‌ಗಳು ಲಭಿಸಿದವು. ಆದರೆ ಇಟಲಿಯ ರಕ್ಷಣಾ ಪಡೆ ಪ್ರತಿರೋಧವೊಡ್ಡಿತು. 59ನೇ ನಿಮಿಷದಲ್ಲಿ ಇಟಲಿಗೆ ಪೆನಾಲ್ಟಿ ಕಾರ್ನರ್ ಲಭಿಸಿತು. ಆದರೆ ಗೋಲು ಗಳಿಸಲು ಸಾಧ್ಯವಾಗಲಿಲ್ಲ. ಕೊನೆಯ ನಿಮಿಷದಲ್ಲಿ ಇಟಲಿ ಆಟಗಾರ್ತಿಯರು ಮಾಡಿದ ಪ್ರಯತ್ನಗಳೂ ಕೈಗೂಡಲಿಲ್ಲ.

ಭಾರತ ತಂಡವು ಈಗಾಗಲೇ ವಿಶ್ವಕಪ್ ಟೂರ್ನಿಗೆ ಅರ್ಹತೆ ಗಿಟ್ಟಿಸಿದೆ. ಇದೀಗ ಅರ್ಹತಾ ಸುತ್ತಿನ ಫೈನಲ್‌ನಲ್ಲಿಯೂ ಜಯಿಸುವತ್ತ ಚಿತ್ತ ನೆಟ್ಟಿದೆ.

ಇಂಡಿಯನ್ ವೆಲ್ಸ್ ಟೆನಿಸ್: ಜ್ವರೇವ್ ಮುನ್ನಡೆ

ಸೆಮಿಗೆ ಅಲ್ಕರಾಜ್, ಸಿನ್ನರ್ ಲಗ್ಗೆ

ಇಂಡಿಯನ್ ವೆಲ್ಸ್ (ಅಮೆರಿಕ) (ಪಿಟಿಐ): ಸ್ಪೇನ್‌ನ ತಾರೆ ಕಾರ್ಲೋಸ್ ಅಲ್ಕರಾಜ್ ಅವರು ಹಾಲಿ ಋತುವಿನಲ್ಲಿ ಗೆಲುವಿನ ಓಟವನ್ನು 16 ಪಂದ್ಯಗಳಿಗೆ ವಿಸ್ತರಿಸಿದರು. ಬ್ರಿಟನ್‌ನ ಕ್ಯಾಮರಾನ್ ನಾರ್ರಿ ಅವರನ್ನು ನೇರ ಸೆಟ್‌ಗಳಿಂದ ಮಣಿಸಿದ ಅವರು ಇಂಡಿಯನ್ ವೆಲ್ಸ್ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದರು.

ಅಗ್ರಶ್ರೇಯಾಂಕದ ಅಲ್ಕರಾಜ್ ಅವರು 6-3, 6-4 ಅಂತರದಿಂದ 29ನೇ ಶ್ರೇಯಾಂಕಿತ ಕ್ಯಾಮರಾನ್ ಅವರನ್ನು ಮಣಿಸಿ, ಸತತ ಐದನೇ ಬಾರಿ ನಾಲ್ಕರ ಘಟ್ಟಕ್ಕೆ ಮುನ್ನಡೆದರು.

22 ವರ್ಷದ ಅಲ್ಕರಾಜ್ ಅವರು ಮುಂದಿನ ಸುತ್ತಿನಲ್ಲಿ ರಷ್ಯಾದ ಡೇನಿಯಲ್ ಮೆಡ್ವೆಡೇವ್ ಅವರನ್ನು ಎದುರಿಸಲಿದ್ದಾರೆ. 11ನೇ ಶ್ರೇಯಾಂಕದ ಮೆಡ್ವೆಡೇವ್ 6-1, 7-5ರಿಂದ ಹಾಲಿ ಚಾಂಪಿಯನ್ ಜ್ಯಾಕ್ ಡ್ರೇಪರ್ ವಿರುದ್ಧ ಗೆಲುವು ಸಾಧಿಸಿದರು.

ವಿಶ್ವದ ಎರಡನೇ ಕ್ರಮಾಂಕದ ಯಾನಿಕ್ ಸಿನ್ನರ್ 6–1, 6–2ರಿಂದ ಅಮೆರಿಕದ ಲರ್ನರ್ ಟಿಯೆನ್ ಅವರನ್ನು ಸೋಲಿಸಿದರು. ಇಟಲಿಯ ಆಟಗಾರ ಸೆಮಿಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವೆರೇವ್ ಅವರನ್ನು ಎದುರಿಸಲಿದ್ದಾರೆ. ಜರ್ಮನಿಯ ಜ್ವರೇವ್ 6-2, 6-3ರಿಂದ ಆರ್ಥರ್ ಫಿಲ್ಸ್ (ಫ್ರಾನ್ಸ್) ಅವರನ್ನು ಹಿಮ್ಮೆಟ್ಟಿಸಿದರು.


ಇಟಲಿಯ ಯಾನಿಕ್ ಸಿನ್ನರ್ ಎಎಫ್‌ಪಿ ಚಿತ್ರ

ಹಾಲಿ ಋತುವಿನಲ್ಲಿ ಆಸ್ಟ್ರೇಲಿಯಾ ಓಪನ್, ಕತಾರ್ ಓಪನ್ ಕಿರೀಟಗಳಿಗೆ ಮುತ್ತಿಕ್ಕಿರುವ ಅಲ್ಕರಾಜ್ ಅವರು ಸತತ ಮೂರನೇ ಪ್ರಶಸ್ತಿಯ ಛಲದಲ್ಲಿದ್ದಾರೆ. ನವೆಂಬರ್‌ನಲ್ಲಿ ಪ್ಯಾರಿಸ್ ಮಾಸ್ಟರ್ಸ್‌ನಲ್ಲಿ ಕ್ಯಾಮರಾನ್ ವಿರುದ್ಧ ಸೋಲು ಅನುಭವಿಸಿದ್ದ ಅಲ್ಕರಾಜ್ ಇಲ್ಲಿ ಮುಯ್ಯಿ ತೀರಿಸಿಕೊಂಡರು.

ತಜ್ಞರ ಸಮಿತಿಯಿಂದ ಚಿನ್ನಸ್ವಾಮಿ ಕ್ರೀಡಾಂಗಣದ ಸಮಗ್ರ ಪರಿಶೀಲನೆ

ರಾಜ್ಯ ಸರ್ಕಾರದತ್ತ ಕೆಎಸ್‌ಸಿಎ, ಆರ್‌ಸಿಬಿ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನವೀಕರಣ ಕಾಮಗಾರಿ ಮತ್ತು ಪಂದ್ಯಪೂರ್ವ ಸಿದ್ಧತೆಗಳನ್ನು ಕರ್ನಾಟಕ ಸರ್ಕಾರ ನೇಮಕ ಮಾಡಿರುವ ತಜ್ಞರ ಸಮಿತಿಯು ಶುಕ್ರವಾರ 'ಅಣಕು ಅವಲೋಕನ' ಮಾಡಿತು.

ಇದೇ 28ರಂದು ಐಪಿಎಲ್ ಟೂರ್ನಿಯ ಉದ್ಘಾಟನೆ ಪಂದ್ಯ ಮತ್ತು ಏಪ್ರಿಲ್ 5ರಂದು ಮತ್ತೊಂದು ಪಂದ್ಯವು ಇಲ್ಲಿ ಆಯೋಜನೆಗೊಳ್ಳಲಿದೆ. ಈಚೆಗೆ ಬಿಸಿಸಿಐ ಪ್ರಕಟಿಸಿರುವ ವೇಳಾಪಟ್ಟಿಯಲ್ಲಿ ಪಂದ್ಯಗಳು ನಿಗದಿಯಾಗಿವೆ. ಹೋದ ವರ್ಷ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಜಯೋತ್ಸವ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿತ್ತು. 11 ಜನರು ಸಾವಿಗೀಡಾಗಿದ್ದರು. ಅದರ ನಂತರದ ಬೆಳವಣಿಗೆಯಲ್ಲಿ ಕ್ರೀಡಾಂಗಣದಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಮಾಡಬೇಕಾದ ನವೀಕರಣ ಕಾರ್ಯಗಳನ್ನು ಸರ್ಕಾರದ ನಿಯೋಗವು ಶಿಫಾರಸು ಮಾಡಿತ್ತು. ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಇರುವ ಪರಿಶೀಲನಾ ಸಮಿತಿಯು ಈ ಕಾಮಗಾರಿಗಳ ಮೇಲ್ವಿಚಾರಣೆ ನಡೆಸುತ್ತಿದೆ.



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ

ಶುಕ್ರವಾರ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 12 ರವರೆಗೆ 'ಅಣಕು ಪ್ರದರ್ಶನ' ನಡೆಸಲಾಯಿತು, ಇದರಲ್ಲಿ ತಜ್ಞರ ಸಮಿತಿ, ಸ್ಥಳೀಯ ಪೊಲೀಸ್ ಅಧಿಕಾರಿಗಳು ಮತ್ತು ಅಗ್ನಿಶಾಮಕ ದಳದ ಸದಸ್ಯರು ಸೇರಿದಂತೆ 50ಕ್ಕೂ ಹೆಚ್ಚು ಜನರು ಭಾಗಿಯಾಗಿದ್ದರು. ಈ ಕುರಿತ ವರದಿಯನ್ನು ಸಮಿತಿಯು ಸರ್ಕಾರಕ್ಕೆ ಸಲ್ಲಿಸಲಿದೆ. ರಾಜ್ಯ ಸರ್ಕಾರವು ತನ್ನ ನಿಲುವನ್ನು ಇದೇ 16ರಂದು ಪ್ರಕಟಿಸುವ ನಿರೀಕ್ಷೆ ಇದೆ. ಆದರೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರು 15ರಿಂದ ಈ ಕ್ರೀಡಾಂಗಣದಲ್ಲಿ ಪೂರ್ವತಾಲೀಮು ಆರಂಭಿಸಿದ್ದಾರೆ.

ಐಪಿಎಲ್ ಪಂದ್ಯಗಳ ಆಯೋಜನೆಗೆ ಸರ್ಕಾರದಿಂದ ಹಸಿರು ನಿಶಾನೆ ಸಿಗಲಿದೆ ಎಂಬ ವಿಶ್ವಾಸದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಆಡಳಿತ ಸಮಿತಿಯು ಇದೆ.

'ಬೆಳಿಗ್ಗೆ ಪೂರ್ಣ ಪ್ರಮಾಣದ ಅಣಕು ಅವಲೋಕನ ನಡೆಯಿತು. ಮಾರ್ಚ್ 16ರಂದು ಸಂಜೆಯ ವೇಳೆಗೆ ಸರ್ಕಾರದಿಂದ ಸೂಚನೆ ಬರುವ ನಿರೀಕ್ಷೆ ಇದೆ' ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರೀಡಾಂಗಣದ ಪ್ರವೇಶ ದ್ವಾರಗಳನ್ನು ಆರು ಮೀಟರ್ ಬದಲಾಗಿ ಒಂಬತ್ತು ಮೀಟರ್‌ಗೆ ವಿಸ್ತರಿಸಲಾಗಿದೆ. ಹೊಸ ಗೇಟ್‌ಗಳನ್ನು ಅಳವಡಿಸಲಾಗಿದೆ. ಬಿ ಮೈದಾನವನ್ನು ಪ್ರೇಕ್ಷಕರಿಗೆ ಕಾಯುವಿಕೆಯ ಸ್ಥಳವಾಗಿ ಸಿದ್ಧಗೊಳಿಸಲಾಗಿದೆ. ತಮ್ಮ ಸ್ಟ್ಯಾಂಡ್‌ಗಳಿಗೆ ಹೋಗಲು ಸುಮಾರು 10 ಸಾವಿರ ಜನರು ಸಾಲುಗಟ್ಟಿ ಸಾಗಲು ಇಲ್ಲಿ ಅವಕಾಶ ಕಲ್ಪಿಸಲಾಗುತ್ತಿದೆ. ಇದರಿಂದಾಗಿ ಜನದಟ್ಟಣೆ ನಿರ್ವಹಣೆ ಸುಲಭವಾಗಲಿದೆ. ಟಿಕೆಟ್ ಉಳ್ಳವರ ಪ್ರವೇಶವೂ ಸರಾಗವಾಗಲಿದೆ ಎಂದು ಮೂಲಗಳು ಹೇಳಿವೆ.

ಮಹಿಳೆಯರು ಮತ್ತು ಮಕ್ಕಳಿಗೆ ಪ್ರತ್ಯೇಕ ಪ್ರವೇಶ ಮಾರ್ಗಗಳ ವ್ಯವಸ್ಥೆಗಳನ್ನು ಸಹ ದ್ವಾರಗಳಲ್ಲಿ ಜಾರಿಗೆ ತರಲಾಗುವುದು. ಇದು ಮಧ್ಯಾಹ್ನ 3.30ಕ್ಕೆ ಅಥವಾ ರಾತ್ರಿ 7.30ಕ್ಕೆ ಆರಂಭವಾಗುವ ಪಂದ್ಯಗಳ ಸಂದರ್ಭದಲ್ಲಿ ಮೂರರಿಂದ ನಾಲ್ಕು ಗಂಟೆಗಳ ಕಾಲ ತೆರೆಯುತ್ತದೆ.

ಇದಲ್ಲದೆ, ಆರ್‌ಸಿಬಿ ಪಂದ್ಯ ನಡೆಯುವ ದಿನಗಳಲ್ಲಿ ಕ್ರೀಡಾಂಗಣದ ನಾಲ್ಕು ಮೂಲೆಗಳಲ್ಲಿ ಒಂದೊಂದು ಸಂಚಾರಿ ವೈದ್ಯಕೀಯ ಘಟಕ ಸ್ಥಾಪಿಸಲಾಗುವುದು.

ಆರ್‌ಸಿಬಿಯು ಲೀಗ್ ಹಂತದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐದು ಹಾಗೂ ರಾಯಪುರದಲ್ಲಿ ಎರಡು ಪಂದ್ಯಗಳನ್ನು ಆಡಲಿದೆ.

ಕುಶಾಲ್ ದಾಸ್ ನಿಧನ



ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಮಾಜಿ ಪ್ರಧಾನ ಕಾರ್ಯದರ್ಶಿ ಕುಶಾಲ್ ದಾಸ್ (65) ಅವರು ಶುಕ್ರವಾರ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

12 ವರ್ಷ ಎಐಎಫ್‌ಎಫ್ ಪ್ರಧಾನ ಕಾರ್ಯದರ್ಶಿ ಹುದ್ದೆಯಲ್ಲಿದ್ದ ದಾಸ್ ಅವರು 2022ರಲ್ಲಿ ಅನಾರೋಗ್ಯದ ಕಾರಣ ನೀಡಿ ರಾಜೀನಾಮೆ ನೀಡಿದ್ದರು. ಅವರು ಭಾರತದಲ್ಲಿ 2017ರ ಫಿಫಾ 17 ವರ್ಷದೊಳಗಿನವರ ವಿಶ್ವಕಪ್ ಟೂರ್ನಿ ಆಯೋಜಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

2010ರಲ್ಲಿ ಫುಟ್‌ಬಾಲ್ ಆಡಳಿತವನ್ನು ಪ್ರವೇಶಿಸುವ ಮೊದಲು ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮತ್ತು ಅಂತರರಾಷ್ಟ್ರೀಯ ಮ್ಯಾನೇಜ್‌ಮೆಂಟ್ ಗ್ರೂಪ್‌ನ ಭಾರತದ ಮುಖ್ಯ ಹಣಕಾಸು ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು.

ದಾಸ್ ಅಧಿಕಾರಾವಧಿಯಲ್ಲಿ ಭಾರತವು ಮೊದಲ ಬಾರಿಗೆ ಫಿಫಾ 17 ವರ್ಷದೊಳಗಿನವರ ವಿಶ್ವಕಪ್‌ಗೆ ಆತಿಥ್ಯ ವಹಿಸಿದ್ದು ಮಾತ್ರವಲ್ಲದೆ, ರಾಷ್ಟ್ರೀಯ ತಂಡವು ಮೂರು ಎಎಫ್‌ಸಿ ಏಷ್ಯನ್ ಕಪ್ ಟೂರ್ನಿಗಳಿಗೆ ಅರ್ಹತೆ ಪಡೆಯಿತು. ಆ ಸಮಯದಲ್ಲಿ ಭಾರತ ಫುಟ್‌ಬಾಲ್ ಸಾಧನೆಯನ್ನು ಅವರು 'ಗೇಮ್ ಚೇಂಜರ್' ಎಂದು ಬಣ್ಣಿಸಿದ್ದರು.

ಸ್ವಿಸ್ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದ ಜೋಡಿ

ಗಾಯ: ಹಿಂದೆ ಸರಿದ ಸಾತ್ವಿಕ್–ಚಿರಾಗ್

ಬಾಸೆಲ್ (ಪಿಟಿಐ): ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದ ಭಾರತದ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಶುಕ್ರವಾರ ಗಾಯದ ಕಾರಣಕ್ಕೆ ಸ್ಪರ್ಧೆಯಿಂದ ಹಿಂದೆ ಸರಿದರು.

ಅಗ್ರಶ್ರೇಯಾಂಕದ ಸಾತ್ವಿಕ್ ಮತ್ತು ಚಿರಾಗ್ ಜೋಡಿಯು ಎಂಟರ ಘಟ್ಟದ ಪಂದ್ಯದಲ್ಲಿ ಡೆನ್ಮಾರ್ಕ್‌ನ ಕ್ರಿಸ್ಟಿಯನ್ ಫೌಸ್ಟ್ ಕ್ಜೇರ್ ಮತ್ತು ರಾಸ್ಮಸ್ ಕ್ಜೇರ್ ಅವರನ್ನು ಎದುರಿಸಬೇಕಿತ್ತು.

ಶರವೇಗದ ಸ್ಮ್ಯಾಷ್ ಹೊಡೆತಕ್ಕೆ ಹೆಸರಾದ 25 ವರ್ಷದ ಸಾತ್ವಿಕ್ ಅವರು ಬಲಭುಜದ ನೋವಿನಿಂದ ಬಳಲುತ್ತಿದ್ದಾರೆ. 2023ರಲ್ಲಿ ಅವರು ಗಂಟೆಗೆ 565 ಕಿ.ಮೀ. ವೇಗದ ಸ್ಮ್ಯಾಷ್ ಪ್ರಯೋಗಿಸಿ ವಿಶ್ವದಾಖಲೆ ನಿರ್ಮಿಸಿದ್ದರು.

'ಅದು ಹಳೆಯ ಗಾಯ. ಸಾತ್ವಿಕ್ ಅವರು ಆ ಗಾಯದಿಂದ ಬೇಗನೇ ಚೇತರಿಸಿಕೊಳ್ಳಲಿದ್ದಾರೆ. ಕನಿಷ್ಠ ಒಂದು ವಾರ ವಿಶ್ರಾಂತಿ ಬೇಕಾಗಬಹುದು' ಎಂದು ಮಲೇಷ್ಯಾದ ಕೋಚ್ ಟಾನ್ ಕಿಮ್ ಹರ್ ತಿಳಿಸಿದ್ದಾರೆ.

ಗುರುವಾರ ನಡೆದ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಜೋಡಿ 21-15, 15-21, 28-26 ರಿಂದ ಜಪಾನ್‌ನ ಹಿರೋಕಿ ಒಕಮುರಾ ಮತ್ತು ಕ್ಯೋಹೆ ಯಮಶಿತಾ ಅವರನ್ನು ಸೋಲಿಸಿತ್ತು. ತೀವ್ರ ಜಿದ್ದಾಜಿದ್ದಿನಿಂದ ಕೂಡಿದ್ದ ಈ ಪಂದ್ಯವು 74 ನಿಮಿಷ ನಡೆದಿತ್ತು.


ಏಷ್ಯನ್ ಗೇಮ್ಸ್ ಚಾಂಪಿಯನ್ ಸಾತ್ವಿಕ್ ಮತ್ತು ಚಿರಾಗ್ ಅವರು ಏಪ್ರಿಲ್ 7ರಿಂದ 12ರವರೆಗೆ ನಡೆಯಲಿರುವ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದಾರೆ. ಈ ಜೋಡಿ 2023ರಲ್ಲಿ ಪ್ರಶಸ್ತಿ ಗೆದ್ದಿತ್ತು.


ತರುಣ್ ಮನ್ನೆಪಲ್ಲಿ

ತರುಣ್ ಮನ್ನೆಪಲ್ಲಿ ಮುನ್ನಡೆ

ಟೂರ್ನಿಯಲ್ಲಿ ಉಳಿದಿರುವ ಭಾರತದ ಏಕೈಕ ಭರವಸೆಯಾಗಿರುವ ತರುಣ್ ಮನ್ನೆಪಲ್ಲಿ ಅವರು ಪುರುಷರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದರು. 16ರ ಘಟ್ಟದ ಪಂದ್ಯದಲ್ಲಿ 21–14, 22–20ರಿಂದ ಮಲೇಷ್ಯಾದ ಜಸ್ಟಿನ್ ಹೋ ಅವರನ್ನು ಮಣಿಸಿದರು. ಮುಂದಿನ ಸುತ್ತಿನಲ್ಲಿ ಅವರು ಇಂಡೊನೇಷ್ಯಾದ ಆಂಥೋನಿ ಗಿಂಟಿಂಗ್ ಅವರನ್ನು ಎದುರಿಸಲಿದ್ದಾರೆ.

ಸನ್‌ರೈಸರ್ಸ್ ಲೀಡ್ಸ್‌ಗೆ ಪಾಕ್ ಸ್ಪಿನ್ನರ್


ಅಬ್ರಾರ್

ಲಂಡನ್ (ಪಿಟಿಐ): ಚೆನ್ನೈನ 'ಸನ್ ಗ್ರೂಪ್' ಒಡೆತನದ ಸನ್‌ರೈಸರ್ಸ್ ಲೀಡ್ಸ್ ತಂಡವು ಮುಂಬರುವ 'ದ ಹಂಡ್ರೆಡ್' ಕ್ರಿಕೆಟ್ ಟೂರ್ನಿಯಲ್ಲಿ ಆಡಲು ಪಾಕಿಸ್ತಾನದ ಸ್ಪಿನ್ನರ್ ಅಬ್ರಾರ್ ಅಹಮದ್ ಅವರನ್ನು ಖರೀದಿಸಿದೆ.

ಗುರುವಾರ ಇಲ್ಲಿ ನಡೆದ ಹರಾಜು ಪ್ರಕ್ರಿಯೆಯಲ್ಲಿ ಕಾವ್ಯಾ ಮಾರನ್ ಅವರು ಕಾರ್ಯನಿರ್ವಹಣಾಧಿಕಾರಿ ಆಗಿರುವ ಸನ್‌ರೈಸರ್ಸ್ ತಂಡವು ₹ 2.34 ಕೋಟಿ ನೀಡಿ ಅಬ್ರಾರ್ ಅವರನ್ನು ಖರೀದಿಸಿತು. ಕಾವ್ಯಾ ಅವರು ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಫ್ರ್ಯಾಂಚೈಸಿಯ ಈ ನಡೆ ತೀವ್ರ ಟೀಕೆಗೊಳಗಾಗಿದೆ. ಭಾರತ ಮೂಲದ ಫ್ರ್ಯಾಂಚೈಸಿಗಳು ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ 2009ರಿಂದ ಪಾಕಿಸ್ತಾನ ಆಟಗಾರರ ಖರೀದಿಯನ್ನು ನಿರ್ಬಂಧಿಸಲಾಗಿದೆ. ಸನ್ ಗ್ರೂಪ್ ಸಂಸ್ಥೆಯ ತಂಡವಾದ ಸನ್‌ರೈಸರ್ಸ್ ಹೈದರಾಬಾದ್ ಐಪಿಎಲ್‌ನಲ್ಲಿದೆ. ಹೋದ ವರ್ಷವಷ್ಟೇ ಸನ್ ಸಮೂಹವು ನಾರ್ದರನ್ ಸೂಪರ್ ಚಾರ್ಜರ್ಸ್‌ನಿಂದ ಪೂರ್ಣಪ್ರಮಾಣದಲ್ಲಿ ಒಡೆತನವನ್ನು ಪಡೆದುಕೊಂಡಿತ್ತು.

ಇದೇ ಸಮೂಹವು ದಕ್ಷಿಣ ಅಫ್ರಿಕಾದ 'ಎಸ್‌ಎ 20' ಲೀಗ್‌ನಲ್ಲಿ ಸನ್‌ರೈಸರ್ಸ್ ಈಸ್ಟರ್ನ್ ಕೇಪ್ ತಂಡವನ್ನು ಹೊಂದಿದೆ. ಆದರೆ ಅದರಲ್ಲಿ ಯಾವುದೇ ಪಾಕ್ ಆಟಗಾರರನ್ನು ಆಯ್ಕೆ ಮಾಡಿಕೊಂಡಿಲ್ಲ.

ಇದೇ ಹರಾಜು ಪ್ರಕ್ರಿಯೆಯಲ್ಲಿ ಪಾಕಿಸ್ತಾನದ ಇನ್ನೊಬ್ಬ ಸ್ಪಿನ್ನರ್ ಉಸ್ಮಾನ್ ತಾರೀಖ್ ಅವರನ್ನು ಬರ್ಮಿಂಗ್‌ಹ್ಯಾಮ್ ಫೀನಿಕ್ಸ್ ತಂಡವು ₹ 1.72 ಕೋಟಿ ನೀಡಿ ಖರೀದಿಸಿತು. ಈ ತಂಡಕ್ಕೂ ಐಪಿಎಲ್‌ಗೂ ಯಾವುದೇ ನಂಟು ಇಲ್ಲ. ಪಾಕ್ ವೇಗಿ ಹ್ಯಾರಿಸ್ ರವೂಫ್, ಆಫ್‌ಸ್ಪಿನ್ ಆಲ್‌ರೌಂಡರ್ ಸೈಮ್ ಅಯೂಬ್ ಹಾಗೂ ಸ್ಪಿನ್ನರ್ ಶಾದಾಬ್ ಖಾನ್ ಅವರನ್ನು ಯಾರೂ ಖರೀದಿಸಲಿಲ್ಲ. ಅನುಭವಿ ಎಡಗೈ ವೇಗಿ ಶಾಹೀನ್ ಶಾ ಆಫ್ರಿದಿ ಅವರು ಬಿಡ್‌ನಿಂದ ಈ ಮೊದಲೇ ಹಿಂದೆ ಸರಿದಿದ್ದರು.

ಜುಲೈ 21 ರಿಂದ ಆಗಸ್ಟ್ 16ರವರೆಗೆ ಟೂರ್ನಿಯು ಇಂಗ್ಲೆಂಡ್‌ನಲ್ಲಿ ನಡೆಯಲಿದೆ. ಈ ನಡುವೆ ಬಾಂಗ್ಲಾದೇಶದ ವೇಗಿ ಮುಸ್ತಫಿಜುರ್ ರೆಹಮಾನ್ ಅವರನ್ನು ಫಿನಿಕ್ಸ್ ತಂಡವು ₹ 1.23 ಕೋಟಿಗೆ ತನ್ನ ತಂಡಕ್ಕೆ ಸೆಳೆದುಕೊಂಡಿತು.

ಈಚಿಗೆ ಅವರನ್ನು ಕೋಲ್ಕತ್ತ ನೈಟ್ ರೈಡರ್ಸ್ ತಂಡದಿಂದ ಹೊರಹಾಕಲಾಗಿತ್ತು. ಅದನ್ನು ವಿರೋಧಿಸಿ ಬಾಂಗ್ಲಾದೇಶ ತಂಡವು ಈಚೆಗೆ ನಡೆದ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡಿರಲಿಲ್ಲ.

> 'ದ ಹಂಡ್ರೆಡ್' ಟೂರ್ನಿಯು ವಿದೇಶಿ ಲೀಗ್ ಆಗಿದೆ. ಅದು ಐಪಿಎಲ್ ಅಲ್ಲ. ನಮ್ಮ (ಬಿಸಿಸಿಐ) ವ್ಯಾಪ್ತಿಗೂ ಬರುವುದಿಲ್ಲ. ಇದೂ ಸೇರಿದಂತೆ ಬೇರೆ ಯಾವುದೇ ವಿದೇಶಿ ಲೀಗ್ ಕೂಡ ನಮ್ಮ ವ್ಯಾಪ್ತಿಗೆ ಬರುವುದಿಲ್ಲ
> **ರಾಜೀವ್ ಶುಕ್ಲಾ,** ಬಿಸಿಸಿಐ ಉಪಾಧ್ಯಕ್ಷ

ಪ್ಯಾರಾ ಅಥ್ಲೆಟಿಕ್ಸ್: ಪಾಲ್‌ಗೆ ಚಿನ್ನ

ನವದೆಹಲಿ (ಪಿಟಿಐ): ಪ್ಯಾರಾಲಿಂಪಿಕ್ಸ್ ಅವಳಿ ಪದಕ ವಿಜೇತೆ ಪ್ರೀತಿ ಪಾಲ್ ಅವರು ಶುಕ್ರವಾರ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾನ್‌ಪ್ರಿ ಮಹಿಳೆಯರ 200 ಮೀಟರ್ ಓಟದಲ್ಲಿ ಚಿನ್ನದ ಸಾಧನೆ ಮೆರೆದರು.

ಆತಿಥೇಯ ದೇಶದ ಕ್ರೀಡಾಪಟುಗಳು ಕೂಟದಲ್ಲಿ ಒಟ್ಟು 208 ಪದಕಗಳನ್ನು ಜಯಿಸುವ ಮೂಲಕ ಅಮೋಘ ಸಾಧನೆ ಮಾಡಿದರು. ಅದರಲ್ಲಿ 75 ಚಿನ್ನ, 69 ಬೆಳ್ಳಿ ಮತ್ತು 64 ಕಂಚಿನ ಪದಕಗಳು ಸೇರಿವೆ.

ಕೊನೆಯ ದಿನದ ಆಕರ್ಷಣೆಯಾಗಿದ್ದ ಪ್ರೀತಿ 200 ಮೀಟರ್ (ಟಿ35-ಟಿ37 ವಿಭಾಗ) ಓಟವನ್ನು 30.26 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಮೀರತ್‌ನ 25 ವರ್ಷದ ಪ್ರೀತಿ ಗುರುವಾರ 100 ಮೀಟರ್ ಓಟದಲ್ಲೂ ಸ್ವರ್ಣ ಸಾಧನೆ ಮಾಡಿದ್ದರು. ರಷ್ಯಾದ ಕರೀನಾ ಮಚುಲ್ಸ್ಕಯಾ (32.22ಸೆ) ಬೆಳ್ಳಿ ಪದಕ ಗೆದ್ದರು. ಭಾರತದ ಬಿನಾ ಶಂಭುಭಾ (32.35ಸೆ) ಕಂಚಿನ ಪದಕ ಜಯಿಸಿದರು.


ಪ್ರೀತಿ ಪಾಲ್ ಪಿಟಿಐ ಚಿತ್ರ

ಕೂಟದಲ್ಲಿ ರಷ್ಯಾ ಒಟ್ಟು 35 (15 ಚಿನ್ನ, 14 ಬೆಳ್ಳಿ ಮತ್ತು 6 ಕಂಚು) ಪದಕಗಳೊಂದಿಗೆ ಎರಡನೇ ಸ್ಥಾನ ಪಡೆಯಿತು.

ಸಿಎಸ್‌ಕೆ ವಿರುದ್ಧ ಸನ್ ಟಿವಿ ದೂರು

ಚೆನ್ನೈ: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಹಕ್ಕುಸ್ವಾಮ್ಯ ನಿಯಮ ಉಲ್ಲಂಘನೆ ಮಾಡಿದೆ ಎಂದು ಆರೋಪಿಸಿರುವ ಸನ್ ಟಿ.ವಿ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದೆ.

ಐಪಿಎಲ್ ಟೂರ್ನಿಯ ಪೋಷಾಕು ಅನಾವರಣ ಕಾರ್ಯಕ್ರಮ ಈಚೆಗೆ ನಡೆದಿತ್ತು. ಈ ಕಾರ್ಯಕ್ರಮದ ವಿಡಿಯೊದಲ್ಲಿ ಅದರಲ್ಲಿ ಬಳಸಲಾಗಿದ್ದ ಸಂಗೀತ, ಸ್ಕೋರ್‌ಗಳಿಗೆ ಹಿನ್ನೆಲೆ ದೃಶ್ಯ ಮತ್ತು ಡೈಲಾಗ್‌ಗಳನ್ನು ರಜನಿಕಾಂತ್ ಅವರ ಅಭಿನಯದ ಮೂರು ಚಲನ ಚಿತ್ರಗಳಿಂದ ಬಳಸಲಾಗಿದೆ ಎಂದು ಸನ್ ಆರೋಪಿಸಿದೆ. 'ಜೇಲರ್', 'ಜೇಲರ್ 2' ಮತ್ತು 'ಕೂಲಿ' ಚಿತ್ರಗಳಲ್ಲಿ ಬಳಕೆಯಾಗಿದ್ದ ಸಂಗೀತ ಇದಾಗಿದೆ.

ಮುಸ್ತಾಫಿಜುರ್ ಸ್ಥಾನಕ್ಕೆ ಬ್ಲೆಸಿಂಗ್



ಕೋಲ್ಕತ್ತ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್‌ನ ಹಾಲಿ ಋತುವಿಗೆ ಮುಂಚಿತವಾಗಿ ಜಿಂಬಾಬ್ವೆಯ ವೇಗಿ ಬ್ಲೆಸಿಂಗ್ ಮುಝರಾಬಾನಿ ಅವರನ್ನು ಸೇರಿಸಿಕೊಂಡಿದೆ.

ಕಳೆದ ಡಿಸೆಂಬರ್‌ನಲ್ಲಿ ಬಾಂಗ್ಲಾದೇಶದ ಎಡಗೈ ವೇಗಿ ಮುಸ್ತಾಫಿಜುರ್ ರೆಹಮಾನ್ ಅವರನ್ನು ಬಿಡುಗಡೆ ಮಾಡಿದ ನಂತರ ಕೆಕೆಆರ್ ತಂಡವು ಬ್ಲೆಸಿಂಗ್ ಅವರಿಗೆ ಮಣೆ ಹಾಕಿದೆ. ಅವರು ಇದೇ 17ರಂದು ತಂಡ ಸೇರುವ ನಿರೀಕ್ಷೆಯಿದೆ.

ಈಚೆಗೆ ಮುಕ್ತಾಯಗೊಂಡ ಟಿ20 ವಿಶ್ವಕಪ್‌ನಲ್ಲಿ ಬಲಗೈ ವೇಗಿ ಬ್ಲೆಸಿಂಗ್ ಅವರ ಪ್ರದರ್ಶನ ಗಮನ ಸೆಳೆದಿತ್ತು. ಅವರು ಆರು ಪಂದ್ಯಗಳಲ್ಲಿ 13 ವಿಕೆಟ್ ಪಡೆಯುವ ಮೂಲಕ ಜಂಟಿಯಾಗಿ ಮೂರನೇ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಎನಿಸಿದ್ದರು. ವಿಶ್ವಕಪ್ ಟೂರ್ನಿಯಲ್ಲಿ ಜಿಂಬಾಬ್ವೆ ಸೂಪರ್ ಎಂಟರ ಹಂತ ತಲುಪಿತ್ತು.

30 ವರ್ಷದ ಬ್ಲೆಸಿಂಗ್ ಅವರು 89 ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 21ರ ಸರಾಸರಿಯಲ್ಲಿ 106 ವಿಕೆಟ್‌ಗಳನ್ನು ಕಬಳಿಸಿದ್ದಾರೆ.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER ಕ್ಲಾಸಿಫೈಡ್ಸ್

RENTAL PROPERTIES

Accommodation Available

Commercial

GRADE A OFFICE ON LEASE - PUNE
Yerwada
32,000 sq.ft. carpet
41 car parks
Magarpatta
41,000 sq.ft. carpet
60 car parks
Furnished / Warm Shell / Customised Fit-outs
Office Options
Mumbai | Pune | Bglr. | Hydr.
Leasing | Pre-leased | Land
Kunal : 9820085703
Amit : 9769345598
leasing@officeoptions.in

4000SFT TOTAL, 1-3 floors, Furnished Office, A/C, DG backup, For Rent up to 1.5L, Negotiable, BTM near Silk Board Metro, Contact: 8050813008

Flats

NEW FLATS FOR RENT
2/3 BHK New Semi Furnished Flats with Modern Kitchen Ready to move at
AARNA RAJPATH, GUNJUR.
East Bangalore just in front of Lakeview, Prestige MSB & IT Complex, with rent
Rs.35,000/- for 2BHK & Rs.45,000/- for 3BHK
Negotiable
Excluding Monthly Maintenance
Those interested May Contact:
97413 33222
99621 82221
Email:vrsn@live.com
SAA

3 BHK Flat 1475 sqft Lease 3 yrs Sahakarnagar, Hebbal, 35 Lakhs, Negotiable with terrace garden. 8660867713.

Industrial And Factory

AVAILABLE INDUSTRIAL Warehouse 160000 sqft Vijipura, Hoskote. Contact: 9341234288/ 9663224353/ 9845417487.

Accommodation Wanted

Industrial And Factory

WAREHOUSE REQUIRED on RENT 15-20,000Sft, Height 12-15 Metres HSR, Sarjapur, Jigini, Yelahanka. Whatsapp Details: PROPERTY POINT 99860-37215

REAL ESTATE BUYING

Industrial & Factory

Multiple Locations

WANTED AROUND 3500-5000SQFT Industrial Shed or Land for purchase at Bommasandra Industrial_area, Jigani Industrial area and Electronic City, No'brokers. Direct Owners call: 9481773963/9945111099.

Sites

Anjanapura

BDA-SITES Wanted @ Banashankari 6th`Stg Visveshwaraiah Lyt Anjanapura Kempegowda`Lyt 30x40,40x60,50x80 Immediate Settlement Rajesh 9945610779

Banashankari

BDA SITES WANTED ARKAVATI, ANJANAPURA, BANASHANKARI 6TH STAGE, VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA Sites Arkavathi, Nadaprabhu Kempegowda & BDA other Layouts. Contact: SAPTHAGIRI (Opposite BDA Head Office): 9036360366

Vishweshwariah Layout

"BUYING/ SELLING" 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

MORE Classifieds IN MAIN ISSUE

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage 11th Block, 40x60 West Facing 80 Feet Road Parallel, Call: 9483748768/ 9986076018.

30X40,BDA NORTH Facing Plot For Sale At Banashankari 6th Stage, 3rd Block, Genuine Buyers: 9980775693

J P Nagar

JPNAGAR 7TH PHASE AVAILABLE 45x40, 2 SITES SOUTH EAST CORNER AND SOUTH WEST CORNER BBMP E KHATA (11B). 7022435107

Kengeri

SITE FOR Sale 40×50 Kengeri Kodipalya Vinayaka layout Near Kengeri Metro Station, Price 10,000. Contact: 9731819633

FOR SALE: BBMP A Khatha Sites at Kengeri, 500 meters from the Metro Station with Cauvery Water. Contact: 9606342643

Multiple Locations

BANASHANKARI 6TH Stage, Nadaprabhu Kempegowda Layout, Vishweshwariah, BDA Site, Houses are available. Contact: 9900999919.

Rajarajeshwari Nagar

RR.NAGAR BEML 5th Stage 6560.Sqft. West Facing, Vastu Site Sale, Suitable for Apartment. Contact: 9448121223.

SALE Building 20X35 Duplex House. Ideal Homes sites 40X60, 80X110, BDA, Direct Owner Meeting, 9164409377

SITE FOR Sale at Ideal homes society, 40X62, south facing. RR Nagar, Bangalore. Contact: 9844013941

Sadashiva Nagar

RMV 1ST BLOCK Sadashivanagar, R.R.Nagar 40x60 Bangalow, Kumarpark Malleshwaram Vijayanagar Basavanagudi Jayanagara Any Measurements. 9845057822

Sanjaynagar

SANJAYNAGAR KEB LAYOUT BDA 1050 sft North West corner 40 feet Road E-Khatha, 9341260828 7829203369

Vishweshwariah Layout

BDA SITE For Sale @ Vishweshwaraiah Layout 30x40, 40x60, 50x80 Contact: 6363496142 9845555666

40X60, EAST, BDA, Vishweshwaraiah Layout 8th Block FE, Near Bindu Amulya Apartments, Contact Owner 7795368515

"VISVESHWARAIAH 7TH_BLOCK 30x40 East, Nagarabhavi BDA Complex near 30X50 40 feet Road. 9448733456/ 7259675150"

BDA SITE SALE VISHWESHWARAIAH LAYOUT 2nd Block 40X60 NORTH FACE NEAR 100FT ROAD GOOD LOCATION CONTACT: 8892901567

Yelahanka

RESIDENTIAL SITE FOR SALE in YELAHANKA-JUDICIAL LAYOUT, 30x40.5, on 40 Feet Road, South Facing, Expected Rs.20,000/Sft. Call Owner: 9945304836/ 9980800306

Kengeri Satellite Town

**"1050`SQFT SOUTH_FACING** BBMP A-Katha Site`for`Sale Ready`to Construction near`Hoysala`Circle Kengeri Satellite_Town near`NPS`&`Metro Station. Call: 9880031654"

Nagasandra

30 X 40 Ekhata site Vinayaka Layout opp IKEA adjoining Radha Soami Satsang contact 9448264281

Anjanapura

ANJANAPURA BDA 50x80 Site for Sale Commercial North Facing 80 Feet Road: Call: 9972338060/ 9880448478.

RMV

RMV EXTENSION Vinayaka Housing Society 30x40 WF, 40x60 EF C'Block Sahakarnagar Genuine Buyers Brokers Excuse: 9071257515

Hennur

SALE 40X60 Residential Site Bileshivale Hennur, near Purva Palm Beach. Call: 8431659271, 8904254549

Commerical

J P Nagar

NORTHEAST CORNER COMMERCIAL ODD SITE 6300 SFT BOTH BUSY ROADS 8TH PHASE JPNAGAR, BANGALORE, SALE AT RS. 18000 PSQFT SLIGHTLY NEGOTIABLE. MAHESH: 8618122033

Yeshwanthpur

YESHWANTHPURA MAIN ROAD 56,000 Sqft, Dabaspete 1 To 100 Acres, Doddaballapura 100 Acres Land: 9845057822

House

J P Nagar

FIRST PHASE 1890sft,3BHK OCCC_Flat,3.50cr/1080sft Semi-furnd _2BHK_Flat 7800/-30x40,3BHK,Duplx 2.85cr/20x30,4units 1.50cr/30x40,2BHK,House 1.90cr:9964652358

Kanakapura Road

"FOR RENT_2BHK close to Forum_South_Mall, Konanakunte Metro_Station, Kumaran School. 9845286505"

Nagarabhavi

BDA 20X20 G+2 Building N/F Pattegarapalya, Nagarabhavi, A/E Katha, Price 66 Lakh Owner 9740073482

Industrial & Factory

Bommasandra

BOMMASANDRA 5 ACRES KIADB Land, Hoskote, Devanahalli, Mysore Road, Peenya 5000 To 5 Acres: 9845057822

Jigani

ANEKAL INDUSTRIAL PARK, 7Acres Land, 2MNC's Tenanted, 8Years Locking Period, 35Lakhs Rent getting 70Cr.: 9845057822

Kanakapura Road

HAROHALLI INDUSTRIAL AREA 3.6Acres Industrial Conversion Land Getting Rent 12Lakhs PM, Locking Period 8Years, 30Cr.: 9845057822

Flat

Basaveshwaranagar

SALE BASAWEHWARNGR 2BHK, Ground Floor Flat, Measuring 750sqft, Clear Titles, Near Subramanya Swamy Temple. Owner. 9480060249.

Jayanagar

FOR SALE SITES And 3BHK Flat at Jayanagar 4th & 5th Block PRIME LOCATION Genuine Buyers Only: 9844732229

Nagarabhavi

FLATS FOR-SALE @ Nagarabhavi Chandra Layout 2 & 3 BHK Ready to Move In Good Location Call:9538472420 9845066608

SALE DUPLEX Flat 3BHK EF, 2400Sft. 'E' Khatha. Nagarabhavi Circle. Near Teacher's Layout. 2Cr: 9606323666

Villas/Bunglows

K R Puram

VILLA FOR SALE 5 years old Villa, 5100 sft, 4 BHK on 3600 sft site, HEBRON near KR Puram. East facing with Servants quarters. Fully furnished. Contact V Somasundaram, mob. 9845036309

Commercial Space for Rent
- Building area G+5 floors 900 sqft per Floor
- Elevetor Facility is Available.
- Toilet On Each Floor.
- 6000 Litres Water sump, BWSSB facility.
- Ideal for Offices, Clinics, Showroom, Bank Etc.

Address: 10/2, 5th Main, 8th Cross Chamrajpete, Bangalore-560018
Contact +91 7975994583

Agricultural Land

Tumkur

2ACRES- 10ACRES Available 80kms- 100kms from Bangalore on Koratagere- Madhugeri Road Clear Titles, Water Source: 9483959862

Farm House/ Land/ Resorts

Hoskote

10 ACRES Land Farm House all Organic Fruits Very Good Location 30Lakh Per Acre Negotiable Pedda Thippasamudram Towards Chintamani: 9945195134

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/ 9845114560 / 9731810277/ 9886213331